ಶನಿವಾರ, ಮಾರ್ಚ್ 7, 2026 | ₹ 7.00

prajavani.net | prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ರೇಸ್‌ನಲ್ಲಿ ಸಂಜು

ಭಾರತದ ಬ್ಯಾಟರ್ ಮತ್ತು ವಿಕೆಟ್ ಕೀಪರ್ ಸಂಜು ಸ್ಯಾಮ್ಸನ್ ಅವರು ಐಸಿಸಿ ಟಿ20 ವಿಶ್ವಕಪ್ 'ಟೂರ್ನಿಯ ಆಟಗಾರ' ಪ್ರಶಸ್ತಿಗೆ ನಾಮನಿರ್ದೇಶನ ಗೊಂಡಿದ್ದಾರೆ

ಒಳಮೀಸಲಾತಿಗೆ ಆಗ್ರಹ

ಉದ್ಯೋಗ ಮತ್ತು ಶಿಕ್ಷಣದಲ್ಲಿ ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಮೈಸೂರಿನಲ್ಲಿ ಮಾದಿಗ ಸಂಘಟನೆಗಳ ಒಕ್ಕೂಟದ ಸದಸ್ಯರು ಪ್ರತಿಭಟನೆ ನಡೆಸಿದರು

Last 2 days offer closes tomorrow

offer valid till **Sunday, 08/3/2026**

₹6115 per sq ft. All inclusive (only GST extra)

Home loans available from leading banks

Ready for Handover*

Move in today. Grow tomorrow.
High appreciation. Strong rental returns.

Just 7 Min from the international Airport

Location advantages (Walkable distance from following)

- Multi Speciality Hospital
- Akash Medical College and International First Grade College of Management

***Contact:* - 080-35492970**

Book a FREE Site Visit | Reserve Your Dream Home Today

Limited Units. Assured Delivery. Prime Location.

Project office: Bychapura, Behind Akash International School, Devanahalli Town, Bangalore.

For Interiors I Partial OC to be Obtained*

www.skyviewdevanahalli.com

Developed and Marketed by

MAHAKARA DEVELOPERS
AGARWAL GROUP
REAL ESTATE & CONSTRUCTION

Scan for project location

PRM/KA/RERA/1250/303/PR/170905/000071

SKYVIEW
Devanahalli

Last 2 days offer closes tomorrow

~~₹ 53.22 Lakhs*~~

₹39.75 (2BHK) Lakhs All Inclusive (only GST extra)

Luxurious amenities at affordable price

Experience a premium lifestyle with **world-class amenities at a price rarely available in this location.**

25,000 SQ. FT. OF LUXURIOUS CLUBHOUSE

Clubhouse Amenities



Ample Car Parking
Wide internal roads & secure parking



Badminton & Squash Courts - 3,366 sq. ft.
Professional indoor sports facilities within your community.



Expansive Landscaped Greens - 3,366 sq. ft.
Open lawns, gardens & walking paths



Yoga & Fitness Studio - 757 sq. ft
Dedicated wellness spaces indoors

Seeing is believing

2.5 Acres Dedicated Exclusively to Lifestyle Amenities

Designed to create a vibrant, secure, and fulfilling lifestyle for families.

offer valid till **Sunday, 08/3/2026**

₹6115 per sq ft. All Inclusive (only GST extra)

Home loans available from leading banks

Ready for Handover*

Move in today. Grow tomorrow.
High appreciation. Strong rental returns.

Location advantages (Walkable distance from following)

- Akash Medical College and International First Grade College of Management
- Multi Speciality Hospital

Just 7 Min from the international Airport

***Contact:* - 080-35492970**

Book a FREE Site Visit | Reserve Your Dream Home Today

Limited Units. Assured Delivery. Prime Location.

Project office: Bychapura, Behind Akash International School, Devanahalli Town, Bangalore.

For Interiors I Partial OC to be Obtained*

www.skyviewdevanahalli.com

Developed and Marketed by

MAHAKARA DEVELOPERS
AGARWAL GROUP
REAL ESTATE & CONSTRUCTION

Scan for project location

prajavani.net prajavani • www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ತೆರಿಗೆ, ಸೆಸ್ ಹೆಚ್ಚಳ ಇಲ್ಲ

ಈ ಬಾರಿಯ ಬಜೆಟ್‌ನಲ್ಲಿ ತೆರಿಗೆ ಮತ್ತು ಸೆಸ್ ಹೆಚ್ಚಳ ಮಾಡಬಹುದು ಎಂಬ ಚರ್ಚೆ ನಡೆದಿತ್ತು. ಆದರೆ, ಯಾವುದೇ ತೆರಿಗೆ ಮತ್ತು ಸೆಸ್ ಹೆಚ್ಚಳ ಮಾಡಿಲ್ಲ. ಎಲ್‌ಎನ್‌ಜಿ ಮೇಲಿನ ಸೆಸ್ ಅನ್ನು ಶೇ 14.34ರಿಂದ ಶೇ 5ಕ್ಕೆ ಇಳಿಸಲಾಗಿದೆ

ಹೊಣೆಗಾರಿಕೆ

₹7.64 ಲಕ್ಷ ಕೋಟಿ
2026ರ ಮಾರ್ಚ್ ಅಂತ್ಯಕ್ಕೆ ರಾಜ್ಯದ ಸಾಲ

₹8.24 ಲಕ್ಷ ಕೋಟಿ
2027ರ ಮಾರ್ಚ್ ಅಂತ್ಯಕ್ಕೆ ರಾಜ್ಯದ ಸಾಲ

ಸೆನ್ಸೆಕ್ಸ್ 78,918 | ನಿಫ್ಟಿ 24,450 | $/₹ 91.82 | ಚಿನ್ನ (Std. 10g) ₹1,67,400 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,78,000 (ಬೆಂಗಳೂರು)

ಬಜೆಟ್ ಗಾತ್ರ

₹ 4.48 ಲಕ್ಷ ಕೋಟಿ	₹4.09 ಲಕ್ಷ ಕೋಟಿ	₹74,682 ಕೋಟಿ	₹71,336 ಕೋಟಿ	₹3.38 ಲಕ್ಷ ಕೋಟಿ	₹3.11 ಲಕ್ಷ ಕೋಟಿ
2026–27ನೇ ಸಾಲಿನ ಬಜೆಟ್ ಗಾತ್ರ	2025–26ನೇ ಸಾಲಿನ ಬಜೆಟ್ ಗಾತ್ರ	2026–27ನೇ ಸಾಲಿನಲ್ಲಿ ಬಂಡವಾಳ ವೆಚ್ಚ	2025–26ನೇ ಸಾಲಿನಲ್ಲಿ ಬಂಡವಾಳ ವೆಚ್ಚ	2026–27ನೇ ಸಾಲಿನಲ್ಲಿ ರಾಜಸ್ವ ವೆಚ್ಚ	2025–26ನೇ ಸಾಲಿನಲ್ಲಿ ರಾಜಸ್ವ ವೆಚ್ಚ

ಗ್ಯಾರಂಟಿ ನಿರಾತಂಕ: ಅಭಿವೃದ್ಧಿಗೂ ಅಂಕ

₹4,291 ಕೋಟಿ
ಪ್ರಾದೇಶಿಕ ಅಸಮತೋಲನ ನಿವಾರಣೆಗೆ

₹100 ಕೋಟಿ
ಜೈನ ಸಿಖ್ ಬೌದ್ಧರ ಅಭಿವೃದ್ಧಿಗೆ

ಕಲೆ: ಸಂತೋಷ್ ಸಸಿಹಿತ್ಲು

32 ಸಾವಿರ ಹುದ್ದೆಗೆ ನೇಮಕ

ವಿವಿಧ ಇಲಾಖೆಗಳ ಗುರಿಗಳನ್ನು ಬಜೆಟ್‌ನಲ್ಲಿ ನಿಗದಿಪಡಿಸುವಾಗ 32 ಸಾವಿರ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವುದಾಗಿ ಪ್ರಸ್ತಾಪಿಸಲಾಗಿದೆ. ರಾಜ್ಯದಲ್ಲಿ ಖಾಲಿ ಇರುವ 2.84 ಲಕ್ಷ ಹುದ್ದೆಗಳ ಪೈಕಿ 56,432 ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ 30 ದಿನದೊಳಗೆ ಚಾಲನೆ ನೀಡಲು ಸಚಿವ ಸಂಪುಟದಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತು. ಈಗ ಪ್ರಸ್ತಾಪಿಸಿರುವ ನೇಮಕಾತಿಗೆ ಕಾಲಮಿತಿ ನಿಗದಿಪಡಿಸಿಲ್ಲ.

ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿಷೇಧ

16 ವರ್ಷದೊಳಗಿನ ಮಕ್ಕಳಿಗೆ ಜಾಲತಾಣದ ಬಳಕೆಯನ್ನು ನಿಷೇಧಿಸಲಾಗುವುದು ಎಂದು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಹೆಚ್ಚುತ್ತಿರುವ ಮೊಬೈಲ್ ಬಳಕೆಯಿಂದ ಮಕ್ಕಳ ಮೇಲೆ ಬೀರುವ ಅಡ್ಡ ಪರಿಣಾಮಗಳನ್ನು ತಡೆಗಟ್ಟಲು ಈ ಕ್ರಮ ಕೈಗೊಳ್ಳಲಾಗುವುದು ಎಂದೂ ಉಲ್ಲೇಖಿಸಲಾಗಿದೆ.



• ವೈ.ಗ. ಜಗದೀಶ್

ಗ್ಯಾರಂಟಿಗಳ ಭಾರವಿದ್ದರೂ ಅದರ ಹಂಗು ತೊರೆಯದೇ, ಯಾವುದೇ ಜನಪ್ರಿಯ ಘೋಷಣೆಗಳ ಮೊರೆ ಹೋಗದೇ ಕರ್ನಾಟಕವನ್ನು ಮಾದರಿ ರಾಜ್ಯವಾಗಿಸುವ ಪ್ರಮೇಯಗಳನ್ನು ಬಜೆಟ್‌ನಲ್ಲಿ ಮುಂದಿಟ್ಟಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ನಾಡನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವ ಕಿರುದಾರಿಗಳ ಹುಡುಕಿ, ಅದಕ್ಕೆ ಬೇಕಾದ ಕುಸುರಿ ಕೆಲಸವನ್ನು ಬಜೆಟ್ ಪುಸ್ತಕದ ಪ್ರತಿ ಪುಟದಲ್ಲಿ ನೇಯುವ ಯತ್ನ ಮಾಡಿದ್ದಾರೆ.

ಹಣಕಾಸು ಖಾತೆಯನ್ನೂ ಹೊಂದಿರುವ ಸಿದ್ದರಾಮಯ್ಯ ತಮ್ಮದೇ ದಾಖಲೆಯ 17ನೇ ಬಜೆಟ್ ಅನ್ನು ಶುಕ್ರವಾರ ವಿಧಾನಸಭೆಯಲ್ಲಿ ಮಂಡಿಸಿದರು. ವಿಧಾನಸಭೆ ಚುನಾವಣೆಗೆ ಮುನ್ನ ಘೋಷಿಸಿದ್ದ ‘ಗ್ಯಾರಂಟಿ’ಗಳ ಅನುಷ್ಠಾನಕ್ಕೆ ಹಿಂದಿನ ಮೂರು ಬಜೆಟ್‌ನಲ್ಲಿ ಅವರು ಕಸರತ್ತು ಮಾಡಿದ್ದರು. ಈ ಬಾರಿ, ಅದಕ್ಕಿಂತ ಭಿನ್ನದಾರಿಯಲ್ಲಿ ಸಾಗಿರುವ ಮುಖ್ಯಮಂತ್ರಿ, ಅಭಿವೃದ್ಧಿಯ ಗುಂಗಿಗೆ ಆಡಳಿತಾಂಗದ ಬಲವನ್ನು ಒಳಗು ಮಾಡುವ ಮೂಲಕ ತಮ್ಮ ಮೊದಲ ಅವಧಿಯಲ್ಲಿನ ಹಳಿಗೆ ಮರಳಿದ್ದಾರೆ.

ಜಿಎಸ್‌ಟಿ ಸ್ಲ್ಯಾಬ್ ಪರಿಷ್ಕರಣೆಯಿಂದ ಸಂಪನ್ಮೂಲ ಕೊರತೆ, ಕೇಂದ್ರದ ಪಾಲಿನಲ್ಲಿ ಕಡಿತ, ಕೇಂದ್ರ ಪುರಸ್ಕೃತ ಯೋಜನೆ ಹಾಗೂ ಸಹಾಯಾನುದಾನದಲ್ಲಿ ಇಳಿಕೆಯ ಮಧ್ಯೆಯೇ ಬಜೆಟ್ ಗಾತ್ರ ಹಿಂದಿನ ಸಾಲಿಗಿಂತ ಕಡಿಮೆಯಾಗಬಹುದು ಎಂಬ ಲೆಕ್ಕಾಚಾರಗಳಿದ್ದವು. ಕರ್ನಾಟಕದ ಬಜೆಟ್ ಗಾತ್ರವನ್ನು ಹಿಂದಿನ ವರ್ಷ ₹4.09 ಲಕ್ಷ ಕೋಟಿಗೆ ಮುಟ್ಟಿಸಿದ್ದ ಸಿದ್ದರಾಮಯ್ಯ, ಈ ಸಾಲಿನಲ್ಲಿ ₹4.48 ಲಕ್ಷ ಕೋಟಿಗೆ ಹೆಚ್ಚಿಸಿದ್ದಾರೆ. ಸಾಲದ ಪ್ರಮಾಣ ನಿರೀಕ್ಷೆಯಂತೆ ಹೆಚ್ಚಾಗಿದ್ದರೂ ಆರ್ಥಿಕ ಶಿಸ್ತಿನ ಮಿತಿಯನ್ನು ಮೀರದಿರುವ ‘ಜಾಣತನ’ವನ್ನು ತೋರಿದ್ದಾರೆ.

‘ಪ್ರಗತಿಶೀಲ ರಾಜ್ಯದ ಜನರ ತೆರಿಗೆ ಹಣಕ್ಕೆ ಪ್ರಮುಖ ಟ್ರಸ್ಟಿಯಾದ ನಾನು ಸರ್ವರ ಏಳಿಗೆಯನ್ನು ಬಯಸಿ ಆಯವ್ಯಯವನ್ನು ಮಂಡಿಸುತ್ತಿದ್ದೇನೆ’ ಎಂದು ತಮ್ಮ ಬಜೆಟ್ ಭಾಷಣ ಆರಂಭಿಸಿದ ಅವರು, ಏಳು ಕೋಟಿ ಕನ್ನಡಿಗರ ಕನಸುಗಳನ್ನು ನನಸು ಮಾಡುವ ನಿಟ್ಟಿನಲ್ಲಿ ನಮ್ಮ ಸರ್ಕಾರ ಬದ್ಧತೆಯಿಂದ ಕಾರ್ಯನಿರ್ವಹಿಸುತ್ತಿದೆ. ಜನಕೇಂದ್ರಿತ ಆರ್ಥಿಕ ತತ್ವಗಳ ಮೂಲಬಿಂದು ಇದೇ ಆಗಿದೆ’ ಎಂದು ಪ್ರತಿಪಾದಿಸಿದರು. ಅದಕ್ಕಾಗಿಯೇ ಈ ಸರ್ತಿ 11 ಜಿ ಎಂಬ ಪರಿಕಲ್ಪನೆಯನ್ನು ಪ್ರಸ್ತಾಪಿಸಲಾಗಿದ್ದು, ಅದೇ ಬಜೆಟ್‌ನ ಹೂರಣವಾಗಿದೆ.

▶11

ಮದ್ಯ ದುಬಾರಿ..?

ಮದ್ಯದ ದರ ಏರಿಕೆಯಾಗುವ ಎಲ್ಲ ಸೂಚನೆಗಳೂ ಬಜೆಟ್ ವಿವರಗಳಲ್ಲಿ ಇವೆ. ಈಗ ಬಿಯರ್, ವೈನ್, ವಿಸ್ಕಿ... ಹೀಗೆ ಮದ್ಯದ ಸ್ವರೂಪ ಆಧರಿಸಿ ಭಿನ್ನ ದರದ ಅಬಕಾರಿ ಸುಂಕ ವಿಧಿಸಲಾಗುತ್ತಿದೆ. ಮುಂದೆ ಪ್ರತಿ ಸ್ವರೂಪದ ಮದ್ಯದಲ್ಲಿರುವ ಆಲ್ಕೊಹಾಲ್ ಪ್ರಮಾಣ ಆಧರಿಸಿ ಅಬಕಾರಿ ಸುಂಕ ವಿಧಿಸಲಾಗುತ್ತದೆ. 2026–27ನೇ ಸಾಲಿನಲ್ಲಿ ಅಬಕಾರಿ ಸುಂಕ ಮೂಲದ ₹45,000 ಕೋಟಿ ಆದಾಯ ಗುರಿ ಹಾಕಿಕೊಳ್ಳಲಾಗಿದೆ. ಮದ್ಯದ ಬೆಲೆ ಏರಿಕೆಯಾಗಲಿದೆ ಎಂಬುದನ್ನೇ ಇದೂ ಸೂಚಿಸುತ್ತದೆ.

11ಜಿ ಆರ್ಥಿಕತೆ’ ಎಂದರೆ

1. ಗ್ಯಾರಂಟಿ ಎಕಾನಮಿ: ಕಲ್ಯಾಣ – ಸಮಾನತೆ
2. ಗುಡ್ ಗವರ್ನೆನ್ಸ್: ಜನಸ್ನೇಹಿ ಆಡಳಿತ
3. ಗುಡ್ ಪಬ್ಲಿಕ್ ಎಜುಕೇಷನ್: ಸರ್ವರಿಗೂ ಶಿಕ್ಷಣ
4. ಗುಡ್ ಹೆಲ್ತ್ ಟು ಆಲ್: ಸಮಗ್ರ ಆರೋಗ್ಯ
5. ಗ್ರಾಸ್‌ರೂಟ್ ಎಕಾನಮಿ: ಕೃಷಿ, ಗ್ರಾಮೀಣಾಭಿವೃದ್ಧಿ
6. ಗಿಗ್ ಎಕಾನಮಿ: ಕಾರ್ಮಿಕ ಕಲ್ಯಾಣ
7. ಜಿಯೊಗ್ರಾಫಿಕಲ್ ಈಕ್ವಾಲಿಟಿ: ಪ್ರಾದೇಶಿಕ ಅಸಮಾನತೆಯ ನಿವಾರಣೆ
8. ಗ್ಲೋಬಲ್ ಟ್ರೇಡ್ ಎಕಾನಮಿ: ವ್ಯಾಪಾರ ಮತ್ತು ಕೈಗಾರಿಕಾಭಿವೃದ್ಧಿ
9. ಗ್ಲೋಬ್ ಟ್ರೋಟಿಂಗ್ ಎಕಾನಮಿ: ಪ್ರವಾಸೋದ್ಯಮ ಆರ್ಥಿಕತೆ
10. ಗ್ರೀನ್ ಎಕಾನಮಿ: ಪರಿಸರ ಪೂರಕ ಆರ್ಥಿಕ ಚಟುವಟಿಕೆ
11. ಗ್ರೋವಿಂಗ್ ಅರ್ಬನ್ ಎಕಾನಮಿ: ನಗರ ಕೇಂದ್ರಿತ ಸುಸ್ಥಿರ ಆರ್ಥಿಕತೆ

ವಿಶೇಷ ಪುಟಗಳು 11, 14, 15 16, 17 | ಸಂಪಾದಕೀಯ 10

ಗಣಿಗಾರಿಕೆ: ₹16,000 ಕೋಟಿ ಸಂಗ್ರಹ ಗುರಿ

- ₹2,000 ಕೋಟಿ, ಕ್ವಾರಿ ಹೊಂಡ ಮತ್ತು ಅಕ್ರಮ ಗಣಿಗಳಿಂದ ದಂಡ ಸಂಗ್ರಹ ಗುರಿ
- ₹3,000 ಕೋಟಿ, ಗಣಿಗಾರಿಕೆ ತೆರಿಗೆ ಸಂಗ್ರಹ ಗುರಿ
- ₹11,000 ಕೋಟಿ, ಗಣಿಗಾರಿಕೆ ಸ್ವಾಮ್ಯ ಶುಲ್ಕದಿಂದ ಸಂಗ್ರಹ ಗುರಿ

ಆದಾಯದ ಕೊರತೆ, ಹೆಚ್ಚುತ್ತಿರುವ ಸಾಲ, ತಾಳಮೇಳವಿಲ್ಲದ ಅನುದಾನ ಹಂಚಿಕೆ... ಸಿದ್ದರಾಮಯ್ಯ ಅವರ ಲೆಕ್ಕಾಚಾರ ಹಳಿತಪ್ಪಿದೆ ಎಂಬುದಕ್ಕೆ ಬಜೆಟ್ ಪುಸ್ತಕವೇ ಸಾಕ್ಷಿ. ನಿರೀಕ್ಷೆಗಳನ್ನು ಸೃಷ್ಟಿಸಿ, ಅತೀವ ನಿರಾಸೆ ಉಂಟುಮಾಡಿದ್ದಾರೆ. ಈ ಬಜೆಟ್ ಕರ್ಣಕಠೋರ ಮತ್ತು ರಾಜ್ಯಕ್ಕೆ ಭಾರ. ಮುಖ್ಯಮಂತ್ರಿ ಅವರು ಕೇಂದ್ರದ ನಿಂದನೆಯನ್ನು ಈಗಲೂ ಮುಂದುವರಿಸಿದ್ದಾರೆ

ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಜನರ ಮೇಲೆ ಸಾಲದ ಹೊರೆ ಹೇರಿದ್ದಾರೆ. ಈ ಸರ್ಕಾರವು ಒಟ್ಟು ₹4.39 ಲಕ್ಷ ಕೋಟಿ ಸಾಲ ಮಾಡಿದೆ. ಈ ಹಣಕ್ಕೆ ಬಡ್ಡಿ ಪಾವತಿಸಲೂ ಆಗದ ಪರಿಸ್ಥಿತಿ ಇದೆ. ‘ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು’ ಕೊಡುತ್ತೇವೆ ಎಂದು ಅಧಿಕಾರಕ್ಕೆ ಬಂದ ಸಿದ್ದರಾಮಯ್ಯನವರ ಸರ್ಕಾರವು ಈಗ, ‘ಸರ್ವರಿಗೂ ತೆರಿಗೆ, ಸರ್ವರಿಗೂ ಸಾಲ’ ಎನ್ನುತ್ತಿದೆ. ಯಾವ ಯೋಜನೆಯೂ ಇಲ್ಲದ ಖಾಲಿ ಚೊಂಬಿನ ಬಜೆಟ್ ಇದು

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

ನೇಪಾಳ: ಬಾಲೇಂದ್ರ ಶಾ ಪಕ್ಷಕ್ಕೆ ಮುನ್ನಡೆ

ಕಾಠ್ಮಂಡು (ಪಿಟಿಐ): ನೇಪಾಳದಲ್ಲಿ ಮತ ಎಣಿಕೆ ಕಾರ್ಯ ಪ್ರಗತಿಯಲ್ಲಿದ್ದು, ರ್‍ಯಾಪರ್ ವೃತ್ತಿ ತೊರೆದು ಮೂರು ವರ್ಷಗಳ ಹಿಂದೆಯಷ್ಟೇ ರಾಜಕಾರಣಕ್ಕೆ ಧುಮುಕಿದ್ದ ಬಾಲೇಂದ್ರ ಶಾ ಅವರ ಪಕ್ಷವು ಅಭೂತಪೂರ್ವ ಗೆಲುವಿನತ್ತ ಮುನ್ನಡೆದಿದೆ.

▶12

ಚಿನಕುರುಳಿ ಪ್ರಕಾಶ್ ಶೆಟ್ಟಿ

ರಷ್ಯಾ ತೈಲ ಖರೀದಿಗೆ ಒಪ್ಪಿಗೆ

ಭಾರತದ ಮೇಲಿನ ಅಮೆರಿಕ ನಿರ್ಬಂಧಕ್ಕೆ 30 ದಿನ ವಿನಾಯಿತಿ

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ರಷ್ಯಾದಿಂದ ತೈಲ ಖರೀದಿಸಲು ಅಮೆರಿಕವು ಭಾರತದ ಮೇಲೆ ಹೇರಿದ್ದ ನಿರ್ಬಂಧವನ್ನು ತೆಗೆದುಹಾಕಿದ್ದು, ಖರೀದಿಗೆ 30 ದಿನಗಳ ತಾತ್ಕಾಲಿಕ ವಿನಾಯಿತಿ ನೀಡಿದೆ.

‘ಪಶ್ಚಿಮ ಏಷ್ಯಾ ಯುದ್ಧ ಮುಂದುವರಿದಿರುವುದರಿಂದ ಮಾರುಕಟ್ಟೆಯಲ್ಲಿ ತೈಲದ ಕೊರತೆ ಉಂಟಾಗದಂತೆ ನೋಡಿಕೊಳ್ಳಲು ಈ ಕ್ರಮ ವಹಿಸಲಾಗಿದೆ. ಭಾರತದ ತೈಲ ಸಂಸ್ಕರಣ ಕಂಪನಿಗಳು ರಷ್ಯಾದಿಂದ ಕಚ್ಚಾ ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳನ್ನು ಮಾ.5ರಿಂದ ಅನ್ವಯವಾಗುವಂತೆ ಮುಂದಿನ ಒಂದು ತಿಂಗಳು ಖರೀದಿಸಬಹುದು’ ಎಂದು ಅಮೆರಿಕದ ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಹೇಳಿದ್ದಾರೆ.

‘ಈ ವಿನಾಯಿತಿಯು ‘ಉದ್ದೇಶಪೂರ್ವಕ ಅಲ್ಪಾವಧಿ ಕ್ರಮ’ ಮಾತ್ರ. ಇದರಿಂದ ರಷ್ಯಾ ಸರ್ಕಾರಕ್ಕೆ ಹೆಚ್ಚಿನ ಹಣಕಾಸಿನ ಪ್ರಯೋಜನ ಆಗದು. ಯುದ್ಧದಿಂದಾಗಿ ಸಮುದ್ರದಲ್ಲಿ ಸಿಲುಕಿಕೊಂಡಿರುವ ತೈಲ ನೌಕೆಗಳ ಸಾಗಾಟವನ್ನು ಇದು ಸುಗಮಗೊಳಿಸುತ್ತದೆ. ಮಾರುಕಟ್ಟೆಯಲ್ಲಿ ತೈಲದ ಲಭ್ಯತೆ ಹೆಚ್ಚುತ್ತದೆ’ ಎಂದು ಅವರು ಹೇಳಿದ್ದಾರೆ.

ಯುದ್ಧದ ಕಾರಣದಿಂದ, ಕಚ್ಚಾತೈಲ ಪೂರೈಕೆಯಲ್ಲಿ ವ್ಯತ್ಯಯ ಆಗಿದ್ದು, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಮತ್ತು ಅನಿಲದ ಬೆಲೆಯಲ್ಲಿ ದಾಖಲೆ ಪ್ರಮಾಣದಲ್ಲಿ ಏರಿಕೆಯಾಗಿತ್ತು. ತೈಲ ಕೊರತೆ ಮತ್ತು ಬೆಲೆ ಏರಿಕೆ ವಿರುದ್ಧ ಜಗತ್ತಿನ ಹಲವು ದೇಶಗಳು ಅಮೆರಿಕ ವಿರುದ್ಧ ಧ್ವನಿ ಎತ್ತಿದ್ದವು.

‘ಭಾರತವು ಅಮೆರಿಕಕ್ಕೆ ಮಹತ್ವದ ಪಾಲುದಾರ ದೇಶ. ಅಮೆರಿಕದಿಂದ ಖರೀದಿಸುವ ತೈಲದ ಪ್ರಮಾಣವನ್ನು ಭಾರತ ಹೆಚ್ಚಿಸುತ್ತದೆ ಎಂಬ ಸಂಪೂರ್ಣ ಭರವಸೆ ನಮಗಿದೆ. ಜಾಗತಿಕ ತೈಲ ಮಾರುಕಟ್ಟೆಯನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳುವ ಇರಾನ್‌ನ ಒತ್ತಡವನ್ನು ಈ ತಾತ್ಕಾಲಿಕ ವಿನಾಯಿತಿಯು ತಗ್ಗಿಸುತ್ತದೆ’ ಎಂದು ಬೆಸೆಂಟ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ದಂಡನಾತ್ಮಕ ಸುಂಕ ರದ್ದುಗೊಳಿಸಿದ್ದ ಟ್ರಂಪ್

ರಷ್ಯಾದಿಂದ ತೈಲ ಖರೀದಿಸುವುದನ್ನು ನಿಲ್ಲಿಸುವಂತೆ ಒತ್ತಡ ಹೇರಿ ಅಮೆರಿಕವು ಭಾರತದ ಮೇಲೆ ಶೇ 25ರಷ್ಟು ದಂಡನಾತ್ಮಕ ಸುಂಕ ವಿಧಿಸಿತ್ತು. ಉಕ್ರೇನ್ ವಿರುದ್ಧ ರಷ್ಯಾ ನಡೆಸುತ್ತಿರುವ ಯುದ್ಧಕ್ಕೆ ಭಾರತ ತೈಲ ಖರೀದಿಸಿ, ಹಣಕಾಸಿನ ನೆರವು ಒದಗಿಸುತ್ತಿದೆ ಎಂದು ಆರೋಪಿಸಿತ್ತು.

ಭಾರತ–ಅಮೆರಿಕ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮಧ್ಯಂತರ ಚೌಕಟ್ಟು ರೂಪುಗೊಂಡ ಬೆನ್ನಲ್ಲೇ ಶೇ 25ರಷ್ಟು ದಂಡನಾತ್ಮಕ ಸುಂಕವನ್ನು ಟ್ರಂಪ್ ರದ್ದುಗೊಳಿಸಿದ್ದರು. ಇದರ ಬೆನ್ನಲ್ಲೇ, ರಷ್ಯಾದಿಂದ ಇಂಧನ ಆಮದು ನಿಲ್ಲಿಸುವಂತೆ ಹಾಗೂ ಅಮೆರಿಕದಿಂದ ಹೆಚ್ಚಿನ ಪ್ರಮಾಣದಲ್ಲಿ ತೈಲ ಖರೀದಿಸುವಂತೆ ಒತ್ತಡ ಹೇರಿದ್ದರು.

Celebration Benefits valid till 27th March 2026 on select Mahindra eSUVs

Celebration Benefits*	XEV 9e	BE 6
Special March Benefit	Up to ₹ 2.40 Lakh	Up to ₹ 2.00 Lakh
Corporate Benefit	Up to ₹ 25 000.00	Up to ₹ 20 000.00
Exchange/ Loyalty Benefit	Up to ₹ 30 000.00	Up to ₹ 30 000.00
Total Benefits*	Up to ₹ 2.95 Lakh	Up to ₹ 2.50 Lakh

*Terms & conditions apply. Offer valid for limited time and limited stock only. ^Depreciation benefits applicable for business owners only. Benefits may vary basis model or pack (variant) chosen by the customer. For detailed information, please connect with your nearest dealership.

ANANT CARS AUTO PVT LTD BANNERGHATTA ROAD, KR PURAM, MARATHAHALLI, MYSORE ROAD PH. 9900077177. **INDIA GARAGE** LALBAGH, PALACE CROSS ROAD, WHITEFIELD, CHIKKABALLAPURA PH. 9785513333. **PPS MAHINDRA** HEBBAL, INDIRANAGAR, KALYAN NAGAR, KANAKPURA ROAD, KORAMANGALA, LAVELLE ROAD, NELAMANGALA, KOLAR PH. 6309555517. **SIREESH AUTO PVT LTD** SILK BOARD, BOMMASANDRA, DOMMASANDRA, HOSUR ROAD, RAJAJINAGAR, YELAHANKA, DEVANAHALLI PH. 8884499046. **JUBILANT MOTORWORKS PRIVATE LIMITED BANGALORE:** HOPE FARM, MAGADI ROAD, AIRPORT ROAD PH.9090474797.

ನಾಗರಿಕ ಸೇವಾ ಪರೀಕ್ಷೆಯಲ್ಲಿ ಅರ್ಹತೆ ಪಡೆದ 958 ಅಭ್ಯರ್ಥಿಗಳು

ಕಿರಣ ಕಮತೆ ರಾಜ್ಯಕ್ಕೆ ಪ್ರಥಮ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಹತ್ತರವಾಟ ಗ್ರಾಮದ ಕಿರಣ ಸಣ್ಣಪ್ಪ ಕಮತೆ (29) ಅವರು ಯುಪಿಎಸ್‌ಸಿ ಪರೀಕ್ಷೆಯಲ್ಲಿ ದೇಶಕ್ಕೆ 53ನೇ ರ್‍ಯಾಂಕ್ ಹಾಗೂ ರಾಜ್ಯಕ್ಕೆ ಮೊದಲ ರ್‍ಯಾಂಕ್ ಪಡೆದಿದ್ದಾರೆ.

ಕಿರಣ ಕಮತೆ

ಬೆಳಗಾವಿ ಗೋಗಟೆ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸಿವಿಲ್ ಎಂಜಿನಿಯರಿಂಗ್ ಪದವಿ ಪಡೆದಿರುವ ಕಿರಣ, ಸದ್ಯ ಬೆಂಗಳೂರಿನಲ್ಲಿ ಲೋಕೋಪಯೋಗಿ ಇಲಾಖೆ ಮುಖ್ಯ ಕಚೇರಿಯಲ್ಲಿ ಸಹಾಯಕ ಎಂಜಿನಿಯರ್ ಆಗಿದ್ದಾರೆ.

ಐದು ಬಾರಿ ಪ್ರಿಲಿಮ್ಸ್ ಉತ್ತೀರ್ಣವಾಗಿದ್ದರೂ ಮುಖ್ಯ ಪರೀಕ್ಷೆಯಲ್ಲಿ ವಿಫಲವಾಗಿದ್ದರು. 6ನೇ ಬಾರಿಗೆ ಯಶಸ್ಸು ಕಂಡರು. ಇವರ ತಂದೆ ಸಣ್ಣಪ್ಪ ಕಮತೆ ನಿಡಸೋಸಿಯ ಹಿರಾ ಶುಗರ್ಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಚಾರ್ಯರಾಗಿದ್ದು, ತಾಯಿ ರುಕ್ಮಿಣಿ ಗೃಹಿಣಿ. ಸಹೋದರಿ ಕೀರ್ತಿ ಬೆಂಗಳೂರಿನಲ್ಲಿ ಆರ್ಕಿಟೆಕ್ಟ್ ಆಗಿದ್ದಾರೆ.

1 ಮತ್ತು 2ನೇ ತರಗತಿಯನ್ನು ಮಹಾರಾಷ್ಟ್ರದ ಅಂಬೆಜೋಗಾಯಿ ಮರಾಠಿ ಪ್ರಾಥಮಿಕ ಶಾಲೆಯಲ್ಲಿ, 3ರಿಂದ 8ನೇ ತರಗತಿಯನ್ನು ಹುಬ್ಬಳ್ಳಿಯ ಎಂ.ಆರ್.ಸಾಖರೆ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ, 9 ಮತ್ತು 10ನೇ ತರಗತಿ ಗದಗ ಕೆಎಲ್‌ಇ ಸಂಸ್ಥೆಯ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಮತ್ತು ಪಿಯು ಶಿಕ್ಷಣವನ್ನು ನಿಪ್ಪಾಣಿಯ ಜಿ.ಐ.ಬಾಗೇವಾಡಿ ಕಾಲೇಜಿನಲ್ಲಿ ಮುಗಿಸಿದ್ದಾರೆ.

> **2023ರಲ್ಲಿ ನೌಕರಿಗೆ ಸೇರಿದ್ದೇನೆ. ಕೆಲಸ ಮಾಡುತ್ತಲೇ ದಿನಕ್ಕೆ 5 ತಾಸು ಓದುತ್ತಿದ್ದೆ. 250 ರ್‍ಯಾಂಕ್ ಒಳಗೆ ಬರುವ ನಿರೀಕ್ಷೆ ಇತ್ತು. ಆದರೆ, 53ನೇ ರ್‍ಯಾಂಕ್ ಬಂದಿದ್ದು ಸಂತಸ ಮೂಡಿಸಿದೆ**
> **ಕಿರಣ ಕಮತೆ,** ಯುಪಿಎಸ್‌ಸಿ ಟಾಪರ್

ಇನ್ನೊಂದು ಸುದ್ದಿ ▶8

ಅನುಜ್‌ಗೆ ಮೊದಲ ರ್‍ಯಾಂಕ್

ನವದೆಹಲಿ: ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) 2025ರ ನಾಗರಿಕ ಸೇವಾ ಪರೀಕ್ಷೆಯ ಫಲಿತಾಂಶವನ್ನು ಶುಕ್ರವಾರ ಪ್ರಕಟಿಸಿದ್ದು, ರಾಜಸ್ಥಾನದ ಅನುಜ್ ಅಗ್ನಿಹೋತ್ರಿ ಮೊದಲ ರ್‍ಯಾಂಕ್ ಪಡೆದಿದ್ದಾರೆ.

ಅನುಜ್

ತಮಿಳುನಾಡಿನ ರಾಜೇಶ್ವರಿ ಸುವೆ ಎಂ. ಹಾಗೂ ರೋಹ್ಟಕ್‌ನ ಆಕಾಶ್ ಧುಲ್ ಕ್ರಮವಾಗಿ ಎರಡು ಹಾಗೂ ಮೂರನೇ ರ್‍ಯಾಂಕ್ ಗಳಿಸಿದ್ದಾರೆ.

ಅನುಜ್ ಅವರು ವೈದ್ಯಕೀಯ ವಿಜ್ಞಾನವನ್ನು ಐಚ್ಛಿಕ ವಿಷಯವಾಗಿಟ್ಟುಕೊಂಡು ಪರೀಕ್ಷೆ ಬರೆದಿದ್ದರು. ಅವರು ಜೋಧ್‌ಪುರದ ಎಐಐಎಂಎಸ್‌ನಿಂದ ಎಂಬಿಬಿಎಸ್ ಪದವಿ ಪಡೆದಿದ್ದಾರೆ.

ಆಯೋಗ ನಡೆಸಿದ ಪರೀಕ್ಷೆಯಲ್ಲಿ 958 ಅಭ್ಯರ್ಥಿಗಳು (659 ಪುರುಷರು ಹಾಗೂ 299 ಮಹಿಳೆಯರು) ಅರ್ಹತೆ ಪಡೆದಿದ್ದಾರೆ. ಅವರನ್ನು ವಿವಿಧ ಕೇಂದ್ರ ನಾಗರಿಕ ಸೇವೆಗಳಿಗೆ ನೇಮಕಾತಿ ಮಾಡಲು ಶಿಫಾರಸು ಮಾಡಲಾಗಿದೆ. ಅಗ್ರ 25 ಅಭ್ಯರ್ಥಿಗಳಲ್ಲಿ 11 ಮಹಿಳೆಯರು ಸೇರಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಭಾರತೀಯ ಆಡಳಿತ ಸೇವೆ (ಐಎಎಸ್), ಭಾರತೀಯ ವಿದೇಶಾಂಗ ಸೇವೆ (ಐಎಫ್‌ಎಸ್) ಮತ್ತು ಭಾರತೀಯ ಪೊಲೀಸ್ ಸೇವೆ (ಐಪಿಎಸ್) ಸೇರಿದಂತೆ ವಿವಿಧ ದರ್ಜೆಗಳ ಹುದ್ದೆಗಳಿಗೆ ಆಯ್ಕೆ ಮಾಡಲು ಆಯೋಗವು ಮೂರು ಹಂತಗಳಲ್ಲಿ ಪರೀಕ್ಷೆ ನಡೆಸುತ್ತದೆ.

‘ಅಂಕಗಳು 15 ದಿನಗಳಲ್ಲಿ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ. ಅಭ್ಯರ್ಥಿಗಳು ಪರೀಕ್ಷೆಗಳು/ನೇಮಕಾತಿಗಳಿಗೆ ಸಂಬಂಧಿಸಿದ ಮಾಹಿತಿ/ಸ್ಪಷ್ಟೀಕರಣ ಪಡೆಯಲು ದೂರವಾಣಿ ಸಂಖ್ಯೆ; 23385271/23381125/23098543ಕ್ಕೆ ಕರೆ ಮಾಡಬಹುದು ಎಂದು ಆಯೋಗ ತಿಳಿಸಿದೆ.

ಜಯಪ್ರದಾ, ಮಹಾಲಕ್ಷ್ಮೀ, ಊರ್ವಶಿಗೆ 'ದಿಟ್ಟ ಮಹಿಳೆ' ಪ್ರಶಸ್ತಿ

ಬೆಂಗಳೂರು: ನಟಿಯರಾದ ಜಯಪ್ರದಾ, ಊರ್ವಶಿ, ಮಹಾಲಕ್ಷ್ಮೀ, ಪ್ರಮೀಳಾ ಜೋಷಾಯ್, ಹಿನ್ನೆಲೆ ಗಾಯಕಿ ಮಂಜುಳಾ ಅವರಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ 'ದಿಟ್ಟ ಮಹಿಳೆ' ಪ್ರಶಸ್ತಿ ನೀಡಲಾಗುತ್ತಿದೆ.

ಜಿಬಿಎ ಕೇಂದ್ರ ಕಚೇರಿ ಆವರಣದಲ್ಲಿರುವ ಡಾ. ರಾಜ್‌ಕುಮಾರ್ ಗಾಜಿನ ಮನೆಯಲ್ಲಿ ಮಾರ್ಚ್ 9ರಂದು ನಡೆಯಲಿರುವ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಹಾಗೂ ಪಾಲಿಕೆ ಅಧಿಕಾರಿಗಳಿಗೆ ದಿಟ್ಟ ಮಹಿಳೆ ಪ್ರಶಸ್ತಿ ನೀಡಲಾಗುತ್ತಿದೆ ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ತಿಳಿಸಿದರು.

ಜಿಬಿಎಯಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿರುವ ಅಧಿಕಾರಿ ಮತ್ತು ನೌಕರರಾದ ಡಾ. ದಿವ್ಯ, ವರಲಕ್ಷ್ಮೀ, ವಿಜಯಲಕ್ಷ್ಮೀ, ತನುಜಾ, ಕೃತಿಕಾ, ಶಿಲ್ಪಾ, ಪದ್ಮಜಾ ನಾಯಕ್, ಶುಭಮಂಗಳ, ಅನಿತಾ ಗ್ರೇಸಿ, ಚಂದ್ರಕಲಾ, ಗಂಗಮ್ಮ, ಲತಾ ಹಾಗೂ ತೇಜಾವತಿ ಅವರಿಗೆ 'ದಿಟ್ಟ ಮಹಿಳಾ' ಪ್ರಶಸ್ತಿ ನೀಡಲಾಗುತ್ತಿದೆ ಎಂದರು.

ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಹಾಗೂ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಮುಂಬೈ ರೇಸ್

ಫಾಕ್ಸಿ ಗೆಲ್ಲುವ ನಿರೀಕ್ಷೆ

ರಾಧಾ ಸಿಗ್ವಿಯಾ ಟ್ರೋಫಿ ಶನಿವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಫಾಕ್ಸಿ ಗೆಲ್ಲುವ ನಿರೀಕ್ಷೆಯಿದೆ. ಸಂಜೆ 5:00ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಡಿಯಾಗೊ ಗಾರ್ಸಿಯಾ 3, ಪ್ರಿಸ್ಟೈನ್ ಗ್ಲೋರಿ 4, ಎಕ್ಸೂಮಾ 1
2ನೇ ರೇಸ್: ಮಿನಾರಿ 3, ಪಲೋಮಾ 8, ಸ್ಟಾರ್ಮಿ ಮೆಜೆಸ್ಟಿ 1
3ನೇ ರೇಸ್: ಮಾ ಚೆರಿ 10, ಮೈಟಿ ಹೀರೊ 5, ವೈಕಿಂಗ್ 2
4ನೇ ರೇಸ್: ಫಾಕ್ಸಿ 4, ಯುವರ್ ಅನ್‌ಫರ್ಗಟಬಲ್ 1, ಸ್ಟಾರ್ಮ್ ಕ್ಲೌಡ್ 5
5ನೇ ರೇಸ್: ಅಂಡರ್‌ಕವರ್ 4, ಅಮೆರಿಕನ್ ಈಗಲ್ 1, ಮ್ಯಾನ್‌ವಾರ್ 7
6ನೇ ರೇಸ್: ಸ್ಯಾಮ್ಸನ್ 8, ಇಂಪಲ್ಸಿವ್ 10, ಸೆಲೆಸ್ಟಿನಾ 1

ಉತ್ತಮ ಬೆಟ್: ಮಿನಾರಿ

ಜಾಕ್‌ಪಾಟ್‌ಗೆ	ಟ್ರಿಬಲ್
2,3,4,5,6	3,4,5

ಬೆಂಗಳೂರಿನಲ್ಲಿ ಶುಕ್ರವಾರ ಅರಣ್ಯ ಇಲಾಖೆ ಹಮ್ಮಿಕೊಂಡಿದ್ದ ಗಸ್ತು ಅರಣ್ಯ ಪಾಲಕರ ನೇರ ನೇಮಕ ಆದೇಶ ಪತ್ರವನ್ನು ಅಭ್ಯರ್ಥಿಗಳು ಪ್ರದರ್ಶಿಸಿದರು —ಪ್ರಜಾವಾಣಿ ಚಿತ್ರ

'ಅರಣ್ಯ ಒತ್ತುವರಿ, ಕಳ್ಳಬೇಟೆ ನಿಗ್ರಹಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಲಾಖೆಗೆ ಹೊಸದಾಗಿ ಸೇರ್ಪಡೆಯಾಗುತ್ತಿರುವವರು ಕಳ್ಳಬೇಟೆ ನಿಗ್ರಹ, ಅರಣ್ಯ ಒತ್ತುವರಿ ತಡೆಗೆ ಗಮನ ನೀಡಬೇಕು' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚಿಸಿದರು.

ಅರಣ್ಯ ಇಲಾಖೆಗೆ ಹೊಸದಾಗಿ ಆಯ್ಕೆಯಾಗಿರುವ 540 ಗಸ್ತು ಅರಣ್ಯ ಪಾಲಕರಿಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶುಕ್ರವಾರ ನೇಮಕ ಪತ್ರ ವಿತರಿಸಿ ಮಾತನಾಡಿದರು.

ಮೂರು ವರ್ಷಗಳಲ್ಲಿ ಅರಣ್ಯ ಒತ್ತುವರಿ ತೆರವಿಗೆ ಹೆಚ್ಚಿನ ಆದ್ಯತೆ ನೀಡಿದ್ದು, ಬೆಂಗಳೂರು ನಗರದಲ್ಲಿ ಹೆಚ್ಚಿನ ಬೆಲೆ ಇರುವ 250 ಎಕರೆ ಅರಣ್ಯ ಭೂಮಿ ಒತ್ತುವರಿ ತೆರವು ಮಾಡಲಾಗಿದೆ. ಹೊಸದಾಗಿ ನೇಮಕಗೊಂಡಿರುವವರೂ ಅರಣ್ಯದ ಒಂದಿಂಚು ಜಾಗವೂ ಒತ್ತುವರಿ ಆಗದಂತೆ ರಕ್ಷಿಸುತ್ತೇನೆ ಎಂದು ಸಂಕಲ್ಪ ಮಾಡಬೇಕು' ಎಂದರು.

'ಕರ್ನಾಟಕ ಅರಣ್ಯ, ವನ್ಯಜೀವಿ ಸಂರಕ್ಷಣೆಯಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದೆ. ಹೀಗಾಗಿ ಮುಂಚೂಣಿ ಸಿಬ್ಬಂದಿಯಾಗಿ ನೇಮಕಗೊಂಡಿರುವ ನೀವು ಅರಣ್ಯ ಮತ್ತು ವನ್ಯಜೀವಿ ರಕ್ಷಿಸುವ ಮಹತ್ಕಾರ್ಯ ನಿರ್ವಹಿಸುವವರಾಗಿದ್ದು, ಶ್ರದ್ಧೆಯಿಂದ ಕಾರ್ಯ ಮಾಡಿ' ಎಂದು ತಿಳಿಸಿದರು.

'ಜಾಗತಿಕ ತಾಪಮಾನ ಏರಿಕೆ, ಹವಾಮಾನ ಏರುಪೇರಿನಿಂದ ಋತುಮಾನಗಳೇ ಬದಲಾವಣೆಯಾಗುತ್ತಿವೆ. ಅಕಾಲದಲ್ಲಿ ಮಳೆಯಾಗುತ್ತಿದೆ. ಬಿಸಿಲ ಬೇಗೆ ಹೆಚ್ಚಳದಿಂದ ಜನ ಮೃತಪಡುತ್ತಿದ್ದಾರೆ. ಅರಣ್ಯ ಇದ್ದರೆ ಮಾತ್ರವೇ ಮಾನವ ಕುಲ ಉಳಿಯಲು ಸಾಧ್ಯ. ಪ್ರಕೃತಿ ಸಮತೋಲನ ಕಾಪಾಡುವಲ್ಲಿ ವನ್ಯಜೀವಿಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಹೀಗಾಗಿ ಪ್ರಕೃತಿ ಪರಿಸರ ಕಾಪಾಡಬೇಕು' ಎಂದು ಹೇಳಿದರು.

ಸಚಿವ ರಹೀಮ್ ಖಾನ್, ಅರಣ್ಯ ಪಡೆಗಳ ಮುಖ್ಯಸ್ಥೆ ಮೀನಾಕ್ಷಿ ನೇಗಿ ಉಪಸ್ಥಿತರಿದ್ದರು.

ಬೆಂಗಳೂರಿನ ಮುದ್ದಿನಪಾಳ್ಯದಲ್ಲಿ ರಾಮ್‌ರಾಜ್ ಶೋರೂಮ್

ಬೆಂಗಳೂರು: ದಕ್ಷಿಣ ಭಾರತದ ಬಿಳಿ ವಸ್ತ್ರಗಳ ಮಾರುಕಟ್ಟೆಯಲ್ಲಿ ತನ್ನದೇ ಆದ ಛಾಪು ಮೂಡಿಸಿರುವ ಸೃಷ್ಟಿಸಿರುವ ಪ್ರಸಿದ್ಧ 'ರಾಮ್‌ರಾಜ್ ಕಾಟನ್' ಸಂಸ್ಥೆಯು ತನ್ನ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಿದ್ದು, ಬೆಂಗಳೂರಿನ ಮುದ್ದಿನಪಾಳ್ಯದಲ್ಲಿ ಅತ್ಯಾಧುನಿಕ ಶೋರೂಮ್ ಲೋಕಾರ್ಪಣೆ ಮಾಡಿದೆ. ಸಂಪ್ರದಾಯ ಮತ್ತು ಆಧುನಿಕತೆಯ ಅಪೂರ್ವ ಸಮ್ಮಿಲನವಾಗಿರುವ ಈ ಶೋರೂಮ್, ನಾಗರಭಾವಿ ಪರಿಸರದ ಗ್ರಾಹಕರಿಗೆ ಶುಭ್ರ ಹತ್ತಿ ಬಟ್ಟೆಗಳ ಹಬ್ಬವನ್ನೇ ಉಣಬಡಿಸಲಿದೆ.

ಮುದ್ದಿನಪಾಳ್ಯದ ಐಟಿಐ ಲೇಔಟ್‌ನಲ್ಲಿರುವ ನೂತನ ಶೋರೂಮ್ ಅನ್ನು ಕೆ.ಎಸ್.ಐ.ಐ.ಡಿ.ಸಿ ನಿವೃತ್ತ ಉಪ ಪ್ರಧಾನ ವ್ಯವಸ್ಥಾಪಕ ಪಿ.ಬಿ.ರಾಜಗೋಪಾಲ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಗಾಯತ್ರಿ ಮತ್ತು ಪಾಲುದಾರರು ಪಾಲ್ಗೊಂಡಿದ್ದರು. ಉದ್ಘಾಟನಾ ಸಮಾರಂಭದ ಹಿನ್ನೆಲೆ ಕೆಆರ್‌ಐಡಿಎಲ್‌ನ ನಿವೃತ್ತ ಕಾರ್ಯನಿರ್ವಾಹಕ ಇಂಜಿನಿಯರ್ ನಾಗೇಂದ್ರ ಮೂರ್ತಿ ಮತ್ತು ಶೈಲಜಾ ದಂಪತಿಗಳು ಮೊದಲ ಖರೀದಿ ಮೂಲಕ ವಹಿವಾಟಿಗೆ ಚಾಲನೆ ನೀಡಿದರು. ರಾಮ್‌ರಾಜ್ ಕಾಟನ್ ಸಂಸ್ಥೆಯ ಸ್ಥಾಪಕ ಮತ್ತು ಅಧ್ಯಕ್ಷರಾದ ಕೆ.ಆರ್.ನಾಗರಾಜನ್ ಸಮಾರಂಭಕ್ಕೆ ಆಗಮಿಸಿದ್ದ ಅತಿಥಿಗಳನ್ನು ಮತ್ತು ಗ್ರಾಹಕರನ್ನು ಆತ್ಮೀಯವಾಗಿ ಬರಮಾಡಿಕೊಂಡರು.

ಗುಣಮಟ್ಟ ಮತ್ತು ವಿಶ್ವಾಸದ ಹರಿಕಾರ: 'ಗೌರವಾನ್ವಿತರಿಗಾಗಿ' ಎಂಬ ಧ್ಯೇಯವಾಕ್ಯದೊಂದಿಗೆ ಸಾಗಿಬರುತ್ತಿರುವ ರಾಮ್‌ರಾಜ್ ಕಾಟನ್, ಮೃದುವಾದ ಹತ್ತಿ ಬಟ್ಟೆಗಳ ತಯಾರಿಕೆಯಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದೆ. ದಕ್ಷಿಣ ಭಾರತದಾದ್ಯಂತ ಬಿಳಿ ವಸ್ತ್ರಗಳ ಮಾರಾಟದಲ್ಲಿ ಅಗ್ರಸ್ಥಾನದಲ್ಲಿರುವ ಈ ಸಂಸ್ಥೆಯು, ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯನ್ನು ಕಾಪಾಡುವಲ್ಲಿ ವಿಶೇಷ ಆಸಕ್ತಿ ವಹಿಸಿದೆ. ಪ್ರಸ್ತುತ ಸಂಸ್ಥೆಯು ವಾರ್ಷಿಕವಾಗಿ 25 % ಕ್ಕೂ ಹೆಚ್ಚು ಗ್ರೋತ್ ರೇಟ್ ಹೊಂದಿದ್ದು, 'ಗುಣಮಟ್ಟದಲ್ಲಿ ರಾಜಿ ಇಲ್ಲ" ಎಂಬ ಮಂತ್ರದೊಂದಿಗೆ ಮುನ್ನಡೆಯುತ್ತಿದೆ.

ಯುವಜನತೆ ಮತ್ತು ಗಣ್ಯರ ನೆಚ್ಚಿನ ಆಯ್ಕೆ: ದಕ್ಷಿಣ ಭಾರತದಲ್ಲಿ ಧೋತಿ ಎನ್ನುವುದು ಕೇವಲ ಉಡುಪಲ್ಲ. ಅದೊಂದು ಗೌರವದ ಸಂಕೇತ. ರಾಜಕಾರಣಿಗಳು ಮತ್ತು ಗಣ್ಯ ವ್ಯಕ್ತಿಗಳ ನೆಚ್ಚಿನ ಆಯ್ಕೆಯಾಗಿರುವ ರಾಮ್‌ರಾಜ್ ಧೋತಿಗಳು ಈಗಿನ ಯುವ ಪೀಳಿಗೆಗೆ ತಕ್ಕಂತೆ 'ಜೆನ್ ಎಕ್ಸ್' ಮತ್ತು 'ಲಿಟಲ್ ಸ್ಟಾರ್' ನಂತಹ ವೈವಿಧ್ಯಮಯ ವಿನ್ಯಾಸಗಳಲ್ಲಿ ಲಭ್ಯವಿದೆ.

ಶೋರೂಮ್‌ನಲ್ಲಿ ಲಭ್ಯವಿರುವ ಪ್ರಮುಖ ಉತ್ಪನ್ನಗಳು: ನೂತನವಾಗಿ ಶುರುವಾಗಿರುವ ಮಳಿಗೆಯಲ್ಲಿ ಧೋತಿ ಶ್ರೇಣಿ ಲಭ್ಯವಿದ್ದು, ಫ್ಯಾನ್ಸಿ ಬಾರ್ಡರ್, ಸ್ಟೇನ್ ಗಾರ್ಡ್, ಸುಗಂಧಿತ ಧೋತಿಗಳು, ಸುಕ್ಕು-ಮುಕ್ತ, ಶುಭ ಮುಹೂರ್ತ, ಎಂಬ್ರಾಯ್ಡರಿ, ಮಯಿಲ್ಕನ್, ಪಂಚಕಚ್ಚ ಮತ್ತು ರೇಷ್ಮೆ ಧೋತಿಗಳು ಇವೆ. ಜತೆಗೆ, ವೈವಿದ್ಯಮಯ ಶರ್ಟ್‌ಗಳ ಕಲೆಕ್ಷನ್ ಇದ್ದು, ಎಂಬ್ರಾಯ್ಡರಿ ಶರ್ಟ್, ಕೂಲ್ ಕಾಟನ್, ಅಲ್ಟಿಮೇಟ್ ಶರ್ಟ್, ಡಿಸೈನರ್ ಮತ್ತು ರೇಷ್ಮೆ ಶರ್ಟ್‌ಗಳು. ವಿಶೇಷವಾಗಿ ಧೋತಿಯ ಬಾರ್ಡರ್‌ಗೆ ಹೊಂದಿಕೆಯಾಗುವ ಶರ್ಟ್‌ಗಳು ಇಲ್ಲಿನ ಆಕರ್ಷಣೆಯಾಗಿವೆ. ಇದಲ್ಲದೇ, ಆಕರ್ಷಕ ಬಣ್ಣಗಳ ಟಿ-ಶರ್ಟ್‌ಗಳು, ಬನಿಯನ್ ಮತ್ತು ಬಿಳಿ ಹಾಗೂ ಬಣ್ಣದ ಮಾಸ್ಕ್‌ಗಳು ಕೂಡ ಲಭ್ಯವಿವೆ.

ಬೆಂಗಳೂರಿನ ಮುದ್ದಿನಪಾಳ್ಯದಲ್ಲಿ ರಾಮ್‌ರಾಜ್ ಕಾಟನ್ ನೂತನ ಶೋರೂಮ್ ಅನ್ನು ಕೆ.ಎಸ್.ಐ.ಐ.ಡಿ.ಸಿ ನಿವೃತ್ತ ಉಪ ಪ್ರಧಾನ ವ್ಯವಸ್ಥಾಪಕ ಪಿ.ಬಿ.ರಾಜಗೋಪಾಲ್ ಉದ್ಘಾಟಿಸಿದರು.

ಜಾಗತಿಕ ಮಟ್ಟದಲ್ಲಿ ರಾಮರಾಜ್: ಕೇವಲ ಭಾರತದಲ್ಲಿ ಮಾತ್ರವಲ್ಲದೆ, ರಾಮರಾಜ್ ಉತ್ಪನ್ನಗಳು ಶ್ರೀಲಂಕಾ, ಸಿಂಗಾಪುರ ಮತ್ತು ಮಲೇಷ್ಯಾ ಸೇರಿದಂತೆ ಹಲವು ದೇಶಗಳಿಗೆ ರಫ್ತಾಗುತ್ತಿವೆ. ಅಲ್ಲದೆ, ಜಗತ್ತಿನಾದ್ಯಂತ ಇರುವ ಭಾರತೀಯರಿಗಾಗಿ www.ramrajcotton.in ಮೂಲಕ ಆನ್‌ಲೈನ್ ಮಾರಾಟ ಸೌಲಭ್ಯವನ್ನೂ ಕಲ್ಪಿಸಲಾಗಿದೆ. ಮುದ್ದಿನಪಾಳ್ಯದ ಈ ನೂತನ ಹವಾನಿಯಂತ್ರಿತ ಶೋರೂಮ್ ಗ್ರಾಹಕರಿಗೆ ಒಂದು ಹಿತಕರವಾದ ಶಾಪಿಂಗ್ ಅನುಭವವನ್ನು ನೀಡಲಿದ್ದು, ಶುಭ್ರ ಬಿಳಿ ವಸ್ತ್ರಗಳ ಮೂಲಕ ದೈನಂದಿನ ಜೀವನದಲ್ಲಿ ಹೊಸ ಚೈತನ್ಯ ನೀಡಲಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಸೂರ್ಯೋದಯ: 6:29 ಸೂರ್ಯಾಸ್ತ : 6:33 | ಚಂದ್ರೋದಯ: ರಾ. 8:56 ಚಂದ್ರಾಸ್ತ: ಬೆ. 8:12 | ಶುಕ್ರವಾರದ ಉಷ್ಣಾಂಶ : ಗರಿಷ್ಠ 34° ಕನಿಷ್ಠ 20°

ಶನಿವಾರದ ಉಷ್ಣಾಂಶ 34° ಗರಿಷ್ಠ 20° ಕನಿಷ್ಠ | ಭಾನುವಾರ 33 : 19° | ಸೋಮವಾರ 33° : 18° | ಮಂಗಳವಾರ 32° : 18°

ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ಆಕಾಶ ಇರಲಿದೆ

ಪ್ರಾಣಿಗಳಿಗೆ ಐಸ್‌ಕ್ಯಾಂಡಿ, ಲಾಲಿಪಾಪ್

ಬಿಸಿಲ ಬೇಗೆ ತಣಿಸಲು ಕ್ರಮ

ಹಣ್ಣಿನ ಕ್ಯಾಂಡಿ ತಿಂದ ಕೋತಿ

ಪ್ರಜಾವಾಣಿ ವಾರ್ತೆ

ಆನೇಕಲ್: ಬಿಸಿಲಿನ ತಾಪದಿಂದ ಬಳಲುತ್ತಿರುವ ಬನ್ನೇರುಘಟ್ಟ ಜೈವಿಕ ಉದ್ಯಾನದ ಪ್ರಾಣಿಗಳ ದಾಹ ತಣಿಸಲು ಎಳನೀರು, ಹಣ್ಣು–ತರಕಾರಿಗಳಿಂದ ತಯಾರಿಸಿದ ಲಾಲಿಪಾಪ್ ಮತ್ತು ಐಸ್‌ಕ್ಯಾಂಡಿ ನೀಡಲಾಗುತ್ತಿದೆ.

ಲಾಲಿಪಾಪ್ ಮತ್ತು ಐಸ್‌ಕ್ಯಾಂಡಿ ಕಂಡ ತಕ್ಷಣ ಚಿಕ್ಕ ಮಕ್ಕಳಂತೆ ಓಡೋಡಿ ಬರುವ ಪ್ರಾಣಿಗಳು ನಾಲಿಗೆ ಚಪ್ಪರಿಸುತ್ತವೆ. ಮಂಗಗಳಂತೂ ತಮಗಿಷ್ಟ ಬಂದ ಜಾಗದಲ್ಲಿ ಕೊಂಡೊಯ್ದು ಸವಿದು ಆನಂದಿಸುತ್ತವೆ.

ಆನೆ, ಜಿಂಕೆ, ಮಂಗ, ಕರಡಿ, ಗಿಳಿ ಸೇರಿದಂತೆ ಎಲ್ಲಾ ಪ್ರಾಣಿಗಳಿಗೂ ತಂಪಾದ ಆಹಾರದ ವ್ಯವಸ್ಥೆ ಮಾಡಲಾಗಿದೆ. ಪ್ರಾಣಿಗಳು ತಮ್ಮ ದೈನಂದಿನ ಆಹಾರದೊಂದಿಗೆ ಐಸ್‌ಕ್ಯಾಂಡಿ, ಲಾಲಿಪಾಪ್ ಸವಿಯುತ್ತಿವೆ. ಕೆಲವು ಪ್ರಾಣಿಗಳಿಗೆ ಹಣ್ಣಿನ ರಸ ಸಹ ನೀಡಲಾಗುತ್ತಿದೆ. ಆನೆಗಳಿಗೆ ಕಲ್ಲಂಗಡಿ ಹಣ್ಣು ಇಷ್ಟ. ನೀರು ಕುದುರೆಗಳಿಗೆ ತಂಪಾದ ಕಲ್ಲಂಗಡಿ ಐಸ್‌ಬ್ಲಾಕ್ ಮತ್ತು ಹಣ್ಣು, ಕರಡಿಗಳಿಗೆ ಮಿಶ್ರ ಹಣ್ಣು ಮತ್ತು ತರಕಾರಿಗಳ ಐಸ್ ಬ್ಲಾಕ್ ಮತ್ತು ಎಳನೀರು, ಕೋತಿಗಳಿಗೆ ಹಣ್ಣು ಮತ್ತು ತರಕಾರಿಗಳ ಐಸ್‌ಕ್ಯಾಂಡಿ ಮತ್ತು ಬ್ಲಾಕ್ ಎಂದರೆ ಇಷ್ಟ. ಅವುಗಳ ಇಷ್ಟದ ಆಹಾರ ಯಾವುದು ಎಂದು ಅರಿತು ಅದನ್ನೇ ನೀಡಲಾಗುತ್ತಿದೆ.

ಹಣ್ಣು ಆಸ್ವಾದಿಸಿದ ಪಕ್ಷಿ

ಬಿರು ಬೇಸಿಗೆಯಲ್ಲಿ ಪ್ರಾಣಿಗಳು ತಂಪು ವಾತಾವರಣ ಬಯಸುತ್ತವೆ. ಜೀಬ್ರಾ, ಜಿರಾಫ್, ಹುಲಿ, ಕೋತಿ, ಆನೆ ಸೇರಿದಂತೆ ಹಲವು ಪ್ರಾಣಿಗಳಿಗೆ ಸ್ಪ್ರಿಂಕ್ಲರ್ ಮೂಲಕ ತುಂತುರು ನೀರು ಸಿಂಪಡಿಸಿ ತಂಪಾದ ವಾತಾವರಣ ಕಲ್ಪಿಸಲಾಗಿದೆ. ಪಕ್ಷಿಗಳ ವಾಸಸ್ಥಳವನ್ನು ತಂಪಾಗಿ ಇರಿಸಲಾಗಿದೆ.

‘ಎರಡು ದಿನಗಳಿಂದ ಬಿಸಿಲಿನ ಬೇಗೆ ಹೆಚ್ಚಾಗಿದ್ದು, ಪ್ರಾಣಿಗಳಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ವಹಿಸಲಾಗಿದೆ’ ಎಂದು ಉದ್ಯಾನದ ಜೀವಶಾಸ್ತ್ರಜ್ಞೆ ಐಶ್ವರ್ಯ ‘ಪ್ರಜಾವಾಣಿ’ಗೆ ತಿಳಿಸಿದರು.

ತುಂತುರು ನೀರು ಇಷ್ಟ ಪಡದ ಪ್ರಾಣಿಗಳಿಗೆ ಕೆಸರಿನ ವ್ಯವಸ್ಥೆ ಮಾಡಲಾಗಿದೆ. ಅವು ಕೆಸರಿನಲ್ಲಿ ಆಟವಾಡುವ ಮೂಲಕ ಬೇಗೆ ನೀಗಿಸಿಕೊಳ್ಳುತ್ತಿವೆ.

ತಂಪಾದ ಹಣ್ಣು ಸೇವಿಸಿದ ಕೋತಿ

ಪ್ರಾಣಿಪಾಲಕರೊಬ್ಬರು ಜಿರಾಫ್‌ಗೆ ಹಣ್ಣು ನೀಡಿದರು

ಗಿಳಿಗೆ ಸಿಕ್ಕಿತು ಮೆಕ್ಕಜೋಳ

‘ಆಮಿಷಕ್ಕೆ ಬಲಿಯಾಗಿ ಹಣ ಕಳೆದುಕೊಳ್ಳದಿರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಹಾರ ರೂಪದಲ್ಲಿ ಸಿಕ್ಕಿರುವ ಹಣವನ್ನು ಯಾವುದೇ ಆಮಿಷಗಳಿಗೆ ಬಲಿಯಾಗಿ ಕಳೆದುಕೊಳ್ಳಬೇಡಿ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಕೆಎಸ್‌ಆರ್‌ಟಿಸಿಯ 35 ಮೃತ ಸಿಬ್ಬಂದಿಯ ಅವಲಂಬಿತರಿಗೆ ₹8.22 ಕೋಟಿ ವಿಮಾ ಪರಿಹಾರವನ್ನು ಶುಕ್ರವಾರ ವಿತರಣೆ ಮಾಡಿ ಅವರು ಮಾತನಾಡಿದರು. ‘ನಿಮ್ಮಲ್ಲಿ ಹಣವಿದೆ ಎಂದು ಗೊತ್ತಾದರೆ ಬಡ್ಡಿಗೆ ದುಡ್ಡು ಕೇಳುವವರು, ಬಾಹ್ಯ ಒತ್ತಡ, ಆಮಿಷಗಳನ್ನು ಒಡ್ಡುವವರು ಹೆಚ್ಚಾಗುತ್ತಾರೆ. ಅವುಗಳಿಗೆ ಮರುಳಾಗದೇ ಮಕ್ಕಳ ವಿದ್ಯಾಭ್ಯಾಸ, ಮನೆ ನಿರ್ಮಾಣ, ಇತರೆ ಒಳ್ಳೆಯ ಕಾರ್ಯಗಳಿಗೆ ಬಳಸಿಕೊಳ್ಳಿ. ಬ್ಯಾಂಕ್‌ಗಳಲ್ಲಿ ಮಾತ್ರ ಎಫ್‌ಡಿ ಇಡಿ, ಅತಿಯಾಸೆಗೆ ಬೇರೆಲ್ಲೋ ಹೂಡಿಕೆ ಮಾಡಬೇಡಿ’ ಎಂದು ಕಿವಿಮಾತು ಹೇಳಿದರು.

ಅಪಘಾತದಿಂದ ಮೃತಪಟ್ಟ 4 ಸಿಬ್ಬಂದಿಯ ಅವಲಂಬಿತರಿಗೆ ತಲಾ ₹1 ಕೋಟಿಯಂತೆ ₹4 ಕೋಟಿ, ಇತರೆ ಕಾರಣಗಳಿಂದ ಮೃತಪಟ್ಟ 28 ಸಿಬ್ಬಂದಿಯ ಅವಲಂಬಿತರಿಗೆ ತಲಾ ₹14 ಲಕ್ಷದಂತೆ ₹3.92 ಕೋಟಿ ಹಾಗೂ ಮೃತಪಟ್ಟ ಮೂವರು ಸಿಬ್ಬಂದಿಯ ಅವಲಂಬಿತರಿಗೆ ₹10 ಲಕ್ಷದಂತೆ ₹30 ಲಕ್ಷ ಪರಿಹಾರ ವಿತರಿಸಲಾಯಿತು. ಕೆಎಸ್‌ಆರ್‌ಟಿಸಿ ಉಪಾಧ್ಯಕ್ಷ ಮೊಹಮ್ಮದ್ ರಿಜ್ವಾನ್ ನವಾಬ್, ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ, ನಿರ್ದೇಶಕಿ ಗಾಯಿತ್ರಿ ಕೆ.ಎಂ. ಉಪಸ್ಥಿತರಿದ್ದರು.

ರಂಗಕರ್ಮಿಗಳಾದ ಶಶಿಧರ್ ಭಾರಿಘಾಟ್ ಮತ್ತು ಶ್ರೀನಿವಾಸ್ ಜೆ.ಕಪ್ಪಣ್ಣ ಅವರಿಗೆ ಮಂಡ್ಯದ ಕರ್ನಾಟಕ ಸಂಘದಲ್ಲಿ ಶುಕ್ರವಾರ ‘ಪ್ರೊ.ಜಯಪ್ರಕಾಶಗೌಡ ಪ್ರಶಸ್ತಿ–2026’ ಪ್ರದಾನ ಮಾಡಲಾಯಿತು. ಪ್ರೊ.ಜಯಪ್ರಕಾಶಗೌಡ, ಜಯರಾಮ್ ರಾಯಪುರ, ಮಾಜಿ ಶಾಸಕರಾದ ಕೆ.ಟಿ.ಶ್ರೀಕಂಠೇಗೌಡ, ಬಿ.ರಾಮಕೃಷ್ಣ, ನಿರ್ಮಲಾನಂದನಾಥ ಸ್ವಾಮೀಜಿ ಪಾಲ್ಗೊಂಡಿದ್ದರು

National Dairy Development Board

PB No. 40, Anand, Gujarat-388001, Tel: 02692-260 148/149/160 Fax: 02692-260 159
Website: http://www.nddb.coop, Email: purchase@nddb.coop
INVITATION FOR BIDS (IFB) / LOCAL COMPETITIVE BIDDING (LCB)

Bids are invited on behalf of Service Recipients/ NDDB from eligible bidders for the works listed below:

Sl. No.	Description of works / Bid Reference	Estd. Cost (₹) incl GST/Duration	Event Start / Close Date	Bid submission / opening date & time
A	**Civil, Structural, Water Supply, Sanitary & Other Misc. works including Internal Electrification works for:**			
I	Nandini Hi-Tech Semen Processing Lab, Hessarghatta, Karnataka. **NDDB/HO/Purchase/110/25-26/ET/110[Civil-Hessarghatta]**	710 Lakh / 12 Months	10.03.26 01.04.26	01.04.26 15:00 hrs. 01.04.26 15:30 hrs.
II	Borewell works at AmulFed Dairy II, Rajkot, Gujarat. **NDDB/HO/Purchase/111/25-26/ET/111[Borewell-Rajkot]**	425 Lakh / 03 Months	07.03.26 30.03.26	30.03.26 15:00 hrs. 30.03.26 15:30 hrs.
B	**Design, Supply, Installation, Testing and Commissioning the following:**			
I	4 LLPD Dairy Plant at Kuppam, Andhra Pradesh. **NDDB/HO/Purchase/112/25-26/ET/112[LMP-Kuppam]**	3900 Lakh / 12 Months	10.03.26 01.04.26	01.04.26 15:00 hrs. 01.04.26 15:30 hrs.
II	2 x 8 TPH Solid Fuel Boiler at Davanagere, Karnataka. **NDDB/HO/Purchase/113/25-26/ET/113[Boiler-Davanagere]**	740 Lakh / 10 Months	10.03.26 01.04.26	01.04.26 15:00 hrs. 01.04.26 15:30 hrs.
III	PUF Panel with IE works for CS & DF at Davanagere, Karnataka **NDDB/HO/Purchase/114/25-26/ET/114[Refri I - Davanagere]**	370 Lakh / 12 Months	07.03.26 30.03.26	30.03.26 15:00 hrs. 30.03.26 15:30 hrs.
IV	Water Treatment Plant at Davanagere, Karnataka. **NDDB/HO/Purchase/115/25-26/ET/115[WTP-Davanagere]**	244 Lakh / 08 Months	07.03.26 30.03.26	30.03.26 15:00 hrs. 30.03.26 15:30 hrs.
V	Internal Electrification for Non-BSL Building, IIL Karkapatla **NDDB/HO/Purchase/116/25-26/ET/116[IE-Karkapatla]**	155 Lakh / 03 Months	07.03.26 30.03.26	30.03.26 15:00 hrs. 30.03.26 15:30 hrs.

For further details pertaining to IFB and for downloading the bid document, please visit these websites: **www.nddb.coop** and **www.mstcecommerce.com/eprocn** For any clarification please contact **Group Head (Purchase), NDDB, Anand-**388001.
NB: Any corrigendum/modification etc. will be posted only on these websites.

Set the tone for a prosperous year with a Kia that embodies thoughtful design and ease of ownership, and that's built to enhance every mile of your journey. With unique ownership advantages and a hassle-free exchange, taking that first step feels just as rewarding as the road ahead.

Model	Sonet	Syros	Carens	Carens Clavis	Carens Clavis EV
Range starts at	₹ 7 30 138	₹ 8 67 053	₹ 10 47 454	₹ 11 17 835	₹ 17 99 000
Total benefits	₹ 1 06 000	₹ 2 08 000	₹ 1 08 000	₹ 2 21 000	₹ 2 44 000

*Benefits available on other Kia cars as per applicability.

For more information, visit your nearest dealership or contact: 1800 108 5000 | 093195 91407 | www.kia.com | Book Kia | kiacare@kiaindia.net | Look for "Kia India" @

*Terms & condition apply. Ex-showroom price mentioned is for the base variant (Pan India). Benefits shown are the combination of exchange, loyalty, corporate, scrappage and special benefits, which are applicable on limited stock of 2025, may vary from model to model and region to region. The product shown is for representation purposes only. Actual features, colors, and specifications may not be part or standard fitment and may vary. Kia India Pvt. Ltd. reserves the right to make any changes with respect to the trims, colors, specifications, and other details of any model as mentioned or to modify/ discontinue any offer/ scheme/ service without prior notice. Kia urges you to follow traffic rules, these are meant to keep you safe on the roads. Visit your nearest Kia dealership for more details.

Bangalore: **PPS Kia:** Mysore Road, Tel: 6309990010; **JSP Kia:** Bellandur, Tel: 9513918131; Hosur Road, Tel: 9986644472; Sarjapur, Tel: 8095553636; **VST Kia:** Palace Cross, Tel: 9606988123, Yeshwanthpur, Tel: 9606988124 **Naara Kia:** JP Nagar, Tel: 7406528200, Kanakpura Road, Tel: 907010099; **Epitome Kia:** Whitefield, Tel: 9606970216, Yelahanka, Tel: 7406343339, Varthur, Tel: 9844240044, Avalahalli, Tel: 7022317666; **Taapasi Kia:** Kalyan Nagar, Tel: 8095537777; Koramangala, Tel: 9071177333; **Advaith Kia:** Lalbagh, Tel: 9611006006, Magadi Road, Tel: 6364871023, Banashankari, Tel: 6364871022, Basaweshwar Nagar, Tel: 6364871024; Tumkur: **PPS Kia:** Tel: 6303622210; Kolar: **Epitome Kia:** Tel: 8951903224



ಬೇಕು ಅವಳಿಗೊಂದು ಹೃದಯ ಪ್ರಶಸ್ತಿ

• ಸಂಪತ್ ಬೆಟ್ಟಗೆರೆ

ಹೀಗೊಂದು ದಿನ ಚಿಕ್ಕಮಗಳೂರಿನ ರಸ್ತೆಯಲ್ಲಿ, ನನ್ನ ಸ್ನಾತಕ ಪದವಿಯ ಕನ್ನಡ ಗುರುಗಳಾಗಿದ್ದ ವಚನ ಸಾಹಿತಿ, ದಿವಂಗತ ಪ್ರೊ. ಚಂದ್ರಯ್ಯ ನಾಯ್ಡು ಅವರ ಪತ್ನಿ ವಾಣಿ ಮೇಡಂ ಕಾಣಸಿಕ್ಕರು. ಅವರ ಆತ್ಮೀಯವಾದ ಮಾತಿಗೆ ನನ್ನ ಮನಸ್ಸು ತುಂಬಿ ಬಂತು. ನಾಯ್ಡು ಸರ್ ತಮ್ಮ ಒಲವಿನ ಮಡದಿಯ ಬಗ್ಗೆ ಸಂದರ್ಭಾನುಸಾರವಾಗಿ ಹೇಳುತ್ತಿದ್ದ ಮಾತುಗಳು ನೆನಪಿಗೆ ಬಂದವು.

'ನನಗೆ ಈ ಚಳಿಗಾಲದಲ್ಲಿ ಕಫಗಿಫ ಕಟ್ಟಿಕೊಳ್ಳದಿರಲಿ ಅಂತ ನನ್ನ ವಾಣಿ ನನಗೆ ಒಣಮೀನಿನ ಬಡ್ಡಗಾರ ಚಟ್ನಿ ಮಾಡಿಕೊಡ್ತಾಳೆ. ಅದ್ನ ಅಕ್ಕಿರೊಟ್ಟಿ ಅಥವಾ ಚಪಾತಿ ಜೊತೆ ತಿನ್ಕೊಂಡು ಬರ್ತೀನಿ ಕಣ್ರೊ. ಅದಕ್ಕೇ ನನ್ನ ಧ್ವನಿ ಬೇರೆಲ್ಲಾ ಮೇಷ್ಟ್ರುಗಳಿಗಿಂತ ಸುಸ್ಪಷ್ಟ. ನಾವು ಡಾ. ರಾಜ್‌ಕುಮಾರ್ ಅವರನ್ನ ಸರಿಯಾದ ಕನ್ನಡ ಉಚ್ಚಾರಣೆಗಾಗಿ ಗುಣಗಾನ ಮಾಡ್ತೀವಿ. ಅಲ್ಲಿ ಅವರ ಯೋಗಕ್ಷೇಮ ನೋಡಿಕೊಂಡ ಪಾರ್ವತಮ್ಮನವರನ್ನು ಸೌಜನ್ಯಕ್ಕೂ ನೆನೆಯದೇ ಹೋದರೆ ತಪ್ಪಾಗುತ್ತೆ ಅಲ್ವೇನ್ರೊ? ಹಾಗೇ ಕುವೆಂಪು ಸತತ ಒಂಬತ್ತು ವರ್ಷ 'ಶ್ರೀರಾಮಾಯಣ ದರ್ಶನಂ' ಅನ್ನು ಎಡೆಬಿಡದೆ ಬರೆದರು ಅಂತ ಪ್ರಶಂಸೆ ಮಾಡ್ತೀವಿ. ಕುವೆಂಪು ಸಾಹಿತ್ಯ ನಿರ್ಮಿತಿಗೆ ಸಹಕರಿಸಿದ ಅವರ ಆತ್ಮೀಯ ಹೆಂಡತಿ ಹೇಮಾವತಿ ಅವರನ್ನು ನೆನೆಯದೇ ಹೋದರೆ ಹೇಗೆ?' ಎನ್ನುತ್ತಿದ್ದುದು ಈಗಷ್ಟೇ ಹೇಳಿದಂತಿದೆ. ಜೊತೆಗೆ ಅವರು ಮಾರಯ್ಯಪ್ರಿಯ ಅಂಕಿತದ ಆಯ್ದಕ್ಕಿ ಲಕ್ಕಮ್ಮ ಅವರ ವಚನವೊಂದನ್ನು ಶರಣಸತಿ, ಲಿಂಗಪತಿಯ ಭಾವದಿ ಇನ್ನೊಂದು ಆಯಾಮದಲ್ಲಿ ವಿವರಿಸುತ್ತಿದ್ದುದು ನೆನಪಾದರೆ ಹೃದಯ ತಂಪಾಗುತ್ತದೆ.

ಪೂರ್ಣಚಂದ್ರ ತೇಜಸ್ವಿ ಎಂದಕೂಡಲೇ ನನಗೆ ಹೊಳೆಯುವುದು ಅವರನ್ನು 'ನನ್ನ ತೇಜಸ್ವಿ' ಎಂದು ತಮ್ಮ ಆತ್ಮಕಥನದ ಶೀರ್ಷಿಕೆಯಾಗಿಸಿಕೊಂಡ ರಾಜೇಶ್ವರಿ ತೇಜಸ್ವಿಯವರು. ಮೂಡಿಗೆರೆಯಲ್ಲಿ ತೇಜಸ್ವಿಯವರು ಖಾಲಿ ಜಾಗ ಕೊಂಡು ಕಾಫಿತೋಟ ಮಾಡಿ, ಅದನ್ನು ಇತರ ಬೆಳೆಗಾರರಂತೆ ವಾಣಿಜ್ಯ ದೃಷ್ಟಿಕೋನದಿಂದಷ್ಟೇ ನೋಡದೆ, ಹವ್ಯಾಸಿ ಸಹಜ ಕೃಷಿಕನಂತೆ ಖುಷಿಯಿಂದ ತೊಡಗಿಸಿಕೊಂಡಿದ್ದರು. ಇದರೊಟ್ಟಿಗೆ ಕಾಡುಮೇಡು ಅಲೆಯುತ್ತ, ಹಳ್ಳಕೊಳ್ಳ ದಾಟಾಡಿಕೊಂಡು ಹಾಗೇ ದಾರಿಗುಂಟ ಸ್ಕೂಟರ್ ಏರಿ ಮನೆಗೆ ಬಂದಾಗ, ಅವರಿಷ್ಟದ ಅಡುಗೆ ಮಾಡಿ ಬಡಿಸಿ, ಮತ್ತವರು ಧ್ಯಾನಸ್ಥ ಸಂತರಂತೆ ಬರೆಯಲು ಕುಳಿತಾಗ ಮನೆ ಮತ್ತು ಸುತ್ತಮುತ್ತಲಿನ ವಾತಾವರಣವನ್ನು ಆರಂಭದಿಂದಲೂ ಅಚ್ಚುಕಟ್ಟಾಗಿ ಇರಿಸಿಕೊಂಡಿದ್ದವರು ಇದೇ ರಾಜೇಶ್ವರಿ ಅವರು.

ಅಂದಹಾಗೆ ತೇಜಸ್ವಿಯವರಿಗೆ ಯಾರಾದರೂ ಫೋನ್ ಮಾಡಿದಾಗ, 'ಅವರು ಬರೆಯುತ್ತ ಕುಳಿತಿದ್ದಾರೆ, ಆಮೇಲೆ ಫ್ರೀ ಇದ್ದಾಗ ಇಂಪಾರ್ಟೆಂಟ್ ಅಂತ ಅನಿಸಿದರೆ ಅವರೇ ಮಾತಾಡ್ತಾರೆ' ಎಂದು ಹೇಳಿ, ಆ ವಿವರವನ್ನು ತೇಜಸ್ವಿಯವರಿಗೆ ತಲುಪಿಸುತ್ತಿದ್ದ ರಾಜೇಶ್ವರಿಯವರಿಗೂ ತೇಜಸ್ವಿ ಓದುಗ ವಲಯದ 'ಹೃದಯ ಪ್ರಶಸ್ತಿ'ಯೊಂದು ಸಂದಾಯ ಆಗಲೇಬೇಕು ಎಂಬುದು ನನ್ನ ಬಲವಾದ ಅಭಿಮತ.

> **ತನ್ನ ಸಂಗಾತಿಯ ಬದುಕಿನಲ್ಲಿ ಬಹುಮುಖ್ಯ ಪಾತ್ರ ವಹಿಸುವ ಮಹಿಳೆ, ಬಹುತೇಕ ಬಾರಿ ನೇಪಥ್ಯದಲ್ಲಿ ಉಳಿದುಬಿಡುವುದೇ ಹೆಚ್ಚು, ಅಂತಹ ಜೀವನ ಸಂಗಾತಿಗೊಂದು ಪುರುಷಾಭಿವಂದನೆ ಸಲ್ಲಬೇಕಲ್ಲವೇ? ಅಂತರಂಗ ಅರಿತು, ಆಕೆಗೊಂದು 'ಹೃದಯ ಪ್ರಶಸ್ತಿ' ನೀಡುವ ಕೆಲಸ ಆಗದಿದ್ದರೆ ಹೇಗೆ?**

ಕನ್ನಡದ ಕೆಲವು ಕವಿಗಳು ತಮ್ಮ ಆತ್ಮಸಂಗಾತಿಯನ್ನು ಮನದಲ್ಲಿ ಇರಿಸಿಕೊಂಡು ಪ್ರೇಮ– ವಿರಹ ನಿವೇದನೆಯನ್ನು ಸ್ಫುರಿಸುವ ಸಾಹಿತ್ಯವನ್ನು ಸರಿಸಮಾನವಾಗಿ ಸೃಜಿಸಿರುವುದು ನೇರವಾಗಿ ಕಂಡುಬರುತ್ತದೆ. 'ಸಖೀಗೀತ' ಖ್ಯಾತಿಯ ನಮ್ಮ ಬೇಂದ್ರೆಯಜ್ಜ 'ನೀ ಹೀಂಗ ನೋಡಬ್ಯಾಡ ನನ್ನ, ನೀ ಹೀಂಗ ನೋಡಿದರ ನನ್ನ, ತಿರುಗಿ ನಾ ಹ್ಯಾಂಗ ನೋಡಲೇ ನಿನ್ನ' ಎಂಬ ಮನನೀಯ ಸಾಲುಗಳನ್ನು ಅಭಿವ್ಯಕ್ತಿಸುವ ಮೂಲಕ, ಪುತ್ರಶೋಕದಲ್ಲಿದ್ದ ತನ್ನ ಸಖಿಗೆ ಸಾಂತ್ವನ ಹೇಳಿ ತಾವೂ ಸಮಾಧಾನಪಟ್ಟುಕೊಳ್ಳುವ ಭಾವತೀವ್ರತೆಯ ವೈಶಿಷ್ಟ ಅನನ್ಯವೇ ಆಗಿದೆ.

'ಪ್ರೇಮಕವಿ' ವಿಶೇಷಣದ ಕೆ.ಎಸ್.ನರಸಿಂಹಸ್ವಾಮಿ ಅವರಂತೂ 'ನಿನ್ನ ಪ್ರೇಮದ ಪರಿಯ ನಾನರಿಯೆ ಕನಕಾಂಗಿ, ನಿನ್ನೊಳಿದೆ ನನ್ನ ಮನಸು!' ಎಂದು ಹಲುಬಲು ಕಾರಣಳಾದ ಆ ಹುಡುಗಿಯಾದರೂ ಯಾರಿರಬಹುದು? ಆ ಪ್ರೀತಿಯ ವ್ಯಕ್ತಿತ್ವವನ್ನು ಹುಡುಕಿ ಸಮ್ಮಾನಿಸುವ ಬಯಕೆ ಯಾರಿಗೂ ಬರಲೇ ಇಲ್ಲವೇಕೆ? ಆದರೆ ಸ್ವತಃ ಕವಿಯಿಂದಲೇ ಅಂಥದ್ದೊಂದು ಸನ್ಮಾನಕ್ಕೆ ಆಕೆ ಪಾತ್ರರಾಗಿರಬಹುದು ಎಂಬ ಸಂದೇಹ, ಕವಿಯ ಕೆಲವು ಕವನದ ಸಾಲುಗಳನ್ನು ಓದಿದ ಸೂಕ್ಷ್ಮಗ್ರಾಹಿಗಳಿಗೆ ಬಾರದೇ ಇರದು. 'ಮದುವೆಯಾಗಿ ತಿಂಗಳಿಲ್ಲ, ನೋಡಿರಣ್ಣ ಹೇಗಿದೆ! ನಾನು ಕೂಗಿದಾಗಲೆಲ್ಲ ಬರುವಳೆನ್ನ ಶಾರದೆ!' ಎಂದು, ತಮ್ಮ ಮನೆಗೆ ಭೇಟಿ ಕೊಟ್ಟ ಸಂದರ್ಶಿತರಿಗೆ ಒಂದಷ್ಟು ಹೆಚ್ಚುಗಾರಿಕೆಯಿಂದಲೇ ಕವಿ ತಮ್ಮ ಪ್ರೀತಿಯ ಸಿರಿಮತಿಯನ್ನು ಸಹೃದಯದಿಂದ ಪರಿಚಯಿಸುತ್ತಾರೆ. ಈ ಸಾಲುಗಳಲ್ಲಿ ಉಕ್ಕುವ ಕವಿಯ ಜೀವನಪ್ರೀತಿಯನ್ನು ಗ್ರಹಿಸಿದರೆ ವ್ಹಾವ್ ಅನ್ನಿಸದೇ ಇರದು.

ಕನ್ನಡ ಸಾಹಿತ್ಯಲೋಕವನ್ನು ವಿಶೇಷವಾಗಿ ಗಮನಿಸಿದರೆ, ದಾಂಪತ್ಯದ ಪ್ರೀತಿಯ ಬೆಸುಗೆಯೊಂದಿಗೇ ಸಾಹಿತ್ಯಯಾನದಲ್ಲಿ ಪಯಣಿಸಿದ ಅನೇಕರು ಕಾಣಸಿಗುತ್ತಾರೆ. ಅಂತಹ ಜೋಡಿಗಳಲ್ಲಿ ದೇವನೂರ ಮಹಾದೇವ– ಸುಮಿತ್ರಾಬಾಯಿ, ದೊಡ್ಡರಂಗೇಗೌಡ– ರಾಜೇಶ್ವರಿ, ಕಮಲಾ– ಹಂಪನಾ, ಸವಿತಾ– ನಾಗಭೂಷಣ... ಹೀಗೆ ಇವರ ಲವಲವಿಕೆಯ ಕಥೆಗಳನ್ನು ಕೇಳಿದರೆ ಸೂಪರ್ ಟೆಲಿಚಿತ್ರವನ್ನು ನೋಡಿದಂತೆ ಭಾಸವಾಗಿ, ಮನಸ್ಸಿಗೆ ವಿಶೇಷ ಅನುಭೂತಿ ದೊರಕುವುದರಲ್ಲಿ ಅನುಮಾನವೇ ಇಲ್ಲವೇನೊ. ಇಂತಹ ಕೆಲವು ಸಂಗಾತಿಗಳು ಪರಸ್ಪರ ಜಾತಿ ಬೇರೆಯಾದರೂ, ಅಂತಸ್ತು, ವಯಸ್ಸಿನಲ್ಲಿ ಅಂತರ ಇದ್ದರೂ ಭೇದವೆಣಿಸದೆ ಹೃದಯ ಸಂವಾದದಿಂದ ಮುನ್ನಡೆದಿರುವುದು ಉಲ್ಲೇಖಾರ್ಹ. ಬಹುತೇಕ ಖ್ಯಾತನಾಮ ಪುರುಷೋತ್ತಮರ ಹಿಂದೆ ಅವರ ಶ್ರೀಮತಿಯರ ಹೃದಯಂಗಮದ ಗಟ್ಟಿ ನಿಲುವು ಪ್ರಮುಖ ಪಾತ್ರ ವಹಿಸಿದೆ ಎನ್ನಲಡ್ಡಿಯಿಲ್ಲ. ಇಂಥ ನಿಷ್ಕಲ್ಮಶ ಸ್ತ್ರೀ ಅಂತಃಕರಣಕ್ಕೊಂದು ಪುರುಷಾಭಿವಂದನೆ ಸಲ್ಲಲೇಬೇಕಾಗುತ್ತದೆ.

ದಾಂಪತ್ಯವು ಸಂಶಯ, ಅಪನಂಬಿಕೆಯ ಜೊತೆಗೆ ನಡೆದರೆ ಬದುಕು ತಳವೊಡೆದ ದೋಣಿಯಂತೆ. ಪ್ರೀತಿಸುವ ಹೃದಯದಲ್ಲಿ ಸಂಗಾತಿಯ ದೌರ್ಬಲ್ಯಕ್ಕಿಂತ ಉತ್ತಮವಾದ ಗುಣಗಳಿಗೇ ಮನ್ನಣೆ. ಆಗ ಪರಸ್ಪರ ಹೊಂದಾಣಿಕೆ ಸಹಜವಾಗಿಯೇ ಬೆಸೆದುಕೊಳ್ಳುತ್ತದೆ. ಹೀಗೆ ನಮ್ಮ ಪ್ರೀತಿಪಾತ್ರರನ್ನು ಅವರಿಗಿಂತ ಒಂದು ಪಟ್ಟು ಹೆಚ್ಚೇ ನಾವು ಪ್ರೀತಿಸಿ ಕಾಪಾಡಿಕೊಳ್ಳಬೇಕು. ಭಾವಶುದ್ಧ ಪ್ರೀತಿಗೆ ಪ್ರೀತಿಯೇ ಪ್ರತಿಸ್ಪರ್ಧಿಯಾಗಿರಬೇಕು. ಅಂತಹ ಹೃದಯ ಪ್ರೇಮಿಗಳು ಮಾತ್ರ ತಮ್ಮ ಬದುಕಿಗೆ ಮಾತ್ರವಲ್ಲ ಸಮಾಜಕ್ಕೂ ಆದರ್ಶಪ್ರಾಯರಾಗಿಯೇ ಬದುಕಿರುತ್ತಾರೆ.

ನಮ್ಮೆಲ್ಲ ಪುರುಷರ ಆಗುಹೋಗುಗಳಲ್ಲಿ ಸಮನ್ವಯ ಭಾವದಿ ಕೈಹಿಡಿದು ಸಾಗುತ್ತಿರುವ ಅವಳ ಹೃದಯದ ಮಿಡಿತ ಪ್ರತಿ ಸಂಗಾತಿಗೂ ಕೇಳಿಸಬೇಕು. ಅದೇ ತಾನೇ ಸಂಗಾತಿಯೊಬ್ಬ ಅವಳಿಗೆ ನೀಡಬಹುದಾದ ನಿಜವಾದ 'ಹೃದಯ ಪ್ರಶಸ್ತಿ'; ಅದುವೇ ತಾನೆ ನಿಜವಾದ ಪ್ರೀತಿಯ ಘನತೆ?

ಹೊಟ್ಟೆಯ ಬೊಜ್ಜು ಇರಲಿ ಜಾಗ್ರತೆ

ಸ್ಪಂದನ
ಡಾ. ವೀಣಾ ಎಸ್. ಭಟ್

ನನಗೆ 36 ವರ್ಷ. ಎರಡೂ ಹೆರಿಗೆ ನಾರ್ಮಲ್ ಆಗಿದ್ದು, ಎರಡನೇ ಮಗುವಿಗೆ ಈಗ 5 ವರ್ಷ. ದಿನಾ ವಾಕಿಂಗ್ ಮಾಡುತ್ತೇನೆ. ಹೆಚ್ಚೇನೂ ತಿನ್ನುವುದಿಲ್ಲ. ತುಂಬಾ ದಪ್ಪವೂ ಇಲ್ಲ. ಆದರೂ ಹೊಟ್ಟೆಯ ಕೆಳಭಾಗ ಮಾತ್ರ ಯಾವಾಗಲೂ ಉಬ್ಬಿದ ಹಾಗೇ ಇರುತ್ತದೆ. ಕೆಳಗೆ ಭಾರ ಭಾರ ಅನ್ನಿಸುತ್ತದೆ. ಎಲ್ಲರೂ 'ಮತ್ತೆ ವಿಶೇಷಾನಾ?' ಎಂದು ಕೇಳುತ್ತಾರೆ. ನನ್ನ ಹೆರಿಗೆ ಮಾಡಿಸಿದ ಡಾಕ್ಟರ್ 'ಅದು ಹಾಗೇ ಇರುತ್ತದೆ' ಎಂದಿದ್ದಾರೆ. ಹಾಗಿದ್ದರೆ ಈ ಹೊಟ್ಟೆ ಬೊಜ್ಜು ಕರಗಿಸಲು ಯಾವ ವಿಧಾನವೂ ಇಲ್ಲವೇ?

ಪರಿಮಳಾ, ಕೊಪ್ಪಳ

ಹೆರಿಗೆ ನಂತರ ಹೆಚ್ಚಿನ ಮಹಿಳೆಯರಿಗೆ ಕೆಳಹೊಟ್ಟೆ ಸ್ವಲ್ಪ ಉಬ್ಬಿದಂತೆ ಇರುತ್ತದೆ. ಯಾಕೆಂದರೆ ಮೊದಲು ಸಣ್ಣದಾಗಿದ್ದ ಗರ್ಭಕೋಶವು ಗರ್ಭಧಾರಣೆಯಲ್ಲಿ ಅತಿಯಾಗಿ ಹಿಗ್ಗುತ್ತದೆ. ಸುಮಾರು 3 ಕೆ.ಜಿ.ಯ ಮಗು, ಗರ್ಭಜಲ, ಪ್ಲಾಸೆಂಟ ಎಲ್ಲ ಸೇರಿ ಒಟ್ಟು ಐದಾರು ಕೆ.ಜಿ.ಯಷ್ಟನ್ನು ಒಳಗಿಟ್ಟುಕೊಂಡು ಹೆರಿಗೆಯವರೆಗೆ ಕಾಪಾಡಬೇಕಲ್ಲವೇ? ಹೆರಿಗೆಯ ನಂತರ ಗರ್ಭಕೋಶ ಸಹಜ ಸ್ಥಿತಿಗೆ ಬರುತ್ತದಾದರೂ, ಸಂಪೂರ್ಣವಾಗಿ ಮೊದಲಿನ ಸ್ಥಿತಿಗೆ ಬರುವುದಿಲ್ಲ.

ಹೊಟ್ಟೆಯ ಸಮಾನಾಂತರವಾಗಿ ಎರಡು ಕಡೆ ರೆಕ್ಟಸ್ ಅಬ್ಡೊಮಿನಿಸ್ ಎಂಬ ಸ್ನಾಯುಗಳಿದ್ದು, ಗರ್ಭಪೂರ್ವ ಹಂತದಲ್ಲಿ ಇವುಗಳ ನಡುವೆ ಹೆಚ್ಚು ಅಂತರ ಇರುವುದಿಲ್ಲ. ಈ ಸ್ನಾಯುಗಳು ದುರ್ಬಲವಾಗಿ ಇರುವವರಲ್ಲಿ, ಕೆಲವೊಮ್ಮೆ ಅವಳಿ, ತ್ರಿವಳಿ ಮಕ್ಕಳು ಹೊಟ್ಟೆಯೊಳಗೆ ಬೆಳೆಯುತ್ತಿದ್ದಾಗ, ಮಗುವಿನ ತೂಕ ಅತಿಯಾಗಿದ್ದಾಗ, ಗರ್ಭಜಲದ ಪ್ರಮಾಣ ಹೆಚ್ಚಾಗಿದ್ದಾಗ ಈ ಸ್ನಾಯುಗಳು ಹಿಗ್ಗಿ, ಎರಡರ ನಡುವಿನ ಅಂತರ ಹೆಚ್ಚಾಗುತ್ತದೆ. ಆಗ ಆ ಮಧ್ಯದ ಜಾಗದಲ್ಲಿ ಹೊಟ್ಟೆಯ ಸ್ನಾಯುಗಳು ದುರ್ಬಲಗೊಳ್ಳುತ್ತವೆ. ಆ ಜಾಗದಲ್ಲಿ ಹೊಟ್ಟೆಯ ಚರ್ಮದ ಕೆಳಗೆ ಕರುಳಿನ ಭಾಗ ಆಕ್ರಮಿಸಿಕೊಂಡು, ಹೊಟ್ಟೆ ಉಬ್ಬಿ ಸದಾ ಐದು ತಿಂಗಳು ಗರ್ಭಿಣಿಯರ ಹಾಗೆ ಕಾಣಿಸುತ್ತದೆ.

ಇನ್ನು ಕೆಲವರಲ್ಲಿ ಹೊಟ್ಟೆಯ ಒಳ ಅಂಗಗಳಲ್ಲಿ ಕೊಬ್ಬು ಶೇಖರಣೆ ಹೆಚ್ಚಿದ್ದಾಗ ಕೈಕಾಲು ಸಣ್ಣಗಿದ್ದರೂ ಹೊಟ್ಟೆಯ ಭಾಗ ದಪ್ಪಗಿರುತ್ತದೆ. ಇದನ್ನು ಉದರದ ಬೊಜ್ಜು ಅಥವಾ ಆಂಡ್ರಾಯ್ಡ್ ಒಬೇಸಿಟಿ ಎನ್ನುತ್ತಾರೆ. ಈ ಬೊಜ್ಜು ಹಾರ್ಮೋನ್ ಉತ್ಪಾದಿಸುವ ಅಂಗದ ಹಾಗೆ ಕೆಲಸ ಮಾಡಿ ಇನ್ಸುಲಿನ್ ಪ್ರತಿರೋಧ ಹೆಚ್ಚಿಸುತ್ತದೆ. ಇದು ದೀರ್ಘಾವಧಿ ಆರೋಗ್ಯ ಸಮಸ್ಯೆಗಳಾದ ಮಧುಮೇಹ, ಪಿ.ಸಿ.ಒ.ಡಿ., ಹೃದ್ರೋಗ, ಏರುರಕ್ತದೊತ್ತಡದಂತಹವುಗಳಿಗೆ ಎಡೆಮಾಡಿಕೊಡುತ್ತದೆ. ಹಾಗಾಗಿ, ಈ ಬಗ್ಗೆ ಜಾಗ್ರತೆಯಿಂದ ಇರಿ. ಪ್ರತಿದಿನ ಕನಿಷ್ಠ 20–30 ನಿಮಿಷ ಹೊಟ್ಟೆಯ ಸ್ನಾಯುಗಳನ್ನು ಬಲಪಡಿಸುವ ಕೆಲವು ಆಸನಗಳನ್ನು ಮಾಡಿದರೆ ಇಡೀ ಶರೀರದ ತೂಕ ಜೊತೆಗೆ ಉದರದ ಬೊಜ್ಜು ಎರಡನ್ನೂ ನಿಯಂತ್ರಣದಲ್ಲಿ ಇಡಬಹುದು. ನಿಂತುಕೊಂಡಾಗ, ಓಡಾಡುವಾಗ ಸಾಧ್ಯವಾದಷ್ಟೂ ಹೊಟ್ಟೆಯ ಸ್ನಾಯುಗಳನ್ನು ಒಳಗೆಳೆದುಕೊಳ್ಳುತ್ತಾ ಇದ್ದರೆ ಅವುಗಳ ಟೋನ್ ಹೆಚ್ಚುತ್ತಾ ಹೋಗುತ್ತದೆ. ಇದು ಹೊಟ್ಟೆಯ ಬೊಜ್ಜಿನ ನಿರ್ವಹಣೆಗೆ ಸಹಾಯಕ. ಪ್ರತಿ ಮಹಿಳೆಯೂ ಪೆಲ್ವಿಕ್ ಸ್ನಾಯುಗಳ ಬಲ ಕಾಪಾಡಿಕೊಳ್ಳಲು ಕೆಗಲ್ಸ್ ವ್ಯಾಯಾಮವನ್ನು ಸರಿಯಾದ ರೀತಿಯಲ್ಲಿ ಪ್ರತಿನಿತ್ಯ ಮಾಡಿದಾಗ, ತೂಕ ನಿಯಂತ್ರಣದ ಜೊತೆಗೆ ಲೈಂಗಿಕ ಜೀವನವೂ ಚೆನ್ನಾಗಿರುತ್ತದೆ.

ಏನಿವರ ಬ್ಯೂಟಿ ಸೀಕ್ರೆಟ್?



ತಪಸ್ವಿನಿ ಪೂಣಚ್ಚ, ಚಿತ್ರನಟಿ

ಸತ್ವಯುತ ಆಹಾರ ಸೇವನೆ ಚರ್ಮಕ್ಕೆ ನಿಜವಾದ ಕಾಂತಿಯನ್ನು ತರಬಲ್ಲದು. ನಾವು ಏನು ಸೇವಿಸುತ್ತೇವೋ ಅದರ ಒಟ್ಟು ಸಾರವೇ ನಳನಳಿಸುವ ಚರ್ಮ ಹಾಗೂ ಕೂದಲು. ಹಾಗಾಗಿ, ಬಾಹ್ಯವಾಗಿ ಹಚ್ಚಿಕೊಳ್ಳುವ ಕ್ರೀಂ ಹಾಗೂ ಸೀರಂಗಳ ಮೇಲೆ ನಾನು ಹೆಚ್ಚು ಅವಲಂಬಿತಳಾಗಿಲ್ಲ. ಸರಿಯಾದ ಸಮಯಕ್ಕೆ, ಕ್ರಮಬದ್ಧವಾಗಿ, ಪೌಷ್ಟಿಕಾಂಶಗಳಿರುವ ಸತ್ವಭರಿತ ಆಹಾರವನ್ನು ಸೇವನೆ ಮಾಡುತ್ತೇನೆ. ನನ್ನ ಊಟದಲ್ಲಿ ಹೆಚ್ಚು ತರಕಾರಿ, ಹಣ್ಣುಗಳು ಇರುವಂತೆ ನೋಡಿಕೊಳ್ಳುತ್ತೇನೆ. ಚೆನ್ನಾಗಿ ನೀರು ಕುಡಿಯುತ್ತೇನೆ. ಜತೆಗೆ ದ್ರವಾಹಾರವನ್ನು ಹೆಚ್ಚೆಚ್ಚು ಸೇವನೆ ಮಾಡುತ್ತೇನೆ. ನಾರಿನಾಂಶ ಇದ್ದಷ್ಟೂ ದೇಹ ಡಿಟಾಕ್ಸ್ ಆಗುತ್ತದೆ. ಆಹಾರದಲ್ಲಿ ಸೊಪ್ಪನ್ನು ಹೆಚ್ಚಾಗಿ ಬಳಸುತ್ತೇನೆ. ಡ್ರೈಫ್ರೂಟ್ಸ್, ಸೂರ್ಯಕಾಂತಿ ಬೀಜ, ಕುಂಬಳಕಾಯಿ ಬೀಜ, ಚಿಯಾ ಬೀಜಗಳನ್ನು ಹೆಚ್ಚು ಬಳಸುತ್ತೇನೆ. ಹಾರ್ಮೋನ್ ವ್ಯತ್ಯಯದ ಸಮಸ್ಯೆ ಇದ್ದರೆ ಇದು ಸಹಕಾರಿ.

ಕೆಲಸ, ಜವಾಬ್ದಾರಿಗಳ ಒತ್ತಡ ಎಲ್ಲರಿಗೂ ಇರುತ್ತದೆ. ಅವನ್ನು ಹೇಗೆ ನಿಭಾಯಿಸುತ್ತೇವೆ ಎನ್ನುವುದು ಮುಖ್ಯ. ಆಗ ಮಾತ್ರ ಈ ಒತ್ತಡಗಳಿಂದ ಕಡಿಮೆ ಪರಿಣಾಮವನ್ನು ಎದುರಿಸಬಹುದು. ಕೆಲವೊಮ್ಮೆ ಒತ್ತಡ ಹೆಚ್ಚಾದಾಗ ಕಣ್ಣಿನ ಕೆಳಗೆ ಕಪ್ಪು ವರ್ತುಲ ಕಾಣಿಸಿಕೊಳ್ಳುತ್ತದೆ. ಸಾಕಷ್ಟು ನಿದ್ರೆ, ಉತ್ತಮ ಆಹಾರ ಸೇವನೆ ನಮ್ಮನ್ನು ಚೆನ್ನಾಗಿ ಕಾಣುವಂತೆ ಮಾಡುತ್ತದೆ.

ವರ್ಷಕ್ಕೊಮ್ಮೆ ವಿವರವಾದ ರಕ್ತಪರೀಕ್ಷೆಯನ್ನು ಮಾಡಿಸುತ್ತೇನೆ. ಪೌಷ್ಟಿಕಾಂಶ ತಜ್ಞರು ರಕ್ತದಲ್ಲಿರುವ ವಿಟಮಿನ್‌ಗಳ ಕೊರತೆಯನ್ನು ನೀಗಿಕೊಳ್ಳಲು ಪ್ರತಿವರ್ಷ ಡಯಟ್ ಚಾರ್ಟ್ ಕೊಡುತ್ತಾರೆ. ಅದನ್ನು ಅನುಸರಿಸುತ್ತೇನೆ. ಮುಖದಲ್ಲಿ ಕಾಂತಿ ಹೆಚ್ಚಲು ವ್ಯಾಯಾಮ ಮಾಡುವುದು ಬಹಳ ಮುಖ್ಯ. ನಿತ್ಯವೂ ದೇಹ ಬೆವರುವಷ್ಟು ವ್ಯಾಯಾಮ ಮಾಡಬೇಕು. ನಾನಂತೂ ಒಂದೂವರೆ ಗಂಟೆ ಜಿಮ್‌ನಲ್ಲಿ ಕಾರ್ಡಿಯೊ, ಸ್ಟ್ರೆಂಥ್, ಲೆಗ್ ವರ್ಕ್‌ಔಟ್ ಮಾಡುತ್ತೇನೆ. ಜತೆಗೆ ವಾರದಲ್ಲಿ ಎರಡು ದಿನ ಯೋಗವನ್ನು ಮಾಡುತ್ತೇನೆ. ಹೊರಗೆ ಕಾಲಿಡುವ ಮುನ್ನ, ಎಸ್‌ಪಿಎಫ್ ಇರುವ ಕೊರಿಯನ್ ಬ್ರ್ಯಾಂಡ್ ಸನ್‌ಸ್ಕ್ರೀನ್ ಹಚ್ಚಿಕೊಳ್ಳುತ್ತೇನೆ. ರಾತ್ರಿ ಮಲಗುವಾಗ ಕಡ್ಡಾಯವಾಗಿ ಮಾಯಿಶ್ಚರೈಸರ್ ಹಾಕಿಕೊಳ್ಳುತ್ತೇನೆ.

ಇನ್ನು ಕೂದಲ ಆರೈಕೆಗೆ ವಿಶೇಷ ಅಂತೇನೂ ಮಾಡುವುದಿಲ್ಲ. ವಾರಕ್ಕೆ ಎರಡು ಬಾರಿ ಚೆನ್ನಾಗಿ ಎಣ್ಣೆ ಹಚ್ಚಿ ಸ್ನಾನ ಮಾಡುತ್ತೇನೆ. ಫಿಲ್ಟರ್ ನೀರನ್ನು ಬಿಸಿ ಮಾಡಿ ಅದರಲ್ಲಿ ಕೂದಲು ತೊಳೆಯುತ್ತೇನೆ.

ನಮ್ಮ ಆಲೋಚನೆಗಳು ಸ್ಪಷ್ಟವಾಗಿದ್ದರೆ, ಯೋಜನಾಬದ್ಧವಾಗಿದ್ದರೆ, ಕನಸು ಕಾಣುತ್ತ ಅದನ್ನು ಈಡೇರಿಸಿಕೊಳ್ಳುವ ಛಲ ಹೊಂದಿದ್ದರೆ, ನಾವು ಖುಷಿಯಾಗಿದ್ದು, ನಮ್ಮ ಸುತ್ತಮುತ್ತ ಇರುವವರಿಗೂ ಖುಷಿಯನ್ನು ಹಂಚಿದರೆ ಸಹಜವಾಗಿಯೇ ಚಂದ ಕಾಣುತ್ತೇವೆ.

ಆ ಧೈರ್ಯ ನನಗೆ ಇದ್ದಿದ್ದರೆ...

• ಶ್ರೀರಂಜನಿ ಅಡಿಗ

ಭಾವಯಾನ

ಬೆಂಗಳೂರಿನ ಸಿಟಿ ಬಸ್‌ನಲ್ಲಿ ಮೊನ್ನೆ ಪ್ರಯಾಣಿಸುತ್ತಿದ್ದೆ. ರಷ್ ಇದ್ದುದರಿಂದ ನೇತಾಡುತ್ತ ನಿಂತಿದ್ದೆ. ಕಂಡಕ್ಟರ್ 'ಟಿಕೆಟ್ ಟಿಕೆಟ್' ಎಂದು ಕೂಗುತ್ತಿದ್ದರೂ ಕೇಳದಿರುವಷ್ಟು ಮೊಬೈಲಿನಲ್ಲಿ ಮುಳುಗಿಹೋಗಿರುವ ಕಾಲೇಜು ಯುವತಿಯರು, ಮಲ್ಲಿಗೆ ಹೂವು ಕಟ್ಟುತ್ತಲೋ, ಬಟಾಣಿ ಬಿಡಿಸುತ್ತಲೋ ಸಮಯದ ಸದುಪಯೋಗ ಮಾಡಿಕೊಳ್ಳುತ್ತಿರುವ ಮುಂದಿನ ಸೀಟಿನಲ್ಲಿ ಕೂತ ಹಿರಿಯ ಮಹಿಳೆಯರು, ಅಪರಿಚಿತರೊಂದಿಗೆ ಕಷ್ಟಸುಖ ಹೇಳಿಕೊಳ್ಳುತ್ತಿರುವವರು, ಅಡ್ಡಬಂದ ವಾಹನ ಮಾಲೀಕರಿಗೆ ದಬಾಯಿಸುತ್ತಿರುವ ಡ್ರೈವರ್... ಇಂಥ ಬಹುವಿನ್ಯಾಸದ ಪ್ರೇಮಿನೊಳಗಿನ ಚಿತ್ರಣದ ಪ್ರಯಾಣವನ್ನು ನಾನು ಯಾವಾಗಲೂ ಆನಂದಿಸುತ್ತೇನೆ.

ಅಂದೂ ಅದೇ ಗುಂಗಿನಲ್ಲಿದ್ದಾಗ ಇದ್ದಕ್ಕಿದ್ದಂತೆ ನನ್ನ ಹಿಂದಿನಿಂದ 'ಏನೋ, ಏನೋ ಮಾಡ್ದೆ ನೀನು?' ಎಂದು, ಮಹಿಳೆಯೊಬ್ಬರ ಗಟ್ಟಿ ಧ್ವನಿ ಕೇಳಿಬಂತು. ಜೊತೆಯಲ್ಲೇ 'ನಾನೇನು ಮಾಡ್ದೆ?' ಎಂಬ ಗಂಡಸಿನ ಧ್ವನಿ. 'ಏನೂ ಮಾಡಲಿಲ್ವಾ ನೀನು? ನನ್ನ ತಂದೆಗಾದ ವಯಸ್ಸಾಗಿದೆ ನಿಂಗೆ, ಇನ್ನೂ ತೆವಲು ಬಿಟ್ಟಿಲ್ವಾ? ಮಾಡೋದೆಲ್ಲ ಮಾಡಿ ಏನೂ ಗೊತ್ತಿಲ್ಲದಂತೆ ನಾಟಕ ಆಡ್ತೀಯಾ?' ಎನ್ನುತ್ತ ಆಕೆ ಕಪಾಳಕ್ಕೆ ಎರಡೇಟು ಬಿಟ್ಟಳು ನೋಡಿ, ಅಷ್ಟು ಹೊತ್ತು ಮುಗ್ಧನಂತೆ ವಾದಿಸುತ್ತಿದ್ದವನು, ಮಾನ ಹೋದಂತಾಗಿ ತಪ್ಪೊಪ್ಪಿದಂತೆ ತಲೆತಗ್ಗಿಸಿ ಸುಮ್ಮನಾಗಿಬಿಟ್ಟ. ಅದೇ ಕ್ಷಣ ಸ್ಟಾಪ್ ಬಂದದ್ದರಿಂದ ಬಸ್ ನಿಂತಾಗ ತರಾತುರಿಯಿಂದ ಇಳಿಯಲು ಹೊರಟವನನ್ನು 'ನೀನು ಎಲ್ಲಿಗೆ ಟಿಕೆಟ್ ತಗೊಂಡಿದ್ದೀಯ ಅಂತ ನಂಗೆ ಗೊತ್ತು. ಡ್ರೈವರ್ರೇ ಯಾವ ಕಾರಣಕ್ಕೂ ಡೋರ್ ತೆಗಿಬೇಡಿ' ಎಂದು ಖಡಕ್ಕಾಗಿ ಆದೇಶಿಸಿದಳು. ಕೆಲವು ಮಹಿಳೆಯರು 'ಅಯ್ಯೋ ಇರ್ಲಿ ಬಿಡಮ್ಮ, ರಶ್ನಲ್ಲಿ ಏನೋ ಗೊತ್ತಿಲ್ದೆ ಮಾಡಿರ್ತಾನೆ. ಯಾಕ್ ಅಷ್ಟು ಸೀನ್ ಕ್ರಿಯೇಟ್ ಮಾಡ್ತೀಯ?' ಎಂದು ಅವಳಿಗೇ ಹಿತವಚನ ನೀಡುತ್ತಿದ್ದರು. ಕಂಡಕ್ಟರ್, ಡ್ರೈವರ್ ತಮಗೆ ಸಂಬಂಧಪಟ್ಟಿದ್ದೇ ಅಲ್ಲ ಎನ್ನುವಂತೆ ತಮ್ಮ ಕೆಲಸದಲ್ಲಿ ಮಗ್ನರಾಗಿದ್ದರು.

ನಂತರ ಆಕೆ ಬಸ್‌ನಲ್ಲಿದ್ದ ಕಾಲ್‌ಸೆಂಟರ್ ನಂಬರಿಗೆ ಫೋನ್ ಮಾಡಿ 'ನಾನು ಇಂಥ ಜಾಗದಲ್ಲಿ ಇಳಿಯುತ್ತೇನೆ. ನನಗೆ ಹೀಗೆ ಅನ್ಯಾಯವಾಗಿದೆ, ಬಂದು ಸಹಾಯ ಮಾಡಿ' ಎಂದಳು. ಆ ಜಾಗ ಬಂದಾಗ, ಅವನು ಎಲ್ಲೂ ಓಡಿಹೋಗದಂತೆ ಕೈರಟ್ಟೆ ಹಿಡಿದುಕೊಂಡೇ ಇಳಿಸಿದಳು. ಬಸ್ಸು ಮುಂದಕ್ಕೆ ಹೊರಟಿತು. ಮುಂದೇನಾಯಿತೋ ನನಗೆ ತಿಳಿಯಲಿಲ್ಲ. ಆದರೆ ಅಷ್ಟೆಲ್ಲ ಧೈರ್ಯ ಪ್ರದರ್ಶಿಸಿದ ಆಕೆಯ ಬಗ್ಗೆ ಮೆಚ್ಚುಗೆಯ ಭಾವ ಮೂಡಿತು.

ಈ ಪ್ರಕರಣ ಯಾಕೋ ನನ್ನ ಮದುವೆಗೆ ಮುಂಚಿನ ದಿನಗಳನ್ನು ನೆನಪಿಸಿಬಿಟ್ಟಿತು. ಊರ ಜಾತ್ರೆಗಳಲ್ಲಿ ಪುಂಡುಪೋಕರಿಗಳು ಬೇಕಂತಲೇ ದೇಹವನ್ನು ಅನುಚಿತವಾಗಿ ಸ್ಪರ್ಶಿಸಿದಾಗ, ಪ್ರತಿಭಟಿಸುವ ಧೈರ್ಯ ಮಾಡಿರಲಿಲ್ಲ ನಾನು. ಬದಲಿಗೆ, ಒಳಗೊಳಗೇ ಹೇವರಿಕೆ, ಮುಜುಗರದಿಂದ ಕುಗ್ಗಿಹೋಗುತ್ತಿದ್ದೆ. ಅಮ್ಮನಿಗೆ ಹೇಳಿದರೆ ಬೈಯುತ್ತಾಳೆಂದು ನನ್ನೊಳಗೇ ಇಟ್ಟುಕೊಂಡು ಒದ್ದಾಡುತ್ತಿದ್ದೆ. ಇಲ್ಲದಿದ್ದರೆ ಗೆಳತಿಯರು ತಮಗಾದ ಅಂತಹುದೇ ಅನುಭವಗಳನ್ನು ಹೇಳಿಕೊಂಡರೆ 'ಇಂಥ ಮುಜುಗರ ನನಗೊಬ್ಬಳಿಗೇ ಅಲ್ಲ' ಎಂದುಕೊಂಡು ಸಮಾಧಾನದ ಹೊದಿಕೆ ಹಾಕಿಕೊಳ್ಳುತ್ತಿದ್ದೆ. ಕೆಲವೊಮ್ಮೆ, ಈ ತರಲೆತಾಪತ್ರಯವೇ ಬೇಡವೆಂದು ಜಾತ್ರೆಗೆ ಹೋಗುವುದನ್ನೇ ತಪ್ಪಿಸಿಕೊಳ್ಳಲು ಕಾರಣ ಹುಡುಕುತ್ತಿದ್ದೆ.

ಆ ದಿನ ಮನೆಗೆ ಬಂದು ಹರೆಯದ ಮಗಳ ಬಳಿ ಆ ಮಹಿಳೆಯನ್ನು ಶ್ಲಾಘಿಸಿದೆನಾದರೂ, ಮರುಕ್ಷಣ, ಆ ಮಾದರಿ ಹೆಣ್ಣುಮಗಳ ಧೈರ್ಯ ಆಗಲೇ ನನಗಿದ್ದಿದ್ದರೆ... ಎಂದು ಅನ್ನಿಸದೇ ಇರಲಿಲ್ಲ. ಇಂಥ ಧೈರ್ಯ ಎಲ್ಲ ಮಹಿಳೆಯರಲ್ಲೂ ಮೂಡಿದರೆ, ಮೀಟೂ ರೀತಿಯ ಆಂದೋಲನಗಳ ಅಗತ್ಯವೇ ಇರುತ್ತಿರಲಿಲ್ಲ, ಅಲ್ಲವೇ?

ಲಗುಬಗೆಯಿಂದ ಮಾಡಿ ಬಗೆಬಗೆ ಅಡುಗೆ...

'ಒಮ್ಮೆ ಈ ಗ್ರೇವಿ ಮಾಡಿ ನೋಡಿ; ಎರಡು ಚಪಾತಿ ತಿನ್ನೋರು ಎಂಟು ತಿಂತಾರೆ', 'ಕಾಲು ಕೆ.ಜಿ ಚಿಕನ್ ಇದ್ರೆ ಸಾಕು ಶೀತ, ನೆಗಡಿ, ಕೆಮ್ಮು ಮಾಯ', 'ಸಾವಿರಾರು ರೂಪಾಯಿ ಕೊಟ್ಟು ಪಿಜ್ಜಾ- ಬರ್ಗರ್ ಆರ್ಡರ್ ಮಾಡಬೇಡಿ; ಮನೆಯಲ್ಲೇ ಹೀಗೆ ಮಾಡಿ', 'ಒವೆನ್ ಇಲ್ಲದೇ ಸಾಫ್ಟ್ ಹಾಗೂ ಕ್ರೀಮಿ ಬ್ರೆಡ್ ಪುಡ್ಡಿಂಗ್ ಮಾಡೋಣ ಬನ್ನಿ'... ಹೀಗೆ ಆಕರ್ಷಕ ಟ್ಯಾಗ್‌ಲೈನ್‌ಗಳಿಂದಲೇ ಪಾಕಪ್ರಿಯರನ್ನು ತಮ್ಮ ಯೂಟ್ಯೂಬ್ ಚಾನೆಲ್‌ಗೆ ಆಹ್ವಾನವೀಯುವವರು 'ತನು ಸ್ವಯಂ ಅಡುಗೆ' ಯ ಒಡತಿ ವೀಣಾ ಎಂ. ಗಡ್ಡಿ.

ಸಸ್ಯಾಹಾರ, ಮಾಂಸಾಹಾರದ ಖಾದ್ಯಗಳು, ಸಿಹಿ ಖಾದ್ಯಗಳು, ತಂಪು ಪಾನೀಯಗಳು, ಬೇಕರಿ ಖಾದ್ಯಗಳು, ಐಸ್‌ಕ್ರೀಂ... ಹೀಗೆ ಎಲ್ಲ ಬಗೆಯ ಖಾದ್ಯಗಳನ್ನೂ ಸುಲಭವಾಗಿ, ಲಗುಬಗೆಯಲ್ಲಿ ತಯಾರಿಸುವ ವಿಧಾನವನ್ನು ಮನಮುಟ್ಟುವಂತೆ ಹೇಳಿಕೊಡುತ್ತಾರೆ ವೀಣಾ. ಸಾಂಪ್ರದಾಯಿಕ ಅಡುಗೆಗಳಿಂದ ಹಿಡಿದು ಸುಲಭದ ಸ್ನ್ಯಾಕ್ಸ್ ರೆಸಿಪಿಗಳ ತನಕ ಎಲ್ಲವೂ ಬಾಯಲ್ಲಿ ನೀರೂರಿಸುತ್ತವೆ.

ವೀಣಾ ಗಡ್ಡಿ

2018ರಲ್ಲಿ ಯೂಟ್ಯೂಬ್‌ಗೆ ಅಡಿ ಇಟ್ಟ ವೀಣಾ ಈವರೆಗೆ 2,000 ಖಾದ್ಯಗಳನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಾರೆ. ಪ್ರತಿ ರೆಸಿಪಿಯಲ್ಲೂ ಹೊಸತನ ಹುಡುಕುತ್ತ, ರೆಸಿಪಿ ತಯಾರಿಸುವಾಗ ಎದುರಾಗುವ ತೊಡಕುಗಳನ್ನು ನಿವಾರಿಸುವ ಬಗೆಯನ್ನು ಹೇಳಿಕೊಡುತ್ತ, ನಮ್ಮನ್ನು ಅಡುಗೆಗೆ ಅಣಿಗೊಳಿಸುತ್ತಾರೆ. ಹೊಸದಾಗಿ ಅಡುಗೆ ಕಲಿಯುವವರೂ ವೀಣಾ ಅವರ ವಿಧಾನದಲ್ಲಿ ಮಾಡಿದರೆ ಪರ್ಫೆಕ್ಟ್ ಸ್ವಾದ ಪಡೆಯಬಹುದು.

ಅವರು ಹೇಳಿಕೊಟ್ಟಿರುವ ಚಿಕನ್ ಗ್ರೇವಿ 75 ಲಕ್ಷ ವೀಕ್ಷಣೆ ಪಡೆದಿದೆ. ಹಳ್ಳಿ ಶೈಲಿಯಲ್ಲಿ ಚಿಕನ್ ಸಾಂಬಾರ್, ಮಂಗಳೂರು ಚಿಕನ್ ಸುಕ್ಕಾ, ಮಟನ್ ಕಲೊಂಜಿ, ಕೈಮಾ ಉಂಡೆ ಸಾರು, ಹೈದರಾಬಾದಿ ಚಿಕನ್ ಸಿಕ್ಸ್‌ಟಿಫೈ, ಚಟ್‌ಪಟ್ ಚಿಕನ್, ಚಿಕನ್ ಚಾಪ್ಸ್, ಚಿಕನ್ ಲಾಲಿಪಾಪ್, ತರಹೇವಾರಿ ಮೀನಿನ ಖಾದ್ಯಗಳು ಸೇರಿದಂತೆ ನೂರಾರು ಬಗೆಯ ನಾನ್‌ವೆಜ್ ರೆಸಿಪಿಗಳನ್ನು ಸುಲಭದಲ್ಲಿ ಮಾಡಿ ತೋರಿಸಿ ಮಾಂಸಾಹಾರ ಪ್ರಿಯರ ಜಿಹ್ವಾ ಚಾಪಲ್ಯ ಹೆಚ್ಚಿಸಿದ್ದಾರೆ. ತಯಾರಿಕೆಗೆ ಹೆಚ್ಚು ಸಮಯ ಬೇಡುವ, ಹೆಚ್ಚು ಮಸಾಲೆ ಪದಾರ್ಥ ಆಕರಿಸುವ ಮಾಂಸಾಹಾರದ ಖಾದ್ಯಗಳನ್ನೂ ಅತಿ ಬೇಗ ಮಾಡಿ ಹುಬ್ಬೇರುವಂತೆ ಮಾಡುತ್ತಾರೆ ವೀಣಾ.

ಧಾರವಾಡ ಜಿಲ್ಲೆಯ ಹೆಬ್ಬರಿನವರಾದ ವೀಣಾ ಸದ್ಯ ಪತಿಯ ಉದ್ಯೋಗದ ನಿಮಿತ್ತ ಶಿವಮೊಗ್ಗದಲ್ಲಿ ನೆಲಸಿದ್ದಾರೆ. ತಂದೆಯ ಕೃಷಿ ಕಾರ್ಯಗಳನ್ನು ನೋಡುತ್ತಾ ಬೆಳೆದ ಅವರಿಗೆ ಅಮ್ಮನ ಕೈರುಚಿ ತಿಂದಷ್ಟೇ ಗೊತ್ತಿತ್ತು. ಅಡುಗೆ ತಯಾರಿಯ ಲವಲೇಶವನ್ನೂ ಅರಿಯದಿದ್ದ ವೀಣಾ ಅವರನ್ನು ಆರ್ಥಿಕವಾಗಿ ಸ್ವಾವಲಂಬಿಯನ್ನಾಗಿಸಿದ್ದು ಅದೇ ಅಡುಗೆಯೇ! ಮನೆಯಲ್ಲೇ ಇದ್ದುಕೊಂಡು ಏನಾದರೂ ಉದ್ಯೋಗ ಮಾಡಬೇಕೆಂದು ಅರಸುತ್ತಿದ್ದ ಅವರಿಗೆ ನೆರವಾದದ್ದು ಯೂಟ್ಯೂಬ್‌ನ ಒಂದು ವಿಡಿಯೊ. ಹೀಗೂ ಹಣ ಗಳಿಸಬಹುದು ಎನ್ನುವುದನ್ನು ಅರಿತ ಅವರು ಅಡುಗೆಯ ರೆಸಿಪಿಗಳನ್ನು ಯೂಟ್ಯೂಬ್‌ನಲ್ಲಿ ಹಂಚಿಕೊಳ್ಳಲು ಶುರುಮಾಡಿದರು.

ವೀಣಾ ಅವರ ಸರಳ ಹಾಗೂ ಸ್ಫುಟವಾದ ಭಾಷೆ, ಅಚ್ಚುಕಟ್ಟಾದ ಅಡುಗೆ ರೆಸಿಪಿಗಳು ಬಹುಬೇಗ ಹೆಚ್ಚು ಜನರನ್ನು ತಲುಪಿ, ಆರ್ಥಿಕವಾಗಿಯೂ ಸ್ವಾವಲಂಬಿಯಾದರು. 'ವೀಣಾ ದಿನಚರಿ' ಎಂಬ ಬ್ಲಾಗ್ ಅನ್ನೂ ಅವರು ಶುರುಮಾಡಿದ್ದಾರೆ.

ರಸಾಸ್ವಾದ

ಸುಮಾ ಬಿ.

ನೆಗಡಿಗೆ ಮದ್ದು ಚಿಕನ್ ಶೋರ್ಬಾ

ನೆಗಡಿ, ಕೆಮ್ಮು, ಶೀತ ಆದವರು ಐದು ನಿಮಿಷದಲ್ಲೇ ರುಚಿಕರವಾದ ಚಿಕನ್ ಶೋರ್ಬಾ ಮಾಡಿ ಸವಿಯಿರಿ ಎನ್ನುತ್ತಾರೆ ವೀಣಾ.

ಹೀಗೆ ಮಾಡಿ: (1/4 ಕೆ.ಜಿ. ಚಿಕನ್‌ಗೆ ಬೇಕಾಗುವಷ್ಟು ಅಳತೆಯನ್ನು ಇಲ್ಲಿ ಹೇಳಲಾಗಿದೆ

ಸಾಂಬಾರ್ ಈರುಳ್ಳಿ 10–15, ಬೆಳ್ಳುಳ್ಳಿ–4–5 ಎಸಳು, ಶುಂಠಿ ಒಂದು ಇಂಚು, ಮೆಣಸು- ಒಂದು ಚಮಚ, ಜೀರಿಗೆ- ಒಂದು ಚಮಚ, ಹಸಿಮೆಣಸಿನ ಕಾಯಿ- ನಾಲ್ಕು, ಒಂದು ಹಿಡಿಯಷ್ಟು ಪುದಿನಾ, ಕೊತ್ತಂಬರಿ ಸೊಪ್ಪು. ಇವೆಲ್ಲವನ್ನೂ ಮಿಕ್ಸಿಯಲ್ಲಿ ಹಾಕಿ ರುಬ್ಬಿಕೊಳ್ಳಬೇಕು. ಬಳಿಕ ಕುಕ್ಕರ್‌ನಲ್ಲಿ ಸ್ವಲ್ಪ ಎಣ್ಣೆ ಬಿಸಿ ಮಾಡಿ ಅದಕ್ಕೆ ನಾಲ್ಕು ಲವಂಗ, ಸ್ವಲ್ಪ ಚಕ್ಕೆ, ಒಂದು ಏಲಕ್ಕಿ ಹಾಕಬೇಕು. ಸಣ್ಣದಾಗಿ ಕತ್ತರಿಸಿದ ಈರುಳ್ಳಿ ಹಾಕಿ ಸ್ವಲ್ಪ ಹೊತ್ತು ಬಾಡಿಸಿಕೊಂಡು, ತೊಳೆದಿಟ್ಟುಕೊಂಡಿರುವ ಚಿಕನ್ ಹಾಕಿ ಬೇಯಿಸಬೇಕು. ಬಳಿಕ ಅದಕ್ಕೆ ಒಂದು ಚಮಚ ಅರಸಿನ ಪುಡಿ, ರುಚಿಗೆ ಉಪ್ಪು, ಒಂದು ಚಮಚ ಚಿಕನ್ ಮಸಾಲ ಹಾಕಿಕೊಂಡು ಚೆನ್ನಾಗಿ ಮಿಕ್ಸ್ ಮಾಡಿ, 2ರಿಂದ 3 ನಿಮಿಷ ಫ್ರೈ ಮಾಡಬೇಕು. ನಂತರ ರುಬ್ಬಿಟ್ಟುಕೊಂಡಿದ್ದ ಮಸಾಲೆ ಹಾಕಿ, ಎರಡು ಲೋಟ ನೀರು ಹಾಕಿ ಚೆನ್ನಾಗಿ ಮಿಕ್ಸ್ ಮಾಡಬೇಕು. ಅದಕ್ಕೆ ಅರ್ಧ ಹೋಳು ನಿಂಬೆರಸ ಹಿಂಡಿ, ಸ್ವಲ್ಪ ಕೊತ್ತಂಬರಿ ಸೊಪ್ಪು ಹಾಕಿ ಮಿಕ್ಸ್ ಮಾಡಿ, ಕುಕ್ಕರ್ ಮುಚ್ಚಿ ಎರಡು ವಿಶಲ್ ಬರಿಸಬೇಕು. ಕುಕ್ಕರ್ ತಣಿದಾದ ಬಳಿಕ ಚಿಕನ್ ಶೋರ್ಬಾ ಅಥವಾ ಚಿಕನ್ ಸೂಪ್ ಸವಿಯಲು ಸಿದ್ಧ.

ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
UGADI
SALE
FREE GIFTS
UPTO 20% ಕ್ಯಾಶ್ ಬ್ಯಾಕ್ ಕ್ರೆಡಿಟ್ ಕಾರ್ಡ್ ಮೇಲೆ
1 ಇ.ಎಮ್.ಐ ಉಚಿತ*
BAJAJ FINANCE
IDFC FIRST Bank
UPTO ₹25,000 ಕಡಿತ ಎಕ್ಸ್ಚೇಂಜ್ ಮೇಲೆ*
ಫೈನಾನ್ಸ್ ಬೊನಾಂಜಾ
Upto 15,000 ಕ್ಯಾಶ್ ಬ್ಯಾಕ್
LG ಎಲ್ಲಾ ಉತ್ಪನ್ನಗಳ ಮೇಲೆ ಭರವಸೆಯ ಉಡುಗೊರೆಗಳು*
BT SPEAKER
INDUCTION COOKER
STEAM IRON
KETTLE
DRY IRON
FREE HOLIDAY PACKAGE WITH FAMILY
2 NIGHTS 3 DAYS
HOLIDAY PACKAGE WORTH ₹5000
STORE LOCATOR
ನಮ್ಮ ಮಳಿಗೆಗಳು 10.00AM - 10.00PM ತೆರೆದಿರುತ್ತದೆ
Godrej 1.0 TON 3 STAR INVERTER SPLIT AIR CONDITIONER ಇ.ಎಮ್.ಐ ₹2,249
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
IFB 1.0 TON 3 STAR INVERTER SPLIT AIR CONDITIONER ಇ.ಎಮ್.ಐ ₹2,333
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
BLUE STAR 1.0 TON 3STAR INVERTER SPLIT AIR CONDITIONER ಇ.ಎಮ್.ಐ ₹2,666
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
VOLTAS 1.0 TON 5 STAR INVERTER SPLIT AIR CONDITIONER ಇ.ಎಮ್.ಐ ₹2,916
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
Panasonic 1.0 TON 5 STAR INVERTER SPLIT AIR CONDITIONER ಇ.ಎಮ್.ಐ ₹2,999
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
GENERAL 1.5TON 3STAR INVERTER SPLIT AIR CONDITIONER ಇ.ಎಮ್.ಐ ₹4,499
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
LG 1.5TON 3 STAR INVERTER SPLIT AIR CONDITIONER ಇ.ಎಮ್.ಐ ₹3,333
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
DAIKIN AIR CONDITIONERS 1.5 TON 5STAR INVERTER SPLIT AIR CONDITIONER ಇ.ಎಮ್.ಐ ₹3,749
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
LLOYD 2.0 TON 3STAR INVERTER SPLIT AIR CONDITIONER ಇ.ಎಮ್.ಐ ₹3,833
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
WIDEST RANGE OF AIRCOOLERS & FANS
Crompton orient USHA V-GUARD KENSTAR Symphony VOLTAS BAJAJ HAVELLS
LG 650 ಲೀ ಸೈಡ್ ಬೈ ಸೈಡ್ ರೆಫ್ರಿಜರೇಟರ್ GL-B257DBM3 ಇ.ಎಮ್.ಐ ₹4,999
ಉಚಿತ: ₹3,315 ಮೌಲ್ಯದ BUTTERFLY PRESSURE COOKER
SAMSUNG 653 ಲೀ CONVERTIBLE 5IN1 ಸೈಡ್ ಬೈ ಸೈಡ್ ರೆಫ್ರಿಜರೇಟರ್ RS76CG8103S9HL ಇ.ಎಮ್.ಐ ₹4,990
Haier 596 ಲೀ GRAPHITE BLACK FINISH ಸೈಡ್ ಬೈ ಸೈಡ್ ರೆಫ್ರಿಜರೇಟರ್ ಇ.ಎಮ್.ಐ ₹2,994
ಉಚಿತ: ₹4,245 ಮೌಲ್ಯದ PREETHI MIXER GRINDER
BOSCH 334 ಲೀ ಫ್ರಾಸ್ಟ್ ಫ್ರೀ ರೆಫ್ರಿಜರೇಟರ್ ಇ.ಎಮ್.ಐ ₹3,791
ಉಚಿತ: ₹3,315 ಮೌಲ್ಯದ BUTTERFLY PRESSURE COOKER
Whirlpool 411 ಲೀ ಫ್ರಾಸ್ಟ್ ಫ್ರೀ ರೆಫ್ರಿಜರೇಟರ್ ಇ.ಎಮ್.ಐ ₹3,749
ಉಚಿತ: ₹4,470 ಮೌಲ್ಯದ PREETHI INDUCTION COOKTOP
Godrej 180 ಲೀ ಡೈರೆಕ್ಟ್ ಕೂಲ್ ಸಿಂಗಲ್ ಡೋರ್ ರೆಫ್ರಿಜರೇಟರ್ ಇ.ಎಮ್.ಐ ₹1,733
ಉಚಿತ: ₹1,895 ಮೌಲ್ಯದ PHILIPS TOASTER*
iPhone 17 /17 PRO / 17 PRO MAX ₹4,000* CASH BACK STARTS FROM ₹81,500* EMI STARTS FROM ₹3,454
SAMSUNG S26 ULTRA STARTS FROM ₹1,39,999* PAY FOR 256 GB & GET UPGRADE 512 GB*
vivo V70/V70 ELITE 10% CASH BACK STARTS FROM ₹44,000* EMI STARTS FROM ₹2,899
Redmi NOTE 15/15 PRO/ 15 PRO ₹2,000* CASH BACK STARTS FROM ₹22,999* EMI STARTS FROM ₹1,999
Lenovo SLIM 3 10% CASH BACK 13TH GEN i5 16 GB, 1 TB SSD 15.6 FHD WIN 11 MSO 24 ಇ.ಎಮ್.ಐ ₹5,666 OFFER PRICE ₹67,990
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
hp 15 10% CASH BACK CORE 5 16GB, 512 GB SSD 15.6 FHD WIN 11 MSO 24 ಇ.ಎಮ್.ಐ ₹5,416 OFFER PRICE ₹64,990
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
LG 75 INCH ULTRA HD (4K) SMART ಎಲ್ಇಡಿ 75NANO83A6A ಇ.ಎಮ್.ಐ ₹6,999
ಉಚಿತ: ₹20000 ಮೌಲ್ಯದ FIREBOLTT SMART CALLING WATCH
SAMSUNG 65 4K QLED SMART ಎಲ್ಇಡಿ QN65Q7FAAFXZA ಇ.ಎಮ್.ಐ ₹6,990
SONY 55 4K ULTRA HD SMART ಎಲ್ಇಡಿ K-55S25M2 ಇ.ಎಮ್.ಐ ₹5,500
IFB 8 ಕೆಜಿ ಫ್ರಂಟ್ ಲೋಡಿಂಗ್ ಇ.ಎಮ್.ಐ ₹3,249
ಉಚಿತ: ₹4,470 ಮೌಲ್ಯದ PREETHI INDUCTION COOKTOP
Godrej 7 ಕೆಜಿ ಟಾಪ್ ಲೋಡಿಂಗ್ ವಾಷಿಂಗ್ ಮಷೀನ್ ಇ.ಎಮ್.ಐ ₹1,833
ಉಚಿತ: ₹1,895 ಮೌಲ್ಯದ PHILIPS TOASTER*
Panasonic 27ಲೀ ಕನ್ವೆಕ್ಷನ್ ಮೈಕ್ರೋವೇವ್ ಓವೆನ್ ಇ.ಎಮ್.ಐ ₹1,441
LG SOUNDBAR S40T 2.1 CH, 300W, AI SOUND PRO, DOLBY DIGITAL OFFER PRICE ₹12,390 EMI ₹1,033 MRP ₹26,990
ಏರ್ ಫ್ರೈಯರ್ UPTO 57% OFF
FREE: MILTON CASSEROLE WORTH ₹350*
PHILIPS BOSCH WONDERCHEF Prestige KAFF morphy richards
ಚಿಮಣಿ UPTO 50% OFF
FREE: TIFFIN BOX WORTH ₹230*
KAFF FABER HAFELE Crompton Prestige BOSCH
ವಾಟರ್ ಪ್ಯೂರಿಫೈಯರ್ UPTO 51% OFF
FREE: MILTON CASSEROLE WORTH ₹350*
Livpure HAVELLS KENT LG Aquaguard
ಗೀಸರ್ UPTO 55% OFF
Racold Haier HAVELLS BAJAJ V-GUARD GM KENSTAR
ವೆಟ್ ಗ್ರೈಂಡರ್ UPTO 45% OFF
VIJAYALAKSHMI ULTRA Butterfly Preethi
LG SAMSUNG SONY Haier Panasonic ONIDA IFB Godrej LLOYD Whirlpool BOSCH Electrolux PHILIPS TOSHIBA hp acer DELL Lenovo ASUS vivo OPPO ONEPLUS mi iPhone JBL
BLUE STAR HAFELE Symphony HAVELLS USHA DAIKIN GENERAL Prestige VOLTAS HITACHI VOLTAS beko Butterfly Preethi VIJAYALAKSHMI ULTRA EUREKA FORBES pureit Livpure FABER KENSTAR BAJAJ Crompton MAHARAJA V-GUARD ZEBRONICS KAFF OZONE
*Terms & conditions apply. Finance at the sole discretion of the Finance company. Upto 20% Cashback & 1 EMI off on selected brands and models. Upto Rs.15000 Bajaj cash back / vouchers valid only in selected cities. Cash Back / vouchers will be credited to the customer bank account / BFL wallet fter clearing 3 EMI. *Exchange offer valid on MRP and Product as to be in good working condition.Exchange value will differ based on the condition of the old product.Free Installation on AC's is valid on selected brands & models.
180 ಮೆಗಾ ಸ್ಟೋರ್ಸ್, ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

ಜನನಾಯಕನ ಜನುಮ ದಿನ

ಅನ್ನಭಾಗ್ಯ ಯೋಜನೆಯ ಸಮರ್ಥ ಅನುಷ್ಠಾನದ ನೇತಾರ ಡಾ.ಕೆ.ಹೆಚ್.ಮುನಿಯಪ್ಪನವರಿಂದ ಅಭಿವೃದ್ಧಿ ಪರ್ವ

ಭವಿಷ್ಯದ ದೃಷ್ಟಿಕೋನ ಮತ್ತು ಸಂದೇಶ

ಕೆ.ಹೆಚ್. ಮುನಿಯಪ್ಪನವರು ಇಂದಿನ ಯುವ ರಾಜಕಾರಣಿಗಳಿಗೆ ಒಂದು ತೆರೆದ ಪುಸ್ತಕ. ಅಧಿಕಾರ ಎನ್ನುವುದು ಜನಸೇವೆಗೆ ಇರುವ ಸಾಧನವೇ ಹೊರತು ದರ್ಪ ತೋರಿಸಲಿಕ್ಕಲ್ಲ ಎಂಬುದನ್ನು ಅವರು ಸಾಬೀತುಪಡಿಸಿದ್ದಾರೆ. 'ಪಕ್ಷನಿಷ್ಠೆ, ಪ್ರಾಮಾಣಿಕತೆ ಮತ್ತು ನಿರಂತರ ಪರಿಶ್ರಮವಿದ್ದರೆ ಯಾರೂ ಸೋಲಲು ಸಾಧ್ಯವಿಲ್ಲ' ಎಂಬುದು ಅವರ ಜೀವನ ನಮಗೆ ನೀಡುವ ಸಂದೇಶ. ಒಟ್ಟಾರೆ, ರಾಜಕೀಯ ಪರಿಣಿತರು ಹೇಳುವಂತೆ, ಕೋಲಾರದ ಗಣಿ ಕೇವಲ ಚಿನ್ನವನ್ನು ಮಾತ್ರ ನೀಡಲಿಲ್ಲ, ಕೆ.ಹೆಚ್.ಮುನಿಯಪ್ಪ-ನವರಂತಹ ಒಬ್ಬ ಅಪರೂಪದ 'ಚಿನ್ನದ ಮನುಷ್ಯ' ನಾಯಕನನ್ನೂ ನೀಡಿದೆ. ತನ್ನ ಹುಟ್ಟೂರಿನ ಮಣ್ಣಿನ ವಾಸನೆಯನ್ನು ಮರೆಯದೆ, ದೆಹಲಿಯ ಸಂಸತ್ತಿನವ-ರೆಗೂ ಸಾಮಾನ್ಯ ಜನರ ಧ್ವನಿಯಾಗಿ ಮೊಳಗಿದ ಇವರ ಜೀವನಗಾಥೆ ಮುಂದಿನ ತಲೆಮಾರುಗಳಿಗೆ ಪ್ರೇರಣೆಯಾಗಿದೆ. ಇವರ ಸೌಜನ್ಯಯುತ ರಾಜಕಾರಣ ಮತ್ತು ಜನಪರ ಕಾಳಜಿ ನಮ್ಮ ನಾಡಿಗೆ ಸದಾ ದಾರಿದೀಪವಾಗಲಿ.

ಮುತ್ಸದ್ದಿ, ಅಜಾತಶತ್ರು, ಜನನಾಯಕ
ಡಾ.ಕೆ.ಹೆಚ್.ಮುನಿಯಪ್ಪ

ಕೋಲಾರದ ಸಂಸದರಾಗಿ ದಶಕಗಳ ಕಾಲ ಸೇವೆ, ಪ್ರಸ್ತುತ ದೇವನಹಳ್ಳಿ ಶಾಸಕರಾಗಿ, ರಾಜ್ಯ ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರ, ಕಾನೂನು ಮಾಪನ ಶಾಸ್ತ್ರ ಇಲಾಖೆ ಸಚಿವರಾಗಿ ಕೆ.ಹೆಚ್.ಮುನಿಯಪ್ಪರ ಪ್ರಗತಿಯ ಹಾದಿಯ ಕುರಿತು ಒಂದು ಇಣುಕು ನೋಟ.

ರಾಜಕೀಯ ಭೂಪಟದಲ್ಲಿ 'ಸೋಲಿಲ್ಲದ ಸರದಾರ', 'ದಣಿವರಿಯದ ಜನನಾಯಕ' ಎಂದೇ ಖ್ಯಾತಿ ಪಡೆದವರು ಡಾ.ಕೆ.ಹೆಚ್.ಮುನಿಯಪ್ಪ. ಕೇವಲ ಅಧಿಕಾರಕ್ಕಾಗಿ ರಾಜಕಾರಣ ಮಾಡದೆ, ಸಮಾಜದ ಕಟ್ಟಕಡೆಯ ವ್ಯಕ್ತಿಯ ಏಳಿಗೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಅಪರೂಪದ ಮುತ್ಸದ್ದಿ ಇವರು. ದಲಿತರ ಉದ್ಧಾರಕ, ದೀನದಲಿತರ ಆಶಾಕಿರಣ ಮತ್ತು ಅಭಿವೃದ್ಧಿಯ ಹರಿಕಾರರಾಗಿ ಗುರುತಿಸಿಕೊಂಡಿರುವ ಮುನಿಯ-ಪ್ಪನವರ ರಾಜಕೀಯ ಪಯಣ ಶೂನ್ಯದಿಂದ ಆರಂಭವಾಗಿ ಇಂದು ಉತ್ತುಂಗಕ್ಕೇರಿದೆ. ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಜನಮಾನಸದಲ್ಲಿ ಅವರು ಕೇವಲ ಒಬ್ಬ ನಾಯಕರಾಗಿ ಉಳಿಯದೆ, ಒಂದು ಶಕ್ತಿಯಾಗಿ ಬೆಳೆದಿದ್ದಾರೆ.

ಬಾಲ್ಯ ಮತ್ತು ಹಿನ್ನೆಲೆ: ಕಂಬ-ದಹಳ್ಳಿಯಿಂದ ಸಂಸತ್ತಿನವರೆಗೆ: ಡಾ.ಕೆ.ಹೆಚ್.ಮುನಿಯಪ್ಪನವರು 1948ರ ಮಾರ್ಚ್ 7ರಂದು ಚಿಕ್ಕಬ-ಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಕಂಬದಹಳ್ಳಿ ಎಂಬ ಪುಟ್ಟ ಗ್ರಾಮದಲ್ಲಿ ಜನಿಸಿದರು. ಇವರ ತಂದೆ ಹನುಮಪ್ಪ ಮತ್ತು ತಾಯಿ ಮುನಿಯಮ್ಮ. ಕೃಷಿ ಕುಟುಂಬದಲ್ಲಿ ಜನಿಸಿದ ಮುನಿಯಪ್ಪನವರು ಬಾಲ್ಯದಿಂದಲೇ ಬಡತನ, ಹಸಿವು ಮತ್ತು ಗ್ರಾಮೀಣ ಬದುಕಿನ ಕಷ್ಟಗಳನ್ನು ಹತ್ತಿರದಿಂದ ಕಂಡವರು. ಈ ಅನುಭವಗಳೇ ಮುಂದೆ ಅವರು ಬಡವರ ಪರವಾಗಿ ಧ್ವನಿ ಎತ್ತಲು ಪ್ರೇರಣೆಯಾದವು. ಶಿಕ್ಷಣದ ಜೊತೆಗೆ ಸಮಾಜಸೇವೆಯತ್ತ ಆಸಕ್ತಿ ತಳೆದಿದ್ದ ಇವರು, ಆರಂಭದಲ್ಲಿ ಸಾಮಾನ್ಯ ಕಾರ್ಯಕರ್ತ-ನಾಗಿ ಸಾರ್ವಜನಿಕ ಜೀವನಕ್ಕೆ ಕಾಲಿಟ್ಟರು. ಅವರಲ್ಲಿನ ನಾಯಕತ್ವದ ಗುಣಗಳನ್ನು ಗುರುತಿಸಿದವರು ಅಂದಿನ ಕೆ.ಪಿ.ಸಿ.ಸಿ ಅಧ್ಯಕ್ಷರಾಗಿದ್ದ ವಿ.ಕೃಷ್ಣಾರಾವ್ ಅವರು. ಕೃಷ್ಣಾರಾವ್ ಅವರ ಗರಡಿಯಲ್ಲಿ ಪಳಗಿದ ಮುನಿ-ಯಪ್ಪನವರು ರಾಜಕೀಯದ ಪಟ್ಟುಗಳನ್ನು ಮತ್ತು ಜನಸೇವೆಯ ಮಹತ್ವವನ್ನು ಅರಿತುಕೊಂಡರು.

ರಾಜಕೀಯ ಪಾದಾರ್ಪಣೆ: ಕಾಂಗ್ರೆಸ್ ಪಕ್ಷದ ಕಟ್ಟಾಳು: ಮುನಿಯಪ್ಪನವರ ರಾಜಕೀಯ ಜೀವನ ಆರಂಭವಾಗಿದ್ದು ಪಂಚಾಯತ್ ಮಟ್ಟದಿಂದ. ಮೊದಲಿಗೆ ತಾಲ್ಲೂಕು ಪಂಚಾಯಿತಿ ಸದಸ್ಯರಾಗಿ ಆಯ್ಕೆಯಾದ ಇವರು, ಹಂತ ಹಂತವಾಗಿ ಪಕ್ಷದಲ್ಲಿ ಜವಾಬ್ದಾರಿಗಳನ್ನು ನಿರ್ವಹಿಸುತ್ತಾ ಬೆಳೆದರು. ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತಗಳಿಗೆ ಮಾರುಹೋದ ಇವರು, ಐದು ದಶಕಗಳ ಕಾಲ ಅದೇ ಪಕ್ಷದಲ್ಲಿ ನಿಷ್ಠಾವಂತ ಕಾರ್ಯಕರ್ತನಾಗಿ ಉಳಿದಿರುವುದು ಇಂದಿನ ಪಕ್ಷಾಂತರ ರಾಜಕಾರಣದ ಯುಗದಲ್ಲಿ ಒಂದು ದಾಖಲೆ. 1991ರಲ್ಲಿ ರಾಜೀವ್ ಗಾಂಧಿಯವರ ನಾಯಕತ್ವದ ಅವಧಿಯಲ್ಲಿ ಇವರಿಗೆ ಮೊದಲ ಬಾರಿಗೆ ಕೋಲಾರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ಸಿಕ್ಕಿತು. ಅಂದು ಗೆಲುವು ಸಾಧಿಸಿದ ಮುನಿಯಪ್ಪನವ-ರು ಮತ್ತೆ ಹಿಂದೆ ತಿರುಗಿ ನೋಡಲೇ ಇಲ್ಲ. ಅಂದಿನಿಂದ ಸತತವಾಗಿ 7 ಬಾರಿ ಸಂಸದರಾಗಿ ಆಯ್ಕೆಯಾಗುವ ಮೂಲಕ ಭಾರತೀಯ ಸಂಸದೀಯ ಇತಿಹಾಸದಲ್ಲಿ ಕರ್ನಾಟಕದ ಹೆಮ್ಮೆಯ ನಾಯಕರಾಗಿ ಗುರುತಿಸಿಕೊಂಡರು.

ಸರ್ವಧರ್ಮ ಸಮನ್ವಯದ ಹರಿಕಾರ:

ಮುನಿಯಪ್ಪನವರು ಒಬ್ಬ ಸಂಪ್ರದಾಯಸ್ಥ ಹಿಂದೂ ಆಗಿದ್ದರೂ, ಅನ್ಯ ಧರ್ಮಗಳ ಬಗ್ಗೆ ಅಪಾರ ಗೌರವ ಹೊಂದಿದ್ದಾರೆ. ಮಸೀದಿಗಳಿಗೆ ಮತ್ತು ಚರ್ಚ್‌ಗಳಿಗೆ ಭೇಟಿ ನೀಡಿ ಅಲ್ಲಿನ ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಳ್ಳುತ್ತಾರೆ. 'ರಾಮ-ರಹೀಮ-ಯೇಸು ಎಲ್ಲರೂ ಒಂದೇ' ಎಂಬ ಸಂದೇಶವನ್ನು ತಮ್ಮ ಬದುಕಿನ ಮೂಲಕ ಸಾರುತ್ತಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಯಾವುದೇ ಕೋಮು ಸಂಘರ್ಷಗಳಿಗೆ ಅವಕಾಶ ನೀಡದೆ ಶಾಂತಿ ಕಾಪಾಡಿದ್ದು ಇವರ ದೊಡ್ಡ ಸಾಧನೆಗಳಲ್ಲಿ ಒಂದು.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಅಭಿವೃದ್ಧಿಯ ಪರ್ವ: ಕೋಲಾರದ 'ಕರ್ಮಭೂಮಿ': ಕೋಲಾರ ಜಿಲ್ಲೆ ಎಂದರೆ ಒಂದು ಕಾಲದಲ್ಲಿ ಚಿನ್ನದ ಗಣಿ ಮತ್ತು ರೇಷ್ಮೆಗೆ ಮಾತ್ರ ಸೀಮಿತವಾಗಿತ್ತು. ಆದರೆ ಕೆ.ಹೆಚ್. ಮುನಿಯಪ್ಪನವರ ಆಗಮನದ ನಂತರ ಜಿಲ್ಲೆಯ ಮೂಲಭೂತ ಸೌಕರ್ಯಗಳಲ್ಲಿ ಕ್ರಾಂತಿಕಾರಕ ಬದಲಾ-ವಣೆಗಳಾದವು.

1. ಕೈಗಾರಿಕೀಕರಣ ಮತ್ತು ಉದ್ಯೋಗ: ಜಿಲ್ಲೆಯ ಯುವಕರಿಗೆ ಉದ್ಯೋಗ ನೀಡಲು ಅವರು ನೂರಾರು ಕೈಗಾರಿಕೆಗಳನ್ನು ಆಹ್ವಾನಿಸಿದರು. ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ನೇರ ಮತ್ತು ಪರೋಕ್ಷ ಉದ್ಯೋಗ ದೊರೆಯುವಂತೆ ಮಾಡಿದರು.
2. ಶಿಕ್ಷಣ ಮತ್ತು ಆರೋಗ್ಯ: ಗ್ರಾಮೀಣ ಭಾಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಶಾಲೆಗಳು, ವಸತಿ ನಿಲಯಗಳು ಮತ್ತು ಕಾಲೇಜುಗಳ ಸ್ಥಾಪನೆಗೆ ಶ್ರಮಿಸಿದರು.
3. ಮೂಲಭೂತ ಸೌಕರ್ಯ:ರಸ್ತೆ, ಕುಡಿಯುವ ನೀರು ಮತ್ತು ವಿದ್ಯುತ್ ಸಂಪರ್ಕದ ವಿಷಯದಲ್ಲಿ ಕೋಲಾರ ಜಿಲ್ಲೆಯನ್ನು ಮಾದರಿಯನ್ನಾಗಿ ರೂಪಿಸಿದರು.

ಶಿಸ್ತುಬದ್ಧ ಜೀವನ ಮತ್ತು ಆಧ್ಯಾತ್ಮಿಕ ಚಿಂತನೆ: ಮುನಿಯಪ್ಪನವರ ಯಶಸ್ಸಿನ ಹಿಂದಿರುವುದು ಅವರ ಶಿಸ್ತುಬದ್ಧ ಜೀವನಶೈಲಿ. ಪ್ರತಿದಿನ ಬೆಳಗಿನ ಜಾವ 4 ಗಂಟೆಗೆ ಏಳುವ ಅವರು, ಯೋಗ ಮತ್ತು ಧ್ಯಾನದಲ್ಲಿ ತೊಡಗುತ್ತಾರೆ. ಸೂರ್ಯವಂದನೆ ಮತ್ತು ದೇವತಾರಾಧನೆ ಅವರ ನಿತ್ಯದ ಕಾಯಕ. ಶ್ರೀರಾಮನ ಭಕ್ತರಾದ ಇವರು 'ರಾಮಕೋಟಿ' ಬರೆಯುವ ಮೂಲಕ ಮನಸ್ಸಿನ ಶಾಂತಿ ಮತ್ತು ಏಕಾಗ್ರತೆಯ-ನ್ನು ಕಾಪಾಡಿಕೊಳ್ಳುತ್ತಾರೆ. ಬೆಳಿಗ್ಗೆಯಿಂದಲೇ ಜನರ ಅಹವಾಲುಗಳನ್ನು ಕೇಳಲು ಆರಂಭಿಸುವ ಇವರು, ಬಡವ-ಶ್ರೀಮಂತ ಎಂಬ ಭೇದವಿಲ್ಲದೆ ಎಲ್ಲರನ್ನೂ ಒಂದೇ ರೀತಿ ಕಾಣುತ್ತಾರೆ. 'ಜನಸೇವೆಯೇ ಜನಾರ್ದನ ಸೇವೆ' ಎಂಬ ನಂಬಿಕೆಯೇ ಇವರನ್ನು ಇಂದಿಗೂ ಸಕ್ರಿಯವಾಗಿರಿಸಿದೆ.

ಸಾಮಾಜಿಕ ನ್ಯಾಯ ಮತ್ತು ಒಳ ಮೀಸಲಾತಿ ಹೋರಾಟ: ಪರಿಶಿಷ್ಟ ಜಾತಿಗಳ ಹಿತರಕ್ಷಣೆಗಾಗಿ ಮುನಿ-ಯಪ್ಪನವರು ಸದಾ ಮುಂಚೂಣಿಯಲ್ಲಿದ್ದಾರೆ. ವಿಶೇಷವಾಗಿ ಮಾದಿಗ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಗಾಗಿ ಅವರು ನಡೆಸಿದ ಹೋರಾಟ ಐತಿಹಾಸಿಕವಾದುದು. ಒಳ ಮೀಸಲಾತಿ ಜಾರಿಗಾಗಿ ಅವರು ಕೇವಲ ಭಾಷಣ ಮಾಡದೆ, ಸರ್ಕಾರದ ಮಟ್ಟದಲ್ಲಿ ತರ್ಕಬದ್ಧ ಹೋರಾಟ ನಡೆಸಿದರು. ನ್ಯಾ.ನಾಗಮೋಹನ್ ದಾಸ್ ಸಮಿತಿಯ ರಚನೆ ಮತ್ತು ವರದಿಯ ಅನುಷ್ಠಾನಕ್ಕೆ ಒತ್ತಡ ಹೇರುವ ಮೂಲಕ ದಲಿತ ಸಂಘಟನೆಗಳ ದಶಕಗಳ ಕನಸನ್ನು ನನಸಾಗಿಸಲು ಶ್ರಮಿಸಿದರು. ಪ್ರಸ್ತುತ ಕರ್ನಾಟಕ ಸರ್ಕಾರದಲ್ಲಿ ಸಚಿವರಾಗಿ ಅವರು 'ಅನ್ನಭಾಗ್ಯ' ಯೋಜನೆಯ ಯಶಸ್ಸಿನಲ್ಲೂ ಪ್ರಮುಖ ಪಾತ್ರ ವಹಿಸುತ್ತಿ-ದ್ದಾರೆ.

ರಾಜಕೀಯ ಸೌಜನ್ಯ ಮತ್ತು ಅಜಾತಶತ್ರುತ್ವ: ಇಂದಿನ ಕಾಲದ ರಾಜ-ಕಾರಣದಲ್ಲಿ ವಿರೋಧಿಗಳನ್ನು ಏಕವಚನದಲ್ಲಿ ನಿಂದಿಸುವುದು ಸಾಮಾನ್ಯವಾಗಿದೆ. ಆದರೆ ಮುನಿಯಪ್ಪನವರು ತಮ್ಮ ರಾಜಕೀಯ ಜೀವನದಲ್ಲಿ ಎಂದಿಗೂ ಇಂತಹ ಕೀಳು ಮಟ್ಟಕ್ಕೆ ಇಳಿದವರಲ್ಲ. ಹೆಚ್.ಡಿ. ದೇವೇಗೌಡರು, ಬಿ.ಎಸ್.ಯಡಿಯೂರಪ್ಪನವರಂತಹ ಹಿರಿಯ ನಾಯಕರ ಬಗ್ಗೆ ಸದಾ ಗೌರವದಿಂದ ಮಾತನಾಡುವ ಇವರು, ರಾಜಕೀಯ ವಿರೋಧವನ್ನು ಸಿದ್ಧಾಂತಗಳಿಗೆ ಸೀಮಿತಗೊಳಿಸಿದ್ದಾರೆ. ವೈಯಕ್ತಿಕವಾಗಿ ಎಲ್ಲರಿಗೂ ಅವರು 'ಮುನಿಯಪ್ಪಣ್ಣ'ನೇ ಆಗಿದ್ದಾರೆ.

ಗುರುಶಿಷ್ಯ ಪರಂಪರೆ: ಮನ ಬಂಗಾರು ಕೃಷ್ಣಾರಾವ್ ಹಾದಿ: ತಮ್ಮ ರಾಜಕೀಯ ಗುರುಗಳಾದ ಕೃಷ್ಣಾರಾವ್ ಅವರನ್ನು ಮುನಿಯಪ್ಪನ-ವರು ಸದಾ ನೆನೆಯುತ್ತಾರೆ. ಕೃಷ್ಣಾರಾವ್ ಅವರು 'ಮನ ಬಂಗಾರು' ಎಂದು ಕರೆಯಲ್ಪಡುತ್ತಿದ್ದರು. ಏಕೆಂದರೆ ಅವರು ದಾನ ಧರ್ಮಕ್ಕೆ ಹೆಸರಾದವರು. ಅದೇ ದಾನಗುಣ ಮತ್ತು ಪಾರದರ್ಶಕತೆಯ-ನ್ನು ಮುನಿಯಪ್ಪನವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿ-ದ್ದಾರೆ. ಇಷ್ಟು ದೀರ್ಘ ಕಾಲ ಅಧಿಕಾರದಲ್ಲಿದ್ದರೂ ಅವರ ಮೇಲೆ ಯಾವುದೇ ಭ್ರಷ್ಟಾಚಾರದ ಕಪ್ಪು ಚುಕ್ಕೆ ಇಲ್ಲದಿರುವುದು ಅವರ ಪ್ರಾಮಾಣಿಕತೆಗೆ ಸಾಕ್ಷಿ.

ಸಂಸದೀಯ ಸಾಧನೆ ಮತ್ತು ಕೇಂದ್ರ ಸಚಿವ ಸ್ಥಾನಗಳು

ದೆಹಲಿಯ ರಾಜಕಾರಣದಲ್ಲಿ ಕೆ.ಹೆಚ್. ಮುನಿಯಪ್ಪನವ-ರು ಪ್ರಭಾವಿ ನಾಯಕರಾಗಿ ಬೆಳೆದರು. ಇಂದಿರಾಗಾಂಧಿ, ಸೋನಿಯಾಗಾಂಧಿ ಮತ್ತು ರಾಹುಲ್ ಗಾಂಧಿಯವರ ವಿಶ್ವಾಸಕ್ಕೆ ಪಾತ್ರರಾದ ಇವರು ಕೇಂದ್ರ ಸರ್ಕಾರದಲ್ಲಿ ವಿವಿಧ ಪ್ರಮುಖ ಖಾತೆಗಳನ್ನು ನಿಭಾಯಿಸಿದರು

- **ರೈಲ್ವೆ ರಾಜ್ಯ ಸಚಿವರು:** ಇವರ ಅವಧಿಯಲ್ಲಿ ಕರ್ನಾಟಕಕ್ಕೆ ಹಲವು ಹೊಸ ರೈಲುಗಳು ಮತ್ತು ರೈಲ್ವೆ ಯೋಜನೆಗಳು ಮಂಜೂರಾದವು.
- **ಭೂ-ಸಾರಿಗೆ ಮತ್ತು ಹೆದ್ದಾರಿ ಸಚಿವರು:** ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿಯಲ್ಲಿ ಇವರ ಪಾತ್ರ ದೊಡ್ಡದಿದೆ.
- **ಎಂಎಸ್‌ಎಂಇ ಸಚಿವರು:** ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಮೂಲಕ ದೇಶದ ಆರ್ಥಿಕತೆಗೆ ಕೊಡುಗೆ ನೀಡಿದರು.

ಸಚಿವ ಕೆ.ಹೆಚ್.ಮುನಿಯಪ್ಪರವರ ದಿಟ್ಟನಡೆಗಳು...

ಸವಾಲುಗಳ ನಡುವೆ ಚಾಣಾಕ್ಷ ನಿರ್ವಹಣೆ

01

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ತಕ್ಷಣ ಜಾರಿಗೆ ತಂದ ಅತ್ಯಂತ ಮಹತ್ವಾಕಾಂಕ್ಷೆಯ ಯೋಜನೆ 'ಅನ್ನಭಾಗ್ಯ'. ಚುನಾವಣಾ ಪೂರ್ವ ಭರವಸೆಯಂತೆ ಪ್ರತಿ ಫಲಾನುಭವಿಗೆ 10 ಕೆಜಿ ಅಕ್ಕಿ ನೀಡಲು ಸರ್ಕಾರ ಮುಂದಾದಾಗ, ಕೇಂದ್ರ ಸರ್ಕಾರದಿಂದ ಅಕ್ಕಿ ಪೂರೈಕೆಯಲ್ಲಿ ಅನಿರೀಕ್ಷಿತ ಅಡೆತಡೆಗಳು ಎದುರಾದವು. ಸುಮಾರು 1.28 ಕೋಟಿ ಪಡಿತರ ಚೀಟಿ ಕುಟುಂಬಗಳಿಗೆ ಅಕ್ಕಿ ಒದಗಿಸುವುದು ಅಸಾಧ್ಯ ಎಂಬಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಈ ಸಂದರ್ಭದಲ್ಲಿ ಮಾನ್ಯ ಆಹಾರ ಸಚಿವರು ತಮ್ಮ ದಶಕಗಳ ರಾಜಕೀಯ ಅನುಭವವನ್ನು ಬಳಸಿಕೊಂಡು ಅತ್ಯಂತ ಸಂಯಮದಿಂದ ಕಾರ್ಯನಿರ್ವಹಿಸಿ-ದರು. ಅಕ್ಕಿಯ ಲಭ್ಯತೆ ಇಲ್ಲದಿದ್ದಾಗ ವಿರೋಧ ಪಕ್ಷಗಳ ಟೀಕೆಗೆ ಕಿವಿಗೊಡದೆ, ಪರ್ಯಾಯ ಮಾರ್ಗವಾಗಿ ಅಕ್ಕಿಯ ಬದಲಿಗೆ ನಗದು ವರ್ಗಾವಣೆ (ಡಿಬಿಟಿ) ಮಾಡುವ ಕ್ರಾಂತಿಕಾರಿ ನಿರ್ಧಾರ ಕೈಗೊಂಡರು. ಪ್ರತಿ ಕೆಜಿ ಅಕ್ಕಿಗೆ 34 ರೂ. ನಂತೆ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಜಮಾ ಮಾಡುವ ಪ್ರಕ್ರಿಯೆ ಆರಂಭವಾಯಿತು. 'ಕೂದಲಿನಲ್ಲಿ ಬೆಣ್ಣೆ ತೆಗೆದಂತೆ' ಈ ಜಟಿಲ ಸಮಸ್ಯೆಯನ್ನು ಬಗೆಹರಿಸಿದ ಸಚಿವರ ಕಾರ್ಯವೈಖರಿ ರಾಷ್ಟ್ರ-ಮಟ್ಟದಲ್ಲಿ ಗಮನ ಸೆಳೆಯಿತು. ಈ ನಿರ್ಧಾರದಿಂದಾಗಿ ಬಡ ಕುಟುಂಬಗಳಿಗೆ ಆರ್ಥಿಕ ಶಕ್ತಿ ಬಂದಂತಾಯಿತು ಮತ್ತು ಸರ್ಕಾರದ ಗ್ಯಾರಂಟಿ ಯೋಜನೆ ಹಳ್ಳ ಹಿಡಿಯದಂತೆ ರಕ್ಷಿಸಲ್ಪಟ್ಟಿತು.

ಸರ್ವರ್ ಸಮಸ್ಯೆಗೆ ತಾಂತ್ರಿಕ ಮದ್ದು: ಡೇಟಾ ಸೆಂಟರ್ ಬದಲಾವಣೆ

02

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಲ್ಲಿ ವರ್ಷಗಳಿಂದ ಕಾಡುತ್ತಿದ್ದ ಅತಿದೊಡ್ಡ ತಾಂತ್ರಿಕ ತೊಂದರೆಯೆಂದರೆ 'ಸರ್ವರ್ ಸ್ಥಗಿತ'. ಈ ಹಿಂದೆ ನ್ಯಾಷನಲ್ ಇನ್ಫರ್ಮ್ಯಾಟಿಕ್ಸ್ ಸೆಂಟರ್ (ಎನ್‌ಐಸಿ) ಸರ್ವರ್ ಮೂಲಕ ಪಡಿತರ ವಿತರಣೆ ನಡೆಯುತ್ತಿತ್ತು. ಆದರೆ, ಏಕಕಾಲಕ್ಕೆ ಲಕ್ಷಾಂತರ ಮಂದಿ ಬಯೋಮೆಟ್ರಿಕ್ ನೀಡುವಾಗ ಸರ್ವರ್ ಕುಸಿಯುತ್ತಿತ್ತು. ಇದರಿಂದ ನ್ಯಾಯಬೆಲೆ ಅಂಗಡಿಗಳ ಮುಂದೆ ಜನ ಕಿಲೋಮೀಟರ್‌ಗಟ್ಟಲೆ ಕಾಯಬೇಕಿತ್ತು. ಸಚಿವರು ಅಧಿಕಾರ ವಹಿಸಿಕೊಂಡ ತಕ್ಷಣ ಈ ತಾಂತ್ರಿಕ ದೋಷವನ್ನು ಗಂಭೀರವಾಗಿ ಪರಿಗಣಿಸಿದರು. ತಂತ್ರಜ್ಞರೊಂದಿಗೆ ಸಮಾಲೋಚನೆ ನಡೆಸಿ, ಇಲಾಖೆಯ ಸಂಪೂರ್ಣ ದತ್ತಾಂಶವನ್ನು ಎನ್‌ಐಸಿಯಿಂದ ಬೇರ್ಪಡಿಸಿ ಕರ್ನಾಟಕ ರಾಜ್ಯ ದತ್ತಾಂಶ ಕೇಂದ್ರ (ಕೆಎಸ್‌ಡಿಸಿ)ಗೆ ಸ್ಥಳಾಂತರಿಸಲು ನಿರ್ಧರಿಸಿದರು. ಇದಕ್ಕಾಗಿ ಪ್ರತ್ಯೇಕ ಮತ್ತು ಉನ್ನತ ಸಾಮರ್ಥ್ಯದ ಸರ್ವರ್‌ಗಳನ್ನು ಸ್ಥಾಪಿಸಲಾಯಿತು. ಈ ಮಹತ್ವದ ಬದಲಾವಣೆಯಿಂದಾಗಿ ಇಂದು ರಾಜ್ಯದಾದ್ಯಂತ ಪಡಿತರ ವಿತರಣೆ ಯಾವುದೇ ಅಡೆತಡೆಯಿ-ಲ್ಲದೆ ನಡೆಯುತ್ತಿದೆ. ನ್ಯಾಯಬೆಲೆ ಅಂಗಡಿ ಮಾಲೀಕರು ಮತ್ತು ಸಾರ್ವಜನಿಕರು ಪ್ರತಿದಿನ ಪಡುತ್ತಿದ್ದ ಕಿರಿಕಿರಿಗೆ ಇದು ಶಾಶ್ವತ ಮುಕ್ತಿ ನೀಡಿತು. ತಂತ್ರಜ್ಞಾನವನ್ನು ಆಡಳಿತದಲ್ಲಿ ಹೇಗೆ ಪರಿ-ಣಾಮಕಾರಿಯಾಗಿ ಬಳಸಬಹುದು ಎಂಬುದಕ್ಕೆ ಇದು ಉತ್ತಮ ಉದಾಹರಣೆಯಾಗಿದೆ.

ಪಡಿತರ ವಿತರಕರ ಆರ್ಥಿಕ ಸಬಲೀಕರಣ ಮತ್ತು ಕಮಿಷನ್ ಹೆಚ್ಚಳ

03

ರಾಜ್ಯದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಬೆನ್ನೆಲುಬು ಎಂದರೆ ಸುಮಾರು 20,000 ನ್ಯಾಯಬೆಲೆ ಅಂಗಡಿಗಳು. ಆದರೆ, ಇವರಿಗೆ ನೀಡಲಾಗುತ್ತಿದ್ದ ಕಮಿಷನ್ ಅತ್ಯಂತ ಕಡಿಮೆ ಇತ್ತು, ಇದರಿಂದ ಅನೇಕ ಅಂಗಡಿಗಳು ನಷ್ಟದಲ್ಲಿದ್ದವು. ಸಚಿವರು ವಿತರಕರ ಕಷ್ಟವನ್ನು ಆಲಿಸಿ, ಅವರ ಜೀವನಮಟ್ಟ ಸುಧಾರಿಸಲು ಐತಿಹಾಸಿಕ ತೀರ್ಮಾನ ಕೈಗೊಂಡರು. ಪಡಿತರ ವಿತರಣೆಯ ಚಿಲ್ಲರೆ ಲಾಭಾಂಶವನ್ನು ಪ್ರತಿ ಕ್ವಿಂಟಲ್‌ಗೆ 125 ರೂ. ನಿಂದ 150 ರೂ.ಗೆ ಏರಿಸಿದರು. ಈ ಸಣ್ಣ ಮೊತ್ತದ ಏರಿಕೆಯು ಒಟ್ಟಾರೆಯಾಗಿ ವಿತರಕರ ಆರ್ಥಿಕ ಪರಿಸ್ಥಿತಿಯಲ್ಲಿ ದೊಡ್ಡ ಬದಲಾವಣೆ ತಂದಿತು. ಅಷ್ಟೇ ಅಲ್ಲದೆ, ಸಗಟು ಪೂರೈಕೆ ಮಾಡುವ ಕೆಎಫ್‌ಸಿಎಸ್‌ಸಿ ಮತ್ತು ಟಿಎಪಿಎಂಎಸ್ ಮಳಿಗೆಗಳ ಲಾಭಾಂಶವನ್ನು ಕೂಡ ಪ್ರತಿ ಕ್ವಿಂಟಲ್‌ಗೆ 35 ರೂ. ನಿಂದ 45 ರೂ.ಗೆ ಹೆಚ್ಚಿಸಲಾಯಿತು. ಆಹಾರ ಇಲಾಖೆಯ ಈ ನಿರ್ಧಾರದಿಂದಾಗಿ ಕೆಳಮಟ್ಟದ ನೌಕರರು ಮತ್ತು ವಿತರಕರಲ್ಲಿ ಹೊಸ ಹುರುಪು ಬಂದಿದೆ. ಕಮಿಷನ್ ಹೆಚ್ಚಳದ ಜೊತೆಗೆ ಪಾರದ-ರ್ಶಕತೆಗೆ ಒತ್ತು ನೀಡಿದ್ದರಿಂದ ಸಾರ್ವಜನಿಕ ವಿತರಣಾ ವ್ಯವಸ್ಥೆಯ-ಲ್ಲಿ ಭ್ರಷ್ಟಾಚಾರ ತಗ್ಗಲು ಸಹಕಾರಿಯಾಯಿತು. ವಿತರಕರ ಸಂಘವು ಸಚಿವರ ಈ ಕಾರ್ಯವನ್ನು ಶ್ಲಾಘಿಸಿ, 'ಇದು ಕೇವಲ ಕಮಿಷನ್ ಹೆಚ್ಚಳವಲ್ಲ, ನಮ್ಮ ಬದುಕಿಗೆ ನೀಡಿದ ಬೆಂಬಲ' ಎಂದು ಕೃತಜ್ಞತೆ ಸಲ್ಲಿಸಿದೆ.

ನ್ಯಾಯಬೆಲೆ ಅಂಗಡಿ ಹಂಚಿಕೆಯಲ್ಲಿ ಮೀಸಲಾತಿ ಮತ್ತು ಸಾಮಾಜಿಕ ನ್ಯಾಯ

04

ಹಿಂದಿನ ಆಡಳಿತ ವ್ಯವಸ್ಥೆಯಲ್ಲಿ ನ್ಯಾಯಬೆಲೆ ಅಂಗಡಿಗಳ ಹಂಚಿಕೆಯು ಕೇವಲ ಪ್ರಭಾವಶಾ-ಲಿಗಳ ಪಾಲಾಗುತ್ತಿತ್ತು ಎಂಬ ದೂರುಗಳಿದ್ದವು. ಇದನ್ನು ಹೋಗಲಾಡಿಸಲು ಸಚಿವರು ಪಿಡಿಎಸ್ ಕಂಟ್ರೋಲ್ ಆರ್ಡರ್-2016'ಕ್ಕೆ ಮಹತ್ವದ ತಿದ್ದುಪಡಿ ತಂದರು. ರಾಜ್ಯದ ಇತಿಹಾಸದಲ್ಲೇ ಮೊದಲ ಬಾರಿಗೆ ನ್ಯಾಯಬೆಲೆ ಅಂಗಡಿಗಳ ಹಂಚಿಕೆಯಲ್ಲಿ ಎಸ್ಸಿ/ಎಸ್ಟಿ ಜನಾಂಗದವರಿಗೆ ಮೀಸಲಾತಿಯನ್ನು ಕಡ್ಡಾಯಗೊಳಿಸಿದರು. ಇದು ಕೇವಲ ಒಂದು ಆಡಳಿತಾತ್ಮಕ ಬದಲಾವಣೆಯಲ್ಲ, ಬದಲಾಗಿ ಅಬಕಾರಿ ಮತ್ತು ಕಂದಾಯ ಇಲಾಖೆಗಳಲ್ಲಿರುವಂತೆ ಆಹಾರ ಇಲಾಖೆಯಲ್ಲೂ ಸಾಮಾಜಿಕ ನ್ಯಾಯವನ್ನು ಪ್ರತಿಷ್ಠಾಪಿಸುವ ಕ್ರಮವಾಗಿದೆ. ಇದರೊಂದಿಗೆ ರಾಜ್ಯದ ನಿರುದ್ಯೋಗಿ ಯುವಕರಿಗೆ ಆದ್ಯತೆ ನೀಡುವ ಮೂಲಕ ಅವರಿಗೆ ಸ್ವಯಂ ಉದ್ಯೋಗದ ಅವಕಾಶ ಕಲ್ಪಿಸಿದರು. ಪಾರದರ್ಶಕವಾದ ಅರ್ಜಿ ಪ್ರಕ್ರಿಯೆಯ ಮೂಲಕ ಅರ್ಹ ಯುವಕರು ಇಂದು ತಮ್ಮದೇ ಗ್ರಾಮಗಳಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ನಡೆಸುತ್ತಿದ್ದಾರೆ. ಇದು ಗ್ರಾಮೀಣ ಅರ್ಥವ್ಯವ-ಸ್ಥೆಯನ್ನು ಬಲಪಡಿಸುವುದಲ್ಲದೆ, ಶೋಷಿತ ವರ್ಗದ ಜನರಿಗೆ ಸರ್ಕಾರದ ಸೌಲಭ್ಯಗಳನ್ನು ತಲುಪಿಸುವ ಜವಾಬ್ದಾರಿಯನ್ನು ಅವರ ಕೈಗೆ ನೀಡಿದಂತಾಗಿದೆ.

ಇಲಾಖೆಯ ಶಾಶ್ವತ ಹೆಜ್ಜೆಗುರುತು

05

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು ಇಷ್ಟು ವರ್ಷಗಳ ಕಾಲ ಸ್ವಂತ ಸುಸಜ್ಜಿತ ಕಟ್ಟಡವಿಲ್ಲದೆ ಕಾರ್ಯನಿರ್ವಹಿಸುತ್ತಿತ್ತು. ವಿವಿಧ ವಿಭಾಗಗಳು ಬೇರೆ ಬೇರೆ ಕಡೆ ಹಂಚಿಹೋಗಿದ್ದರಿಂದ ಸಾರ್ವಜನಿಕರಿಗೆ ಮತ್ತು ಆಡಳಿತಕ್ಕೆ ತೊಂದರೆಯಾಗುತ್ತಿತ್ತು. ಸಚಿವರು ಇದನ್ನು ಗಂಭೀರವಾಗಿ ಪರಿಗಣಿಸಿ, ಇಲಾಖೆಗೆ ಒಂದು ಭವ್ಯವಾದ ಮತ್ತು ಆಧುನಿಕ ಸೌಲಭ್ಯಗಳುಳ್ಳ 'ಆಹಾರ ಸೌಧ' ನಿರ್ಮಿಸಲು ಸಂಕಲ್ಪ ಮಾಡಿದರು. ಇದಕ್ಕಾಗಿ ಬೆಂಗಳೂರಿನ ಪ್ರಶಸ್ತ ಸ್ಥಳದಲ್ಲಿ ಜಾಗವನ್ನು ಗುರುತಿಸಿ, ಭೂಮಿ ಹಂಚಿಕೆ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪೂರೈಸಿದರು. ಈ ಆಹಾರ ಸೌಧವು ಕೇವಲ ಒಂದು ಕಟ್ಟಡವಲ್ಲ, ಅದು ಇಲಾಖೆಯ ಘನತೆಯ ಸಂಕೇತವಾಗಿದೆ. ಇಲ್ಲಿ ಆಹಾರ ನಿಗಮದ ಕಚೇರಿಗಳು, ಕಾನೂನು ಮಾಪನ ಶಾಸ್ತ್ರ ವಿಭಾಗ ಮತ್ತು ಆಹಾರ ವಿತರಣೆಯ ಉನ್ನತ ಮಟ್ಟದ ನಿಯಂತ್ರಣ ಕೊಠಡಿಗಳು ಒಂದೇ ಸೂರಿನಡಿ ಬರಲಿವೆ. ಇದರಿಂದ ಸಾರ್ವಜನಿಕರು ತಮ್ಮ ಕೆಲಸಗಳಿಗಾಗಿ ಅಲೆಯುವುದು ತಪ್ಪುತ್ತದೆ. ಸಚಿವರ ಈ ದೂರದೃಷ್ಟಿಯ ನಿರ್ಧಾರವು ಮುಂದಿನ ದಶಕಗಳ ಕಾಲ ಇಲಾಖೆಗೆ ಒಂದು ಭದ್ರ ಬುನಾದಿಯನ್ನು ಹಾಕಿಕೊಟ್ಟಿದೆ. ಈ ಕಟ್ಟಡದ ನಿರ್ಮಾಣ ಕಾರ್ಯಕ್ಕೆ ವೇಗ ನೀಡುವ ಮೂಲಕ ಅವರು ತಮ್ಮ ಆಡಳಿತದ ಶಾಶ್ವತ ಹೆಜ್ಜೆಗುರುತನ್ನು ಅಜರಾಮರ-ವಾಗಿಸಿದ್ದಾರೆ.

ಇಂದಿರಾ ಆಹಾರ ಕಿಟ್: ಬಡವರ ಪಾಲಿನ ಪೌಷ್ಟಿಕತೆಯ ಸಂಜೀವಿನಿ

06

ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಅಪೌಷ್ಟಿಕತೆ ಒಂದು ದೊಡ್ಡ ಸಮಸ್ಯೆಯಾಗಿತ್ತು. ಕೇವಲ ಅಕ್ಕಿಯನ್ನು ಮಾತ್ರ ನೀಡಿದರೆ ದೇಹಕ್ಕೆ ಬೇಕಾದ ಪ್ರೋಟೀನ್ ಮತ್ತು ಜೀವಸತ್ವಗಳು ಸಿಗುವುದಿಲ್ಲ ಎಂಬುದನ್ನು ಅರಿತ ಸಚಿವರು, 'ಇಂದಿರಾ ಆಹಾರ ಕಿಟ್' ಯೋಜನೆಯನ್ನು ಜಾರಿಗೆ ತಂದರು. ಈ ಕಿಟ್‌ನಲ್ಲಿ ಅಕ್ಕಿಯ ಜೊತೆಗೆ ಬೇಳೆಕಾಳುಗಳು, ಎಣ್ಣೆ ಮತ್ತು ಉಪ್ಪು ಸೇರಿದಂತೆ ದೈನಂದಿನ ಅಡುಗೆಗೆ ಬೇಕಾದ ಅಗತ್ಯ ವಸ್ತುಗಳನ್ನು ಒದಗಿಸಲಾಗುತ್ತ-ದೆ. ಇದು ಬಡ ಕುಟುಂಬಗಳ ಆರ್ಥಿಕ ಹೊರೆಯನ್ನು ಕಡಿಮೆ ಮಾಡುವುದಲ್ಲದೆ, ಅವರ ಆರೋಗ್ಯವನ್ನು ಸುಧಾರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ವಿಶೇಷವಾಗಿ ಗರ್ಭಿಣಿಯರು, ಮಕ್ಕಳು ಮತ್ತು ವಯೋವೃದ್ಧರಿಗೆ ಈ ಪೌಷ್ಟಿಕಯುಕ್ತ ಆಹಾರ ಕಿಟ್ ವರದಾನವಾಗಿದೆ. ರಾಜ್ಯದ ಲಕ್ಷಾಂತರ ಕುಟುಂಬಗಳು ಇಂದು ಈ ಕಿಟ್‌ನ ಪ್ರಯೋಜನ ಪಡೆಯುತ್ತಿವೆ. ಆಹಾರ ಭದ್ರತೆ ಎಂದರೆ ಕೇವಲ ಹೊಟ್ಟೆ ತುಂಬಿಸುವುದಲ್ಲ, ಬದಲಾಗಿ ಆರೋಗ್ಯಕರ ಸಮುದಾಯವನ್ನು ನಿರ್ಮಿಸುವುದು ಎಂಬ ಸಚಿವರ ಆಶಯ ಈ ಯೋಜನೆಯ ಮೂಲಕ ಸಾಕಾರಗೊಂಡಿದೆ. ಇಂದಿರಾ ಆಹಾರ ಕಿಟ್ ರಾಜ್ಯದ ಆಹಾರ ವಿತರಣಾ ವ್ಯವ-ಸ್ಥೆಯಲ್ಲಿ ಒಂದು ಹೊಸ ಕ್ರಾಂತಿಯನ್ನೇ ಮಾಡಿದೆ ಎಂದರೆ ತಪ್ಪಾಗಲಾರದು.

ರೈತಪರ ನಿಲುವು: ಕನಿಷ್ಠ ಬೆಂಬಲ ಬೆಲೆ [ಎಂಎಸ್‌ಪಿ] ಖರೀದಿ

07

ಕೃಷಿ ಉತ್ಪನ್ನಗಳ ಬೆಲೆ ಕುಸಿದಾಗ ರೈತರು ಸಂಕಷ್ಟಕ್ಕೆ ಸಿಲುಕದಂತೆ ನೋಡಿಕೊಳ್ಳಲು ಸಚಿವರು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದಾರೆ. ರಾಜ್ಯದ ರೈತರಿಂದ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯಡಿ ಭತ್ತ, ರಾಗಿ ಮತ್ತು ಜೋಳವನ್ನು ಖರೀದಿಸಲು ಪಾರದರ್ಶಕ ವ್ಯವಸ್ಥೆ ಜಾರಿಗೆ ತಂದರು. ರೈತರು ತಾವು ಬೆಳೆದ ಬೆಳೆಯನ್ನು ಮಧ್ಯವರ್ತಿಗಳ ಕಾಟವಿಲ್ಲದೆ ನೇರವಾಗಿ ಸರ್ಕಾರಕ್ಕೆ ಮಾರಾಟ ಮಾಡಲು ಖರೀದಿ ಕೇಂದ್ರಗಳ ಸಂಖ್ಯೆಯನ್ನು ಹೆಚ್ಚಿಸಿದರು. ಈ ಪ್ರಕ್ರಿಯೆಯಲ್ಲಿ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡಿ, ರೈತರಿಗೆ ನ್ಯಾಯಯುತ ಬೆಲೆ ಸಿಗುವಂತೆ ನೋಡಿಕೊಂಡರು. ಸಚಿವರ ವಿಶೇಷ ಆಸಕ್ತಿಯಿಂದಾಗಿ ರೈತರಿಂದ ಸಂಗ್ರಹಿಸಿದ ಧಾನ್ಯಗಳ ಹಣವನ್ನು ವಿಳಂಬವಿಲ್ಲದೆ ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮೆ ಮಾಡುವ ವ್ಯವಸ್ಥೆ ಸುಧಾರಿಸಿತು. ಖರೀದಿ ಪ್ರಕ್ರಿಯೆಯಲ್ಲಿ ಉಂಟಾಗುತ್ತಿದ್ದ ತಾಂತ್ರಿಕ ದೋಷಗಳನ್ನು ನಿವಾರಿಸಿ, ರೈತಸ್ನೇಹಿ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಯಿತು. ಇದರಿಂದಾಗಿ ರಾಜ್ಯದ ಲಕ್ಷಾಂತರ ರೈತರು ತಮ್ಮ ಉತ್ಪನ್ನಗಳಿಗೆ ಸೂಕ್ತ ಬೆಲೆ ಪಡೆದು ಆರ್ಥಿಕವಾಗಿ ಸಬಲರಾದರು. ಅನ್ನದಾತನ ಹಿತ ಕಾಪಾಡುವಲ್ಲಿ ಸಚಿವರು ತೋರಿದ ಬದ್ಧತೆ ಕೃಷಿ ವಲಯದಲ್ಲಿ ದೊಡ್ಡ ಮೆಚ್ಚುಗೆಗೆ ಪಾತ್ರವಾಗಿದೆ.

ಮರುಸಂಘಟನೆ ಮತ್ತು ಆದಾಯ ವೃದ್ಧಿ

08

ಬಳಕೆದಾರರಿಗೆ ತೂಕ ಮತ್ತು ಅಳತೆಯಲ್ಲಿ ಮೋಸವಾಗದಂತೆ ನೋಡಿಕೊಳ್ಳುವ ಕಾನೂನು ಮಾಪನ ಶಾಸ್ತ್ರ ಇಲಾಖೆಯು ಈ ಹಿಂದೆ ಸ್ವಲ್ಪ ಅಲಕ್ಷ್ಯಕ್ಕೆ ಒಳಗಾಗಿತ್ತು. ಸಚಿವರು ಈ ಇಲಾಖೆಯನ್ನು ಸಂಪೂರ್ಣವಾಗಿ ಮರುಸಂಘಟನೆ ಮಾಡಿದರು. ಇಲಾಖೆಯ ಸಿಬ್ಬಂದಿಗೆ ಹೆಚ್ಚಿನ ಅಧಿಕಾರ ಮತ್ತು ಸೌಲಭ್ಯಗ-ಳನ್ನು ನೀಡಿದರು. ವಿಶೇಷವಾಗಿ 'ಜಾಗೃತಿ ದಳ' ಎಂಬ ಪ್ರತ್ಯೇಕ ತಂಡವನ್ನು ರಚಿಸಿ, ಮಾರುಕಟ್ಟೆ-ಯಲ್ಲಿ ನಡೆಯುವ ಅಕ್ರಮಗಳ ಮೇಲೆ ನಿರಂತರ ಕಣ್ಣಿಡಲು ಸೂಚಿಸಿದರು. ಇಲಾಖೆಯ ಕಾರ್ಯಚಟುವಟಿಕೆಗಳಿಗೆ ವೇಗ ನೀಡಲು ಹೆಚ್ಚಿನ ವಾಹನಗಳನ್ನು ಒದಗಿಸಲಾಯಿತು. ಈ ಜಾಗೃತಿ ದಳವು ರಾಜ್ಯಾದ್ಯಂತ ಹಠಾತ್ ದಾಳಿಗಳನ್ನು ನಡೆಸಿ, ತೂಕದಲ್ಲಿ ಮೋಸ ಮಾಡುವ ವರ್ತಕರಿಂದ ದಂಡ ವಸೂಲಿ ಮಾಡಿತು. ಇದರಿಂದ ಗ್ರಾಹಕರಿಗೆ ನ್ಯಾಯ ಸಿಕ್ಕಿದ್ದಲ್ಲದೆ, ಸರ್ಕಾರದ ಬೊಕ್ಕಸಕ್ಕೆ ಹರಿದುಬರುವ ತೆರಿಗೆ ಮತ್ತು ದಂಡದ ಪ್ರಮಾಣದಲ್ಲಿ ಗಣನೀಯ ಏರಿಕೆಯಾಯಿತು. ಇಲಾಖೆಯನ್ನು ಕೇವಲ ಆಡಳಿತಾ-ತ್ಮಕವಾಗಿ ಮಾತ್ರವಲ್ಲದೆ, ಆರ್ಥಿಕವಾಗಿಯೂ ಸದೃಢಗೊಳಿಸಿದ ಕೀರ್ತಿ ಸಚಿವರಿಗೆ ಸಲ್ಲುತ್ತದೆ.

ದೇವನಹಳ್ಳಿಗೆ ಮೆಟ್ರೋ ವ್ಯವಸ್ಥೆ

09

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೆ.ಹೆಚ್. ಮುನಿಯಪ್ಪನವರ ನೇತೃತ್ವದಲ್ಲಿ ಅಭಿವೃದ್ಧಿ ಪರ್ವ ಮುಂದುವರಿದಿದೆ. ದೇವನಹಳ್ಳಿವರೆಗೂ ಮೆಟ್ರೋ ರೈಲು ವಿಸ್ತರಣೆ ಯೋಜನೆ ಪ್ರಗತಿಯಲ್ಲಿದೆ. ಅಲ್ಲದೆ, ಬೃಹತ್ ಉದ್ಯೋಗ ಮೇಳದ ಮೂಲಕ 4,250 ನಿರುದ್ಯೋಗಿಗಳಿಗೆ ನೇಮಕಾತಿ ಪತ್ರ ವಿತರಿಸುವ ಮೂಲಕ 'ಮನೆಗೊಂದು ಉದ್ಯೋಗ' ನೀಡುವ ಭರವಸೆಯನ್ನು ಈಡೇರಿಸಿದ್ದಾರೆ. ಜತೆಗೆ, ಕೆಂಪೇಗೌಡರ ವಸ್ತುಸಂಗ್ರಹಾಲಯ ನಿರ್ಮಾಣಕ್ಕೆ ಗೊಬ್ಬರಗುಂಟೆ ಬಳಿ 9.30 ಎಕರೆ ಭೂಮಿಯನ್ನು ಮೀಸಲಿರಿಸಿದ್ದಾರೆ.

ದೇವನಹಳ್ಳಿಗೆ ಸಮಗ್ರ ಅಭಿವೃದ್ಧಿ ಪರ್ವ

ಬೆಂಗಳೂರು: ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಹೊಂದಿರುವ ದೇವನಹಳ್ಳಿ ಅನೇಕ ವರ್ಷಗಳಿಂದ ಅಭಿವೃದ್ಧಿ ನಿರೀಕ್ಷೆ-ಯಲ್ಲಿತ್ತು. ಕಳೆದ ಚುನಾವಣೆಯಲ್ಲಿ ಕೆ.ಹೆಚ್.ಮುನಿಯಪ್ಪರನ್ನು ಶಾಸಕರಾಗಿ ಆಯ್ಕೆ ಮಾಡಿಕೊಂಡ ಬಳಿಕ ಅಭಿವೃದ್ಧಿಯ ಪರ್ವ ಶುರುವಾಗಿದೆ. ದೇವನಹಳ್ಳಿ ತಾಲೂಕಿನ ಚತುರ್ಮುಖ ಅಭಿವೃದ್ಧಿಗೆ ಪೂರಕವಾಗಿ ಸಚಿವ ಕೆ.ಹೆಚ್.ಮುನಿ-ಯಪ್ಪನವರ ನೇತೃತ್ವದಲ್ಲಿ ಹಮ್ಮಿ-ಕೊಳ್ಳಲಾಗಿರುವ ಕಾಮಗಾರಿಗಳು ಕೇವಲ ಅಂಕಿ-ಅಂಶಗಳಲ್ಲ. ಅವು ಗ್ರಾಮೀಣ ಜನಜೀವನದ ಪ್ರಗತಿಯ ಸೂಚಕಗಳಾಗಿವೆ ಎಂಬುದು ಇಲ್ಲಿನ ಜನಸಾಮಾನ್ಯರ ಅಭಿಪ್ರಾಯ. ತಾಲೂಕಿನ ನಾಲ್ಕು ಹೋಬಳಿಗಳಲ್ಲಿ ಅನೇಕ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಸರ್ವತೋಮುಖ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ.

- **ಕಾಂಕ್ರಿಟ್ ರಸ್ತೆಗಳ ಹಂಚಿಕೆ:** ಬಹುತೇಕ ಪ್ರತಿ ಗ್ರಾಮದಲ್ಲಿಯೂ ತಲಾ 10.00 ಲಕ್ಷ ರೂ. ವೆಚ್ಚದ ಕಾಂಕ್ರಿಟ್ ರಸ್ತೆ ನಿರ್ಮಾಣಕ್ಕೆ ಒತ್ತು ನೀಡಲಾಗಿದೆ. ಇದು ತಾಲೂಕಿನ ಸಾರಿಗೆ ಸಂಪರ್ಕವನ್ನು ಶೇ.100 ರಷ್ಟು ಸುಧಾರಿಸುವ ಗುರಿ ಹೊಂದಿದೆ.
- **ಪರಿಶಿಷ್ಟ ಜಾತಿ/ಪಂಗಡ ಅಭಿವೃದ್ಧಿ (ಎಸ್‌ಸಿಪಿ/ಟಿಎಸ್‌ಪಿ):** ಪರಿಶಿಷ್ಟ ಜಾತಿ ಮತ್ತು ಪಂಗಡದ ಕಾಲೋನಿಗಳ ಅಭಿವೃದ್ಧಿಗೆ ತಲಾ 7.00 ಲಕ್ಷದಿಂದ 20.00 ಲಕ್ಷ ರೂ.ವರೆಗೆ ಹೆಚ್ಚಿನ ಅನುದಾನ ಮೀಸಲಿಡಲಾಗಿದೆ. ಉದಾಹರಣೆಗೆ, ವಿಶ್ವನಾಥಪುರ ಮತ್ತು ಮುದುಗುರ್ಕಿ ಗ್ರಾಮಗಳಲ್ಲಿ ತಲಾ 20.00 ಲಕ್ಷ ರೂ. ವೆಚ್ಚದ ಬೃಹತ್ ರಸ್ತೆ ಮತ್ತು ಚರಂಡಿ ಕಾಮಗಾರಿಗಳು ನಡೆಯಲಿವೆ.
- **ವಿಜಯಪುರ ಹೋಬಳಿ:** ಈ ಹೋಬಳಿಯಲ್ಲಿ ಸಾಮಾಜಿಕ ಮೂಲಸೌಕರ್ಯಕ್ಕೆ ಆದ್ಯತೆ ನೀಡಲಾಗಿದೆ. ಹುರುಳಗುರ್ಕಿ ಮತ್ತು ದೊಡ್ಡತತ್ತ-ಮಂಗಲದಲ್ಲಿ ಒಟ್ಟು 30.00 ಲಕ್ಷ ರೂ. (ತಲಾ 15 ಲಕ್ಷ) ವೆಚ್ಚದಲ್ಲಿ ಸಮುದಾಯ ಭವನ ನಿರ್ಮಾಣ-ವಾಗಲಿದೆ.
- **ಅಲ್ಪಸಂಖ್ಯಾತ ಕಲ್ಯಾಣ:** ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ಹುರು-ಳಗುರ್ಕಿಯಲ್ಲಿ 8.50 ಲಕ್ಷ ರೂ.ವೆಚ್ಚದ ಚರಂಡಿ ಕಾಮಗಾರಿ ಕೈಗೆತ್ತಿಕೊಳ್ಳ-ಲಾಗಿದೆ.
- **ಕುಂದಾಣ ಹೋಬಳಿ :** ಬೆಳಕು ಮತ್ತು ರಸ್ತೆ ಸಂಪರ್ಕದ ನಡುವೆ ಸಮತೋಲನ ಸಾಧಿಸಲಾಗಿದೆ.
- ಹೈ-ಮಾಸ್ಕ್ ದೀಪಗಳು: ಮೀಸಗಾನಹಳ್ಳಿ, ಕಾರಹಳ್ಳಿ, ಶ್ಯಾನಪ್ಪನಹಳ್ಳಿ ಸೇರಿದಂತೆ 4ಕ್ಕೂ ಹೆಚ್ಚು ಗ್ರಾಮಗಳಲ್ಲಿ ತಲಾ 5.00 ಲಕ್ಷ ರೂ. ವೆಚ್ಚದ ಹೈ-ಮಾಸ್ಕ್ ಲೈಟ್‌ಗಳನ್ನು ಅಳವ-ಡಿಸಲಾಗುತ್ತಿದೆ. ಅಂದರೆ ಕೇವಲ ಬೀದಿ ದೀಪಗಳಿಗಾಗಿಯೇ ಇಲ್ಲಿ 20.00 ಲಕ್ಷಕ್ಕೂ ಅಧಿಕ ರೂ. ವ್ಯಯಿಸಲಾಗುತ್ತಿದೆ.
- **ಬೃಹತ್ ಯೋಜನೆ:** ವಿಶ್ವನಾಥಪುರದಲ್ಲಿ ಸಿಸಿ ರಸ್ತೆ ಮತ್ತು ಚರಂಡಿಗಾಗಿ 20.00 ಲಕ್ಷ ರೂ. ಅನುದಾನ ನೀಡಲಾಗಿದ್ದು, ಇದು ಈ ದಿನದ ಅತಿ ದೊಡ್ಡ ಕಾಮಗಾರಿಗಳಲ್ಲಿ ಒಂದಾಗಿದೆ.
- **ಕಸಬಾ ಮತ್ತು ಚನ್ನರಾಯಪಟ್ಟಣ ಹೋಬಳಿ :** ಇಲ್ಲಿ ಶೈಕ್ಷಣಿಕ ಮತ್ತು ಸಾರ್ವಜನಿಕ ಸೇವಾ ಕೇಂದ್ರಗಳ ಮೇಲೆ ಹೂಡಿಕೆ ಮಾಡಲಾಗಿದೆ.
- **ಗ್ರಂಥಾಲಯ ಮತ್ತು ರಂಗಮಂದಿರ:** ಆಲೂರು ದುದ್ದನಹಳ್ಳಿಯಲ್ಲಿ 16.82 ಲಕ್ಷ ರೂ. ವೆಚ್ಚದ ಹೈಟೆಕ್ ಗ್ರಂಥಾಲಯ ನಿರ್ಮಾಣವಾಗುತ್ತಿದೆ. ಬನ್ನಿಮಂಗಲದಲ್ಲಿ 7.00 ಲಕ್ಷ ರೂ.ವೆಚ್ಚದ ರಂಗಮಂದಿರಕ್ಕೆ ಖಾಸಗಿ-ಸಾರ್ವಜನಿಕ ಸಹಭಾಗಿತ್ವ-ದಲ್ಲಿ ಚಾಲನೆ ನೀಡಲಾಗುತ್ತಿದೆ.
- **ನಿರ್ಮಿತಿ ಕೇಂದ್ರ:** ಶೇ.60ಕ್ಕೂ ಹೆಚ್ಚು ಕಾಂಕ್ರಿಟ್ ರಸ್ತೆ ಕಾಮಗಾರಿಗಳ ನಿರ್ವಹಣೆ.
- **ಕೆಆರ್‌ಐಡಿಎಲ್:** ಸುಮಾರು ಶೇ.25 ರಷ್ಟು ಚರಂಡಿ ಮತ್ತು ಅಭಿವೃದ್ಧಿ ನಿಗಮದ ಕಾಮಗಾರಿಗಳ ಜವಾಬ್ದಾರಿ.
- **ಪಿಆರ್‌ಇಡಿ:** ಸಮುದಾಯ ಭವನ ಮತ್ತು ಶಾಲಾ ಕಟ್ಟಡಗಳಂತಹ ಕಟ್ಟಡ ನಿರ್ಮಾಣ ಕಾಮಗಾರಿಗಳ ಉಸ್ತುವಾರಿ.

ಕರ್ನಾಟಕ ಸರ್ಕಾರ (ಕೃಷಿ ಇಲಾಖೆ)

ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಚಿತ್ರದುರ್ಗ

ಚಿತ್ರದುರ್ಗ–577501.
Phone: 08194-223536, M: 827790954 Email : adacta45@gmail.com

ಸಂಖ್ಯೆ:ಆಡಳಿತ:ಹೊ.ಇ-ಟೆಂಡರ್/2025 –26 ದಿನಾಂಕ: 05–03–2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ)

ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ತಾಲ್ಲೂಕು ಕೃಷಿ ಇಲಾಖೆಯ ವತಿಯಿಂದ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಂಬಂಧಿಸಿದಂತೆ 2025–26 ನೇ ಸಾಲಿನ ಮಣ್ಣು ಆರೋಗ್ಯ ಅಭಿಯಾನ ಯೋಜನೆಯಡಿ ಮಣ್ಣು ಆರೋಗ್ಯ ಕೇಂದ್ರದ ಪ್ರಯೋಗಾಲಯಕ್ಕೆ ದೊರೆಯುವ ಲಘು ಪೋಷಕಾಂಶಗಳನ್ನು ವಿಶ್ಲೇಷಣೆಗೆ Atomic absorption spectrophotometer (AAS) unit ಒಂದು ಉಪಕರಣ ಖರೀದಿಸಲು ಅರ್ಹ ಸಂಸ್ಥೆಗಳಿಂದ KPPP Portal ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ.

ಈ ಕುರಿತು ನಿಯಮ ಮತ್ತು ಷರತ್ತುಗಳು, ಬಿಡ್ದುರುಗಳ ಅರ್ಹತಾ ಅವಶ್ಯಕತೆ, ಮಾನದಂಡಗಳು ಮತ್ತು ಸೇವೆಗಳ ವ್ಯಾಪ್ತಿ ಒಳಗೊಂಡ ಬಿಡ್ ಡಾಕ್ಯುಮೆಂಟ್‌ಗಳ ವಿದ್ಯುನ್ಮಾನ ಪ್ರತಿಗಳ ವಿವರಗಳನ್ನು https://kppp.karnataka.gov.in ಪೋರ್ಟಲ್ ಮೂಲಕ ಟೆಂಡರ್ ದಾಖಲೆಗಳನ್ನು ಪಡೆಯಬಹುದಾಗಿದೆ.

ಇ-ಟೆಂಡರ್‌ನಲ್ಲಿ ಭಾಗವಹಿಸಲು ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸುವ ಮತ್ತು ತೆರೆಯುವ ದಿನಾಂಕಗಳು ಕೆಳಕಂಡಂತಿದೆ

(1) ಟೆಂಡರ್ ಪ್ರಾರಂಭವಾಗುವ ದಿನಾಂಕ 05.03.2026
(2) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ 12.03.2026 05.30 PM
(3) ಈ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ 16.03.2026 11:00 AM
(4) ಆರ್ಥಿಕ ಬಿಡ್ ತೆರೆಯುವ ತಾತ್ಕಾಲಿಕ ದಿನಾಂಕ 17.03.2026 11:00 AM
(5) E.M.D Amount Rs.50,000/-

DIPR/CTA/KSMCA/739/2025-26

ಸಹಿ/– ಟೆಂಡರ್ ಕರೆಯುವ ಪ್ರಾಧಿಕಾರ ಹಾಗೂ ಸಹಾಯಕ ಕೃಷಿ ನಿರ್ದೇಶಕರು, ಚಿತ್ರದುರ್ಗ

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರಿ ವಿಮಾ ಇಲಾಖೆ

ನಿರ್ದೇಶನಾಲಯ, 17ನೇ ಮಹಡಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–560001, ದೂ: 080–22861438 ಇ–ಮೇಲ್: kgidest17@gmail.com

ಸಂಖ್ಯೆ: ವಿನಿ/ಸಿಶಾ/ಇ–ವಿ/1748/2025–26 ದಿನಾಂಕ : 06.03.2026

ಪ್ರಕಟಣೆ

ಶ್ರೀ ಉದಯ್ ಕುಮಾರ್ ಪಿ, ಪ್ರಥಮ ದರ್ಜೆ ಸಹಾಯಕರು, ನಿರ್ದೇಶನಾಲಯ, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಬೆಂಗಳೂರು, ಆದ ನೀವು ಕಛೇರಿ ಕೆಲಸಕ್ಕೆ ದಿನಾಂಕ 02.01.2024 ರಿಂದ ಈವರೆವಿಗೆ ಕಛೇರಿ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುತ್ತೀರಿ. ಈ ಸಂಬಂಧ ನಿಮ್ಮ ಮನೆಯ ವಿಳಾಸಕ್ಕೆ ಇಲಾಖೆಯಿಂದ ರವಾನಿಸಲಾದ ಕಾರಣ ಕೇಳಿ ಕೊಟ್ಟ ಸೂಚನೆ ಇಲಾಖಾ ವಿಚಾರಣಾ ಆದೇಶ ದಿನಾಂಕ 17.02.2026 ರ ಪತ್ರಗಳು ಸ್ವೀಕೃತವಾಗದೇ ಹಿಂದಿರುಗಿ ಬಂದಿರುತ್ತವೆ. ಆದ್ದರಿಂದ ನಿಮ್ಮ ವಿರುದ್ಧದ ಇಲಾಖಾ ವಿಚಾರಣೆಯನ್ನು ದಿನಾಂಕ 23.03.2026 ರಂದು ನಿಗದಿಪಡಿಸಲಾಗಿದ್ದು, ಸದರಿ ದಿನಾಂಕದಂದು, ಬೆಳಿಗ್ಗೆ 12 ಘಂಟೆಗೆ ನಿರ್ದೇಶನಾಲಯ, 18ನೇ ಮಹಡಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಡಾ॥ ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು, ಇಲ್ಲಿಗೆ ಹಾಜರಾಗಲು ಸೂಚಿಸಿದೆ. ತಪ್ಪಿದಲ್ಲಿ, ನಿಮ್ಮನ್ನು Ex-parte ಮಾಡಿ ತನಿಖೆಯನ್ನು ನಿಮ್ಮ ಅನುಪಸ್ಥಿತಿಯಲ್ಲಿ ನಡೆಸಲಾಗುವುದು.

ಸಹಿ/– ನಿರ್ದೇಶಕರು, ವಿಮಾ ಇಲಾಖೆ

ವಾಸಾಸಂಇ/ವಾ.ಪ್ರ/6055/2025–26

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ನ್ಯಾಕ್ ಎ' ಮಾನ್ಯತೆ, ಆಸ್ತಿ ಅಧಿಕಾರಿಗಳ ಕಛೇರಿ, ನಾಯಕ್ ಭವನ, ಗಾಕೃವಿಕೆ. ಬೆಂಗಳೂರು–560 065.

ಸಂಖ್ಯೆ.ಇ.ಒ/ಎಸ್.ಪಿ.ಒ/ಕೆಪಿಪಿಪಿ/21/2025–26 ದಿನಾಂಕ: 05–03–2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು, ಅವಶ್ಯವಿರುವ ಉಪಕರಣಗಳನ್ನು ಸರಬರಾಜು ಮಾಡಲು ಕೆ.ಜಿ–2, ಟೆಂಡರ್ ನಿಬಂಧನೆಗೊಳಪಟ್ಟಂತೆ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ.

ವಿವರ: (1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 12.03.2026ರ ಸಂಜೆ 4:00 ಘಂಟೆಯವರೆಗೆ. (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 14.03.2026ರ ಬೆಳಿಗ್ಗೆ 10:30 ಕ್ಕೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 16.03.2026ರ ಬೆಳಿಗ್ಗೆ 10:30ಕ್ಕೆ. ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ. **ಸೂಚನೆ:** ಯಾವುದೇ ಟೆಂಡರ್‌ನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ಮಾಹಿತಿಗಾಗಿ ಟೆಂಡರ್ ಪ್ರಕಟಣೆಯ ವಿವರಗಳು ವೆಬ್‌ಸೈಟ್: **www.kppp.karnataka.gov.in** ರಲ್ಲಿ ದೊರೆಯುತ್ತದೆ ಹಾಗೂ ಈ ಕಚೇರಿಯನ್ನು, ಕಚೇರಿಯ ವೇಳೆಯಲ್ಲಿ ಸಹಾಯವಾಣಿ ದೂರವಾಣಿ ಸಂಖ್ಯೆ: **09240214000 / 09240214001** **support@eprochelpdesk.com** ಅಥವಾ **www.uasbangalore.edu.in** ದೂರವಾಣಿ ಸಂಖ್ಯೆ: **23630128** ಸಂಪರ್ಕಿಸಬಹುದು.

ಸಹಿ/– ಆಸ್ತಿ ಅಧಿಕಾರಿಗಳು

DIPR/CP/RO6049/AAPL/2025-26

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

MESCOM

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಪೊರೇಟ್ ಕಚೇರಿ, "ಮೆಸ್ಕಾಂ ಭವನ", ಬಿಜೈ, ಮಂಗಳೂರು–575004
ದೂರವಾಣಿ: 0824–2885761 CIN: U40109 KA 2002 SGC 030425

ಅ.ಇ.(ತಾಂ)/ಕಾ.ನಿ.ಇ.(ಸಿ)/2025–26/213033 ದಿನಾಂಕ: 05.03.2026

ಟೆಂಡರು ಪ್ರಕಟಣೆ (ಕೆ.ಪಿ.ಪಿ.ಪಿ. ಮಾದರಿಯಲ್ಲಿ ಮಾತ್ರ)

ಮಂಗಳೂರು ನಲ್ಲಿರುವ ಮೆಸ್ಕಾಂ (MESCOM) ಕಾರ್ಪೊರೇಟ್ ಕಚೇರಿ ಕಟ್ಟಡದ ಬ್ಲಾಕ್-B ನಿರ್ಮಾಣ ಕಾಮಗಾರಿಗಾಗಿ ವಾಸ್ತುಶಿಲ್ಪ ಮತ್ತು ಇಂಜಿನಿಯರಿಂಗ್ ಸಲಹಾ ಸೇವೆಗಳನ್ನು ಒದಗಿಸುವ ಬಗ್ಗೆ ಕುರಿತು GST ನೊಂದಣಿ ಹೊಂದಿರುವ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳ ಹೆಚ್ಚಿನ ವಿವರಗಳನ್ನು ತಿಳಿಯಲು ಹಾಗೂ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಬಿಡ್ದುದಾರರು ದಿನಾಂಕ **07.03.2026** ರ ನಂತರ ವೆಬ್‌ಸೈಟ್: **www.kppp.karnataka.gov.in** ನ್ನು ಸಂಪರ್ಕಿಸಬಹುದಾಗಿದೆ ಹಾಗೂ ಕೆಳ ಸಹಿದಾರರ ಕಛೇರಿಯಲ್ಲಿಯೂ ಸಹ ವಿವರಗಳನ್ನು ಪಡೆಯಬಹುದಾಗಿದೆ.

ಸಹಿ/–, ಅಧೀಕ್ಷಕ ಇಂಜಿನಿಯರ್(ವಿ) (ತಾಂತ್ರಿಕ)

DIPR/DK/KSMCA/1711/25-26 dt: 06.03.2026

ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ 1912ಕ್ಕೆ ಕರೆ ಮಾಡಿ

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಚೇರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ–577201.

ದೂರವಾಣಿ:08182–272210, ಇಮೇಲ್: dcf.shivamogga@gmail.com
ಸಂಖ್ಯೆ:ಬಿ1/ಸ್ಯಾಂಡಲ್/ಇ–ಆಕ್ಷನ್/ಸಿಆರ್–63/2025–26 ದಿನಾಂಕ: 23.02.2026

ಸಂಕ್ಷಿಪ್ತ ಮಾರಾಟ ಪ್ರಕಟಣೆ

ಸಾರ್ವಜನಿಕರ ಸಾಮಾನ್ಯ ಮಾಹಿತಿಗಾಗಿ ಈ ಮೂಲಕ ಪ್ರಕಟಪಡಿಸುವುದೇನೆಂದರೆ ಸರ್ಕಾರದ ಶ್ರೀಗಂಧದ ಡಿಪೋ, ಶ್ರೀಗಂಧದ ಕೋಠಿ, ಶಿವಮೊಗ್ಗ–577203 ಇಲ್ಲಿ ದಸ್ತಾನು ಮಾಡಿರುವ ಈ ಕೆಳಗೆ ತಿಳಿಸಿರುವಂತೆ ಶ್ರೀಗಂಧದ ದಿಮ್ಮಿಗಳು ಮತ್ತು ತುಂಡುಗಳನ್ನು ಎಂಎಸ್‌ಟಿಸಿ ಲಿಮಿಟೆಡ್ ಆನ್‌ಲೈನ್ ಪ್ಲಾಟ್‌ಫಾರಂ www.mstcecommerce.com ಮೂಲಕ ಟೆಂಡರ್–ಕಮ್–ಹರಾಜು ವಿಧಾನದಲ್ಲಿ ಮಾರಾಟ ಮಾಡಲಾಗುವುದು. ಇ–ಟೆಂಡರ್–ಕಮ್–ಇ–ಹರಾಜು ಸಂಖ್ಯೆ: MSTC/BLR/KARNATAKA FOREST DEPARTMENT/2/GSWD SANDAL KOTI SHIVAMOGGA/25-26/66018 ಇವರಿಂದ ವೆಬ್‌ಸೈಟ್: www.mstcecommerce.com ಇಲ್ಲಿ ಅಪ್‌ಲೋಡ್ ಮಾಡಿರುವ ನಿಯಮಗಳು ಮತ್ತು ನಿಬಂಧನೆಗಳಿಗೆ ಇ–ಟೆಂಡರ್–ಕಮ್–ಇ–ಹರಾಜು ಒಳಪಟ್ಟಿರುವುದು.

ಇ–ಟೆಂಡರ್–ಕಮ್–ಹರಾಜಿನ ದಿನಾಂಕ: 24ನೇ ಮಾರ್ಚ್ 2026 **ವಿಧಾನ:** ಆನ್‌ಲೈನ್–www.mstcecommerce.com **ಸಮಯ:** ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 3.00 ಗಂಟೆವರೆಗೆ **ಸಾಮಗ್ರಿಯ ಪ್ರಮಾಣ:** ಅಂದಾಜು 4.357883 ಎಂಟಿಗಳ ವಿವಿಧ ಮಾದರಿಯ ಶ್ರೀಗಂಧದ ಮರ **ಬಿಡ್‌ದಾರರು ಮರದ ದಿಮ್ಮಿಯನ್ನು ಪರಿಶೀಲಿಸುವ ದಿನಾಂಕ:** 10.03.2026 ರಿಂದ 13.03.2026 ರವರೆಗೆ ಬೆಳಿಗ್ಗೆ 10:30 ಗಂಟೆಯಿಂದ ಸಂಜೆ 4:30 ಗಂಟೆ ವರೆಗೆ ಸರ್ಕಾರದ ಶ್ರೀಗಂಧದ ಡಿಪೋ, ಶ್ರೀಗಂಧದ ಕೋಠಿ, ಶಿವಮೊಗ್ಗ–577203 ಇಲ್ಲಿ. **ಬಿಡ್ ಪೂರ್ವ ಸಭೆ ದಿನಾಂಕ:** 13.03.2026 ರಂದು ಸಂಜೆ 4:30 ಗಂಟೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಚೇರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ ಇಲ್ಲಿ.

ಸಹಿ/– (ಡಾ॥ ಅಜ್ಜಯ್ಯ. ಜಿ.ಆರ್)
ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25–26/31/03/1959

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ

kfcsc

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ.16/ಐ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560 052
ದೂರವಾಣಿ: 080–22260932 / 2209 6555 / 2209 6512
E-mail: admnkfcsc123@yahoo.com, mdkfcsc@yahoo.com

ಸಂಖ್ಯೆ: ಕಆನಾಸನಿನಿ/ಆಡಳಿತ/ನೇ.ನೇ./ಕಿ.ಸ./84/2025–26/4427 ದಿನಾಂಕ: 06.03.2026

ಪ್ರಕಟಣೆ

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತದ ಕಿರಿಯ ಸಹಾಯಕರ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ, ಅಭ್ಯರ್ಥಿಗಳ ಕಟ್–ಆಫ್ (Cut-off) ಅಂಕಗಳ ಆಧಾರದ ಮೇಲೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ದಿನಾಂಕ. 06.03.2026ರಂದು ನಿಗಮದ ವೆಬ್‌ಸೈಟ್‌ನಲ್ಲಿ https://kfcsc.karnataka.gov.in ಪ್ರಕಟಿಸಲಾಗಿರುತ್ತದೆ. ಕಿರಿಯ ಸಹಾಯಕರ ಹುದ್ದೆಯ ತಾತ್ಕಾಲಿಕ ಆಯ್ಕೆ ಪಟ್ಟಿ ಕುರಿತಂತೆ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ವಿಷಯ ಸೂಚಿಯಲ್ಲಿ "ಕಿರಿಯ ಸಹಾಯಕರ–ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ" ಎಂದು ಕಡ್ಡಾಯವಾಗಿ ನಮೂದಿಸಿ, ಸೂಕ್ತ ವಿವರ ಮತ್ತು ದಾಖಲಾತಿಗಳೊಂದಿಗೆ, ತಮ್ಮ ಹೆಸರು ಹಾಗೂ ಅರ್ಜಿ ಸಂಖ್ಯೆಯೊಂದಿಗೆ ಖುದ್ದಾಗಿ ವ್ಯವಸ್ಥಾಪಕ ನಿರ್ದೇಶಕರು, ಕ.ಆ.ನಾ.ಸ.ನಿ.ನಿ., ನಂ 16/ಐ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–560052 ಇವರಿಗೆ ಸಲ್ಲಿಸುವುದು. ಆಕ್ಷೇಪಣೆಗಳನ್ನು ದಿನಾಂಕ: 16.03.2026 ಸಂಜೆ 05:30 ರೊಳಗಾಗಿ ಸಲ್ಲಿಸುವುದು. ನಿಗದಿತ ದಿನಾಂಕದ ನಂತರ ಸಲ್ಲಿಸಲಾಗುವ ಆಕ್ಷೇಪಣೆಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಬೆಂಗಳೂರು ಕೇಂದ್ರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಶಾಂತಿನಗರ ವಿಭಾಗ, ಪಿ. ಯು. ಕಟ್ಟಡ, ಎಂ.ಜಿ. ರಸ್ತೆ, 9ನೇ ಮಹಡಿ, ಬೆಂಗಳೂರು–560 001.

ಸಂಖ್ಯೆ: ಕಾಪಾಅ/ಶಾನ/ಟೆಂಡರ್/20/ತಿದ್ದುಪಡಿ–1/2025–26 ದಿನಾಂಕ: 06–03–2026

ತಿದ್ದುಪಡಿ ಪ್ರಕಟಣೆ

ವಿಷಯ: ಟೆಂಡರ್ ಪ್ರಕಟಣೆ ಸಂಖ್ಯೆ: ಕಾಪಾಅ/ಶಾನ/ಟೆಂಡರ್/20/2025–26 ದಿನಾಂಕ: 12–02–2026 ರಲ್ಲಿನ ದಿನಾಂಕವನ್ನು ತಾಂತ್ರಿಕ ಕಾರಣಗಳಿಂದ ಮುಂದೂಡುವ ಬಗ್ಗೆ.

ಉಲ್ಲೇಖ: 1. ಟೆಂಡರ್ ಪ್ರಕಟಣೆ ಸಂಖ್ಯೆ: ಕಾಪಾಅ/ಶಾನ/ಟೆಂಡರ್/20/2025–26 ದಿನಾಂಕ: 12–02–2026

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶಾಂತಿನಗರ ವಿಭಾಗದಿಂದ ಉಲ್ಲೇಖ(1)ರ ಆಹ್ವಾನಿಸಲಾಗಿರುವ ಟೆಂಡರ್ ದಿನಾಂಕವನ್ನು ಈ ಕೆಳಕಂಡಂತೆ ಮುಂದೂಡಲಾಗಿದ್ದು, ಸದರಿ ಟೆಂಡರ್ ವೇಳಾಪಟ್ಟಿಯ ದಿನಾಂಕಗಳ ವಿವರ ಈ ಕೆಳಕಂಡಂತೆ ಇರುತ್ತದೆ.

ಟೆಂಡರ್‌ನ ಕಾರ್ಯಸೂಚಿ: 1) ಬಿಡ್ ಪೂರ್ವ ಸಭೆಯು **13–03–2026 ರಂದು ಮಧ್ಯಾಹ್ನ 3.30 ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, ಕೇಂದ್ರ ವಲಯ–1, 18ನೇ ಮಹಡಿ, ಪಿ.ಯು. ಕಟ್ಟಡ, ಬೆಂಗಳೂರು – 560 001** ರಲ್ಲಿ ನಡೆಯಲಿದೆ. 2) ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **20–03–2026 ರಂದು ಸಂಜೆ 4.00 ಗಂಟೆಯವರೆಗೆ.** 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **23–03–2026 ರಂದು ಸಂಜೆ 4:30 ಗಂಟೆಗೆ.**

ಸಹಿ/– ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ, ಬೆಂಕೇನಪಾ.

ಕರ್ನಾಟಕ ಸರ್ಕಾರದ

ಜಿಲ್ಲಾಧಿಕಾರಿಗಳ ಕಾರ್ಯಾಲಯ

ಬೆಂಗಳೂರು ನಗರ ಜಿಲ್ಲೆ, ಕೆ.ಜಿ.ರಸ್ತೆ, ಬೆಂಗಳೂರು

ಸಂ. ಎಂ.ಎ.ಜಿ(4)/ಮಿಸ್/ಸಿಆರ್/123/2023–24 ದಿನಾಂಕ: 02.03.2026

ಬೆಂಗಳೂರು ನಗರ ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರದ ನಾಗರೀಕ ಸೇವಾ ಸದಸ್ಯರ ಹುದ್ದೆಗೆ ನೇಮಕಾತಿ ಕುರಿತು ಪ್ರಕಟಣೆ

ಉಪ ಪೊಲೀಸ್ ಅಧೀಕ್ಷಕರು ಮತ್ತು ಕೆಳ ಹಂತದ ಪೊಲೀಸ್ ಅಧಿಕಾರಿಗಳ ವಿರುದ್ಧ ಸಾರ್ವಜನಿಕರು ದೂರು ಸಲ್ಲಿಸಲು ಅನುಕೂಲವಾಗುವಂತೆ ಕರ್ನಾಟಕ ಪೊಲೀಸ್ (ತಿದ್ದುಪಡಿ) ಕಾಯ್ದೆ, 2012 ರ ಕಲಂ 20 ಡಿ ರ ಅಡಿ ಕಲ್ಪಿಸಿರುವ ಅವಕಾಶಗಳ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ. ಸದರಿ ಪ್ರಾಧಿಕಾರಕ್ಕೆ ಇತರೆ ಸದಸ್ಯರನ್ನೊಳಗೊಂಡಂತೆ Retired Civil Service Officer not below the rank of Assistant Commissioner ನಾಗರೀಕ ಸೇವಾ ಹುದ್ದೆಗೆ ಒಬ್ಬ ಸದಸ್ಯರನ್ನು ಆಯ್ಕೆಮಾಡಲು ಕಲಂ 20 ಡಿ (i) ರಡಿ ಅವಕಾಶ ಕಲ್ಪಿಸಲಾಗಿರುತ್ತದೆ.

ಆದ್ದರಿಂದ ನೇಮಕಗೊಳ್ಳಲು ಬಯಸುವ ಸದಸ್ಯರು ಸಹಾಯಕ ಆಯುಕ್ತರ ಹುದ್ದೆಗಿಂತ ಕಡಿಮೆ ಇಲ್ಲದ ನಿವೃತ್ತ ನಾಗರೀಕ ಸೇವಾ ಅಧಿಕಾರಿಯಾಗಿದ್ದು, ದೈಹಿಕ/ಮಾನಸಿಕವಾಗಿ ವಿಚಾರಣೆ ಸಮಯದಲ್ಲಿ ಹಾಜರಿರಲು ಸದೃಢರಾಗಿರಬೇಕು ಹಾಗೂ ಯಾವುದೇ ರಾಜಕೀಯ ಸೈದ್ಧಾಂತಿಕ ಪಕ್ಷದೊಂದಿಗೆ ಗುರುತಿಸಿಕೊಂಡಿರಬಾರದು.

ಮುಂದುವರೆದು ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರಕ್ಕೆ Retired Civil Service Officer not below the rank of Assistant Commissioner ನಾಗರೀಕ ಸೇವಾ ಹುದ್ದೆಗೆ ಒಬ್ಬ ಸದಸ್ಯರನ್ನು ನೇಮಕ ಮಾಡಲು ಈ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ಸಾರ್ವಜನಿಕರು ಪ್ರಕಟಣೆಗೊಂಡ ದಿನಾಂಕದಿಂದ 7 ದಿನಗಳ ಒಳಗಾಗಿ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಕೆ.ಜಿ ರಸ್ತೆ, ಬೆಂಗಳೂರು ಇಲ್ಲಿ ವೈಯಕ್ತಿಕ ವಿವರಗಳೊಂದಿಗೆ (ಬಯೋಡೇಟಾ) ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.

ಸಹಿ/–
ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು
ಬೆಂಗಳೂರು ನಗರ ಜಿಲ್ಲೆ

DIPR/CP/6026/Zen/2025-26

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,

ಬಳ್ಳಾರಿ.ಜ್ಞಾನಸಾಗರ ಆವರಣ, ವಿನಾಯಕನಗರ, ಕಂಟೋನ್ಮೆಂಟ್, ಬಳ್ಳಾರಿ–583105,

ಸಂ:ವಿಶ್ರೀಕೃವಿಬ/ಕ.ವಿ/ಅ.ಟೆಂ/ಟೆಂಡರ್–66&67/ಡೆ&ಪೇ/2025–26/1191/1193, ದಿನಾಂಕ:05.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯವು ಕ್ರಮ ಸಂಖ್ಯೆ1) ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣಕ್ಕೆ 145 ಸಂಖ್ಯೆ ಡೆಸ್ಕ್ ಟಾಪ್ ಕಂಪ್ಯೂಟರ್ ಗಳನ್ನು ಪೂರೈಸುವ ಕೆಲಸ :ಮೊತ್ತ ರೂ.1,65,39,715.00 (ಜಿ.ಎಸ್.ಟಿ. ಹೊರತುಪಡಿಸಿ) ಹಾಗೂ ಕ್ರಮ ಸಂಖ್ಯೆ 2) ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಮುಖ್ಯ ಆವರಣದಲ್ಲಿರುವ ಭದ್ರಾ ಬಾಲಕರ ವಸತಿ ನಿಲಯ, ತುಂಗಾ ಬಾಲಕಿಯರ ವಸತಿ ನಿಲಯ, ವೇದಾವತಿ ಬಾಲಕಿಯರ ವಸತಿ ನಿಲಯ ಮತ್ತು ಹಗರಿ ಬಾಲಕರ ವಸತಿ ನಿಲಯ ಕಟ್ಟಡಗಳ ಸುತ್ತಲೂ ಪೇವರ್ಸ್ ಅಳವಡಿಸುವ ಕೆಲಸಗಳನ್ನು ಹಾಗೂ ಬಟ್ಟೆ ಒಗೆಯುವ ಕಟ್ಟೆಗಳನ್ನು ನಿರ್ಮಿಸುವ ಪ್ಯಾಕೇಜ್ ಕಾಮಗಾರಿ: ಮೊತ್ತ ರೂ.1,07,65,500,00 (ಜಿ.ಎಸ್.ಟಿ. ಹೊರತುಪಡಿಸಿ) ಕೆಲಸಗಳಿಗೆ ನಿಯಮಾನುಸಾರ ಅರ್ಹ ಏಜೆನ್ಸಿಗಳಿಂದ/ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಮಾತ್ರ ಟೆಂಡರನ್ನು ಸ್ವೀಕರಿಸಲಾಗುವುದು. ವಿವರಗಳಿಗೆ ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ **kppp.karnataka.gov.in.** ಮುಖಾಂತರ ದಿನಾಂಕ:20.03.2026 ಸಂಜೆ: 05.00 ಘಂಟೆಯವರೆಗೆ ಪಡೆದು ಟೆಂಡರ್‌ಗಳನ್ನು ಸಲ್ಲಿಸಬಹುದು. ಸಂಪೂರ್ಣ ವಿವರಗಳನ್ನು ಈ ಕೆಳಕಂಡ ಅಧಿಕಾರಿಯ ಕಛೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/–ಕುಲಸಚಿವರು, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/1094/ಕೆಎಸ್‌ಎಂಸಿಎ/2025–26

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಳಗಾವಿ.

ಕಂಗ್ರಾಳಿ ಕೆ. ಹೆಚ್. ರಸ್ತೆ, ಬೆಳಗಾವಿ – 590 010, ಜಿಲ್ಲೆ: ಬೆಳಗಾವಿ, ರಾಜ್ಯ: ಕರ್ನಾಟಕ. ದೂರವಾಣಿ : 0831 – 2478927, ಇ–ಮೇಲ್ : apmcbelgaum@gmail.com

ಸಂಖ್ಯೆ : ಕೃ.ಮಾ.ಇ./ಕೃ.ಉ.ಮಾ.ಸ.(ಬೆ)/ಅಭಿಕೆ/2255/2025–26 ದಿನಾಂಕ : 05–03–2026

ಇ-ಟೆಂಡರ್ ಪ್ರಕಟಣೆ

ಬೆಳಗಾವಿ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದ 2025–26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಅನುಮೋದನೆಯಾದ ಈ ಕೆಳಕಾಣಿಸಿದ ಕಾಮಗಾರಿಗೆ ಕೆ.ಪಿ.ಪಿ.ಪಿ. ಪೋರ್ಟಲ್‌ನ ಮೂಲಕ ಟೆಂಡರ್‌ನ್ನು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿ ಹೆಸರು	ಟೆಂಡರ್‌ಗಿಟ್ಟ ಮೊತ್ತ ಜಿ.ಎಸ್.ಟಿ. ಹೊರತುಪಡಿಸಿ (ಲಕ್ಷ.ಗಳಲ್ಲಿ)	ಇ.ಎಂ.ಡಿ. ಮೊತ್ತ	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ & ಸಮಯ	ಟೆಂಡರ್ ತೆರೆಯುವ ದಿನಾಂಕ	
					ತಾಂತ್ರಿಕ ಬಿಡ್	ಆರ್ಥಿಕ ಬಿಡ್
01	Replacement of exiting deterorated L.T.U.G Cable System by providing over head System Using 9 mtrs RCC Poles with 3 phase, 5 wire L.T Aerial Bunched cable with LED Streetlights and Highmast light at main Market yard of Belagavi APMC (Under Action Plan 2025-26).	ರೂ. 91.23	ರೂ. 1,82,500.00	25–03–2026 ರ ಸಂಜೆ 5.30 ಗಂಟೆಗೆ	27–03–2026 ರ ಬೆಳಿಗ್ಗೆ 11.00 ಗಂಟೆಗೆ	02–04–2026 ರ ಸಂಜೆ 4.30 ಗಂಟೆಗೆ
02	ಕೃ.ಉ.ಮಾ.ಸ. ಬೆಳಗಾವಿ 2024–25 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಳಗಾವಿ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಮರಾಠ ಬ್ಯಾಂಕ್ ಎದುರುಗಡೆ ಇರುವ ದಿನಸಿ ಚಿಕ್ಕ ಮಳಿಗೆಗಳನ್ನು ಸುಧಾರಣೆ ಮಾಡುವುದು (09 ಸಂಖ್ಯೆ) ಕಾಮಗಾರಿ.	ರೂ. 8.46	ರೂ. 11,000.00	25–03–2026 ರ ಸಂಜೆ 5.30 ಗಂಟೆಗೆ	27–03–2026 ರ ಬೆಳಿಗ್ಗೆ 11.00 ಗಂಟೆಗೆ	02–04–2026 ರ ಸಂಜೆ 4.30 ಗಂಟೆಗೆ

ಟೆಂಡರ್ ಷರತ್ತು ಹಾಗೂ ನಿಬಂಧನೆಗಳು ಇ–ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಇರುತ್ತದೆ. ಹೆಚ್ಚಿನ ಮಾಹಿತಿಯನ್ನು ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಕಾರ್ಯದರ್ಶಿಯವರಿಂದ ಅಥವಾ http://www.kppp.karnataka.gov.in ವೆಬ್‌ಸೈಟ್‌ನಲ್ಲಿ ಹಾಗೂ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ : 080 – 22501216 / 25501227 ಪಡೆಯಬಹುದಾಗಿದೆ.

ಸಹಿ/– ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಳಗಾವಿ.

ಸಹಿ/– ಆಡಳಿತಾಧಿಕಾರಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಳಗಾವಿ.

ಡಿಐಪಿಆರ್/ಬೆಳಗಾವಿ/2012/ಮಣಿಪಾಲ್/2025–26

ನಗರಸಭೆ ಕಾರ್ಯಾಲಯ, ರಾಣೇಬೆನ್ನೂರು

ನಂ:ನಸರಾ/ಕಾವಿ/ಅಮೃತ 2.0/ವಹಿ–13/2025–26 ದಿನಾಂಕ:03–03–2026

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ ಜಲ್–ಹೀ ಅಮೃತ ಯೋಜನೆಯಡಿ ರೂ. **75.00** ಲಕ್ಷಗಳಲ್ಲಿ **01** ಕಾಮಗಾರಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ದ್ವಿ–ಲಕೋಟೆ ಪದ್ದತಿಯಲ್ಲಿ ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು / ಏಜನ್ಸಿದಾರರು /ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ವೆಬ್ ಸೈಟ್ **www.kppp.karnataka.gov.in** ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ಪ್ರಕಟಣೆಯ ವಿವರಗಳನ್ನು ನಗರಸಭೆಯ ಕಛೇರಿಯ ವೆಬ್ ಸೈಟ್ **http// www.ranebennurcity.mrc.gov.in** ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ನಗರಸಭೆಯ ಕಛೇರಿ ವೇಳೆಯಲ್ಲಿ ಹಾಗೂ ಇ–ಪ್ರಕ್ಯೂರ್‌ಮೆಂಟ್ ಸಹಾಯಕ ದೂರವಾಣಿ ಸಂಖ್ಯೆ : **+ 91 80 46010000, +91 80 68948777** ರಿಂದ ಮಾಹಿತಿ ಪಡೆಯಬಹುದು. ಇಂಡೆಂಟ್ ನಂ. **DMA/2025-26/OW/WORK_INDENT 51983 Call - 3** ಸೂಚನೆ : ಈ ಕೆಳಕಂಡ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಅದಲ್ಲಿ ಆ ದಿನಾಂಕಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.

ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : **11–03–2026** ಸಮಯ : 15.30 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : **11–03–2026** ಸಮಯ : 17.30 ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ : **13–03–2026** ಸಮಯ : 11.30 ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ & ವೇಳೆ ಅಥವಾ ಸಕ್ಷಮ ಪ್ರಾಧಿಕಾರದ ಅನುಮೋದನೆಯಾದ ನಂತರ **16–03–2026** ಸಮಯ : 11.30

ಸಹಿ/– ಪೌರಾಯುಕ್ತರು, ನಗರಸಭೆ, ರಾಣೇಬೆನ್ನೂರು

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/779/2025–26

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರ ಕಛೇರಿ, ಕ.ನೀ.ನಿ.ನಿ., ಮ.ಬ.ದ.ಕಾ.ನಿ. ವಿಭಾಗ ನಂ. 1, ನರಗುಂದ ಜಿಲ್ಲೆ : ಗದಗ
Tel No. 08377-244236 e-mail : knnlestablishment@gmail.com

ಸಂ:ಕನೀನಿನಿ:ಮಬದ1:ಪಿಬಿ:ಟೆಂಡರ:2025–26/1724 ದಿನಾಂಕ: 06–03–2026

ಕೊಟೇಶನ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದ ನರಗುಂದ ಮತ್ತು ನವಲಗುಂದ ತಾಲೂಕಿನಡಿ ಬರುವ ಬೆಣ್ಣಿಹಳ್ಳ ಮತ್ತು ತುಪ್ಪರಿಹಳ್ಳದ ಮೇಲಿನ ಅಮರಗೋಳ, ಗೊಬ್ಬರಗುಂಪಿ, ಹದ್ಲಿ–ಗಂಗಾಪುರ, ಮದಗುಣಕಿ, ಬನಹಟ್ಟಿ, ಖಾನಾಪುರ ಮತ್ತು ರಡ್ಡೇರನಾಗನೂರ ಯೋಜನೆಗಳ **2025–26** ಸಾಲಿಗೆ ಪಾಲನೆ ಮತ್ತು ನಿರ್ವಹಣೆಗೆ ಎಲೆಕ್ಟ್ರೋ–ಮೆಕಾನಿಕಲ್ ಅಂದಾಜು ಪತ್ರಿಕೆಗಳನ್ನು ತಯಾರಿಸಲು ಸನಗುಗಳ ಪೂರೈಕೆಗೆ ಅರ್ಹ ಗುತ್ತಿಗೆದಾರರಿಂದ ಸ್ಪರ್ಧಾತ್ಮಕ ದರಗಳ ದರಪಟ್ಟಿಯ ಕೊಟೇಶನ್‌ಗಳಿಗೆ ದರಗಳನ್ನು ಮೊಹರು ಬಂದ ಲಕೋಟೆಯಲ್ಲಿ ದಿನಾಂಕ : **12–03–2026** ರೊಳಗಾಗಿ ಈ ಕಚೇರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: **08377–244236** ನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಕನೀನಿನಿ ಮಬದಕಾನಿ ವಿಭಾಗ ನಂ.1 ನರಗುಂದ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/694/2025–26

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ, (ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)

3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001.

ಸ್ಥಿರಾಸ್ತಿಯ ಇ–ಹರಾಜಿಗೆ ಆಹ್ವಾನ /ಸೂಚನೆ

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ, 2004 ರ ಅಡಿಯಲ್ಲಿ ಸರ್ಕಾರವು ಸ್ಥಿರಾಸ್ತಿ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಮಾನ್ಯ ವಿಶೇಷ ನ್ಯಾಯಾಲಯವು ಕೆಪಿಐಡಿಎಫ್ಇ ಕಾಯ್ದೆ ಅಡಿಯಲ್ಲಿ ಸ್ಥಿರೀಕರಿಸಿದ ಆದೇಶದ ಅನುಸಾರವಾಗಿ, ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರದ ವತಿಯಿಂದ ಸ್ಥಿರಾಸ್ತಿ ಸ್ವತ್ತುಗಳನ್ನು ಇ–ಹರಾಜಿನ ಮೂಲಕ ವಿಲೇವಾರಿ ಮಾಡಲು ಪ್ರಕಟಣೆಯನ್ನು ಹೊರಡಿಸಲಾಗಿದೆ. (ಎಲ್ಲಿದೇಯೋ, ಹೇಗಿದೇಯೋ, ಯಾವ ಸ್ಥಿತಿಯಲ್ಲಿದೇಯೋ ಅದೇ ಆಧಾರದ ಮೇಲೆ) **(as is where is and whatever there is basis')** ಆಸಕ್ತ ಬಿಡ್‌ದಾರರು ಅರ್ನೆಸ್ಟ್ ಮನಿ ಡೆಪಾಸಿಟ್ **(EMD)** ಅನ್ನು ಒದಗಿಸಬೇಕಾಗುತ್ತದೆ (ಸೇವಾ ಪೂರೈಕೆದಾರರು/ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಒದಗಿಸಿದ ಇ–ಪೋರ್ಟಲ್‌ನಲ್ಲಿ ಮಾತ್ರ)

Short description of the Immovable Property (SPLOCA/AUC(2)/CR/19/2025-26)

Properties are free of all encumbrances and are in the name of Competent Authority appointed by Government and confirmed by the Special Court under KPIDFE Act, 2004. and Hon'ble High Court Of Karnataka has cleared the title (Khata stands in the name of Competent Authority and Auctioning Authority)

Sl. No.	DETAILS OF THE SCHEDULE PROPERTY (Clear Title by Court in order No. MISC No. 711/2019, 712/2019, 713/2019)	Minimum Bid Price (Rs)	EMD (Rs)	Bid Increase Value (Rs)
1.	Vacant Site bearing No.403, Old Khata No.503/165C Ward No.33, New Khata No.33-03-13-363B at Hassan City, Tannerhalla Circle, Tannerhalla Main Road, Hassan, Total Agr.928.6070 sq.mt (9996 sq.ft) bounded on East by: Village Road, West by: M.K.Swamy & Puttaswamy's property, North by: vacant site, South by: Remaining portion of the same property. Vacant Site bearing No.404, Old Khata No.503/165B Ward No.33, New Khata No.33-03-13-363A at Hassan City, Tannerhalla Circle, Tannerhalla Main Road, Hassan, Total Agr.654.04 sq.mt. bounded on East by: Cross Road, West by: Remaining portion of the same property., North by: B.M. Road, South by: Remaining portion of the same property. Vacant Site bearing No.405, Old Khata No.503/165D Ward No.33, New Khata No.33-03-13-365A at Hassan City, Tannerhalla Circle, Tannerhalla Main Road, Hassan, Total Agr.290.6018 sq.mt. (3128 sq.ft) bounded on East by: Village Road, West by: Vacant site of children of Siddaiha, North by: Remaining portion of the same property., South by: Residential building of Murali Banu Prakash Subramanya.	19,14,82,950/-	1,91,49,000/-	19,15,000/-
	Google Map link: https://maps.app.goo.gl/9uioKWQ221xttdco9 Latitude and Longitude: 12°59'44.0"N 76°04'54.0"E			

ಪೂರ್ವ ಭಾವಿ ಬಿಡ್ ಸಭೆ ದಿನಾಂಕ ಮತ್ತು ಸಮಯ	ಸ್ಥಳ ಪರಿಶೀಲನೆ ದಿನಾಂಕ ಮತ್ತು ಸಮಯ	ಬಿಡ್ ದಾಖಲೆಗಳು ಮತ್ತು ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ	ಇ–ಹರಾಜಿನ ದಿನಾಂಕ ಮತ್ತು ಸಮಯ
09ನೇ ಮಾರ್ಚ್ 2026 ಮಧ್ಯಾಹ್ನ 3 ರಿಂದ 4 ಗಂಟೆ ಸ್ಥಳ: O/o SPLOCA, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು–01	13ನೇ ಮಾರ್ಚ್ 2026 ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ	16ನೇ ಮಾರ್ಚ್ 2026 ಸಂಜೆ 5 ಗಂಟೆಯವರೆಗೆ	18ನೇ ಮಾರ್ಚ್ 2026 ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ

ಆಸಕ್ತ ಬಿಡ್‌ದಾರರು ನೋಂದಣಿ ಮತ್ತು ಆನ್‌ಲೈನ್ ಹರಾಜಿಗಾಗಿ **https://kppp.karnataka.gov.in** ಇಲ್ಲಿಗೆ ಲಾಗಿನ್ ಮಾಡಬಹುದು (ಸಹಾಯವಾಣಿ ಸಂಖ್ಯೆ: 080–46010000, 080–68948777) ಮತ್ತು ಇ–ಹರಾಜಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯ ಬಗ್ಗೆ ಸಹಾಯಕ ಆಯುಕ್ತರು, ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಛೇರಿ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು–560001 ಇವರನ್ನು ಸಂಪರ್ಕಿಸಬಹುದು. ಇ–ಮೇಲ್ ಐಡಿ: **splocaeauction@gmail.com** ಅಥವಾ ಮೊಬೈಲ್ ಸಂಖ್ಯೆ 9945515174 ಅನ್ನು ಸಂಪರ್ಕಿಸಬಹುದು.

ಸ್ಥಳ: ಬೆಂಗಳೂರು
ದಿನಾಂಕ: 02.03.2026

DIPR/CP/6060/NR/2025-26

ಸಹಿ/– ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು, ಕರ್ನಾಟಕ

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ., ಯಗಚಿ ಯೋಜನಾ ವಿಭಾಗ, ಬೇಲೂರು, ಹಾಸನ ಜಿಲ್ಲೆ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 12/2025–26 ದಿನಾಂಕ: 03–03–2026 (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಯಗಚಿ ಯೋಜನಾ ವಿಭಾಗ, ಬೇಲೂರು ಇವರು ಕರ್ನಾಟಕ ಲೋಕೋಪಯೋಗಿ/ಕೇಂದ್ರ ಲೋಕೋಪಯೋಗಿ ಇಲಾಖೆಗಳಲ್ಲಿ ದರ್ಜೆ–II ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಪಾರದರ್ಶಕ ಕಾಯಿದೆ KW-4 ರ ಅನ್ವಯ ಐಟಂವಾರು ಅಲ್ಪಾವಧಿ ಟೆಂಡರ್‌ಗಳನ್ನು E-Procurement PlatForm (https://kppp.karnataka.gov.in) ನಲ್ಲಿ ಟೆಂಡರ್‌ಗಳನ್ನು ಕಾರ್ಯಪಾಲಕ ಇಂಜಿನಿಯರ್, ಯಗಚಿ ಯೋಜನಾ ವಿಭಾಗ, ಬೇಲೂರು ಇವರು ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ದಿನಾಂಕಗಳು ಈ ಕೆಳಕಂಡಂತಿವೆ. (1)ಟೆಂಡರ್ ಪ್ರೊಸೆಸಿಂಗ್ ಫೀ: https://kppp.karnataka.gov.in ನಲ್ಲಿ ನೋಡುವುದು (2) E-Procurement ನಲ್ಲಿ ದಾಖಲಾತಿಗಳನ್ನು ಪಡೆಯುವ ಹಾಗೂ ಅಪ್‌ಲೋಡ್ ಮಾಡುವ ಅವಧಿ: ದಿನಾಂಕ: 06–03–2026 ರಿಂದ ದಿನಾಂಕ: 13–03–2026 ವರೆಗೆ ಸಂಜೆ 4.00 ಘಂಟೆವರೆಗೆ (3) ಪ್ರೀ–ಬಿಡ್ ಮೀಟಿಂಗ್ ದಿನಾಂಕ: 10–03–2026 ಮಧ್ಯಾಹ್ನ 03.00 ಘಂಟೆಗೆ (4) ಟೆಂಡರ್ ತೆರೆಯುವ ದಿನಾಂಕ: 16–03–2026 ಬೆಳಿಗ್ಗೆ 11.00 ಘಂಟೆಗೆ (5) ಕಾಮಗಾರಿಗಳ ಸಂಖ್ಯೆ: 06 (ಆರು) (6) ಕೆಲಸದ ಕಾಲಮಿತಿ : 11 ತಿಂಗಳು (ಮಳೆಗಾಲ ಸೇರಿ) (7)ಕಾಮಗಾರಿಯ ಟೆಂಡರಿಗಿಟ್ಟ ಗರಿಷ್ಠ ಮೊತ್ತ: ರೂ.421.27 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ) (8) ಕಾಮಗಾರಿಯ ಟೆಂಡರಿಗಿಟ್ಟ ಕನಿಷ್ಠ ಮೊತ್ತ: ರೂ.210.80 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ) (9) ಇ.ಎಂ.ಡಿ. ಗರಿಷ್ಠ ಮೊತ್ತ ರೂ. 6.32 ಲಕ್ಷಗಳು (10) ಇ.ಎಂ.ಡಿ. ಕನಿಷ್ಠ ಮೊತ್ತ ರೂ. 3.16 ಲಕ್ಷಗಳು (11) ಲೋಕೋಪಯೋಗಿ/ಕೇಂದ್ರ ಲೋಕೋಪಯೋಗಿ ಇಲಾಖೆ ದರ್ಜೆ- II ಮತ್ತು ಮೇಲ್ಪಟ್ಟ ವರ್ಗ. ಸೂಚನೆ: 1. ಯಾವುದೇ ಸಂದರ್ಭದಲ್ಲಾದರೂ ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ. 2. ಟೆಂಡರ್ ನಿಬಂಧನೆಗಳು ಹಾಗೂ ಸಂಬಂಧಪಟ್ಟ ವಿವರಗಳನ್ನು KPP portal https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರಿಗಿಟ್ಟ ಮೊತ್ತವು ಬದಲಾವಣೆಗೆ ಒಳಪಟ್ಟಿರುತ್ತದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಕಾನೀನಿನಿ, ಯಗಚಿ ಯೋಜನಾ ವಿಭಾಗ, ಬೇಲೂರು

ವಾಸಾಸಂಇ/ಹಿಸನಿ/ಹಾಸನ/1149/ಕೆಎಸ್‌ಎಂಸಿಎ/2025–26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

KPTCL

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂ: ಮುಪ್ರವ್ಯ(ತಾ)/ಉಪ್ರವ್ಯ(ಎಪಿಸಿಸಿ & ಪ್ರೊ)/ಕಾನಿಇಂ–2/ಸಕಾನಿಇಂ/24–25/4419–441 ದಿ: 04.03.2026

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಈ ಕೆಳಕಂಡ ವಿಚಾರಣೆ ಸಂಖ್ಯೆ ಮೂಲಕ ಕೆಳಕಂಡ ಕಾಮಗಾರಿಗಳಿಗೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ವಿಚಾರಣೆ ಸಂಖ್ಯೆ / ಕಾಮಗಾರಿ ವಿವರ
ಕವಿಪ್ರನಿನಿ/2025–26/ಎಸ್‌ಎಸ್/ವರ್ಕ್_ಇಂಡೆಂಟ್3421
ಸಂಯೋಜಿತ ಪ್ಯಾಕೇಜ್ (1) ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನಲ್ಲಿರುವ **220/110/11ಕೆವಿ ಉಪ–ಕೇಂದ್ರ ಅಹೇರಿಯಲ್ಲಿ** ಬ್ಯಾಟರಿ ಇಂಧನ ಸಂಗ್ರಹಣಾ ವ್ಯವಸ್ಥೆಯನ್ನು ಸ್ಥಾಪಿಸಲು 220ಕೆವಿ ಟರ್ಮಿನಲ್ ಬೇ ನಿರ್ಮಾಣ. (2) ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನಲ್ಲಿ ಇಂಧನ ಸಂಗ್ರಹಣಾ ವ್ಯವಸ್ಥೆಯನ್ನು ಸ್ಥಾಪಿಸಲು ಅಸ್ತಿತ್ವದಲ್ಲಿರುವ **400/220ಕೆವಿ ಗುಟ್ಟೂರು** ಸ್ವೀಕರಣಾ ಕೇಂದ್ರದಲ್ಲಿ 220ಕೆವಿ ಟರ್ಮಿನಲ್ ಬೇ ನಿರ್ಮಾಣ. (3) ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ **220/66/11ಕೆವಿ ಮಧುವನಹಳ್ಳಿ** ಉಪ–ಕೇಂದ್ರದಲ್ಲಿ ಇಂಧನ ಸಂಗ್ರಹಣಾ ವ್ಯವಸ್ಥೆಯನ್ನು ಸ್ಥಾಪಿಸಲು 220ಕೆವಿ ಟರ್ಮಿನಲ್ ಬೇ ನಿರ್ಮಾಣ. (4) ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನಲ್ಲಿರುವ **220ಕೆವಿ ಹುಮನಾಬಾದ್** ಉಪ–ಕೇಂದ್ರದಲ್ಲಿ ಇಂಧನ ಸಂಗ್ರಹಣಾ ವ್ಯವಸ್ಥೆಯನ್ನು ಸ್ಥಾಪಿಸಲು 220ಕೆವಿ ಟರ್ಮಿನಲ್ ಬೇ ನಿರ್ಮಾಣ. (5) ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನಲ್ಲಿರುವ **220ಕೆವಿ ಶಹಾಪುರ** ಉಪ–ಕೇಂದ್ರದಲ್ಲಿ ಇಂಧನ ಸಂಗ್ರಹಣಾ ವ್ಯವಸ್ಥೆಯನ್ನು ಸ್ಥಾಪಿಸಲು 220ಕೆವಿ ಟರ್ಮಿನಲ್ ಬೇ ನಿರ್ಮಾಣ. (6) ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನಲ್ಲಿರುವ **220ಕೆವಿ ಮಲ್ಲತ್** ಉಪ–ಕೇಂದ್ರದಲ್ಲಿ ಇಂಧನ ಸಂಗ್ರಹಣಾ ವ್ಯವಸ್ಥೆಯನ್ನು ಸ್ಥಾಪಿಸಲು 220ಕೆವಿ ಟರ್ಮಿನಲ್ ಬೇ ನಿರ್ಮಾಣ.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in**ನ ಹೈಪರ್‌ಲಿಂಕ್ "E Procurement KPTCL" ಅಥವಾ **https://kppp.karnataka.gov.in**ನಲ್ಲಿ ಲಾಗಿನ್ ಆಗಿ ದಿನಾಂಕ **11.03.2026 ರಂದು ಅಥವಾ ನಂತರದಿಂದ** ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ **ದಿನಾಂಕ 26.03.2026 @ 15.00 ಗಂಟೆ**. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. ಇದಕ್ಕೆ ಸಂಬಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ದುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕವಿಪ್ರನಿನಿ, ನಿಗಮ ಕಚೇರಿ, 11ನೇ ಮಹಡಿ, ಇಂಧನ ಭವನ, ಆನಂದರಾವ್ ವೃತ್ತ, ಬೆಂಗಳೂರು–560009.

ಮಹಿಳಾ ಸಿಬ್ಬಂದಿಯಿಂದ ಆಕರ್ಷಕ ಕವಾಯತು

ಸಿ.ಎ.ಆರ್ ಕವಾಯತು ಮೈದಾನದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಡಿಸಿಪಿ ಮೊಹಮ್ಮದ್ ಸುಜೀತಾ ಪರೇಡ್ ಕಮಾಂಡರ್
- ಎಸಿಪಿ ರೀನಾ ಸುವರ್ಣ ಸಹಾಯಕ ಕಮಾಂಡರ್
- 60 ಮಹಿಳಾ ಅಧಿಕಾರಿ, ಸಿಬ್ಬಂದಿಗೆ ಪ್ರಶಂಸನಾ ಪತ್ರ ವಿತರಣೆ

ಬೆಂಗಳೂರು: ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಶುಕ್ರವಾರ ಸಿ.ಎ.ಆರ್. ಕವಾಯತು ಮೈದಾನದಲ್ಲಿ ಮಹಿಳಾ ಸಿಬ್ಬಂದಿಯಿಂದ ವಿಶೇಷ ಕವಾಯತು ನಡೆಯಿತು. ವಿವಿಧ ಪೊಲೀಸ್ ಉಪ ವಿಭಾಗಗಳ ಮಹಿಳಾ ಸಿಬ್ಬಂದಿ ಹಾಗೂ ಅಧಿಕಾರಿಗಳು ಕವಾಯತಿನಲ್ಲಿ ಪಾಲ್ಗೊಂಡಿದ್ದು ವಿಶೇಷ.

ಆಗ್ನೇಯ ವಿಭಾಗದ ಡಿಸಿಪಿ ಮೊಹಮ್ಮದ್ ಸುಜೀತಾ ಅವರು ಪರೇಡ್ ಕಮಾಂಡರ್ ಆಗಿ, ವೈಟ್‌ಫೀಲ್ಡ್ ಉಪ ವಿಭಾಗದ ಎಸಿಪಿ ರೀನಾ ಸುವರ್ಣ ಅವರು ಸಹಾಯಕ ಕಮಾಂಡರ್ ಆಗಿ ಕರ್ತವ್ಯ ನಿರ್ವಹಿಸಿದರು.

ಉತ್ತಮವಾಗಿ ಕಾರ್ಯನಿರ್ವಹಿಸಿದ ಇಬ್ಬರು ಸಹಾಯಕ ಪೊಲೀಸ್ ಕಮಿಷನರ್, ಮೂವರು ಇನ್‌ಸ್ಪೆಕ್ಟರ್, 6 ಸಬ್ ಇನ್‌ಸ್ಪೆಕ್ಟರ್, ಮೂವರು ಎಎಸ್‌ಐ, 15 ಮಂದಿ ಹೆಡ್ ಕಾನ್‌ಸ್ಟೆಬಲ್, 16 ಕಾನ್‌ಸ್ಟೆಬಲ್, 12 ಮಂದಿ ರೈಟರ್, ಇಬ್ಬರು ಹೋಮ್ ಗಾರ್ಡ್ ಹಾಗೂ ಒಬ್ಬ ಸ್ವಚ್ಛತಾ ಸಿಬ್ಬಂದಿ ಸೇರಿದಂತೆ 60 ಮಹಿಳಾ ಅಧಿಕಾರಿ ಹಾಗೂ ಸಿಬ್ಬಂದಿಗೆ ಪ್ರಶಂಸನಾ ಪತ್ರವನ್ನು ವಿತರಣೆ ಮಾಡಲಾಯಿತು.

ಕವಾಯತು ಬಳಿಕ ರಾಣಿ ಚನ್ನಮ್ಮ ಪಡೆಯ ಸಿಬ್ಬಂದಿ ಕೌಶಲ ಪ್ರದರ್ಶಿಸಿದರು. ಅದಾದ ಮೇಲೆ 'ಪರಿಹಾರ' ವತಿಯಿಂದ ಮಹಿಳೆಯರಿಗೆ 100 ಆಟೋರಿಕ್ಷಾ ವಿತರಣೆ ಮಾಡಲಾಯಿತು. ಟಿವಿಎಸ್ ಕಂಪನಿಯಿಂದ ಪೊಲೀಸ್ ಇಲಾಖೆಗೆ ದ್ವಿಚಕ್ರ ವಾಹನಗಳನ್ನು ಹಸ್ತಾಂತರಿಸಲಾಯಿತು.

ಕವಾಯತು ವೀಕ್ಷಣೆಯ ಬಳಿಕ ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅವರು ಮಾತನಾಡಿ, 'ನಗರದಲ್ಲಿ ರೌಡಿ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಕ್ರಮ ವಹಿಸಲಾಗಿದೆ. ಸಮಾಜಘಾತುಕ ಶಕ್ತಿಗಳನ್ನು ಹತ್ತಿಕ್ಕುವ ಜೊತೆಗೆ ಮಹಿಳಾ ಸುರಕ್ಷತೆಗೆ ಆದ್ಯತೆ ನೀಡಲಾಗುತ್ತಿದೆ' ಎಂದರು.

'ಸಂಚಾರ ವಿಭಾಗ, ಸೈಬರ್ ಅಪರಾಧ, ವಾಹನ ಚಾಲನೆ, ಕಮಾಂಡಿಂಗ್.... ಹೀಗೆ ಎಲ್ಲಾ ವಿಭಾಗಗಳಲ್ಲೂ ಮಹಿಳಾ ಸಿಬ್ಬಂದಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಮಹಿಳಾ ಮೀಸಲಾತಿ ಹೆಚ್ಚಿಸುವ ಸಂಬಂಧ ಹಿರಿಯ ಪೊಲೀಸ್ ಅಧಿಕಾರಿಗಳು ಹಾಗೂ ಸರ್ಕಾರದ ಜೊತೆ ಚರ್ಚಿಸಲಾಗುವುದು' ಎಂದು ಹೇಳಿದರು.

'ಸೈಬರ್ ಅಪರಾಧ ಪ್ರಕರಣಗಳು ಇತ್ತೀಚೆಗೆ ಹೆಚ್ಚಾಗುತ್ತಿವೆ. ತಂತ್ರಜ್ಞಾನ ಬಳಸಿಕೊಂಡು ಸೈಬರ್ ಅಪರಾಧ ಪ್ರಕರಣಗಳನ್ನು ಭೇದಿಸಲಾಗುತ್ತಿದೆ. ರಾಣಿ ಚನ್ನಮ ಪಡೆಗಳೂ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿವೆ' ಎಂದು ಹೇಳಿದರು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಸಿಎಆರ್ ಕವಾಯತು ಮೈದಾನದಲ್ಲಿ ಮಹಿಳಾ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯಿಂದ ವಿಶೇಷ ಕವಾಯತು ನಡೆಯಿತು

ಆತಂಕ ಸೃಷ್ಟಿಸಿದ ಅಣಕು ಕಾರ್ಯಾಚರಣೆ

ದೇವನಹಳ್ಳಿಯಲ್ಲಿ ವಿಮಾನ ಹೈಜಾಕ್!

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ರಾಯಪುರದಿಂದ ಮಂಗಳೂರಿಗೆ ಬರುತ್ತಿದ್ದ ಅಡಿಕ್ ವಿಸ್ತಾ ಏರ್‌ಲೈನ್ಸ್‌ನ ಏರ್‌ಬಸ್–321 ವಿಮಾನವನ್ನು ಗುರುವಾರ ಅಪಹರಿಸಿದ ಅಪಹರಣಕಾರರು ವಿಮಾನವನ್ನು ದೇವನಹಳ್ಳಿಯ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಇಳಿಸಿದರು!

ಹೈಜಾಕ್ ಆಗಿದ್ದ ವಿಮಾನದಲ್ಲಿದ್ದ 30 ಪ್ರಯಾಣಿಕರು ಮತ್ತು ಐವರು ಸಿಬ್ಬಂದಿಯನ್ನು ಸುರಕ್ಷಿತ ಬಿಡುಗಡೆ ಮಾಡಲು ಅಪಹರಣಕಾರರು ವಿವಿಧ ಬೇಡಿಕೆ ಮುಂದಿಟ್ಟರು. ಅಪಹರಣಕಾರರು ಒಬ್ಬ ಪ್ರಯಾಣಿಕನನ್ನು ಕೊಂದರು.

ತುರ್ತು ಪ್ರತಿಕ್ರಿಯೆ ಕ್ರಮವಾಗಿ ವಿಮಾನ ನಿಲ್ದಾಣದ ಎರಡೂ ರನ್‌ವೇಗಳನ್ನು ಕೆಲಕಾಲ ವಿಮಾನ ಸಂಚಾರಕ್ಕೆ ಮುಚ್ಚಲಾಗಿತ್ತು. ಅಪಹರಣಕಾರರೊಂದಿಗೆ ಮಾತುಕತೆ ನಡೆಸಲು ಸಂಧಾನಕಾರರನ್ನು ನಿಯೋಜಿಸಲಾಗಿತ್ತು. ಬಳಿಕ ಅವರು ಪ್ರಯಾಣಿಕರನ್ನು ಬಿಡುಗಡೆ ಮಾಡಲು ಮನವೊಲಿಸಿದರು. ಇನ್ನುಳಿದ ಪ್ರಯಾಣಿಕರು ಮತ್ತು ಸಿಬ್ಬಂದಿಯನ್ನು ಭದ್ರತಾ ಪಡೆಗಳವರು ಸುರಕ್ಷಿತವಾಗಿ ರಕ್ಷಿಸಿದರು.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಡೆದ ವಿಮಾನ ಹೈಜಾಕ್ ಅಣಕು ಪ್ರದರ್ಶನದ ಈ ದೃಶ್ಯಗಳು ವಿಮಾನ ಅಪಹರಣದ ನೈಜ ದೃಶ್ಯಗಳನ್ನು ನೆನಪಿಸಿದವು.

'ಇದೊಂದು ಅಣಕು ಕಾರ್ಯಾಚರಣೆ. ತುರ್ತು ಪರಿಸ್ಥಿತಿಯಲ್ಲಿ ಪ್ರಯಾಣಿಕರ ಮತ್ತು ವಿಮಾನ ನಿಲ್ದಾಣ ಬಳಕೆದಾರರ ಸುರಕ್ಷತೆ ಖಚಿತಪಡಿಸುವ ಉದ್ದೇಶದಿಂದ ಈ ಅಣಕು ಕಾರ್ಯಾಚರಣೆ ನಡೆಸಲಾಗಿದೆ' ಎಂದು ಅಧಿಕಾರಿಗಳು ಹೇಳಿದರು.

ಅಣಕು ಕಾರ್ಯಾಚರಣೆ ಬಳಿಕ ಸಂಪೂರ್ಣ ಮೌಲ್ಯಮಾಪನ ನಡೆಸಿ, ತುರ್ತು ಪ್ರತಿಕ್ರಿಯೆ ವ್ಯವಸ್ಥೆ, ಸಂವಹನ ವ್ಯವಸ್ಥೆ ಹಾಗೂ ವಿವಿಧ ಸಂಸ್ಥೆಗಳ ಸಮನ್ವಯವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕುರಿತು ಕಾರ್ಯತಂತ್ರ ರೂಪಿಸಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಡೆದ ವಿಮಾನ ಹೈಜಾಕ್ ಅಣಕು ಕಾರ್ಯಾಚರಣೆಯಲ್ಲಿ ವಿವಿಧ ಭದ್ರತಾ ಹಾಗೂ ಆಡಳಿತಾತ್ಮಕ ವಿಭಾಗಗಳ ಅಧಿಕಾರಿಗಳು ಭಾಗವಹಿಸಿದ್ದರು

ಬೆಂಗಳೂರು– ಮಂಗಳೂರು: ತಡರಾತ್ರಿ ವಿಮಾನ ಸಂಚಾರ

ಮಂಗಳೂರು: ಪ್ರಯಾಣಿಕರಿಗೆ ಇನ್ನು ಮಂಗಳೂರು–ಬೆಂಗಳೂರು ನಡುವೆ ದೈನಂದಿನ ತಡರಾತ್ರಿ ವಿಮಾನ ಸಂಚಾರ ಸೌಲಭ್ಯ ದೊರಕಲಿದೆ.

ಏರ್ ಇಂಡಿಯಾ ಎಕ್ಸ್‌ಪ್ರೆಸ್ ಮಾ.10ರಿಂದ ಈ ಸೌಲಭ್ಯ ಕಲ್ಪಿಸಿದ್ದು, ರಾತ್ರಿ 9.25ಕ್ಕೆ ಬೆಂಗಳೂರಿನಿಂದ ಹೊರಡುವ ವಿಮಾನವು 10.40ಕ್ಕೆ ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತಲುಪುತ್ತದೆ. ಮಂಗಳೂರಿನಿಂದ ರಾತ್ರಿ 11.10ಕ್ಕೆ ಹೊರಡುವ ವಿಮಾನವು ಮಧ್ಯರಾತ್ರಿ 12.20ಕ್ಕೆ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತಲುಪುತ್ತದೆ. ಮಾ.28ರವರೆಗೆ ಈ ವ್ಯವಸ್ಥೆ ಜಾರಿಯಲ್ಲಿರಲಿದೆ ಎಂದು ವಿಮಾನ ನಿಲ್ದಾಣದ ವಕ್ತಾರರು ತಿಳಿಸಿದ್ದಾರೆ.

ರಾಮ್‌ರಾಜ್...

ಪ್ರಜಾವಾಣಿ ಚಿತ್ರ

ನಗರದ ನಾಗರಬಾವಿಯ ಮುದ್ದಿನಪಾಳ್ಯದ 60 ಅಡಿ ರಸ್ತೆಯಲ್ಲಿ ನಿರ್ಮಾಣವಾಗಿರುವ ರಾಮ್‌ರಾಜ್‌ನ ನೂತನ ಮಳಿಗೆಯನ್ನು ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ (ಕೆ.ಎಸ್.ಐ.ಐ.ಡಿ.ಸಿ) ನಿವೃತ್ತ ಉಪ ಪ್ರಧಾನ ವ್ಯವಸ್ಥಾಪಕ ಪಿ.ಬಿ. ರಾಜಗೋಪಾಲ್ ಅವರು ಶುಕ್ರವಾರ ಉದ್ಘಾಟಿಸಿದರು. ಮಳಿಗೆಯ ಮಾಲೀಕ ರಾಜೇಶ್ ಉಪಸ್ಥಿತರಿದ್ದರು

ಐವರು ದರೋಡೆಕೋರರ ಬಂಧನ

ವಿಜಯಪುರ (ದೇವನಹಳ್ಳಿ): ಕಡಿಮೆ ಬೆಲೆಗೆ ಚಿನ್ನ ನೀಡುವುದಾಗಿ ಆಂಧ್ರ ಪ್ರದೇಶದ ಮೂವರಿಂದ ವಿಜಯಪುರ ಬಳಿ ₹15 ಲಕ್ಷ ದೋಚಿ ಪರಾರಿಯಾಗಿದ್ದ ಏಳು ದರೋಡೆಕೋರರಲ್ಲಿ ಐವರನ್ನು ವಿಜಯಪುರ ಟೌನ್ ಪೊಲೀಸರು ವಿಜಯನಗರ ಜಿಲ್ಲೆಯಲ್ಲಿಯ ಹರಪನ ಹಳ್ಳಿಯಲ್ಲಿ ಬಂಧಿಸಿದ್ದಾರೆ.

ಹರಪನಹಳ್ಳಿ ತಾಲ್ಲೂಕಿನ ಚಿಗಟೇರಿ ಹೋಬಳಿ ಯಲ್ಲಾಪುರ ಗ್ರಾಮದ ಕಾವಾಡಿ ಷಣ್ಮುಖ (24), ಷಣ್ಮುಖ (32), ಕಾವಾಡಿ ಗಣೇಶ್ (23), ದ್ಯಾಪನ ಹಳ್ಳಿಯ ಸಣ್ಣಜ್ಜನವರ್ ಸಾಗರ್ (28), ಹಾರಕ್ಕನಹಳ್ಳಿ ಗ್ರಾಮದ ಪೂಜಾರಿ ಮಂಜಪ್ಪ (40) ಅವರನ್ನು ವಿಜಯಪುರ ಪೊಲೀಸರು ಬಂಧಿಸಿ ಕರೆತಂದಿದ್ದಾರೆ.

ಪೆಟ್ರೋಲ್ ಸುರಿದು ಮೃತದೇಹ ಸುಟ್ಟಿದ್ದ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಮೌನೇಶ್

ನಿರ್ಮಲಾ

ಅಪರಾಧ ಸುದ್ದಿ

ಬೆಂಗಳೂರು: ಮಹಿಳೆ ಕೊಲೆ ಮಾಡಿ ಮೃತದೇಹ ಸುಟ್ಟುಹಾಕಿ ಪರಾರಿಯಾಗಿದ್ದ ಆರೋಪಿಯನ್ನು ದೇವನಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಗುಂಡಿಬಂಡೆ ತಾಲ್ಲೂಕಿನ ನಿಲುಗುಂಬ ಗ್ರಾಮದ ನಿರ್ಮಲಾ(36) ಕೊಲೆಯಾದವರು.

ಯಾದಗಿರಿ ಜಿಲ್ಲೆಯ ಶೋರಾಪುರ ತಾಲ್ಲೂಕಿನ ಹಸನಾಪುರ ಗ್ರಾಮದ ಮೌನೇಶ್ ಮೈತ್ರಿ (34) ಬಂಧಿತ ಆರೋಪಿ.

ನಿರ್ಮಲಾ ಅವರು ದೇವನಹಳ್ಳಿಯ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸ್ವಚ್ಛತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದರು. ಕುಟುಂಬದವರನ್ನು ತೊರೆದು ಎರಡು ವರ್ಷದಿಂದ ದೇವನಹಳ್ಳಿಯಲ್ಲಿ ಮನೆ ಬಾಡಿಗೆ ಪಡೆದು ಒಬ್ಬರೇ ನೆಲಸಿದ್ದರು. ಆರೋಪಿ ಸಹ ದೇವನಹಳ್ಳಿಯ ಮದಗಲಮ್ಮ ಗುಡಿ ಬೀದಿಯಲ್ಲಿ ನೆಲಸಿದ್ದ. ಈ ನಡುವೆ ಇಬ್ಬರೂ ಪರಿಚಿತರಾಗಿ ಒಂದೇ ಮನೆಯಲ್ಲಿ ವಾಸ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಒಂದೇ ಮನೆಯಲ್ಲಿ ವಾಸ ಮಾಡುತ್ತಿರುವುದು ಪತ್ನಿಗೆ ಗೊತ್ತಾದರೆ ಸಮಸ್ಯೆ ಆಗಲಿದೆ ಎಂದು ಭಾವಿಸಿದ್ದ ಆರೋಪಿ, ನಿರ್ಮಲಾ ಅವರನ್ನು ಕೊಲೆ ಮಾಡಲು ಸಂಚು ರೂಪಿಸಿದ್ದ. ಫೆ.21ರಂದು ಹಗ್ಗದಿಂದ ಬಿಗಿದು ಕೊಲೆ ಮಾಡಿದ್ದ. 2 ದಿನ ಮೃತದೇಹವನ್ನು ಮನೆಯಲ್ಲಿಯೇ ಇಟ್ಟಿದ್ದ. ಅದಾದ ಮೇಲೆ ಮೃತದೇಹವನ್ನು ಬೆಡ್‌ಶೀಟ್‌ನಿಂದ ಸುತ್ತಿ, ಕಟ್ಟಡದ ಎರಡನೇ ಮಹಡಿಯಿಂದ ಮೆಟ್ಟಿಲುಗಳ ಮೇಲೆ ಎಳೆದುಕೊಂಡು ಬಂದಿದ್ದ. ನಂತರ, ದ್ವಿಚಕ್ರ ವಾಹನ ಬಳಸಿ ದೇವನಹಳ್ಳಿಯ ಪಟ್ಟಣದ ಸ್ವರ್ಣಾದ್ರಿ ಹೋಟೆಲ್ ಎದುರಿನ ರಾಜಕಾಲುವೆಗೆ ಮೃತದೇಹ ಎಸೆದು ಪೆಟ್ರೋಲ್ ಸುರಿದು ಬೆಂಕಿ ಹಾಕಿ ಪರಾರಿಯಾಗಿದ್ದ' ಎಂದು ಪೊಲೀಸರು ಹೇಳಿದರು.

'ಆರೋಪಿ ಮೃತದೇಹ ಎಸೆದಿದ್ದ ಸ್ಥಳದ ಸುತ್ತಮುತ್ತಲಿದ್ದ ಕಟ್ಟಡಗಳಲ್ಲಿದ್ದ ಸಿ.ಸಿ.ಟಿ.ವಿ. ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಹಾಗೂ ದೂರವಾಣಿ ಕರೆಗಳ ತಾಂತ್ರಿಕ ವಿಶ್ಲೇಷಣೆಗೆ ಒಳಪಡಿಸಿದಾಗ ಕೆಲವು ಸಾಕ್ಷ್ಯಗಳು ಲಭಿಸಿದ್ದವು. ಆಗ ಆರೋಪಿಯ ಸುಳಿವು ಲಭಿಸಿ ಆರೋಪಿಯನ್ನು ಪತ್ತೆ ಮಾಡಿ ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

ಬಾಂಗ್ಲಾದೇಶದ 124 ಅಕ್ರಮ ವಲಸಿಗರ ವಶ

ಕಾಡುಗೋಡಿ ಹಾಗೂ ವರ್ತೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಕ್ರಮವಾಗಿ ನೆಲಸಿದ್ದ ಬಾಂಗ್ಲಾದೇಶದ 124 ಮಂದಿಯನ್ನು ಶುಕ್ರವಾರ ಬೆಳಿಗ್ಗೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಠಾಣಾ ವ್ಯಾಪ್ತಿಯಲ್ಲಿ ಶೆಡ್‌ಗಳನ್ನು ನಿರ್ಮಿಸಿಕೊಂಡು ಬಾಂಗ್ಲಾದೇಶದ ಪ್ರಜೆಗಳು ಅಕ್ರಮವಾಗಿ ನೆಲಸಿದ್ದಾರೆ ಎಂಬ ಮಾಹಿತಿ ಬಂದಿತ್ತು. ಕಾರ್ಯಾಚರಣೆಗೆ ನಾಲ್ಕು ವಿಶೇಷ ಪೊಲೀಸ್ ತಂಡಗಳನ್ನು ರಚಿಸಲಾಗಿತ್ತು.

ಶೆಡ್‌ಗಳ ಮೇಲೆ ಶುಕ್ರವಾರ ಮುಂಜಾನೆ ದಾಳಿ ನಡೆಸಿ, 48 ಪುರುಷರು, 42 ಮಹಿಳೆಯರು ಹಾಗೂ 34 ಮಕ್ಕಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ವಶಕ್ಕೆ ಪಡೆದವರನ್ನು ನೆಲಮಂಗಲ ಬಳಿಯ ಸೊಂಡೆಕೊಪ್ಪದ ಬಂಧನ ಕೇಂದ್ರಕ್ಕೆ ಕಳುಹಿಸಲಾಗಿದೆ. ವಿದೇಶಿಯರ ಪ್ರಾದೇಶಿಕ ನೋಂದಣಿ ಅಧಿಕಾರಿಗಳಿಗೂ (ಎಫ್‌ಆರ್‌ಆರ್‌ಒ) ಮಾಹಿತಿ ನೀಡಲಾಗಿದೆ ಎಂದರು.

ವಶಕ್ಕೆ ಪಡೆದುಕೊಂಡ ಬಾಂಗ್ಲಾದೇಶದ ಅಕ್ರಮ ವಲಸಿಗರು

ನಗರದಲ್ಲಿ ಅಕ್ರಮವಾಗಿ ನೆಲಸಿರುವ ವಿದೇಶಿ ಪ್ರಜೆಗಳ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸುವಂತೆ ನಗರ ಪೊಲೀಸ್ ಕಮಿಷನರ್ ಸೂಚನೆ ನೀಡಿದ್ದರು. ಖಚಿತ ಮಾಹಿತಿ ಆಧರಿಸಿ ಅಕ್ರwಮವಾಗಿ ನೆಲಸಿರುವ ಶೆಡ್ ಹಾಗೂ ಮನೆಗಳ ಮೇಲೆ ದಾಳಿ ನಡೆಸಲಾಗುತ್ತಿದೆ. ಇದುವರೆಗೂ 200 ಮಂದಿ ಅಕ್ರಮ ವಾಸಿಗಳನ್ನು ಪತ್ತೆ ಮಾಡಿ ವಶಕ್ಕೆ ಪಡೆಯಲಾಗಿದೆ ಎಂದು ಮೂಲಗಳು ಹೇಳಿವೆ.

'ವಶಕ್ಕೆ ಪಡೆದವರ ಬಳಿ ನಕಲಿ ಆಧಾರ್ ಕಾರ್ಡ್, ಪಾನ್ ಕಾರ್ಡ್‌ಗಳು ಪತ್ತೆ ಆಗಿವೆ. ಅವರಿಗೆ ಯಾರು ನಕಲಿ ದಾಖಲೆಗಳನ್ನು ಮಾಡಿಕೊಟ್ಟಿದ್ದಾರೆ ಎಂಬುದನ್ನೂ ಪತ್ತೆಹಚ್ಚಲಾಗುತ್ತಿದೆ. ವಿಶೇಷ ಕಾರ್ಯಾಚರಣೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಬಿಎ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಪಾಲ್ಗೊಂಡಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ರಜತ್ ವಿರುದ್ಧ ಪ್ರಕರಣ ದಾಖಲು

ಬೆದರಿಕೆ ಹಾಗೂ ನಿಂದನೆ ಆರೋಪದಡಿ 'ಬಿಗ್‌ಬಾಸ್' ರಿಯಾಲಿಟಿ ಶೋನ ಮಾಜಿ ಸ್ಪರ್ಧಿ ರಜತ್ ಕಿಶನ್ ಅವರ ವಿರುದ್ಧ ಕೆ.ಆರ್ ಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಗಿರೀಶ್ ಕುಮಾರ್ ಎಂಬುವವರು ನೀಡಿದ ದೂರಿನ ಮೇರೆಗೆ ಕಿರಣ್ ಹಾಗೂ ರಜತ್ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಡಾಗ್' ಸತೀಶ್ ಅವರ ಸ್ನೇಹವನ್ನು ಬಿಡಬೇಕು ಎಂದು ಕರೆ ಮಾಡಿ ಬೆದರಿಕೆ ಹಾಕಿದ್ದಾರೆಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ ಎಂದು ಪೊಲೀಸರು ಹೇಳಿದರು.

ರಜತ್ ಹಾಗೂ ಕಿರಣ್ ಅವರಿಗೆ ನೋಟಿಸ್ ಜಾರಿ ಮಾಡಿ, ವಿಚಾರಣೆಗೆ ಬರುವಂತೆ ಸೂಚಿಸಲಾಗುವುದು ಎಂದು ಪೊಲೀಸರು ಹೇಳಿದರು.

ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್.,

ನೋಂದಾಯಿತ ಕಛೇರಿ : ಸಂ. 19, 2ನೇ ಮುಖ್ಯ ರಸ್ತೆ, ಪೀಣ್ಯ 1ನೇ ಸ್ಟೇಜ್, ಫೇಸ್–1, ಪೀಣ್ಯ, ಬೆಂಗಳೂರು – 560058.
ದೂರವಾಣಿ : 080 28397256; **ಫ್ಯಾಕ್ಸ್ :** 080 28396727;
ವೆಬ್‌ಸೈಟ್ : www.kirloskarelectric.com
ಇ–ಮೇಲ್ : investors@kirloskarelectric.com
CIN : L31100KA1946PLC000415

Kirloskar

ಅಂಚೆ ಮತಪತ್ರದ ಸೂಚನೆ ಮತ್ತು ಇ-ಮತದಾನದ ಬಗ್ಗೆ ಮಾಹಿತಿ

ಸೆಕ್ಷನ್ 108, 110 ಕಂಪನಿಗಳ ಕಾಯಿದೆ, 2013 ("ದಿ ಆಕ್ಟ್"), ನಿಯಮ 20 ಮತ್ತು ನಿಯಮ 22 ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ("ನಿಯಮಗಳು") ಮತ್ತು ಇತರ ಅನ್ವಯವಾಗುವ ನಿಬಂಧನೆಗಳಿಗೆ ಅನುಸಾರವಾಗಿ ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ, ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ಹೊರಡಿಸಿದ ಸಾಮಾನ್ಯ ಸಭೆಗಳ ಮೇಲಿನ ಸೆಕ್ರೆಟರಿಯಲ್ ಸ್ಟ್ಯಾಂಡರ್ಡ್ ("SS-2") ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ('MCA') ನಿಗದಿಪಡಿಸಿದ ಅಗತ್ಯತೆಗಳಿಗೆ ಅನುಗುಣವಾಗಿ, ಇ–ಮತದಾನದ ಮೂಲಕ ಸಾಮಾನ್ಯ ಸಭೆಗಳನ್ನು ಅಥವಾ ಅಂಚೆ ಮತದಾನ ಪ್ರಕ್ರಿಯೆಯನ್ನು ನಡೆಸುವ ಕುರಿತು, ದಿನಾಂಕ ಸೆಪ್ಟೆಂಬರ್ 22, 2025 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 03/2025 ಅನ್ನು ಇತರೆ ಸಂಬಂಧಿತ ಸುತ್ತೋಲೆಗಳೊಂದಿಗೆ ಓದಿಕೊಂಡು ("MCA ಸುತ್ತೋಲೆಗಳು") ಮತ್ತು ಅದರ ಅನುಸಾರವಾಗಿ ನಿಯಮ 44 ರಲ್ಲಿ ಹೊರಡಿಸಲಾದ ಸೆಕ್ಯುರಿಟೀಸ್ ಅಂಡ್ ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾದ (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015, ("SEBI ಪಟ್ಟಿಯ ನಿಯಮಗಳು 2015") (ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಅದರ ಮರು–ಅನುಷ್ಠಾನವನ್ನು ಒಳಗೊಂಡಂತೆ) ನಿಗದಿಪಡಿಸಿದ ನಿರ್ಣಯಗಳು ಅಂಚೆ ಮತಪತ್ರದ ಸೂಚನೆಯನ್ನು ಕಂಪನಿಯ ಸದಸ್ಯರು ವಿದ್ಯುನ್ಮಾನ ವಿಧಾನದ ಮೂಲಕ ಮಾತ್ರ ಮತ ಚಲಾಯಿಸುವ ಮೂಲಕ ಅಂಗೀಕರಿಸಲು ಪ್ರಸ್ತಾಪಿಸಲಾಗಿದೆ ('ರಿಮೋಟ್ ಇ–ವೋಟಿಂಗ್').

ಮೇಲೆ ತಿಳಿಸಿದ MCA ಸುತ್ತೋಲೆಯ ಅನುಸರಣೆಯಲ್ಲಿ, ಈ ಸೂಚನೆಯನ್ನು ಕೇವಲ ವಿದ್ಯುನ್ಮಾನ ವಿಧಾನದ ಮೂಲಕ ಕಳುಹಿಸಲಾಗುತ್ತಿದೆ, ಯಾರ ಹೆಸರುಗಳು ಸದಸ್ಯರ ನೋಂದಣಿ ಪುಸ್ತಕದಲ್ಲಿ / ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ದಾಖಲಾಗಿವೆಯೋ ಮತ್ತು ಕಂಪನಿಯೊಂದಿಗೆ ಕಟ್–ಆಫ್ ದಿನಾಂಕದಂದು, ಅಂದರೆ **ಶುಕ್ರವಾರ, ಫೆಬ್ರವರಿ 27, 2026** ರಂದು ವ್ಯವಹಾರದ ಸಮಯ ಮುಗಿಯುವ ಹೊತ್ತಿಗೆ ತಮ್ಮ ಇಮೇಲ್ ಐಡಿಗಳನ್ನು ನೋಂದಾಯಿಸಿರುತ್ತಾರೋ ಅಂತಹ ಸದಸ್ಯರಿಗೆ ಮಾತ್ರ ಕಳುಹಿಸಲಾಗುತ್ತಿದೆ. ಸದಸ್ಯರ ಮತದಾನದ ಹಕ್ಕುಗಳು ಕಟ್–ಆಫ್ ದಿನಾಂಕದಂದು ಕಂಪನಿಯ ಪಾವತಿಯಾದ ಇಕ್ವಿಟಿ ಷೇರು ಬಂಡವಾಳದಲ್ಲಿ ಅವರ ಷೇರು ಹಿಡುವಳಿಯ ಪ್ರಮಾಣದಲ್ಲಿ ಇರುತ್ತವೆ. ತಮ್ಮ ಇ–ಮೇಲ್ ಐಡಿಗಳನ್ನು ನೋಂದಾಯಿಸದ ಸದಸ್ಯರು, ದಯವಿಟ್ಟು ಸೂಚನೆಯ ಟಿಪ್ಪಣಿ ಸಂಖ್ಯೆ 14 ರ ಅಡಿಯಲ್ಲಿ ನೀಡಿರುವ ಸೂಚನೆಗಳನ್ನು ಅನುಸರಿಸಬೇಕು. ಕಟ್–ಆಫ್ ದಿನಾಂಕದಂದು ಯಾರ ಹೆಸರುಗಳು ಸದಸ್ಯರ ನೋಂದಣಿ ಪುಸ್ತಕದಲ್ಲಿ / ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಕಾಣಿಸುತ್ತವೆಯೋ, ಅಂತಹ ಸದಸ್ಯರು ಸೂಚನೆಯಲ್ಲಿ ನಿಗದಿಪಡಿಸಿದ ನಿರ್ಣಯ(ಗಳ) ಮೇಲೆ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ಕಟ್–ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿ ಈ ಸೂಚನೆಯನ್ನು ಕೇವಲ ಮಾಹಿತಿಯ ಉದ್ದೇಶಗಳಿಗಾಗಿ ಮಾತ್ರ ಪರಿಗಣಿಸಬೇಕು.

ಅಂಚೆ ಮತಪತ್ರದ ಸೂಚನೆಯನ್ನು ಕಂಪನಿಯ ವೆಬ್‌ಸೈಟ್ www.kirloskarelectric.com ನಲ್ಲಿಯೂ ಸಹ ಲಭ್ಯವಾಗುವಂತೆ ಮಾಡಲಾಗಿದೆ. ಈ ಮಾಹಿತಿಯು ಸ್ಟಾಕ್ ಎಕ್ಸ್ಚೇಂಜ್‌ಗಳಾದ BSE ಲಿಮಿಟೆಡ್, www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಆಫ್ ಇಂಡಿಯಾ ಲಿಮಿಟೆಡ್, www.nseindia.com ಮತ್ತು CDSL ವೆಬ್‌ಸೈಟ್ www.evotingindia.com ನಲ್ಲಿ ಸಹ ಲಭ್ಯವಿದೆ.

ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 108 ರ ಪ್ರಕಾರ, MCA ಸುತ್ತೋಲೆಗಳೊಂದಿಗೆ, ಕಂಪನಿಯು ತನ್ನ ಎಲ್ಲಾ ಸದಸ್ಯರಿಗೆ ರಿಮೋಟ್ ಇ–ವೋಟಿಂಗ್ ಸೌಲಭ್ಯವನ್ನು ಒದಗಿಸಿದೆ ಹಾಗೂ ಸೆಂಟ್ರಲ್ ಡಿಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್ (CDSL) ಒದಗಿಸಿದ ರಿಮೋಟ್ ಇ–ವೋಟಿಂಗ್ ಸೇವೆಗಳ ಮೂಲಕ ಸದಸ್ಯರು ತಮ್ಮ ಮತಗಳನ್ನು ವಿದ್ಯುನ್ಮಾನವಾಗಿ ಚಲಾಯಿಸಬಹುದು. ಈ ಉದ್ದೇಶಕ್ಕಾಗಿ ಕಟ್–ಆಫ್ ದಿನಾಂಕವು **ಶುಕ್ರವಾರ, ಫೆಬ್ರವರಿ 27, 2026** ಆಗಿದೆ ಮತ್ತು ಸದಸ್ಯರ ರಿಜಿಸ್ಟರ್‌ನಲ್ಲಿ ಅಥವಾ ಕಟ್–ಆಫ್ ದಿನಾಂಕದಂದು ಡಿಪಾಸಿಟರಿಗಳಲ್ಲಿ ನಿರ್ವಹಿಸುವ ಲಾಭದಾಯಕ ಮಾಲೀಕರ ರಿಜಿಸ್ಟರ್‌ನಲ್ಲಿ ಹೆಸರು ನೋಂದಾಯಿಸಿರುವ ಸದಸ್ಯರು ಮಾತ್ರ ಇ–ಮತದಾನ ಸೇವೆಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ಕಟ್–ಆಫ್ ದಿನಾಂಕದ ನಂತರ ಸದಸ್ಯರಾದವರು ಈ ಸೂಚನೆಯನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಎಂದು ಪರಿಗಣಿಸಬೇಕು. ಇ–ಮತದಾನದ ಅವಧಿಯು **ಭಾನುವಾರ, ಮಾರ್ಚ್ 08, 2026 ರಂದು ಬೆಳಿಗ್ಗೆ 9:00 ಗಂಟೆಗೆ** (IST) **ಪ್ರಾರಂಭವಾಗುತ್ತದೆ ಮತ್ತು ಸೋಮವಾರ, ಏಪ್ರಿಲ್ 06, 2026 ರಂದು ಸಂಜೆ 5:00 ಗಂಟೆಗೆ** (IST) ಗೆ ಕೊನೆಗೊಳ್ಳುತ್ತದೆ. ಆನಂತರ CDSL ಇ–ವೋಟಿಂಗ್ ಮಾಡ್ಯೂಲ್ ಅನ್ನು ಮತ ಚಲಾಯಿಸಲು ನಿಷ್ಕ್ರಿಯಗೊಳಿಸುತ್ತದೆ.

ಡಿಮೆಟಿರಿಯಲೈಸ್ಡ್ ಮತ್ತು ಫಿಸಿಕಲ್ ರೀತಿಗಳಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಹಾಗೂ ತಮ್ಮ ಇ–ಮೇಲ್ ಐಡಿಯನ್ನು ನೋಂದಾಯಿಸದ ಸದಸ್ಯರಿಗೆ ರಿಮೋಟ್ ಇ–ವೋಟಿಂಗ್ ವಿಧಾನವನ್ನು ಪೋಸ್ಟಲ್ ಬ್ಯಾಲೆಟ್ ಸೂಚನೆಯಲ್ಲಿ ಒದಗಿಸಲಾಗಿದೆ.

ಶ್ರೀ ಚಂದ್ರ ಶೇಖರ್ ಕಂಡುಕೂರಿ, ಪ್ರಾಕ್ಟಿಸಿಂಗ್ ಕಂಪನಿ ಕಾರ್ಯದರ್ಶಿ (ACS No. 14441 / PCS No. 24363), ಬೆಂಗಳೂರು, ಇವರನ್ನು ಇ–ಮತದಾನ ಪ್ರಕ್ರಿಯೆಯನ್ನು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು ಪರಿಶೀಲಕರಾಗಿ ನೇಮಿಸಲಾಗಿದೆ. ಪೋಸ್ಟಲ್ ಬ್ಯಾಲೆಟ್ ಮೂಲಕ ನಡೆಸಿದ ಇ–ವೋಟಿಂಗ್ ಫಲಿತಾಂಶವನ್ನು ಪರಿಶೀಲಕರ ವರದಿಯೊಂದಿಗೆ ಇ–ಮತದಾನ ಮುಗಿದ ಎರಡು ಕಾರ್ಯಾಚರಣಾ ದಿನಗಳಲ್ಲಿ ಪ್ರಕಟಿಸಲಾಗುವುದು. ಇದನ್ನು ಕಂಪನಿಯ ವೆಬ್‌ಸೈಟ್‌ನಲ್ಲಿ www.kirloskarelectric.com ನಲ್ಲಿ ಪ್ರದರ್ಶಿಸಲಾಗುತ್ತದೆ ಹಾಗೂ ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳು ಅಂದರೆ, BSE ಲಿಮಿಟೆಡ್‌ನ ವೆಬ್‌ಸೈಟ್ www.bseindia.com ನಲ್ಲಿ, ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್ www.nseindia.com ನಲ್ಲಿ, ಮತ್ತು CDSL ನ ವೆಬ್‌ಸೈಟ್ www.evotingindia.com ನಲ್ಲಿ ಪ್ರಕಟಿಸಲಾಗುವುದು.

ಲಾಗಿನ್‌ನಲ್ಲಿ ಯಾವುದೇ ತಾಂತ್ರಿಕ ಸಮಸ್ಯೆಯನ್ನು ಎದುರಿಸುತ್ತಿರುವ ಸದಸ್ಯರು helpdesk.evoting@cdslindia.com ಗೆ ವಿನಂತಿಯನ್ನು ಕಳುಹಿಸುವ ಮೂಲಕ CDSL ಸಹಾಯವಾಣಿಯನ್ನು ಸಂಪರ್ಕಿಸಬಹುದು ಮತ್ತು ಒಂದು ಪ್ರತಿಯನ್ನು investors@kirloskarelectric.com ಗೆ ಕಳುಹಿಸಬಹುದು.

ಷೇರುಗಳ ಭೌತಿಕ ವರ್ಗಾವಣೆಗಾಗಿ ಮರು–ಸಲ್ಲಿಸುವಿಕೆ :

ಜನವರಿ 30, 2026 ರ ಸೆಬಿ (SEBI) ಸುತ್ತೋಲೆ ಸಂಖ್ಯೆ HO/38/13/11(2)2026-MIRSD-POD/I/3750/2026 ರ ಅನ್ವಯ, ಏಪ್ರಿಲ್ 01, 2019 ಕ್ಕಿಂತ ಮೊದಲು ಮಾರಾಟವಾದ/ಖರೀದಿಸಲಾದ ಭೌತಿಕ (Physical) ಷೇರುಗಳ ವರ್ಗಾವಣೆ ಮತ್ತು ಡಿಮ್ಯಾಟಿರಿಯಲೈಸೇಶನ್ ಅನ್ನು ಸುಗಮಗೊಳಿಸಲು ಫೆಬ್ರವರಿ 5, 2026 ರಿಂದ ಫೆಬ್ರವರಿ 4, 2027 ರವರೆಗೆ ಒಂದು ವರ್ಷದ ಅವಧಿಗೆ 'ವಿಶೇಷ ಅವಕಾಶ' (Special Window) ತೆರೆಯಲಾಗಿದೆ ಎಂದು ಷೇರುದಾರರಿಗೆ ತಿಳಿಸಲಾಗಿದೆ. ದಾಖಲೆಗಳು /ಪ್ರಕ್ರಿಯೆಯಲ್ಲಿನ ಕೊರತೆಯಿಂದಾಗಿ ಅಥವಾ ಇತರ ಕಾರಣಗಳಿಂದಾಗಿ ಈ ಹಿಂದೆ ಸಲ್ಲಿಸಿ ತಿರಸ್ಕರಿಸಲ್ಪಟ್ಟ/ಹಿಂತಿರುಗಿಸಲಾದ/ ಗಮನಿಸದ ವರ್ಗಾವಣೆ ವಿನಂತಿಗಳಿಗೂ ಈ ವಿಶೇಷ ಅವಕಾಶದಲ್ಲಿ ಲಭ್ಯವಿರುತ್ತದೆ. ವರ್ಗಾವಣೆ ಪತ್ರಗಳು (Transfer Deeds) ಮತ್ತು ಸಂಬಂಧಿತ ಪೂರಕ ದಾಖಲೆಗಳೊಂದಿಗೆ ಮೂಲ ಪ್ರಮಾಣಪತ್ರಗಳನ್ನು (Original Certificates) ಒಳಗೊಂಡಿರುವ ವಿನಂತಿಗಳನ್ನು ಮಾತ್ರ ಈ ವಿಶೇಷ ಅವಕಾಶದ ಅಡಿಯಲ್ಲಿ ಪರಿಗಣಿಸಲಾಗುತ್ತದೆ. ಹೀಗೆ ವರ್ಗಾವಣೆಗೊಂಡ ಸೆಕ್ಯೂರಿಟಿಗಳನ್ನು ವರ್ಗಾವಣೆದಾರರ ಖಾತೆಗೆ ಕಡ್ಡಾಯವಾಗಿ ಡಿಮ್ಯಾಟ್ ರೂಪದಲ್ಲಿ ಮಾತ್ರ ಜಮೆ ಮಾಡಲಾಗುವುದು ಮತ್ತು ವರ್ಗಾವಣೆ ನೋಂದಣಿಯಾದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಅವು 'ಲಾಕ್–ಇನ್' (Lock-in) ಅಡಿಯಲ್ಲಿ ಇರುತ್ತವೆ. ಈ ಲಾಕ್–ಇನ್ ಅವಧಿಯಲ್ಲಿ ಅಂತಹ ಸೆಕ್ಯೂರಿಟಿಗಳನ್ನು ವರ್ಗಾಯಿಸಲು/ಲೀನ್ ಮಾರ್ಕ್ ಮಾಡಲು/ಅಡಮಾನ ಇಡಲು ಅವಕಾಶವಿರುವುದಿಲ್ಲ. ಅರ್ಹ ಷೇರುದಾರರು ತಮ್ಮ ವರ್ಗಾವಣೆ ವಿನಂತಿಯನ್ನು ಅಗತ್ಯ ದಾಖಲೆಗಳೊಂದಿಗೆ ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ (RTA) ಅವರಿಗೆ ಈ ವಿಳಾಸಕ್ಕೆ ಸಲ್ಲಿಸಬಹುದು – ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್, ನಂ. 30, ರಮಣ ರೆಸಿಡೆನ್ಸಿ, 4ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003 (ಘಟಕ : ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್), ಇ–ಮೇಲ್ ವಿಳಾಸ: irg@integratedindia.in ಗೆ ಕಳುಹಿಸಬಹುದು.

ನಿರ್ದೇಶಕರ ಮಂಡಳಿಯ ಆದೇಶದಂತೆ,
ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್,
ಸಹಿ/–
ಮಹಾಬಲೇಶ್ವರ ಭಟ್,
ವೈಸ್ ಪ್ರೆಸಿಡೆಂಟ್ – ಕಾರ್ಪೊರೇಟ್ ವ್ಯವಹಾರಗಳು ಮತ್ತು ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : ಮಾರ್ಚ್ 6, 2026

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ ವಿಭಾಗ, ಚಿಕ್ಕಬಳ್ಳಾಪುರ

ಟೆಂಡರ್‌ಗಳಿಗಾಗಿ ಆಹ್ವಾನ (ಐ.ಎಫ್.ಟಿ) ಸಂಖ್ಯೆ: 21/2025–26 ದಿನಾಂಕ: 04.03.2026

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರಸ್ತೆ/ಸೇತುವೆ/ಕಟ್ಟಡ ನಿರ್ಮಾಣ/ಸುಧಾರಣೆ/ ನಿರ್ವಹಣೆ ಕಾಮಗಾರಿಗಳಿಗೆ ಮತ್ತು ಸೇವೆಗಳಿಗೆ ಕೆ.ಡಬ್ಲ್ಯು–1&4ರಂತೆ ಕಾ.ಇಂ, ಲೋ.ಇ ಚಿಕ್ಕಬಳ್ಳಾಪುರರವರು ರಾಜ್ಯಪಾಲರ ಪರವಾಗಿ ಏಕ/ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು **https://kppp.karnataka.gov.in ದಿನಾಂಕ: 04.03.2026 ರಿಂದ 11.03.2026 & ದಿನಾಂಕ: 05.03.2026 ರಿಂದ 12.03.2026 ರವರೆಗೆ ಪಡೆದು ಸಂಜೆ 4.00 ಗಂಟೆಗಳ ಒಳಗಾಗಿ ಸಲ್ಲಿಸಬಹುದಾಗಿರುತ್ತದೆ**. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು. ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾ.ಇಂ, ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ.
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:476/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ಎನ್ ಆರ್ ಕಾಲೋನಿ, ಬೆಂಗಳೂರು–560019.
ಇ–ಮೇಲ್:cdpobangalorestateproject@gmail.com ದೂ:080–26601917

ಸಂ:ಶಿಅಯೋ/ಬೆಂ.ರಾಜ್ಯ/ಐಸಿಡಿಎಸ್/ಅಂ.ಕಾ.ಸ.ನೇ/2025–26 ದಿನಾಂಕ:27.02.22026

ಪ್ರಕಟಣೆ

ಶಿಶು ಅಭಿವೃದ್ಧಿ ಬೆಂಗಳೂರು ರಾಜ್ಯ ಯೋಜನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿರುವ 19 ಅಂಗನವಾಡಿ ಕಾರ್ಯಕರ್ತೆಯರು ಮತ್ತು 56 ಸಹಾಯಕಿಯರ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸುವ ದಿನಾಂಕ: **27.02.2026** ರಿಂದ ಗೌರವ ಹುದ್ದೆಗಳಿಗೆ ಭೌತಿಕವಾಗಿ ಅರ್ಜಿಗಳನ್ನು ಅರ್ಹ ಮಹಿಳಾ ಅಭ್ಯರ್ಥಿಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **30.03.2026** ರವರೆಗೆ ಸಾಯಂಕಾಲ **5:30 ಘಂಟೆಗೆ** ಕೊನೆಯ ದಿನಾಂಕವಾಗಿರುತ್ತದೆ. ಅರ್ಜಿಗಳನ್ನು ಭೌತಿಕವಾಗಿ ಅರ್ಜಿಗಳನ್ನು ಆಹ್ವಾನಿಸಿದ್ದು ಅರ್ಹ ಅಭ್ಯರ್ಥಿಗಳು ಕಛೇರಿಯ ಅಧಿಕೃತ ವಿಳಾಸ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಬೆಂಗಳೂರು ರಾಜ್ಯ ಯೋಜನೆ, ಬಿ.ಬಿ.ಎಂ.ಪಿ ಕಟ್ಟಡ, ಮೊದಲನೇ ಮಹಡಿ ಎನ್.ಆರ್. ಕಾಲೋನಿ ಬೆಂಗಳೂರು–560004. ಇಲ್ಲಿ ಭೌತಿಕವಾಗಿ ಅರ್ಹರು ಕಛೇರಿ ವೇಳೆಯಲ್ಲಿ ಅರ್ಜಿಗಳನ್ನು ಸಲ್ಲಿಸಬೇಕಾಗಿರುತ್ತದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: **080–26601917** ಮತ್ತು ಕಛೇರಿಯ ವಿಳಸವನ್ನು ಸಂಪರ್ಕಿಸಲು ಕೋರಿದೆ.

ಸಹಿ/–
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬೆಂಗಳೂರು ರಾಜ್ಯ ಯೋಜನೆ

ವಾಸಾಸಂಇ/ವಾಪ್ರ/6044/ಶಿರಡಿ ಸಾಯಿ/2025–26

ನಗರದಲ್ಲಿ ಇಂದು

ಸೇಫ್–ಎ–ಥಾನ್: ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ಶಾಲಿನಿ ರಜನೀಶ್, ಸುನೀಲ್ ಜೋಶಿ, ಆಯೋಜನೆ: ಬೆಂಗಳೂರು ಸಂಚಾರ ಪೊಲೀಸ್, ನಮ್ಮ ರಸ್ತೆ ಸುರಕ್ಷತೆ, ಸ್ಥಳ: ಕಂಠೀರವ ಕ್ರೀಡಾಂಗಣ, ಬೆಳಿಗ್ಗೆ 6

ಸಂತ ಜ್ಞಾನೇಶ್ವರ ಮಹಾರಾಜರ ಜನ್ಮೋತ್ಸವ, ಸಂತ ತುಕಾರಾಮ ಮಹಾರಾಜರ ಸದೇಹ ವೈಕುಂಠ ಗಮನದ ಮಹೋತ್ಸವ ಜ್ಞಾನೇಶ್ವರಿ ಪಾರಾಯಣ, ಆಯೋಜನೆ ಮತ್ತು ಸ್ಥಳ: ವಿಠೋಬಾ (ಪಾಂಡುರಂಗ) ದೇವಸ್ಥಾನ, ಬಸೆಟ್ಟಿಪೇಟೆ, ಬೆಳಿಗ್ಗೆ 6.30ರಿಂದ

ಸೈಬರ್ ಅಪರಾಧ ತನಿಖಾ ಶೃಂಗಸಭೆ: ಉದ್ಘಾಟನೆ: ಜಿ. ಪರಮೇಶ್ವರ, ಅತಿಥಿಗಳು: ಸುನೀಲ್ ಕುಮಾರ್ ಧಾರೇಶ್ವರ, ವಿನಾಯಕ ಗೋಡ್ಸೆ, ಆಯೋಜನೆ: ಸೈಬರ್ ಅಪರಾಧ ತನಿಖಾ ತರಬೇತಿ ಮತ್ತು ಸಂಶೋಧನಾ ಕೇಂದ್ರ, ಸ್ಥಳ: ಹೋಟೆಲ್ ಜೆಡಬ್ಲ್ಯು ಮ್ಯಾರಿಯೇಟ್, ವಿಠಲ್ ಮಲ್ಯ ರಸ್ತೆ, ಬೆಳಿಗ್ಗೆ 9.30

'ಶ್ರೀರಾಮ–ಜಾಬಾಲಿ' ಸಂವಾದ ತಾಳಮದ್ದಳೆ: ಹಿಮ್ಮೇಳದ ಭಾಗವತರು: ಪ್ರಸನ್ನಕುಮಾರ ಹೆಗಡೆ, ಮದ್ದಳೆ: ಗುರುಮೂರ್ತಿ ವೈದ್ಯ, ಮುಮ್ಮೇಳ: ಶ್ರೀರಾಮ: ನಾರಾಯಣ ಯಾಜಿ ಸಾಲೆಬೈಲು, ಜಾಬಾಲಿ: ಕೆ.ಇ. ರಾಧಾಕೃಷ್ಣ, ವಸಿಷ್ಠ: ರವಿ ಮಡೋಡಿ, ಆಯೋಜನೆ: ಸಪ್ತಕ, ಸ್ಥಳ: ಸುಚಿತ್ರಾ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಎರಡನೇ ಹಂತ, ಬನಶಂಕರಿ, ಬೆಳಿಗ್ಗೆ 10

ಪುರಂದರದಾಸರ ಮತ್ತು ತ್ಯಾಗರಾಜರ ಆರಾಧನಾ ಮಹೋತ್ಸವ: ಭರತನಾಟ್ಯ ಪ್ರದರ್ಶನ: ಮಾಧುರಿ ಅಚಲ್, 'ಶ್ರೀರಾಮ ಕಥಾ–ಕಥಾಕೃತಿ': ರಂಜಿನಿ ಕೀರ್ತಿ, ಪಿಟೀಲು: ವಿಶ್ವಜಿತ್ ಮತ್ತೂರು, ಮೃದಂಗ: ಸಾಯಿವಂಶಿ, ಸಂಗೀತ ಕಛೇರಿ: ಗಾಯನ: ಸರಸ್ವತಿ ಎಸ್., ಪಿಟೀಲು: ಸುಮತಿ ಬಾಲಕೃಷ್ಣ ಅವರ ಶಿಷ್ಯರು, 'ತಾಳವಾದ್ಯ': ಶ್ರುತಿ ಸಿಂಧೂರ ಅಕಾಡೆಮಿ ಆಫ್ ಮ್ಯೂಸಿಕ್, ಕರ್ನಾಟಕ ಸಂಗೀತ ಜುಗಲ್‌ಬಂದಿ: ಮಾಧುರಿ ಕೌಶಿಕ್, ಕಾರ್ತಿಕೇಯ ಆರ್., ಕೌಶಿಕ್, ಶ್ರೀಧರ್, ಸುಮಿತ್ ನಾಯಕ್, ಗೌರವ್ ಗಡಿಯಾರ್, ಹಿರಣ್ಮಯಿ ಎಸ್., ಆಯೋಜನೆ: ಗಿರಿನಗರ ಸಂಗೀತ ಸಭಾ, ಸ್ಥಳ: ಅಕ್ಷರಂ ಸಭಾಂಗಣ, ರಾಘವೇಂದ್ರಸ್ವಾಮಿ ಮಠದ ಪಕ್ಕ, ಎಂಟನೇ ಕ್ರಾಸ್, ಎರಡನೇ ಹಂತ, ಗಿರಿನಗರ, ಬೆಳಿಗ್ಗೆ 10ರಿಂದ

ವಿಶ್ವ ಮಹಿಳಾ ದಿನಾಚರಣೆ, ಜ್ಯುವೆಲ್ ಆಫ್ ಕರ್ನಾಟಕ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಉದ್ಘಾಟನೆ: ರಾಮಲಿಂಗಾರೆಡ್ಡಿ, ಎಚ್.ಸಿ. ಮಹದೇವಪ್ಪ, ದಿನೇಶ್ ಗುಂಡೂರಾವ್, ಶಿವರಾಜ ತಂಗಡಗಿ, ಸೌಮ್ಯಾರೆಡ್ಡಿ, ಸಂಪತ್ ರಾಜ್, ಆಯೋಜನೆ: ಇಂಡಿಯನ್ ಮೀಡಿಯಾ ಜರ್ನಲಿಸ್ಟ್ ಯೂನಿಯನ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಅರಮನೆ ರಸ್ತೆ, ಬೆಳಿಗ್ಗೆ 11

'ಅಂತರರಾಷ್ಟ್ರೀಯ ತ್ಯಾಜ್ಯ ಆಯುವವರ ದಿನಾಚರಣೆ': ಅತಿಥಿಗಳು: ಎಚ್.ಎನ್. ಗೋಪಾಲಕೃಷ್ಣ, ರುತ್ ಮನೋರಮ, ಎಸ್.ಬಿ. ರವಿಕುಮಾರ್, ಮೀನಾ ಪಾಟೀಲ್, ಲೀಲಾವತಿ, ಎಲ್. ಐಸಾಕ್ ಅಮೃತ್ ರಾಜ್, ಆರ್. ಮೋಹನರಾಜ್, ಸೌಮ್ಯಾ ರೆಡ್ಡಿ, ಆಯೋಜನೆ: ತ್ಯಾಜ್ಯ ಶ್ರಮಿಕ ಸಂಘ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 11ರಿಂದ

ಭ.ರಾ. ವಿಜಯಕುಮಾರ್ ಅವರ 'ಕೇಳು ಗೆಳೆಯ' ಪುಸ್ತಕ ಬಿಡುಗಡೆ: ರಾಮಕೃಷ್ಣ ಪೆಜತ್ತಾಯ, ಅತಿಥಿ: ಬಿ.ವಿ. ರಾಜಾರಾಂ, ಅಧ್ಯಕ್ಷತೆ: ಎಂ.ಎಸ್. ನರಸಿಂಹಮೂರ್ತಿ, ಪುಸ್ತಕ ಪರಿಚಯ: ಶಾಂತಾ ನಾಗಮಂಗಲ, ಆಯೋಜನೆ: ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಸ್ಥಳ: ಶೇಷಾದ್ರಿಪುರಂ ಕಾಲೇಜು, ಎರಡನೇ ಮಹಡಿ, ಶೇಷಾದ್ರಿಪುರ, ಸಂಜೆ 4.30

ಮಹೇಂದ್ರಾ ಪರ್ಕ್ಯುಶನ್ ಉತ್ಸವ: ಮಹಾರಾಷ್ಟ್ರ ಭಕ್ತಿ ಸಂಗೀತ ಯಾತ್ರಾ: ಗಾಯನ: ಮಹೇಶ್ ಕಾಳೆ, ಸ್ಥಳ: ದಿ ಪ್ರೆಸ್ಟೀಜ್ ಸೆಂಟರ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್, ಸಂಜೆ 5

ಮಹೇಶ್ ಕಾಳೆ

ವಿಜಯೋತ್ಸವ

ರಾಷ್ಟ್ರೀಯ ಸಮ್ಮೇಳನ: ಉದ್ಘಾಟನೆ: ವಿನಯ್ ಗುರೂಜಿ, ಅಧ್ಯಕ್ಷತೆ: ಎಂ.ಆರ್. ಜಯೇಶ, ಅತಿಥಿಗಳು: ಎಂ. ಕೃಷ್ಣಪ್ಪ, ಟಿ.ವಿ.ಎನ್. ಮೂರ್ತಿ, ಚಿತ್ರಾಕುಮಾರ್, ಆಯೋಜನೆ: ಸಿನಿಯರ್ ಚೇಂಬರ್ ಇಂಟರ್ ನ್ಯಾಷನಲ್, ಸ್ಥಳ: ಬಂಟ್ಸ್ ಸಂಘ, ಅತ್ತಿಗುಪ್ಪೆ, ಸಂಜೆ 5

ಡಾ. ಉಪ್ಪಂಗಳ ರಾಮಭಟ್ಟ ದತ್ತಿ 'ಗಂಗಾಧರಂ ಶಾಸನ' ಉಪನ್ಯಾಸ: ಸಿ.ಕೆ. ಜಗದೀಶ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ಏಕತ್ವಂ ಹೋಳಿ ಮ್ಯೂಸಿಕ್ ಫೆಸ್ಟ್: 'ಮೈಸೂರು ವಾಸುದೇವಾಚಾರ್ ಶ್ರೇಷ್ಠತಾ' ಪ್ರಶಸ್ತಿ ಸ್ವೀಕರಿಸುವವರು: ಅಣ್ಣವರಪು ರಾಮಸ್ವಾಮಿ, 'ಗಂಗೂಬಾಯಿ ಹಾನಗಲ್ ಶ್ರೇಷ್ಠತಾ' ಪ್ರಶಸ್ತಿ ಸ್ವೀಕರಿಸುವವರು: ಪರಮೇಶ್ವರ ಹೆಗಡೆ, ಅತಿಥಿಗಳು: ಭಾಸ್ಕರ್ ರಾವ್, ಆರ್.ಕೆ. ಪದ್ಮನಾಭ, ಆಯೋಜನೆ: ಏಕತ್ವಂ, ಸ್ಥಳ: ಬೆಂಗಳೂರು ಗಾಯನ ಸಮಾಜ, ಸಂಜೆ 5ರಿಂದ

ಸಂಗೀತ ಕಛೇರಿ: ಗಾಯನ ಸೂರ್ಯ ಗಾಯತ್ರಿ, ಸ್ಥಳ: ಗುಡ್ ಶೆಫರ್ಡ್ ಸಭಾಂಗಣ, ಮ್ಯೂಸಿಯಂ ರಸ್ತೆ, ಸಂಜೆ 5.30

'ಅಶ್ವಮೇಧ ಯಾಗ ಅಥವಾ ವೀರ ಬಬ್ರುವಾಹನ' ನಾಟಕ ಪ್ರದರ್ಶನ: ಆಯೋಜನೆ: ವೀರಾಂಜನೇಯ ಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ, ಸ್ಥಳ: ಮುತ್ಯಾಲಮ್ಮ ದೇವಾಲಯ ಮುಂಭಾಗ, ದೊಡ್ಡತೋಗೂರು ಗ್ರಾಮ ಪಂಚಾಯಿತಿ ಹತ್ತಿರ, ಸಂಜೆ 6

'ತಾಜ್ ಮಹಲಿನ ಟೆಂಡರ್' ನಾಟಕ ಪ್ರದರ್ಶನ: ನಿರ್ದೇಶನ: ದಾಕ್ಷಾಯಿಣಿ ಭಟ್ ಎ., ಆಯೋಜನೆ: ದೃಶ್ಯ , ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

‘ಸಂಚಾರಿ ಕಾವೇರಿ’: ಟ್ಯಾಂಕರ್ ಸಂಖ್ಯೆ ಹೆಚ್ಚಳ

ಬೇಸಿಗೆ ವೇಳೆ ಬೇಡಿಕೆ ಏರಿಕೆ • ನೀರು ಒದಗಿಸಲು ಜಲಮಂಡಳಿಯ ಕ್ರಮ • 160 ಟ್ಯಾಂಕರ್‌ಗಳಲ್ಲಿ ನೀರು ಪೂರೈಕೆ

• ಉಮೇಶಭಟ್ಟ ಪಿ.ಎಚ್.

ಬೆಂಗಳೂರು: ಬೇಸಿಗೆ ಬಿಸಿಲು ಏರುತ್ತಿರುವ ನಡುವೆಯೇ ಬೆಂಗಳೂರಿನಲ್ಲಿ ಕಾವೇರಿ ನೀರಿನ ಬೇಡಿಕೆಯೂ ಹೆಚ್ಚುತ್ತಿದ್ದು, ಜಲಮಂಡಳಿಯಿಂದಲೇ ಟ್ಯಾಂಕರ್‌ಗಳ ಸಂಖ್ಯೆಯನ್ನು 160ಕ್ಕೆ ಏರಿಕೆ ಮಾಡಲಾಗುತ್ತಿದೆ.

ನಗರದಲ್ಲಿ ಅಂತರ್ಜಲ ಪ್ರಮಾಣ ಕುಸಿದಿರುವ ಹಲವು ಬಡಾವಣೆಗಳು, ಕಾವೇರಿ ಸಂಪರ್ಕವಿಲ್ಲದ ಪ್ರದೇಶಗಳು, ಹೊಸದಾಗಿ ನಿರ್ಮಾಣಗೊಂಡ ಅಪಾರ್ಟ್‌ಮೆಂಟ್‌ಗಳ ನಿವಾಸಿಗಳು ಕಾವೇರಿ ನೀರು ಪಡೆಯಲು ಟ್ಯಾಂಕರ್ ಮೊರೆಹೋಗುತ್ತಿದ್ದಾರೆ.

ಇದಕ್ಕಾಗಿಯೇ ಜಲಮಂಡಳಿ ಹತ್ತು ತಿಂಗಳ ಹಿಂದೆಯೇ ಆರಂಭಿಸಿರುವ ಸಂಚಾರಿ ಕಾವೇರಿ ಟ್ಯಾಂಕರ್ ಸೇವೆಗೆ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಈ ಕಾರಣದಿಂದಲೇ ಈ ಸೇವೆಯನ್ನು ವ್ಯವಸ್ಥಿತವಾಗಿ ರೂಪಿಸಲಾಗುತ್ತಿದೆ.

ಬೇಡಿಕೆ ಏರಿಕೆ ಏಕೆ?: ನಗರದಲ್ಲಿ ಎರಡು ವರ್ಷದ ಹಿಂದೆಯೇ ಕಾವೇರಿ 5ನೇ ಹಂತದ ಯೋಜನೆಯನ್ನು ಜಾರಿಗೊಳಿಸಿ, ಹೆಚ್ಚುವರಿಯಾಗಿ 775 ಎಂಎಲ್‌ಡಿ ನೀರನ್ನು ನಗರಕ್ಕೆ ಪೂರೈಸಲಾಗುತ್ತಿದೆ. ಪೂರ್ವ ಭಾಗದ ಜತೆಗೆ ನಗರಕ್ಕೆ ಹೊಂದಿಕೊಂಡಂತೆ ಇರುವ 110 ಹಳ್ಳಿಗಳಿಗೆ ಕಾವೇರಿ ನೀರು ಒದಗಿಸುವ ಗುರಿ ಇಟ್ಟುಕೊಳ್ಳಲಾಗಿತ್ತು. ಆದರೂ ಈವರೆಗೂ ಶೇ 65ರಷ್ಟು ಕಾವೇರಿ ಸಂಪರ್ಕ ಈ ಭಾಗದಲ್ಲಿ ಪೂರ್ಣಗೊಂಡಿಲ್ಲ. ಇದರಿಂದ ಶೇ 50ರಷ್ಟು ಕಾವೇರಿ ನೀರನ್ನು ಜಲಮಂಡಳಿ ಬಳಸಲು ಆಗುತ್ತಿಲ್ಲ.

ಆದರೆ, ಬೇಸಿಗೆ ಬಂದರೆ ಸಹಜವಾಗಿಯೇ ನೀರಿನ ಬಳಕೆ ಪ್ರಮಾಣ ಏರಿಕೆಯಾಗಿ ಬೇಡಿಕೆಯೂ ಹೆಚ್ಚುತ್ತದೆ. ಜಲಮಂಡಳಿ ನೀರಿನ ಸಂಪರ್ಕ ಪಡೆಯದವರು ಕೊಳವೆಬಾವಿ ನೀರಿನ ಜತೆಗೆ ಕಾವೇರಿ ನೀರು ಪಡೆಯಲು ಆರಂಭಿಸುತ್ತಾರೆ. ಜಲಮಂಡಳಿಯೇ ಟ್ಯಾಂಕರ್ ಮೂಲಕ ನೀರು ಒದಗಿಸುವ ಯೋಜನೆ ಆರಂಭಿಸುವುದರಿಂದ ಅಪಾರ್ಟ್‌ಮೆಂಟ್‌ಗಳ ಜತೆಗೆ ಬಡಾವಣೆಗಳವರೂ ಇದನ್ನು ಬಳಸಿಕೊಳ್ಳುತ್ತಿದ್ದಾರೆ.

‘ನಮ್ಮ ಅಪಾರ್ಟ್‌ಮೆಂಟ್ ಕಾವೇರಿ ಸಂಪರ್ಕವಿದ್ದರೂ ನೀರಿನ ಲಭ್ಯತೆ ಪ್ರಮಾಣ ಕಡಿಮೆಯಾಗಿ ಅನಿವಾರ್ಯವಾಗಿ ಖಾಸಗಿ ಟ್ಯಾಂಕರ್ ಮೂಲಕ ನೀರು ಹಾಕಿಸಿಕೊಳ್ಳುತ್ತಿದ್ದೇವೆ.

ನೀರಿನ ಲಭ್ಯತೆಯಿದ್ದರೂ ಕೆಲವು ಬಡಾವಣೆಯಲ್ಲಿ ಕಾವೇರಿ ನೀರು ಪೂರೈಕೆ ಆಗುತ್ತಿಲ್ಲ. ಬೇಸಿಗೆಯಲ್ಲಿ ಟ್ಯಾಂಕರ್‌ಗೆ ಜನ ಮೊರೆಹೋಗುತ್ತಿದ್ದು. ಈ ಸೇವೆಯನ್ನು ಹೆಚ್ಚಿಸಲಿದ್ದೇವೆ

ಡಾ.ರಾಮಪ್ರಸಾತ್ ಮನೋಹರ್
ಅಧ್ಯಕ್ಷ, ಜಲಮಂಡಳಿ

6 ಸಾವಿರ ಲೀಟರ್ ನೀರಿಗೆ ₹1 ಸಾವಿರ ಪಾವತಿಸುತ್ತಿದ್ದೇವೆ. ಒಂದು ದಿನಕ್ಕೆ ಒಂದು ಟ್ಯಾಂಕರ್ ನೀರಾದರೂ ಬೇಕು. ಬೋರ್‌ವೆಲ್ ನೀರನ್ನು ತಂದು ಹಾಕುತ್ತಿದ್ದಾರೆ. ಸಂಚಾರಿ ಕಾವೇರಿ ಬಳಸಲು ಯೋಜಿಸುತ್ತಿದ್ದೇವೆ’ ಎಂದು ವಿಜಯ ನಗರದ ನಿವಾಸಿಯೊಬ್ಬರು ತಿಳಿಸಿದರು.

ಟ್ಯಾಂಕರ್ ಹೆಚ್ಚಳಕ್ಕೂ ಒತ್ತು: ಜಲಮಂಡಳಿಯು ಕಡ್ಡಾಯವಾಗಿ ಕಾವೇರಿ ನೀರು ಸಂಪರ್ಕ ಕಲ್ಪಿಸಲು ನಿರಂತರ ಪ್ರಯತ್ನ ನಡೆಸಿದರೂ ಗುರಿ ತಲುಪಲು ಆಗುತ್ತಿಲ್ಲ. ಹೊಸ ಸಂಪರ್ಕ ದರ, ನೀರಿನ ಬಿಲ್ ಭಯದಿಂದ ಹೊಸ ಸಂಪರ್ಕ ಪಡೆಯದೇ ಕೊಳವೆ ಬಾವಿ ನೀರಿಗೆ ಮೊರೆ ಹೋಗುತ್ತಿದ್ದಾರೆ. ಅಪಾರ್ಟ್‌ಮೆಂಟ್‌ಗಳು, ಬಡಾವಣೆಗಳನ್ನು ಗುರಿಯಾಗಿಸಿ ಅಭಿಯಾನ ನಡೆದಿದೆ.

ಹೊಸ ಸಂಪರ್ಕ ಹೆಚ್ಚಿಸುತ್ತಲೇ ಬೇಸಿಗೆ ವೇಳೆ ನೀರಿನ ಲಭ್ಯತೆ ನೋಡಿಕೊಳ್ಳುವಂತೆ ಮಾಡಲು ಸಂಚಾರಿ ಕಾವೇರಿ ಟ್ಯಾಂಕರ್ ಸೇವೆ ಲಭ್ಯವಿದ್ದು, ಇವುಗಳ ಸಂಖ್ಯೆಯನ್ನೇ ನಿಧಾನವಾಗಿ ಏರಿಸಲಾಗುತ್ತಿದೆ.

ಆರಂಭದಲ್ಲಿ 150 ಟ್ಯಾಂಕರ್‌ಗಳ ಸೇವೆಗೆ ನಿರ್ಧರಿಸಲಾಗಿತ್ತಾದರೂ ಬೇಡಿಕೆ ಅಷ್ಟಾಗಿ ಇಲ್ಲದ್ದರಿಂದ ಮಂಡಳಿಯ 50, ಖಾಸಗಿ 49 ಸೇರಿ 99 ಟ್ಯಾಂಕರ್‌ಗಳನ್ನು ಮಾತ್ರ ಬಳಸಲಾಗುತ್ತಿತ್ತು. ಈಗ ಕನಿಷ್ಠ 60 ಟ್ಯಾಂಕರ್‌ಗಳನ್ನಾದರೂ ಸದ್ಯ ಸೇರಿಸಲಾಗುತ್ತಿದೆ.

‘ಫೆಬ್ರುವರಿ ಮೂರನೇ ವಾರದರೆಗೂ ನಿತ್ಯ 100 ಟ್ಯಾಂಕರ್ ಟ್ರಿಪ್ ನೀರು ಸರಬರಾಜು ಬೇಡಿಕೆಯಿತ್ತು. ಕೊನೆಯ ವಾರದಲ್ಲಿ ಇದು 150 ಟ್ರಿಪ್‌ಗೆ ಏರಿಕೆಯಾಗಿತ್ತು. ಮಾರ್ಚ್ ಮೊದಲ ವಾರದಲ್ಲಿ 160 ಟ್ರಿಪ್ ನೀರು ಸರಬರಾಜು ಮಾಡುತ್ತಿದ್ದೇವೆ. ಇದು ಇನ್ನೂ ಹೆಚ್ಚುವ ನಿರೀಕ್ಷೆಯಿದ್ದು, ಬೇಡಿಕೆಗೆ ಅನುಗುಣವಾಗಿ ಸರಬರಾಜು ಮಾಡಲಾಗುತ್ತದೆ’ ಎಂದು ಸಂಚಾರಿ ಕಾವೇರಿ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಲಕ್ಷ್ಮಿ ಯಾದವ್ ತಿಳಿಸಿದರು.

‘ಹೆಚ್ಚುವರಿ ವಸೂಲಿ ಮಾಡಿದರೆ ಕ್ರಮ’

ಜಲಮಂಡಳಿಯು ಸಂಚಾರಿ ಕಾವೇರಿ ನೀರಿನ ವ್ಯವಸ್ಥೆಯನ್ನು ಪಾರದರ್ಶಕವಾಗಿ ರೂಪಿಸಿದೆ. ಆ್ಯಪ್ ಬಳಸಿಯೇ ಬುಕ್ ಮಾಡುವವರಿಗೆ ನಿಗದಿತ ಸಮಯದೊಳಗೆ ಕಾವೇರಿ ನೀರು ಸರಬರಾಜು ಮಾಡಲಾಗುತ್ತಿದೆ. ಪಾವತಿಯನ್ನೂ ಸಂಪೂರ್ಣ ಡಿಜಿಟಲೀಕರಣಗೊಳಿಸಿದೆ.

‘ಜಿಪಿಎಸ್ ಟ್ರ್ಯಾಕಿಂಗ್, ಒಟಿಪಿ ಆಧಾರಿತ ವಿತರಣೆ ಮತ್ತು ದೃಢೀಕೃತ ನಿಗದಿತ ದರದ ಮೂಲಕ ಟ್ಯಾಂಕರ್ ದಂಧೆಗೆ ಕಡಿವಾಣ ಹಾಕಲಾಗುತ್ತಿದೆ. ಜನ ಕೂಡ ನಿಗದಿತ ಮೊತ್ತವನ್ನೇ ಆನ್‌ಲೈನ್ ಮೂಲಕ ಪಾವತಿಸಿ ನೀರು ಪಡೆಯಬೇಕು. ಹೆಚ್ಚುವರಿ ಬೇಡಿಕೆಯಿಟ್ಟು ತಡಮಾಡುವ ಬಗ್ಗೆ ದೂರು ಬಂದರೆ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಜಲಮಂಡಳಿ ಅಧಿಕಾರಿಯೊಬ್ಬರು ತಿಳಿಸಿದರು.

9 ತಿಂಗಳ ಅವಧಿಯ ಅಂಕಿಅಂಶ

99 ಟ್ಯಾಂಕರ್ ಬಳಕೆ

60 ಹೆಚ್ಚುವರಿ ಬಳಕೆ

40,420 ಟ್ರಿಪ್ ಪ್ರಮಾಣ

₹4.18 ಕೋಟಿ ಆದಾಯ

ಕುಂಬಳಗೋಡಿನಲ್ಲಿ ಏರ್ಪಡಿಸಿದ್ದ ಹಸಿರು ಹಬ್ಬದಲ್ಲಿ ಶಾಲಾ ಬಾಲಕಿಯರು ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮ ಕುರಿತು ಜಾಗೃತಿ ಮೂಡಿಸಿದರು

ಮಾರುಕಟ್ಟೆಯಲ್ಲಿ ‘ಹಸಿರು ಹಬ್ಬ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಸಿರು ಹೆಜ್ಜೆ ಸ್ವಚ್ಛ ಉಸಿರು’ ಸಂಘಟನೆಯಿಂದ ಕುಂಬಳಗೋಡು ಮಾರುಕಟ್ಟೆಯಲ್ಲಿ ಹಸಿರು ಹಬ್ಬವನ್ನು ಆಚರಿಸಲಾಯಿತು.

ಕುಂಬಳಗೋಡು ಗ್ರಾಮ ಪಂಚಾಯಿತಿ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ಲಾಸ್ಟಿಕ್ ಚೀಲ ನಿಷೇಧಿಸುವ ಹಾಗೂ ಪರಿಸರ ಸ್ನೇಹಿ ಚೀಲ ಬಳಸುವ ಕುರಿತು ಮಾರುಕಟ್ಟೆಯ ವ್ಯಾಪಾರಿಗಳು ಮತ್ತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ರಸ್ತೆಯಲ್ಲಿ ತ್ಯಾಜ್ಯ ಬಿಸಾಡುವುದು, ಪ್ಲಾಸ್ಟಿಕ್‌ಗೆ ಬೆಂಕಿ ಹಾಕುವುದರಿಂದ ಆಗುವ ತೊಂದರೆಗಳ ಬಗ್ಗೆ ತಜ್ಞರು ಮಾಹಿತಿ ನೀಡಿ, ಮರುಬಳಕೆ ಮಾಡಬಹುದಾದ ಬಟ್ಟೆ ಚೀಲ ಬಳಸುವಂತೆ ಸಲಹೆ ನೀಡಿದರು. ಕಾಗದದ ಬ್ಯಾಗ್‌ಗಳನ್ನು ಉಚಿತವಾಗಿ ಸಂಘಟನೆ ಸದಸ್ಯರು ವಿತರಿಸಿದರು.

ಗೋಪಾಲನ್ ಎಂಟರ್‌ಪ್ರೈಸಸ್ ಪ್ರಾಯೋಜಿಸಿದ 1,500 ಸೆಣಬಿನ ಚೀಲಗಳನ್ನು ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ನಾರಾಯಣ್ ಅವರು ಸಾರ್ವಜನಿಕರಿಗೆ ವಿತರಿಸಿದರು.

ಗೋಪಾಲನ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ಪ್ಲಾಸ್ಟಿಕ್ ಬಳಕೆ ಮತ್ತು ತ್ಯಾಜ್ಯ ಸುಡುವುದರಿಂದ ಆಗುವ ದುಷ್ಪರಿಣಾಮ ಕುರಿತು ನಾಟಕ ಪ್ರದರ್ಶಿಸಿದರು. ಬಾಲಕಿಯರಾದ ಸಾನ್ವಿ ಮತ್ತು ಅನ್ವಿ ಅವರು ಪರಿಸರ ಸ್ನೇಹಿ ದೇವತೆಗಳ ವೇಷ ಧರಿಸಿ ಸಂದೇಶ ಸಾರಿದರು. 30 ಕೆ.ಜಿಗೂ ಅಧಿಕ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹಿಸಿ, ಮರುಬಳಕೆಗೆ ಕಳುಹಿಸಲಾಯಿತು.

ಗೋಪಾಲನ್ ಒಲಿಂಪಿಯಾ ನಿವಾಸಿ ಸಚಿನ್ ಅವರು ಏಕವ್ಯಕ್ತಿ ಪ್ರದರ್ಶನ ನೀಡಿದರು. ಕುಂಬಳಗೋಡು ಗ್ರಾಮ ಪಂಚಾಯಿತಿ ಸದಸ್ಯೆ ಅರುಣಾ ಕುಮಾರಿ ನಾಗೇಶ್ ಮಾತನಾಡಿದರು.

ಎ.ಐ ಅಪ್ಲಿಕೇಶನ್ ಬಿಡುಗಡೆ

ಸೆನ್ಕೋ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಸುವಾಂಕರ್ ಸೇನ್ ಮತ್ತು ಮಾರುಕಟ್ಟೆ ವಿಭಾಗದ ಮುಖ್ಯಸ್ಥೆ ಜೊಯಿತಾ ಸೇನ್ ಅವರು ಕ್ಯಾಮಕ್ ಸ್ಟ್ರೀಟ್ ಶೋ ರೂಂನಲ್ಲಿ ಮಹಿಳಾ ದಿನಾಚರಣೆ ಅಂಗವಾಗಿ ‘ಶೇಪ್ ಆಫ್ ಯು’ ಎ.ಐ ಅಪ್ಲಿಕೇಶನ್ ಬಿಡುಗಡೆ ಮಾಡಿದರು

ನೈರುತ್ಯ ರೈಲ್ವೇಸ್‌ಗೆ ಮಣಿದ ವ್ಯಾನ್ಗಾರ್ಡ್ಸ್

ಬೆಂಗಳೂರು: ನೈರುತ್ಯ ರೈಲ್ವೇಸ್ ತಂಡವು ಎಸ್‌ಎಂಎನ್ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ಮಾತೃ ಕಪ್ ರಾಜ್ಯ ಮಟ್ಟದ ಮಹಿಳೆಯರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಲೀಗ್ ಪಂದ್ಯದಲ್ಲಿ 80–37ರಿಂದ ಬೆಂಗಳೂರು ವ್ಯಾನ್ಗಾರ್ಡ್ಸ್ ತಂಡವನ್ನು ಮಣಿಸಿ ನಾಕೌಟ್ ಹಂತ ತಲುಪಿತು.

ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ರೈಲ್ವೇಸ್ ತಂಡದ ಶ್ರುತಿ ಅರವಿಂದ್ (26 ಅಂಕ) ಮತ್ತು ಬಾಂಧವ್ಯ (25) ಗೆಲುವಿನಲ್ಲಿ ಮಿಂಚಿದರು. ಇತರ ಪಂದ್ಯಗಳಲ್ಲಿ ಡಿವೈಇಎಸ್ ಮೈಸೂರು, ಮೌಂಟ್ಸ್ ಕ್ಲಬ್ ಮತ್ತು ಬೀಗಲ್ಸ್ ಬಿ.ಸಿ ತಂಡಗಳು ಗೆಲುವಿನೊಂದಿಗೆ ಕ್ವಾರ್ಟರ್ ಫೈನಲ್ ಪ್ರವೇಶಿಸಿದವು.

ಲೀಗ್ ಪಂದ್ಯಗಳ ಫಲಿತಾಂಶ: ನೈರುತ್ಯ ರೈಲ್ವೇಸ್ 80–37ರಿಂದ ಬೆಂಗಳೂರು ವ್ಯಾನ್ಗಾರ್ಡ್ಸ್ ವಿರುದ್ಧ; ಡಿವೈಇಎಸ್ ಮೈಸೂರು 53–22ರಿಂದ ಎಂಸಿಎಚ್‌ಎಸ್ ಬಿ.ಸಿ ವಿರುದ್ಧ; ಮೌಂಟ್ಸ್ ಬಿ.ಸಿ 59–20ರಿಂದ ಕೋರಮಂಗಲ ಬಿ.ಸಿ ವಿರುದ್ಧ; ಡಿವೈಇಎಸ್ ವಿದ್ಯಾನಗರ 43–23ರಿಂದ ವೈಎಂಎಂಎ ಬಿ.ಸಿ ವಿರುದ್ಧ ಗೆಲುವು ಸಾಧಿಸಿದವು. ಬೀಗಲ್ಸ್ ಬಿ.ಸಿ 51–35ರಿಂದ ಕೋಲಾರ ಜಿಲ್ಲಾ ತಂಡದ ಎದುರು; ಎಚ್‌ಬಿಆರ್ ಬಿ.ಸಿ 52–43ರಿಂದ ರೋವರ್ಸ್ ಬಿ.ಸಿ ಧಾರವಾಡ ಎದುರು; ರಾಜ್‌ಮಹಲ್ ಬಿ.ಸಿ 87–42ರಿಂದ ಬೆಂಗಳೂರು ಸ್ಪೋರ್ಟಿಂಗ್ ಬಿ.ಸಿ ಎದುರು ಜಯ ಗಳಿಸಿದವು.

ಮಾನಸಿಕ ಆರೋಗ್ಯ- ಅಧ್ಯಯನ ಅಗತ್ಯ: ದಿನೇಶ್ ಗುಂಡೂರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇಂದು ಸಮಾಜ ಎದುರಿಸುತ್ತಿರುವ ಸವಾಲುಗಳಲ್ಲಿ ಮಾನಸಿಕ ಅನಾರೋಗ್ಯವೂ ಒಂದಾಗಿದೆ. ಆದ್ದರಿಂದ ಮಾನಸಿಕ ಆರೋಗ್ಯದ ಬಗ್ಗೆ ಹೆಚ್ಚಿನ ಅಧ್ಯಯನ ನಡೆಯಬೇಕು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಭಿಪ್ರಾಯಪಟ್ಟರು.

ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ‘ಕ್ಲಿನಿಕಲ್ ಸೈಕಾಲಜಿ’ ವಿಭಾಗವು ಹಮ್ಮಿಕೊಂಡಿದ್ದ ಮೂರು ದಿನಗಳ ‘ಕ್ಲಿನಿಕಲ್ ನ್ಯೂರೊಸೈಕಾಲಜಿ ಆ್ಯಂಡ್ ಕಾಗ್ನಿಟಿವ್ ನ್ಯೂರೊಸೈನ್ಸ್’ ಅಂತರರಾಷ್ಟ್ರೀಯ ಸಮ್ಮೇಳನವನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

‘ಭಾರತದಂತಹ ಅಧಿಕ ಜನಸಂಖ್ಯೆ ಇರುವ ದೇಶಗಳಲ್ಲಿ ಮಾನಸಿಕ ಆರೋಗ್ಯದ ಬಗ್ಗೆ ಅರಿವು ಮೂಡಿಸುವುದು ಮುಖ್ಯವಾಗಿದ್ದು, ಎಷ್ಟೋ ಜನರಿಗೆ ತಮಗೆ ಮಾನಸಿಕ ಅನಾರೋಗ್ಯ ಸಮಸ್ಯೆ ಇರುವುದೇ ತಿಳಿದಿರುವುದಿಲ್ಲ. ಇಂದಿನ ಒತ್ತಡದ ಬದುಕಿನಲ್ಲಿ ಮಾನಸಿಕ ಅನಾರೋಗ್ಯ ಸಮಸ್ಯೆ ಎದುರಿಸುತ್ತಿರುವವರ ಸಂಖ್ಯೆ ಹೆಚ್ಚುತ್ತಿದ್ದು, ಈ ಸಮಸ್ಯೆಗಳ ಬಗ್ಗೆ ಹೆಚ್ಚಿನ ಅಧ್ಯಯನ ನಡೆಯಬೇಕಿದೆ. ಈ ನಿಟ್ಟಿನಲ್ಲಿ ನಿಮ್ಹಾನ್ಸ್ ಮುಂಚೂಣಿಯಲ್ಲಿರುವುದು ಶ್ಲಾಘನೀಯ’ ಎಂದರು.

‘ನಮ್ಮ ಇಲಾಖೆ ಸಹ ಗೃಹ ಆರೋಗ್ಯ ಯೋಜನೆಯಡಿ ಮಾನಸಿಕ ಅನಾರೋಗ್ಯ ಸಮಸ್ಯೆ ಪತ್ತೆಗೆ ಪರೀಕ್ಷೆ ನಡೆಸುತ್ತಿದೆ. ಪ್ರತಿ ಜಿಲ್ಲೆಯಲ್ಲಿಯೂ ಮನೋವೈದ್ಯಕೀಯ ತಜ್ಞರು ಲಭ್ಯವಿರುವಂತೆ ಕ್ರಮ ವಹಿಸಲಾಗಿದೆ’ ಎಂದು ಹೇಳಿದರು.

‘ಚಿಕ್ಕ ಮಕ್ಕಳು ಅತಿಯಾಗಿ ಸಾಮಾಜಿಕ ಜಾಲತಾಣ ಬಳಸುತ್ತಿದ್ದು, ಇದಕ್ಕೆ ನಿರ್ಬಂಧ ವಿಧಿಸುವ ಬಗ್ಗೆ ರಾಜ್ಯ ಸರ್ಕಾರ ಚಿಂತನೆ ನಡೆಸಿದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಜ್ಞರೊಂದಿಗೆ ಚರ್ಚೆಯನ್ನೂ ನಡೆಸಿದ್ದಾರೆ’ ಎಂದರು.

ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ನಿಕಟಪೂರ್ವ ಡೈರೆಕ್ಟರ್ ಜನರಲ್ ಸುಬ್ರತಾ ರಕ್ಷಿತ್ ಉಪಸ್ಥಿತರಿದ್ದರು.

ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ದಿನೇಶ್ ಗುಂಡೂರಾವ್ ಅವರನ್ನು ಡಾ. ಪ್ರತಿಮಾ ಮೂರ್ತಿ ಗೌರವಿಸಿದರು

ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ, ಖರ್ಜೂರ, ಮಸಾಲೆ ಪದಾರ್ಥಗಳ ದರ ಹೆಚ್ಚಳ

ಯುದ್ಧ: ಒಣ ಹಣ್ಣುಗಳ ಆಮದಿಗೂ ಹೊಡೆತ

• ಖಲೀಲಅಹ್ಮದ ಶೇಖ

ಬೆಂಗಳೂರು: ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವು ಒಣ ಹಣ್ಣುಗಳು (ಡ್ರೈ ಫ್ರೂಟ್ಸ್), ಖರ್ಜೂರ ಸೇರಿದಂತೆ ಮಸಾಲೆ ಪದಾರ್ಥಗಳ ಸಾಗಾಟದ ಮೇಲೂ ಪರಿಣಾಮ ಬೀರಿದೆ. ಇದರಿಂದ ಇರಾನ್‌ನಿಂದ ಬೆಂಗಳೂರಿಗೆ ಬರುವ ಒಣ ಹಣ್ಣುಗಳ ಆಮದಿನಲ್ಲಿ ವ್ಯತ್ಯಯವಾಗಿ ದರವೂ ಹೆಚ್ಚಳವಾಗಿದೆ.

ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ನಡೆಸುತ್ತಿರುವ ದಾಳಿ ಹಾಗೂ ಅಮೆರಿಕದ ಮಿತ್ರ ರಾಷ್ಟ್ರಗಳಾದ ಕೊಲ್ಲಿ ದೇಶಗಳ ಮೇಲೆ ಇರಾನ್ ಪ್ರತಿದಾಳಿ ನಡೆಸುತ್ತಿದೆ. ಇದರಿಂದ ಕೊಲ್ಲಿ ದೇಶಗಳಲ್ಲಿ ಮತ್ತು ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಏರ್ಪಟ್ಟಿದೆ. ಅಲ್ಲಿಂದ ಭಾರತಕ್ಕೆ ಒಣಹಣ್ಣುಗಳು ಹಾಗೂ ಖರ್ಜೂರ ಆಮದಿನಲ್ಲಿ ವ್ಯತ್ಯಯವಾಗಿದೆ. ರಂಜಾನ್ ತಿಂಗಳಲ್ಲಿ ಖರ್ಜೂರಕ್ಕೆ ಬೇಡಿಕೆ ಇರುತ್ತದೆ. ಈ ಸಮಯದಲ್ಲಿ ಮುಸ್ಲಿಮರು ಖರ್ಜೂರ ಸೇವಿಸುವ ಮೂಲಕ ಉಪವಾಸ ಮುಕ್ತಾಯಗೊಳಿಸುತ್ತಾರೆ.

‘ರಂಜಾನ್ ಹಬ್ಬದಲ್ಲಿ ಹೆಚ್ಚು ಬೇಡಿಕೆ ಇರುವ ಖರ್ಜೂರ ಹಾಗೂ ಒಣ ಹಣ್ಣುಗಳನ್ನು ಇರಾನ್ ಸೇರಿದಂತೆ ಕೊಲ್ಲಿ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳಲಾಗಿದೆ. ನಮ್ಮ ಬಳಿ ಈಗ 15ರಿಂದ 20 ದಿನಗಳವರೆಗೆ ಆಗುವಷ್ಟು ದಾಸ್ತಾನು ಇದೆ. ಇದು ಖಾಲಿಯಾದರೆ ಸಮಸ್ಯೆ ಆಗಲಿದೆ. ಇರಾನ್‌ನ ಅಬ್ಬಾಸ್ ಬಂದರಿನ ಮೂಲಕ ಭಾರತಕ್ಕೆ ಖರ್ಜೂರ, ಒಣ ಹಣ್ಣುಗಳು ಸೇರಿದಂತೆ ಮಸಾಲೆ ಪದಾರ್ಥಗಳನ್ನು ಆಮದು ಮಾಡಿಕೊಳ್ಳಲಾಗುತ್ತದೆ. ಈಗ ಅಲ್ಲಿ ಯಾವುದೇ ರೀತಿಯ ಚಟುವಟಿಕೆಗಳು ನಡೆಯುತ್ತಿಲ್ಲ’ ಎಂದು ಕಂಟೋನ್‌ಮೆಂಟ್ ಫ್ರೂಟ್ಸ್ ಆ್ಯಂಡ್ ಡ್ರೈ ಫ್ರೂಟ್ಸ್ ಮರ್ಚೆಂಟ್ ಅಸೋಸಿಯೇಷನ್‌ನ ಅಧ್ಯಕ್ಷ ಮಹಮ್ಮದ್ ಇದ್ರೀಸ್ ಚೌಧರಿ ‘ಪ್ರಜಾವಾಣಿ’ಗೆ ತಿಳಿಸಿದರು.

ರಸೆಲ್ ಮಾರುಕಟ್ಟೆಯ ಅಂಗಡಿಯೊಂದರಲ್ಲಿ ಗ್ರಾಹಕರು ಖರ್ಜೂರ ಖರೀದಿಸಿದರು

ಖರ್ಜೂರದ ದರ (1 ಕೆ.ಜಿಗೆ)	
ಮುಜಫಿರತ್ ಖರ್ಜೂರ	₹200
ಕಲ್ಮಿ ಖರ್ಜೂರ	₹700
ಸುಗಾಯಿ ಖರ್ಜೂರ	₹700
ಅಜೂವಾ ಖರ್ಜೂರ	₹1,200
ಮಬರೂಮ್ ಖರ್ಜೂರ	₹1,200
ಡ್ರೈಫ್ರೂಟ್ಸ್ ದರ (1 ಕೆ.ಜಿಗೆ)	
ಬಾದಾಮಿ	₹920
ಗೋಡಂಬಿ	₹1,240
ಅಕ್ರೂಟ್	₹2,600
ಪ್ಲೇನ್ ಪಿಸ್ತಾ	₹2,080
ಒಣದ್ರಾಕ್ಷಿ	₹580
ಒಣಖರ್ಜೂರ	₹320
ಪೈನಾ ಬೀಜ	₹8,000
ಜಾಫ್ರನ್ (ಕೇಸರಿ)	₹3.50ಲಕ್ಷ

‘ಇರಾನ್‌ನಿಂದ ಪ್ಲೇನ್ ಪಿಸ್ತಾ, ಬಾದಾಮಿ, ಅಂಜೂರ, ಒಣದ್ರಾಕ್ಷಿ, ಪೈನ್ ನಟ್ಸ್ ಹಾಗೂ ಮಸಾಲೆ ಪದಾರ್ಥಗಳನ್ನು ಭಾರತಕ್ಕೆ ಆಮದು ಮಾಡಿಕೊಳ್ಳಲಾಗುತ್ತದೆ. ಇದರ ಜೊತೆಗೆ ಸೌದಿ ಅರೇಬಿಯಾ, ಇರಾಕ್, ಅಫ್ಘಾನಿಸ್ತಾನ, ಜೋರ್ಡನ್‌ನಿಂದ ಬರುವ ಖರ್ಜೂರ ವಾಲ್‌ನಟ್ಸ್‌ಗೆ ನಮ್ಮಲ್ಲಿ ಭಾರಿ ಬೇಡಿಕೆ ಇದೆ. ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಪರಿಣಾಮ ಪೂರೈಕೆಯಲ್ಲಿ ವ್ಯತ್ಯಯವಾಗಿ ಬೇಡಿಕೆ ಹೆಚ್ಚಲಿದ್ದು, ಶೇಕಡ 50ರಷ್ಟು ದರ ಏರಿಕೆಯಾಗುವ ಸಾಧ್ಯತೆ ಇದೆ’ ಎಂದು ವಿವರಿಸಿದರು.

‘ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷ ಮುಂದುವರಿದರೆ ಇರಾನ್‌ನ ಒಂದು ಕೆ.ಜಿ ಅಂಜೂರ ₹1,800, ಮಬರೂಮ್ ಖರ್ಜೂರ ₹3,200, ಒಂದು ಗ್ರಾಂ ಕೇಸರಿಗೆ ₹350, ಏಲಕ್ಕಿ ₹3,800, ಕರಿಮೆಣಸು ₹1,800ರವರೆಗೆ ಹೆಚ್ಚಳವಾಗಲಿದೆ. ಇವುಗಳ ಬೆಲೆ ಸದ್ಯಕ್ಕೆ ಕಡಿಮೆ ಇದೆ’ ಎಂದು ವಿವರಿಸಿದರು.

ಮೆಟ್ರೊ ವೇಗ ನಿಯಂತ್ರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಮೆಟ್ರೊ’ ಹಸಿರು ಮಾರ್ಗದ ಆರ್.ವಿ. ರಸ್ತೆ ಮತ್ತು ಜಯನಗರ ಮೆಟ್ರೊ ನಿಲ್ದಾಣಗಳ ನಡುವಿನ ಒಂದು ಭಾಗದಲ್ಲಿ ಮೆಟ್ರೊ ರೈಲು ಸಂಚಾರದ ವೇಗವನ್ನು ತಾತ್ಕಾಲಿಕವಾಗಿ ನಿಯಂತ್ರಿಸಲಾಗಿದೆ.

ಸಪೋರ್ಟ್ ಬೇರಿಂಗ್‌ಗಳನ್ನು ಬದಲಾಯಿಸುವ ನಿರ್ವಹಣಾ ಕಾಮಗಾರಿಗಳನ್ನು ನಡೆಸಲು ಈ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ.

ಹಸಿರು ಮಾರ್ಗದ ರೈಲು ಸಂಚಾರಗಳು ವೇಳಾಪಟ್ಟಿಯಂತೆ ಮುಂದುವರಿಯುತ್ತಿದ್ದು, ಆರ್.ವಿ. ರಸ್ತೆ ಮತ್ತು ಜಯನಗರ ನಿಲ್ದಾಣಗಳ ನಡುವೆ ಪ್ರಯಾಣಿಸುವವರಿಗೆ ಸ್ವಲ್ಪ ಹೆಚ್ಚುವರಿ ಪ್ರಯಾಣದ ಅನುಭವವಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಶರಾವತಿ ಯೋಜನೆ: ಅನುಮತಿ ಪ್ರಶ್ನಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿ

ಕೇಂದ್ರ, ರಾಜ್ಯ ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕೈಗೆತ್ತಿಕೊಳ್ಳಲಿರುವ ಉದ್ದೇಶಿತ ₹10 ಸಾವಿರ ಕೋಟಿ ವೆಚ್ಚದ, ‘ಶರಾವತಿ ಪಂಪ್ಡ್ ಸ್ಟೋರೇಜ್ ಜಲವಿದ್ಯುತ್ ಯೋಜನೆ’ಗೆ, ರಾಜ್ಯ ವನ್ಯಜೀವಿ ಮಂಡಳಿ ನೀಡಿರುವ ಅನುಮೋದನೆ ಮತ್ತು ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ ನೀಡಿರುವ ತಾತ್ವಿಕ ಅನುಮೋದನೆಯ ಕಾನೂನು ಬದ್ಧತೆಯನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ.

ಈ ಸಂಬಂಧ ಸಾಗರದ ಅಖಿಲೇಶ್ ಚಿಪ್ಲಿ, ಉಡುಪಿಯ ಡಾ.ರವೀಂದ್ರನಾಥ ಶಾನಬಾಗ್ ಮತ್ತು ಶಿವಮೊಗ್ಗದ ಸಿ.ಬಿ.ಮನೋಹರ ಕುಮಾರ್ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಅರ್ಜಿದಾರರ ಪರ ಹೈಕೋರ್ಟ್‌ನ ಹಿರಿಯ’ ವಕೀಲೆ ಬಿ.ವಿ.ವಿದ್ಯುಲ್ಲತಾ ಅವರ ವಾದ ಆಲಿಸಿದ ನ್ಯಾಯಪೀಠವು, ಪ್ರತಿವಾದಿಗಳಾದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಕಾರ್ಯದರ್ಶಿ ಹಾಗೂ ರಾಜ್ಯ ಅರಣ್ಯ, ಪರಿಸರ ಮತ್ತು ಪರಿಸರ ವಿಜ್ಞಾನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಅರ್ಜಿಯಲ್ಲಿ ಏನಿದೆ?

‘ಉದ್ದೇಶಿತ ಯೋಜನೆಯು ವನ್ಯಜೀವಿಗಳಿಗೆ ಸಂಪೂರ್ಣ ಹಾನಿ ಉಂಟು ಮಾಡಲಿದೆ. ಈ ಯೋಜನೆಗೆ ಒಟ್ಟು 142.763 ಹೆಕ್ಟೇರ್ ಭೂಮಿಯ ಅಗತ್ಯವಿದೆ. ಅದರಲ್ಲಿ 102 ಹೆಕ್ಟೇರ್ ಪ್ರದೇಶವು ಭೌಗೋಳಿಕವಾಗಿ ಅಭಯಾರಣ್ಯದೊಳಗೆ ಮತ್ತು 39.715 ಹೆಕ್ಟೇರ್ ಪರಿಸರ ಸೂಕ್ಷ್ಮ ವಲಯದಲ್ಲಿ ಇದೆ. ಇಂತಹ ಬೃಹತ್ ಅಭಯಾರಣ್ಯ ಮತ್ತು ಪರಿಸರ ಸೂಕ್ಷ್ಮ ವಲಯದೊಳಗೆ ಜಲವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆಗೆ ಅನುಮೋದನೆ ನೀಡುವುದರಿಂದ ಬೃಹತ್ ಕಂಬಗಳನ್ನು ನೆಡುವುದು, ಕಂಬಗಳ ನಡುವೆ ಹೆಚ್ಚಿನ ವೋಲ್ಟೇಜ್ ತಂತಿಗಳನ್ನು ಎಳೆಯುವುದೂ ಸೇರಿದಂತೆ ಉತ್ಪಾದಿಸುವ ಜಲವಿದ್ಯುತ್ ರವಾನಿಸಲು ಪ್ರಸರಣ ಮಾರ್ಗಗಳ ನಿರ್ಮಾಣದಿಂದ ಅಮೂಲ್ಯ ವೃಕ್ಷ ಸಂಪತ್ತು ನಾಶವಾಗಲಿದೆ. ವನ್ಯಜೀವಿಗಳ ಆವಾಸಸ್ಥಾನಕ್ಕೆ ಧಕ್ಕೆಯಾಗಲಿದೆ’ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

‘ವನ್ಯಜೀವಿಗಳ ಪ್ರಯೋಜನಕ್ಕಾಗಿ ಮತ್ತು ಬೇಡದ ಉದ್ದೇಶಗಳಿಗಾಗಿ ವನ್ಯಜೀವಿ ಅಭಯಾರಣ್ಯ ಪ್ರದೇಶ ಬಳಕೆಗೆ ಅನುಮೋದನೆ ನೀಡುವ ಅಧಿಕಾರ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಗೆ ಇಲ್ಲ. ಈ ನಿಟ್ಟಿನಲ್ಲಿ, ವನ್ಯಜೀವಿ ರಕ್ಷಣಾ ಕಾಯ್ದೆ–1972ರ ಕಲಂ 29ರ ಅಡಿಯಲ್ಲಿ ವಿಧಿಸಲಾದ ನಿರ್ಬಂಧವನ್ನು ಗಮನದಲ್ಲಿ ಇರಿಸಿಕೊಂಡು ಶರಾವತಿ ಕಣಿವೆಯ ಅಭಯಾರಣ್ಯ ಮತ್ತು ಅದರ ಪರಿಸರ ಸೂಕ್ಷ್ಮ ವಲಯದಲ್ಲಿ ಕೈಗೆತ್ತಿಕೊಳ್ಳಲಿರುವ ಉದ್ದೇಶಿತ ಯೋಜನೆಗೆ ಅನುಮೋದನೆ ನೀಡಬಾರದು’ ಎಂದು ಕೋರಲಾಗಿದೆ.



ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ಗೂಗಲ್ ನಕ್ಷೆ

ಏರ್‌ಬಸ್ ಟೆಕ್ನಾಲಜಿ ಸೆಂಟರ್ ಉದ್ಘಾಟಿಸಿದ ಡಿಸಿಎಂ ಡಿ.ಕೆ. ಶಿವಕುಮಾರ್

‘ಪ್ರತಿಭೆ, ಸಂಸ್ಕೃತಿಯ ನಗರ ಬೆಂಗಳೂರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ಪ್ರತಿಭಾವಂತ ಮಾನವ ಸಂಪನ್ಮೂಲದ ನಗರ ಮಾತ್ರವಲ್ಲ, ಉತ್ತಮ ಸಂಸ್ಕೃತಿ, ಹವಾಮಾನ ಇರುವ ನಗರ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ವೈಟ್‌ಫೀಲ್ಡ್‌ನ ಕಾಡುಗೋಡಿಯಲ್ಲಿ ಏರ್‌ಬಸ್ ಟೆಕ್ನಾಲಜಿ ಸೆಂಟರ್ ಅನ್ನು ಶುಕ್ರವಾರ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲರ ಜೊತೆಗೂಡಿ ಉದ್ಘಾಟಿಸಿ ಅವರು ಮಾತನಾಡಿದರು.

ಅನ್ವೇಷಣೆ, ತಂತ್ರಜ್ಞಾನ, ಸಂಶೋಧನೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ. ಇದು ಈ ಭೂಮಿಯ ಶಕ್ತಿ ಎಂದು ವಿಶ್ಲೇಷಿಸಿದರು.

‘ಏರ್‌ಬಸ್ ಕೇಂದ್ರದ ಉದ್ಘಾಟನೆಯು ಎಂಜಿನಿಯರಿಂಗ್, ಡಿಜಿಟಲ್ ಪರಿವರ್ತನೆ, ಗ್ರಾಹಕ ಸೇವೆ ಹಾಗೂ ಖರೀದಿಗೆ ಉತ್ತೇಜನ ನೀಡುವ ಹಬ್ ಆಗಿದೆ. ಕಳೆದ ಫೆ. 17ರಂದು ವೇಮಗಲ್‌ನಲ್ಲಿ ಏರ್‌ಬಸ್ ಎಚ್‌125 ಹೆಲಿಕಾಪ್ಟರ್ ತಯಾರಿಕ ಘಟಕಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಿದ್ದಾರೆ ಈಗ ಈ ಕೇಂದ್ರದ ಉದ್ಘಾಟನೆ ಮೂಲಕ ಏರೋಸ್ಪೇಸ್ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯಕ್ಕೆ ಮತ್ತೊಂದು ಗರಿ ಸೇರ್ಪಡೆಯಾಗಿದೆ’ ಎಂದು ಶ್ಲಾಘಿಸಿದರು.

‘ದೇಶದಲ್ಲಿ ಏರೋಸ್ಪೇಸ್ ಕ್ಷೇತ್ರಕ್ಕೆ ಸಂಬಂಧಿಸಿದಂತೆ 2013ರಲ್ಲಿ ಕರ್ನಾಟಕ ನೀತಿ ರೂಪಿಸಿತು. 2026-27ನೇ ಸಾಲಿನ ಏರೋಸ್ಪೇಸ್ ಹಾಗೂ ರಕ್ಷಣಾ ನೀತಿ ಇದನ್ನು ಮುಂದಿನ ಹಂತಕ್ಕೆ ತೆಗೆದುಕೊಂಡು ಹೋಗಲಿದೆ. ದೇವನಹಳ್ಳಿಯಲ್ಲಿ 2 ಸಾವಿರ ಎಕರೆ ಪ್ರದೇಶದಲ್ಲಿ ಏರೋಸ್ಪೇಸ್ ಪಾರ್ಕ್ ನಿರ್ಮಿಸಲಾಗಿದ್ದು, ಇದು ವಿಶ್ವದಲ್ಲೇ ಅತಿ ಮಹತ್ವದ ಏರೋಸ್ಪೇಸ್ ಪಾರ್ಕ್ ಆಗಿದೆ’ ಎಂದರು.

‘ನಮ್ಮ ರಾಜ್ಯದಲ್ಲಿ ಬೆಂಗಳೂರು, ಬೆಳಗಾವಿ, ಮೈಸೂರು, ತುಮಕೂರು ಹಾಗೂ ಚಾಮರಾಜನಗರದಲ್ಲಿ ಏರೋಸ್ಪೇಸ್ ವಿಶೇಷ ಆರ್ಥಿಕ ವಲಯ ಸ್ಥಾಪಿಸಲಾಗುತ್ತಿದೆ’ ಎಂದು ತಿಳಿಸಿದರು.

‘ಬೆಂಗಳೂರು ಅತಿ ವೇಗವಾಗಿ ಬೆಳೆಯುತ್ತಿರುವ ನಗರ. ವೈಮಾನಿಕ ಕ್ಷೇತ್ರದಲ್ಲಿ ಏರ್ ಬಸ್ ಮುಂಚೂಣಿಯಲ್ಲಿದೆ. ಹೂಡಿಕೆದಾರರ ನೆಚ್ಚಿನ ತಾಣವಾಗಿದೆ. ಇಲ್ಲಿ ನಾವು ಮಾತ್ರ ಪ್ರಗತಿ ಸಾಧಿಸುವುದಲ್ಲ, ಬಂಡವಾಳ ಹೂಡಿಕೆದಾರರು ಬೆಳೆಯಬೇಕು’ ಎಂದು ಹೇಳಿದರು.

‘ಕ್ಯಾಲಿಫೋರ್ನಿಯಾದಲ್ಲಿ 13 ಲಕ್ಷ ಎಂಜಿನಿಯರ್ ವೃತ್ತಿಪರರು ಇದ್ದು, ಬೆಂಗಳೂರಿನಲ್ಲಿ 25 ಲಕ್ಷ ಇಂಜಿನಿಯರ್ ವೃತ್ತಿಪರರು ಇದ್ದಾರೆ. ಸಿಲಿಕಾನ್ ವ್ಯಾಲಿಯಲ್ಲಿ ಕೆಲಸ ಮಾಡುತ್ತಿರುವ ಮೂರನೇ ಒಂದು ಭಾಗ ಭಾರತದವರು, ಅದರಲ್ಲೂ ಹೆಚ್ಚಿನವರು ದಕ್ಷಿಣ ಭಾರತದವರು’ ಎಂದರು.

ಕೇಂದ್ರ ನಾಗರಿಕ ವಿಮಾನ ಯಾನ ಸಚಿವ ರಾಮಮೋಹನ್ ನಾಯ್ಡು ವರ್ಚುವಲ್ ಮೂಲಕ ಹಾಜರಿದ್ದರು.

ಉದ್ಘಾಟನೆಗಾಗಿ ಡಿ.ಕೆ. ಶಿವಕುಮಾರ್ ಅವರು ಕಾಡುಗೋಡಿವರೆಗೆ ನಮ್ಮ ಮೆಟ್ರೊದಲ್ಲಿ ಸಂಚರಿಸಿದರು.



ವೈಟ್‌ಫೀಲ್ಡ್‌ನ ಕಾಡುಗೋಡಿಯ ಏರ್‌ಬಸ್ ಟೆಕ್ನಾಲಜಿ ಸೆಂಟರ್‌ನಲ್ಲಿ ಹೆಲಿಕಾಪ್ಟರ್ ಮಾದರಿಯನ್ನು ಎಂ.ಬಿ. ಪಾಟೀಲ, ಡಿ.ಕೆ. ಶಿವಕುಮಾರ್ ವೀಕ್ಷಿಸಿದರು

ಶ್ರೀಲಂಕಾ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅರ್ಜಿ

ಗೂಗಲ್ ಕಂಪನಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಮಾಜಿಕ ಜಾಲತಾಣದಲ್ಲಿ ನನ್ನ ವಿರುದ್ಧ ಪ್ರಕಟವಾಗಿರುವ ಎಲ್ಲಾ ಮಾನಹಾನಿ ಸುದ್ದಿ, ಲೇಖನ ಮತ್ತು ಯುಆರ್‌ಎಲ್‌ಗಳನ್ನು (ಯೂನಿಫಾರಂ ರಿಸೋರ್ಸ್ ಲೊಕೇಟರ್) ತೆಗೆದುಹಾಕಲು ನಿರ್ದೇಶಿಸಬೇಕು’ ಎಂದು ಕೋರಿ ಶ್ರೀಲಂಕಾ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎ.ಎಚ್.ಎಂ.ದಿಲೀಪ್ ನವಾಜ್ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಗೂಗಲ್ ಕಂಪನಿಗೆ ನೋಟಿಸ್ ಜಾರಿಗೊಳಿಸಲು ಕರ್ನಾಟಕ ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ನ್ಯಾಯಮೂರ್ತಿ ಎ.ಎಚ್.ಎಂ.ದಿಲೀಪ್ ನವಾಜ್ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿ ಸಚಿನ್ ಶಂಕರ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಆದೇಶಿಸಿದೆ.

‘ಬರಹದ ಸ್ವರೂಪದಲ್ಲಿರುವ ಎಲ್ಲಾ ಅವಹೇಳನಕಾರಿ ವಿಷಯಗಳು ಮತ್ತು ಯುಆರ್‌ಎಲ್‌ಗಳನ್ನು ತೆಗೆದುಹಾಕಲು ಮತ್ತು ಇದೇ ರೀತಿಯಲ್ಲಿ ಪುನಃ ಯಾವುದೇ ಬರಹಗಳನ್ನು ಹರಡುವುದನ್ನು ತಡೆಯಲು ಮತ್ತು ಯುಆರ್‌ಎಲ್ ಹುಡುಕಾಟಗಳ ಮೇಲೆ ಸಂಪೂರ್ಣ ನಿಷೇಧ ಹೇರಲು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ಸಚಿವಾಲಯ ಮತ್ತು ‘ಗೂಗಲ್ ಇಂಡಿಯಾ’ಕ್ಕೆ ನಿರ್ದೇಶಿಸಬೇಕು’ ಎಂದು ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

ಅರ್ಜಿಯಲ್ಲಿ, ಭಾರತ ಸರ್ಕಾರದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆ, ಗೂಗಲ್ ಇಂಡಿಯಾ, ಗೂಗಲ್ ಇಂಕ್, ಕೊಲಂಬೊ ಟೆಲಿಗ್ರಾಫ್, ಲಂಕಾ ಇ-ನ್ಯೂಸ್ ಅನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಅರ್ಜಿಯಲ್ಲಿ ಏನಿದೆ?: ‘ಶ್ರೀಲಂಕಾದ, ‘ಕೊಲಂಬೊ ಟೆಲಿಗ್ರಾಫ್’ ಮತ್ತು ‘ಲಂಕಾ ಇ-ನ್ಯೂಸ್’ ಸುದ್ದಿ ತಾಣಗಳು 2015 ಮತ್ತು 2020ರಲ್ಲಿ ನನ್ನ ವಿರುದ್ಧ ಕೆಲವು ಮಾನಹಾನಿ ಸುದ್ದಿಗಳನ್ನು ಪ್ರಕಟಿಸಿವೆ. ‘ಕೊಲಂಬೊ ಟೆಲಿಗ್ರಾಫ್’ ಅನ್ನು ಗಡೀಪಾರಾಗಿರುವ ಶ್ರೀಲಂಕಾದ ಇಬ್ಬರು ಪತ್ರಕರ್ತರು ಮುನ್ನಡೆಸುತ್ತಿದ್ದಾರೆ ಎನ್ನಲಾಗಿದೆ. ಈ ಮಾಧ್ಯಮಗಳು ದುರುದ್ದೇಶಪೂರಿತ ಸುದ್ದಿಗಳನ್ನು ಹಂಚಿಕೆ ಮಾಡಿವೆ. ನನ್ನನ್ನು ಮಾಧ್ಯಮ ವಿಚಾರಣೆಗೆ ಗುರಿಪಡಿಸಲಾಗಿದೆ. ಇದರಿಂದ ತನ್ನ ಘನತೆಗೆ ಮಾತ್ರವಲ್ಲದೇ ನ್ಯಾಯಾಂಗ ಪಾವಿತ್ರ್ಯತೆಗೂ ಹಾನಿ ಮಾಡಲಾಗುತ್ತಿದೆ’ ಎಂದು ಅರ್ಜಿಯಲ್ಲಿ ಆಕ್ಷೇಪಿಸಲಾಗಿದೆ.

ನ್ಯಾ.ನವಾಜ್ ಅವರು 2023ರಲ್ಲಿ ಗೂಗಲ್‌ಗೆ ಲೀಗಲ್ ನೋಟಿಸ್ ಕಳುಹಿಸಿದ್ದರು. ಆದರೆ, ಅಲ್ಲಿಂದ ಯಾವುದೇ ಪ್ರತಿಕ್ರಿಯೆ ಬಾರದೇ ಹೋದ ಕಾರಣ ಮತ್ತು ಗೂಗಲ್‌ನ ಭಾರತದ ಪ್ರಧಾನ ಕಚೇರಿಯು ಬೆಂಗಳೂರಿನಲ್ಲಿ ಇರುವುದರಿಂದ ಕರ್ನಾಟಕ ಹೈಕೋರ್ಟ್‌ನಲ್ಲಿ ಈ ಅರ್ಜಿ ಸಲ್ಲಿಕೆ ಮಾಡಿರುವುದಾಗಿ ವಿವರಿಸಿದ್ದಾರೆ. ವಕೀಲ ಆರ್.ಪ್ರಭಾಕರನ್ ಅವರು ವಕಾಲತ್ತು ವಹಿಸಿದ್ದಾರೆ.

ರಾಜ್ಯದ 25ಕ್ಕೂ ಅಧಿಕ ಮಂದಿ ಆಯ್ಕೆ

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗ ನಡೆಸಿದ 2025ನೇ ಸಾಲಿನ ನಾಗರಿಕ ಸೇವಾ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಲಭ್ಯವಾಗಿರುವ ಮಾಹಿತಿ ಪ್ರಕಾರ ರಾಜ್ಯದ 25ಕ್ಕೂ ಅಧಿಕ ಅಭ್ಯರ್ಥಿಗಳು ವಿವಿಧ ಸೇವೆಗಳಿಗೆ ಆಯ್ಕೆಯಾಗಿದ್ದಾರೆ.

ಇವರ ಪೈಕಿ 19 ಅಭ್ಯರ್ಥಿಗಳು 'ಇಂಡಿಯಾ 4 ಐಎಎಸ್'ನಲ್ಲಿ ತರಬೇತಿ ಪಡೆದಿದ್ದಾರೆ. 53ನೇ ರ‍್ಯಾಂಕ್ ಪಡೆದಿರುವ ಚಿಕ್ಕೋಡಿ ತಾಲ್ಲೂಕಿನ ಹತ್ತರವಾಟ ಗ್ರಾಮದ ಕಿರಣ ಸಣ್ಣಪ್ಪ ಕಮತೆ (29) ಅವರು ರಾಜ್ಯಕ್ಕೆ ಮೊದಲಿಗರಾಗಿದ್ದಾರೆ.

ಸಂದೀಪ್ ಬಾಡದ (82), ಶ್ರೇಯಾನ್ಸ್ ಗೋಮ್ಸ್ (169), ಕೃಪಾ ಜೈನ್ (190), ಚಿನ್ಮಯಿ ಪಿ.(310), ಹಾಸನದ ಮನೋಜ್ ಜಿ.ಎಸ್. (389), ಕೋಲಾರದ ಎ.ಮಧು (436) ಹಾಗೂ ವರುಣ್ ಗೌಡ ಪಿ. (462), ಯಾದಗಿರಿಯ ನಿವೇದಿತಾ ಸಿ. ಭಾವಿಮನಿ (469), ವಿಶಾಕ ಕದಂ (504), ಸೂರಜ್ ಕೆ.ಎಲ್. (525), ಧನಂಜಯ ಆರ್. (554), ಉಲ್ಲಾಸ್ ಎಂ.ಎಸ್. (556), ಮಂಡ್ಯದ ಮುತ್ತೇಶ್ ಗೌಡ ಎ.ಎಸ್. (622), ಕೋಲಾರದ ಸಾಗರ್ ಎ. (641), ಪಾಂಡುರಂಗ್ ಎಸ್. ಕಂಬಳಿ (660), ಚಂದನ್ ವೈ (661), ಯಾದಗಿರಿಯ ಬಸವರಾಜ ಎಂ. ಜವಳಿ (664), ಪ್ರವೀಣ ಎಚ್. ಟಿ. (720), ಹಾಸನದ ಯತೀಶ್ ಎಂ.ಎ. (732), ಬೆಳಗಾವಿಯ ಬಸವರಾಜ ಎಂ. ಪಾಟೀಲ (739), ಅನಿರುದ್ಧ ಕಟ್ಟಿಮನಿ (786), ಚಂದ್ರಶೇಖರ್ (880) ರ‍್ಯಾಂಕ್ ಪಡೆದಿದ್ದಾರೆ. ನಗರದ ಯೂನಿವರ್ಸಲ್ ಕೋಚಿಂಗ್ ಸೆಂಟರ್‌ನಲ್ಲಿ ತರಬೇತಿ ಪಡೆದಿರುವ ಸಮೀಕ್ಷಾ ದ್ವಿವೇದಿ 56ನೇ ರ‍್ಯಾಂಕ್, ಜಯಂತ್ ಗರ್ಗ್ 64ನೇ ರ‍್ಯಾಂಕ್, ಕಾನಿಷ್ಕ್ ಅಗರ್ವಾಲ್ 72ನೇ ರ‍್ಯಾಂಕ್, ರಾಹುಲ್ ಶೇಖರ್ 75ನೇ ರ‍್ಯಾಂಕ್ ಪಡೆದಿದ್ದಾರೆ. ಈ ಸೆಂಟರ್‌ನಲ್ಲಿ ತರಬೇತಿ ಪಡೆದ ಒಟ್ಟು 17 ಮಂದಿ ವಿವಿಧ ರ‍್ಯಾಂಕ್‌ಗಳನ್ನು ಪಡೆಯುವ ಮೂಲಕ ವಿವಿಧ ಸೇವೆಗಳಿಗೆ ಆಯ್ಕೆಯಾಗಿದ್ದಾರೆ.

ರಾಹುಲ್ ಕುಮಾರ್(141), ತನ್ಮಯ್ (229), ಶಾಶ್ವತ್ ಅಗರ್ವಾಲ್ (246), ಕರಣ್ ಸೇಠ್ (333), ಸುನಿತಾ (364), ಶುಭಂ (396), ರಾಹುಲ್ ನಾಗಪಾಲ್ (421), ಪ್ರವೀಣ್ ರತ್ನೂ(499), ಆದಿತ್ಯ ಸಿಂಗ್ (508), ಸೂಯಾಶ್ ರಾಜ್ ಶಿವಂ (572), ಶಿವಂ ನಾರಾಯಣ್ ಝಾ (597), ನಿಖಿಲ್ ಕುಮಾರ್ (615), ಸಂಜಯ್ ರಾಜ್ ಮೀನಾ (870) ರ‍್ಯಾಂಕ್ ಪಡೆದಿದ್ದಾರೆ.

'ಸಾಧನೆಗೆ ಕುಟುಂಬಸ್ಥರೇ ಸ್ಫೂರ್ತಿ'

ನವದೆಹಲಿ (ಪಿಟಿಐ): 2025 ನೇ ಸಾಲಿನ ನಾಗರಿಕ ಸೇವಾ ಪರೀಕ್ಷೆ (ಯುಪಿಎಸ್ಸಿ)ಯ ಫಲಿತಾಂಶ ಪ್ರಕಟಗೊಂಡಿದ್ದು, ರಾಜಸ್ಥಾನದ ಜೋಧಪುರದಲ್ಲಿರುವ ಅಖಿಲ ಭಾರತೀಯ ವೈದ್ಯಕೀಯ ವಿಜ್ಞಾನ ಸಂಸ್ಥೆ (ಏಮ್ಸ್)ಯಲ್ಲಿ ಎಂಬಿಬಿಎಸ್ ಪದವಿ ಪಡೆದ ಅನುಜ್ ಅಗ್ನಿಹೋತ್ರಿ ಅವರು ಮೊದಲ ರ‍್ಯಾಂಕ್ ಪಡೆದಿದ್ದಾರೆ.

ಸತತ ಮೂರನೇ ಪ್ರಯತ್ನದಲ್ಲಿ ಅಗ್ನಿಹೋತ್ರಿ ಮೊದಲ ರ‍್ಯಾಂಕ್ ಪಡೆದಿದ್ದು, ಮುಖ್ಯ ಪರೀಕ್ಷೆಯಲ್ಲಿ ವೈದ್ಯಕೀಯ ವಿಷಯವನ್ನೇ ಐಚ್ಛಿಕ ವಿಷಯವಾಗಿ ಆಯ್ಕೆ ಮಾಡಿಕೊಂಡಿದ್ದರು.

'ಈ ಸಾಧನೆಯಿಂದ ತುಂಬಾ ಖುಷಿಯಾಗಿದೆ. ಇದೊಂದು ಅದ್ಭುತ ಭಾವನೆ' ಎಂದು ರಾಜಸ್ಥಾನದ ಚಿತ್ತೋಡಗಢದಲ್ಲಿರುವ ತಮ್ಮ ನಿವಾಸದಲ್ಲಿ ಸಂತಸ ಹಂಚಿಕೊಂಡಿದ್ದಾರೆ.

'ನನ್ನ ಸಾಧನೆಗೆ ನನ್ನ ಕುಟುಂಬಸ್ಥರೇ ಕಾರಣ. ಅವರೇ ಸ್ಫೂರ್ತಿಯ ಅತೀ ದೊಡ್ಡ ಮೂಲವಾಗಿದ್ದಾರೆ. ಅವರು ನನಗೆ ಹಾಗೂ ನನ್ನ ಆದ್ಯತೆಗಳಿಗೆ ಬೆಂಬಲವಾಗಿ ನಿಂತರು. ಇದರಿಂದ, ನಾನು ಪರೀಕ್ಷೆ ಮೇಲೆ ಕೇಂದ್ರಿಕರಿಸಲು ಸಾಧ್ಯವಾಯಿತು. ಈ ಶ್ರೇಯಸ್ಸನ್ನು ಕುಟುಂಬಕ್ಕೆ ಸಲ್ಲಿಸುತ್ತೇನೆ' ಎಂದು ವಿವರಿಸಿದ್ದಾರೆ.

ಎರಡನೇ ರ‍್ಯಾಂಕ್ ಪಡೆದ ರಾಜೇಶ್ವರಿ ಅವರು ಎಲೆಕ್ಟ್ರಿಕಲ್ ಹಾಗೂ ಎಲೆಕ್ಟ್ರಾನಿಕ್ಸ್ ವಿಷಯದಲ್ಲಿ ಚೆನ್ನೈನ ಅಣ್ಣಾ ವಿಶ್ವವಿದ್ಯಾಲಯದಿಂದ ಬಿ.ಇ ಪದವಿ ಪಡೆದಿದ್ದಾರೆ. ಸಮಾಜಶಾಸ್ತ್ರ ವಿಷಯವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡು ಈ ಸಾಧನೆ ಮಾಡಿದ್ದಾರೆ.

ದೆಹಲಿ ವಿಶ್ವವಿದ್ಯಾಲಯದಿಂದ ಬಿ.ಕಾಂ ಪದವೀಧರರಾದ ಆಕಾಂಕ್ಷ್ ಮೂರನೇ ರ‍್ಯಾಂಕ್ ಪಡೆದಿದ್ದು, ರಾಘವ್ ಜುಂಜುನ್‌ವಾಲಾ ಹಾಗೂ ಇಶಾನ್ ಭಟ್ನಾಗರ್ ಅವರು ಐದನೇ ರ‍್ಯಾಂಕ್ ಪಡೆದಿದ್ದಾರೆ.

ಅಂಕಿ ಅಂಶಗಳು

9,37,876 ಪರೀಕ್ಷೆಗೆ ಹಾಜರಾಗಲು ಅರ್ಜಿ ಸಲ್ಲಿಸಿದವರು

5,76,793 ಪ್ರಾಥಮಿಕ ಹಂತದ ಪರೀಕ್ಷೆಗೆ ಹಾಜರಾದವರು

14,161 ಲಿಖಿತ (ಮುಖ್ಯ) ಪರೀಕ್ಷೆಗೆ ಅರ್ಹತೆ ಪಡೆದವರು

2,736 ಅಂತಿಮ ಪರೀಕ್ಷೆಗೆ (ವ್ಯಕ್ತಿತ್ವ ಪರೀಕ್ಷೆ) ಅರ್ಹತೆ ಗಳಿಸಿದವರು

958 ಆಯ್ಕೆಯಾದ ಅಭ್ಯರ್ಥಿಗಳು

'180ಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ರ‍್ಯಾಂಕ್'

ಬೆಂಗಳೂರು: 'ಕೇಂದ್ರ ಲೋಕಸೇವಾ ಆಯೋಗ ನಡೆಸಿದ 2025ನೇ ಸಾಲಿನ ನಾಗರಿಕ ಸೇವಾ ಪರೀಕ್ಷೆಯಲ್ಲಿಇನ್‌ಸೈಟ್ಸ್ ಐಎಎಸ್ ಅಕಾಡೆಮಿಯಲ್ಲಿ ತರಬೇತಿ ಪಡೆದ 180ಕ್ಕೂ ಹೆಚ್ಚು ಅಭ್ಯರ್ಥಿಗಳು ರ‍್ಯಾಂಕ್ ಪಡೆದಿದ್ದು, ದೇಶದ ವಿವಿಧ ಭಾಗದವರು ಈ ಅಕಾಡೆಮಿಯಲ್ಲಿ ತರಬೇತಿ ಪಡೆಯುವ ಮೂಲಕ ಯಶಸ್ಸು ಸಾಧಿಸಿದ್ದಾರೆ' ಎಂದು ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕ ನಿರ್ದೇಶಕ ವಿನಯ್ ಕುಮಾರ್ ಜಿ.ಬಿ. ಹೇಳಿದ್ದಾರೆ.

'ಈ ಪೈಕಿ ಅಖಿಲ ಭಾರತ ಮಟ್ಟದಲ್ಲಿ 15ನೇ ರ‍್ಯಾಂಕ್, 19ನೇ ರ‍್ಯಾಂಕ್ ಸೇರಿದಂತೆ ಅನೇಕ ಉನ್ನತ ಶ್ರೇಣಿಗಳನ್ನು ಸಂಸ್ಥೆಯ ವಿದ್ಯಾರ್ಥಿಗಳು ಪಡೆದಿದ್ದಾರೆ. ಕರ್ನಾಟಕದ ಅಭ್ಯರ್ಥಿಗಳ ಸಾಧನೆಯೂ ಗಮನಾರ್ಹವಾಗಿದೆ. ನಮ್ಮ ಸಂಸ್ಥೆಯ ಪೂರ್ವಭಾವಿ ಹಾಗೂ ಮುಖ್ಯ ಪರೀಕ್ಷೆಗಳ ಪರೀಕ್ಷಾ ಸರಣಿ, ಮೆಂಟರ್‌ಶಿಪ್ ಕಾರ್ಯಕ್ರಮ, ಕೋರ್ ಬ್ಯಾಚ್ ಮತ್ತು ಅಣಕು ಸಂದರ್ಶನಗಳಂತಹ ಮಾರ್ಗದರ್ಶನ ಕಾರ್ಯಕ್ರಮ ಗಳಲ್ಲಿ ಪಾಲ್ಗೊಂಡಿದ್ದ, ರಾಜ್ಯದ 23 ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಯಶಸ್ವಿಯಾಗುವ ಮೂಲಕ ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ' ಎಂದು ಶ್ಲಾಘಿಸಿದರು.

'ನಮ್ಮ ಸಂಸ್ಥೆಯಲ್ಲಿ ತರಬೇತಿ ಪಡೆದವರು ಯುಪಿಎಸ್‌ಸಿಯಲ್ಲಿ ರ‍್ಯಾಂಕ್ ಪಡೆಯುತ್ತಿರುವ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. 'ಮಿಷನ್ 100' ಕಾರ್ಯಕ್ರಮದಡಿ 2028ರ ವೇಳೆಗೆ ಕರ್ನಾಟಕದಿಂದ ಪ್ರತಿ ವರ್ಷ ಕನಿಷ್ಠ 100 ಅಭ್ಯರ್ಥಿಗಳನ್ನು ಐಎಎಸ್, ಐಪಿಎಸ್‌ಗೆ ಕೊಡುಗೆ ನೀಡುವ ಗುರಿ ಇದೆ' ಎಂದರು.

ಯುಪಿಎಸ್‌ಸಿ: ಕರುನಾಡಿನ ಸಾಧಕರು

ಸಂದೀಪ ಬಾಡದ

82ನೇ ರ‍್ಯಾಂಕ್

ಯಾದಗಿರಿ: ಯಾದಗಿರಿ ನಗರದ ಗಾಂಧಿ ವೃತ್ತದ ನಿವಾಸಿ. ಕಿರಾಣಿ ಅಂಗಡಿ ನಡೆಸುತ್ತಿದ್ದ ಬಸವರಾಜಪ್ಪ ಬಾಡದ ಹಾಗೂ ಗೃಹಿಣಿ ನಿರ್ಮಲಾ ಬಸವರಾಜಪ್ಪ ಪುತ್ರ ಸಂದೀಪ ಬಾಡದ ಅವರಿಗೆ 82ನೇ ರ‍್ಯಾಂಕ್ ಪಡೆದಿದ್ದಾರೆ. ಪ್ರಾಥಮಿಕ ಹಂತದಿಂದ ಪಿಯುವರೆಗೆ ಶಹಾಪುರದ ಜವಾಹರ ನವೋದಯ ವಿದ್ಯಾಲಯದಲ್ಲಿ ಓದಿದರು. ಬೆಂಗಳೂರಿನ ಡಾ.ಅಂಬೇಡ್ಕರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಡಾ.ಎಐಟಿ) ಕಾಲೇಜಿನಲ್ಲಿ ಎಂಜಿನಿಯರಿಂಗ್ ಪದವಿ. ಯುಪಿಎಸ್‌ಸಿಯಲ್ಲಿ ಮಾನವಶಾಸ್ತ್ರ ಐಚ್ಛಿಕ ವಿಷಯವಾಗಿ ತೆಗೆದುಕೊಂಡರು.

ಎಂಜಿನಿಯರಿಂಗ್ ಅಂತಿಮ ವರ್ಷದಲ್ಲಿ ಇರುವಾಗ ಯುಪಿಎಸ್‌ಸಿ ಪರೀಕ್ಷೆ ಬರೆಯಲು ಇಚ್ಛಿಸಿದೆ. ಪದವಿ ಮುಗಿಸಿ ಮೂರು ವರ್ಷ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡಿದೆ. ಕಂಪನಿಗೆ ರಾಜೀನಾಮೆ ಕೊಟ್ಟು ದೆಹಲಿಯಲ್ಲಿ ತರಬೇತಿ ಪಡೆದು ಯುಪಿಎಸ್‌ಸಿ ಪಾಸ್ ಮಾಡಿದೆ. ತವರು ಜಿಲ್ಲೆಯಲ್ಲಿ ಸೇವೆ ಸಲ್ಲಿಸುವ ಕನಸಿದೆ ಎಂದು ಸಂದೀಪ ಹೇಳಿದರು.

ಕೃಪಾ ಜೈನ್

190ನೇ ರ‍್ಯಾಂಕ್

ಹುಬ್ಬಳ್ಳಿ: ಇಲ್ಲಿನ ಕೃಪಾ ಜೈನ್ ಅವರು ಯುಪಿಎಸ್‌ಸಿ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ 190ನೇ ರ‍್ಯಾಂಕ್ ಪಡೆದು ಐಪಿಎಸ್ ಅಧಿಕಾರಿಯಾಗಿ ಆಯ್ಕೆ ಆಗಿದ್ದಾರೆ.

ಈ ಹಿಂದೆ ಇವರು 440ನೇ ರ‍್ಯಾಂಕ್ (ಐಆರ್‌ಎಂಎಸ್) ಹಾಗೂ ಐಎಫ್‌ಎಸ್ ಪರೀಕ್ಷೆಯಲ್ಲಿ 18ನೇ ರ‍್ಯಾಂಕ್ ಗಳಿಸಿದ್ದರು. ಉನ್ನತ ರ‍್ಯಾಂಕ್ ಗಳಿಸುವ ಮಹತ್ವಾಕಾಂಕ್ಷೆಯಿಂದ ಮತ್ತೊಮ್ಮೆ ಪರೀಕ್ಷೆ ಬರೆದಿದ್ದರು.

ಇದೀಗ ಐದನೇ ಪ್ರಯತ್ನದಲ್ಲಿ ಐಪಿಎಸ್ ಆಗಿ ಆಯ್ಕೆಯಾಗಿದ್ದಾರೆ. ಸದ್ಯ ಡೆಹ್ರಾಡೂನ್‌ನಲ್ಲಿ ಐಎಫ್‌ಎಸ್ ತರಬೇತಿ ಪಡೆಯುತ್ತಿದ್ದಾರೆ.

ಇಂದಿರಾ ಮತ್ತು ಉದ್ಯಮಿ ಅಭಯ್ ಪಾರ್ಲೆಚಾ ದಂಪತಿ ಪುತ್ರಿ ಕೃಪಾ, ದ್ವಿತೀಯ ಪಿಯುವರೆಗೆ ಹುಬ್ಬಳ್ಳಿಯಲ್ಲೇ ಶಿಕ್ಷಣ ಪಡೆದಿದ್ದಾರೆ. ಬೆಂಗಳೂರಿನ ಆರ್.ವಿ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಬಿ.ಇ. ಪದವಿ ಪೂರೈಸಿದ್ದಾರೆ. ಬಿ.ಇ. ಓದುವಾಗ ನಾಗರಿಕ ಸೇವೆ ಕಡೆಗೆ ಆಸಕ್ತಿ ಬೆಳೆಸಿಕೊಂಡ ಅವರು, ದೆಹಲಿಗೆ ತೆರಳಿ ತಜ್ಞರ ಸಲಹೆ ಪಡೆದು ಅಧ್ಯಯನ ಮಾಡಿದ್ದಾರೆ.

ಮನೋಜ್

389 ನೇ ರ‍್ಯಾಂಕ್

ಸಕಲೇಶಪುರ (ಹಾಸನ): ತಾಲ್ಲೂಕಿನ ಗುರ್ಜಾನಹಳ್ಳಿಯ ಜಿ.ಎಸ್. ಮನೋಜ್ ಅವರು ಯುಪಿಎಸ್‌ಸಿ ಪರೀಕ್ಷೆಯಲ್ಲಿ 389ನೇ ರ‍್ಯಾಂಕ್ ಗಳಿಸಿದ್ದಾರೆ.

ರೈತ ಜಿ.ಕೆ. ಸೋಮಶೇಖರ್– ತೀರ್ಥಾವತಿ ದಂಪತಿಯ ಪುತ್ರರಾದ ಅವರು ಹೊಳೆನರಸೀಪುರ ತಾಲ್ಲೂಕಿನ ಮಾವಿನಕೆರೆ ನವೋದಯ ಶಾಲೆಯಲ್ಲಿ 6ನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗೆ ವ್ಯಾಸಂಗ ಮಾಡಿದ್ದಾರೆ.

ಮಂಗಳೂರಿನ ಸುರತ್ಕಲ್‌ನ ಎನ್‌ಐಟಿಕೆಯಲ್ಲಿ ಬಿ.ಟೆಕ್ ಪದವಿ ಮುಗಿಸಿ ಕ್ಯಾಂಪಸ್ ಆಯ್ಕೆ ಆಗಿದ್ದರೂ, ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸುವ ಸಲುವಾಗಿ ಕೆಲಸಕ್ಕೆ ಹೋಗಿರಲಿಲ್ಲ.

'ಕೋಚಿಂಗ್ ಸೆಂಟರ್‌ನಿಂದ ತರಬೇತಿ ಪಡೆಯದೇ, ಬಾಡಿಗೆಗೆ ರೂಂ ಮಾಡಿಕೊಂಡು ಗ್ರಂಥಾಲಯದ ಪುಸ್ತಕಗಳನ್ನು ಓದಿ ರ‍್ಯಾಂಕ್ ಪಡೆದಿದ್ದಾನೆ' ಎಂದು ಸೋಮಶೇಖರ್ ಅವರು 'ಪ್ರಜಾವಾಣಿ'ಗೆ ಹೆಮ್ಮೆಯಿಂದ ಹೇಳಿದರು.

ಎ.ಮಧು

436 ನೇ ರ‍್ಯಾಂಕ್

ಕೋಲಾರ: ಕೋಲಾರ ತಾಲ್ಲೂಕು ಇರಗಸಂದ್ರದ ನಿವಾಸಿ ಎ.ಮಧು ಅವರು 436ನೇ ರ‍್ಯಾಂಕ್ ಪಡೆದ್ದಾರೆ. ಕಳೆದ ಬಾರಿ 544ನೇ ರ‍್ಯಾಂಕ್ ಪಡೆದಿದ್ದ ಮಧು ಈ ಬಾರಿ ಮತ್ತೆ ಪರೀಕ್ಷೆ ಬರೆದು ಫಲಿತಾಂಶ ಸುಧಾರಿಸಿಕೊಂಡಿದ್ದಾರೆ. ಆರನೇ ಪ್ರಯತ್ನದಲ್ಲಿ ಈ ಸಾಧನೆ ಮಾಡಿದ್ದಾರೆ. ಪೋಷಕರಾದ ಆನಂದ್ ಗೌಡ ಹಾಗೂ ಸುಶೀಲಮ್ಮ ಕೃಷಿಕರು. ತರಕಾರಿ ಬೆಳೆದು ಜೀವನ ಸಾಗಿಸುತ್ತಿದ್ದಾರೆ.

ಚಿಕ್ಕಬಳ್ಳಾಪುರದಲ್ಲಿ ಕಾಲೇಜು ಮುಗಿಸಿ ನಂತರ ಬೆಂಗಳೂರಿನ ಜಿಕೆವಿಕೆಯಲ್ಲಿ ಬಿ.ಎಸ್ಸಿ (ಕೃಷಿ) ಓದಿದ್ದಾರೆ.

ವರುಣ್ ಗೌಡ ಪಿ.

462 ನೇ ರ‍್ಯಾಂಕ್

ಕೋಲಾರ: ತಾಲ್ಲೂಕಿನ ತ್ಯಾವನಹಳ್ಳಿ ನಿವಾಸಿ ವರುಣ್‌ಗೌಡ ಪಿ ಅವರು ಮೂರನೇ ಪ್ರಯತ್ನದಲ್ಲಿ 462ನೇ ರ‍್ಯಾಂಕ್ ಪಡೆದಿದ್ದಾರೆ. ಕೊಪ್ಪಳದ ವೈದ್ಯಕೀಯ ಕಾಲೇಜಿನಲ್ಲಿ ಎಂಬಿಬಿಎಸ್ ಓದಿದ್ದಾರೆ. ಸ್ವಲ್ಪ ದಿನ ವೈದ್ಯಾಧಿಕಾರಿ ಆಗಿಯೇ ಸಿದ್ಧತೆ ನಡೆಸಿದರು. ಎಎಸ್‌ಐ ಪ್ರಕಾಶ್ ಆರ್. ಹಾಗೂ ಎಂ.ಪ್ರೇಮಾ ಪೋಷಕರು.

'ಕಷ್ಟಪಟ್ಟು ಓದಿದ್ದೇನೆ. ಅಪ್ಪ, ಅಮ್ಮ ಸ್ಫೂರ್ತಿದಾಯಕರಾಗಿದ್ದರು ಎಂದರು.

ನಿವೇದಿತಾ ಸಿ.ಬಾವಿಮನಿ

469 ನೇ ರ‍್ಯಾಂಕ್

ಯಾದಗಿರಿ: ಇಲ್ಲಿನ ಬಾಲಾಜಿ ನಗರದ ನಿವಾಸಿ. ನಿವೃತ್ತ ಆಡಳಿತಾಧಿಕಾರಿ ಚಂದಪ್ಪ ಬಾವಿಮನಿ ಮತ್ತು ಪಿಡಿಒ ವಿಜಯಲಕ್ಷ್ಮಿ ಪುತ್ರಿ ನಿವೇದಿತಾ ಸಿ ಬಾವಿಮನಿ ಅವರು 469ನೇ ರ‍್ಯಾಂಕ್ ಗಳಿಸಿದ್ದಾರೆ. ಆರ್‌ವಿ ಶಾಲೆಯಲ್ಲಿ ಪ್ರೌಢಶಿಕ್ಷಣ, ಕಲಬುರಗಿಯ ಎಸ್‌ಬಿಆರ್ ವಿಜ್ಞಾನ ಕಾಲೇಜಿನಲ್ಲಿ ಪಿಯು ಮತ್ತು ಬೆಂಗಳೂರಿನ 'ಕಿಮ್ಸ್'ನಲ್ಲಿ ಎಂಬಿಬಿಎಸ್ ಪದವಿ. ಯುಪಿಎಸ್‌ಸಿಯಲ್ಲಿ ವೈದ್ಯಕೀಯ ವಿಜ್ಞಾನ ಐಚ್ಛಿಕ ವಿಷಯವಾಗಿ ತೆಗೆದುಕೊಂಡಿದ್ದರು

ಎಸ್‌ಎಸ್ ಎಲ್‌ಸಿ ಓದುವಾಗಲೇ ಯುಪಿಎಸ್‌ಸಿ ಪರೀಕ್ಷೆಗೆ ಬಗ್ಗೆ ಆಸಕ್ತಿ ಮೂಡಿತ್ತು. ಎಂಬಿಬಿಎಸ್ ಮುಗಿಸಿ, ಆರು ತಿಂಗಳು ಜಿಲ್ಲಾ ಆಸ್ಪತ್ರೆಯಲ್ಲಿ ಪ್ರಾಕ್ಟಿಸ್ ಮಾಡಿ ಕೋಚಿಂಗ್‌ಗಾಗಿ ಬೆಂಗಳೂರಿಗೆ ತೆರಳಿದೆ. ಸ್ನೇಹಿತರ ಜೊತೆಗಿನ ಗುಂಪು ಓದು, ಪರಸ್ಪರ ಚರ್ಚೆ ಮಾಡುತ್ತಿದ್ದರಿಂದ ಪರೀಕ್ಷೆಗೆ ಬಹಳಷ್ಟು ಅನುಕೂಲವಾಯಿತು. ಐಎಎಸ್ ಅಧಿಕಾರಿಯಾಗುವ ಆಸೆ ಇದೆ ಎಂದು ನಿವೇದಿತಾ ಹೇಳಿದರು.

ಕೆ.ಎಲ್. ಸೂರಜ್

525 ನೇ ರ‍್ಯಾಂಕ್

ಮೈಸೂರು: ಇಲ್ಲಿನ ಸಿದ್ಧಾರ್ಥ- ನಗರದ ಕೆ.ಎಲ್. ಸೂರಜ್ ಅವರು ಯುಪಿಎಸ್‌ಸಿ ಪರೀಕ್ಷೆಯಲ್ಲಿ 525ನೇ ರ‍್ಯಾಂಕ್ ಪಡೆದಿದ್ದಾರೆ. ಇದು ಅವರ ನಾಲ್ಕನೇ ಪ್ರಯತ್ನದ ಯಶಸ್ಸು. 3ನೇ ಪ್ರಯತ್ನದಲ್ಲಿ 713ನೇ ರ‍್ಯಾಂಕ್ ಗಳಿಸಿ, ಕರ್ನಾಟಕ ಕೇಡರ್‌ನಲ್ಲೇ ಐಪಿಎಸ್ ಆಗಿ ಆಯ್ಕೆಯಾಗಿದ್ದರು.

29 ವರ್ಷ ವಯಸ್ಸಿನ ಅವರು ಕೊಡಗು ಜಿಲ್ಲೆ ವಿರಾಜಪೇಟೆಯವರು. ತಂದೆ ಕೆ.ಬಿ. ಲಿಂಗರಾಜ್ ನಿವೃತ್ತ ಪೊಲೀಸ್ ಅಧಿಕಾರಿ. ಮೈಸೂರಿನಲ್ಲಿ ನೆಲೆಸಿದ್ದಾರೆ. ಮೈಸೂರಿನ ಜೆಎಸ್‌ಎಸ್ ಶಾಲೆಯಲ್ಲಿ ಪ್ರಾಥಮಿಕ. ಹಳಿಕೆಯಲ್ಲಿ ಪ್ರೌಢ ಶಿಕ್ಷಣ ಮೈಸೂರಿನ ವಿದ್ಯಾವರ್ಧಕ ಗೋಲ್ಡನ್ ಜ್ಯುಬಿಲಿ ಕಾಲೇಜಿನಲ್ಲಿ ಪಿಯುಸಿ, ಎಸ್‌ಜೆಸಿಇ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ.

'ಅಧ್ಯಯನ ಯೋಜನೆ , ಸಂಪನ್ಮೂಲದ ಪಟ್ಟಿ, ಅಣಕು ಪ್ರಶ್ನೆಗಳಿಗೆ ಎಐ ಬಳಸಿ ಅಭ್ಯಾಸ ಮಾಡಿದ್ದರಿಂದ ರ‍್ಯಾಂಕ್ ಸುಧಾರಿಸಿತು. ಆನ್‌ಲೈನ್‌ನಲ್ಲೇ ಟ್ಯೂಷನ್ ತೆಗೆದುಕೊಳ್ಳಬಹುದು. ಕನ್ನಡದಲ್ಲಿ ಪರೀಕ್ಷೆ ಬರೆಯುವವರು 'ಪ್ರಜಾವಾಣಿ' ಕಡ್ಡಾಯವಾಗಿ ಓದುತ್ತಾರೆ' ಎನ್ನುತ್ತಾರೆ ಅವರು.

ಧನಂಜಯ

554 ನೇ ರ‍್ಯಾಂಕ್

ನಾಗಮಂಗಲ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಆರ್.ಧನಂಜಯ ಯುಪಿಎಸ್ಸಿ ಪರೀಕ್ಷೆಯಲ್ಲಿ 554ನೇ ರ‍್ಯಾಂಕ್ ಪಡೆದಿದ್ದಾರೆ.ಇವರು ಕರಡಹಳ್ಳಿಯ ರೈತ ರಾಮಚಂದ್ರ- ಮಂಗಳಮ್ಮ ದಂಪತಿಯ ಮಗ.

ಕರಡಹಳ್ಳಿ ಸರ್ಕಾರಿ ಶಾಲೆಯಲ್ಲಿ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ, ಬಳಿಕ ಮೈಸೂರಿನ ನೌಕಿಸ್ ಪಿಯು ಅಕಾಡೆಮಿ ಯಲ್ಲಿ ಪಿಯುಸಿ, ಮಂಡ್ಯ ಪಿಇಎಸ್ ಕಾಲೇಜಿನಲ್ಲಿ ಬಿಎಸ್ಸಿ ಪದವಿ ಪಡೆದಿದ್ದಾರೆ.

'ಏಳು ವರ್ಷಗಳಲ್ಲಿ 3 ಬಾರಿ ಸಂದರ್ಶನ ಎದುರಿಸಿದ್ದರೂ ಆಯ್ಕೆಯಾಗಿರಲಿಲ್ಲ. ಇದು ಕೊನೆಯ ಅವಕಾಶ ಎಂದು ಭಾವಿಸಿದ್ದೆ. ಆಯ್ಕೆಯಾಗಿದ್ದೇನೆ. ಭಾಷೆಯ ಬಗ್ಗೆ ಭಯ ಬೇಡ. ಸಂದರ್ಶನ ಎದುರಿಸುವಾಗ ಇಂಗ್ಲಿಷ್, ಹಿಂದಿ ಕಷ್ಟವಾಗುತ್ತದೆಂಬುದು ಸುಳ್ಳು' ಎಂದು ತಿಳಿಸಿದರು. 'ದಿನಕ್ಕೆ 10-12 ಗಂಟೆ ಸತತ ಅಭ್ಯಾಸ ಮಾಡುತ್ತಿದ್ದೆ. ಹಿರಿಯರ ಮಾರ್ಗದರ್ಶನ, ಯೂಟ್ಯೂಬ್ ವಿಡಿಯೊಗಳು ಸಹಕಾರಿಯಾದವು'. ತಂದೆ ಹಸು ಸಾಕಿ ಓದಿಗೆ ಬೆಂಗಾವಲಾದರು. ತಮ್ಮ ಎಂ.ಕಾಂ ಮುಗಿಸಿ ನೆರವಾದ. ಡಿ.ಕೆ ರವಿ ಅವರೇ ಸ್ಫೂರ್ತಿ' ಎಂದರು.

ಎಂ.ಎಸ್.ಉಲ್ಲಾಸ್

556 ನೇ ರ‍್ಯಾಂಕ್

ಕೋಲಾರ: ಕೋಲಾರ ತಾಲ್ಲುಕಿನ ಮೇಡಿತಂಬಹಳ್ಳಿ ನಿವಾಸಿ ಎಂ.ಎಸ್.ಉಲ್ಲಾಸ್ ಅವರು 556ನೇ ರ‍್ಯಾಂಕ್ ಗಳಿಸಿ ಸಾಧನೆ ಮಾಡಿದ್ದಾರೆ. ಪಿಎಲ್‌ಡಿ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ಎಂ.ಎಚ್.ಶ್ರೀನಿವಾಸ್ ಮತ್ತು ವಿಟ್ಟಪ್ಪನಹಳ್ಳಿ ಸರ್ಕಾರಿ ಶಾಲಾ ಶಿಕ್ಷಕಿ ಸುಜಾತಾ ದಂಪತಿ ಪುತ್ರ.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ನಗರದ ಚಿನ್ಮಯ ವಿದ್ಯಾಲಯದಲ್ಲಿ ಮಾಡಿದ್ದಾರೆ. ನಗರದ ಸಹ್ಯಾದ್ರಿ ಕಾಲೇಜಿನಲ್ಲಿ ಕಾಲೇಜು ಶಿಕ್ಷಣ ಮತ್ತು ಸುರತ್ಕಲ್‌ನ ಎನ್‌ಐಟಿಕೆಯಿಂದ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ.

ಸಾಗರ್.ಎ

641 ನೇ ರ‍್ಯಾಂಕ್

ಕೋಲಾರ: ಕೋಲಾರ ತಾಲ್ಲೂಕಿನ ಶಾನುಭೋಗನ ಹಳ್ಳಿ ನಿವಾಸಿ ಸಾಗರ್ ಎ ಅವರು ಐದನೇ ಪ್ರಯತ್ನ ದಲ್ಲಿ 641ನೇ ರ‍್ಯಾಂಕ್ ಪಡೆದಿದ್ದಾರೆ. ತಂದೆ ಅಶ್ವಥಪ್ಪ ಹಾಗೂ ತಾಯಿ ಸುಶೀಲಮ್ಮ ಕೃಷಿಕರು. ಬೆಂಗಳೂರಿನ ಡಾ.ಅಂಬೇಡ್ಕರ್ ತಾಂತ್ರಿಕ ಸಂಸ್ಥೆಯಲ್ಲಿ ಬಿ.ಇ ಓದಿರುವ ಸಾಗರ್, ಸದ್ಯ ಪಿಎಸ್‌ಐ ಆಗಿ ಕೆಲಸ ಮಾಡುತ್ತಿದ್ದಾರೆ.

ವೈ.ಚಂದನ್

661 ನೇ ರ‍್ಯಾಂಕ್

ಬೆಂಗಳೂರು: ಸಿಂಗನಾಯಕನಹಳ್ಳಿ ನಿವಾಸಿ, ವಿ.ಯಲ್ಲಪ್ಪ ಮತ್ತು ಮಂಜುಳಾ ಅವರ ಪುತ್ರ. ಬೆಂಗಳೂರಿನ ಆರ್.ಟಿ.ಎನ್.ಇ.ಟಿ ಶಾಲೆಯಲ್ಲಿ ಪ್ರೌಢಶಿಕ್ಷಣ, ಮಂಗಳೂರಿನ ಎಕ್ಸ್‌ಲೆಂಟ್ ಪಿಯು ಕಾಲೇಜಿನಲ್ಲಿ ಪಿಯು ಶಿಕ್ಷಣ. ಯುಪಿಎಸ್‌ಸಿಯಲ್ಲಿ ಕೃಷಿ ಐಚ್ಛಿಕ ವಿಷಯವಾಗಿ ತೆಗೆದುಕೊಂಡಿದ್ದರು. ಯುಪಿಎಸ್‌ಸಿ ಪರೀಕ್ಷೆಯಲ್ಲಿ 661ನೇ ರ‍್ಯಾಂಕ್ ಪಡೆದಿದ್ದು, ಯಾವುದೇ ಕೋಚಿಂಗ್ ತರಗತಿಗೆ ಹೋಗಲಿಲ್ಲ ಎಂದು ತಿಳಿಸಿದರು.

ಬಸವರಾಜ ಜವಳಿ

664 ನೇ ರ‍್ಯಾಂಕ್

ಯಾದಗಿರಿ: ಜಿಲ್ಲೆಯ ಶಹಾಪುರ ನಗರ ಗುತ್ತಿಪೇಟ ನಿವಾಸಿ ಬಸವರಾಜ ಜವಳಿ 664ನೇ ರ‍್ಯಾಂಕ್ ಪಡೆದಿದ್ದಾರೆ. ಜನರಲ್ ಸ್ಟೋರ್ ವ್ಯಾಪಾರ ಮಾಡುತ್ತಿರುವ ವಿಶ್ವನಾಥ ಹಾಗೂ ಗೃಹಿಣಿ ಗಿರಿಜಾ ಅವರ ಪುತ್ರ. ಯಾದಗಿರಿ ಆರ್.ವಿ ಶಾಲೆಯಲ್ಲಿ ಪೌಢಶಿಕ್ಷಣ, ಕಲಬುರಗಿ ಮಹೇಶ ವಿಜ್ಞಾನ ಕಾಲೇಜಿನಲ್ಲಿ ಪಿಯು ಹಾಗೂ ಬೆಂಗಳೂರಿನ ಬಿಎಂಎಸ್ ಕಾಲೇಜಿನಲ್ಲಿ ಸಿವಿಲ್ ಎಂಜಿನಿಯರಿಂಗ್ ಮುಗಿಸಿದರು. ಯುಪಿಎಸ್‌ಸಿಯಲ್ಲಿ ಮಾನವ ಶಾಸ್ತ್ರ ಐಚ್ಛಿಕ ವಿಷಯವಾಗಿ ತೆಗೆದುಕೊಂಡರು.

ಪ್ರಭಾವಿಯೊಬ್ಬರು ಒತ್ತುವರಿ ಮಾಡಿದ್ದನ್ನು ಶಹಾಪುರ ಪುರಸಭೆಯ ಮಹಿಳಾ ಮುಖ್ಯಾಧಿಕಾರಿಯೊಬ್ಬರು ತೆರವುಗೊಳಿಸಿದರು. ಆಡಳಿತ ಶಕ್ತಿಯು ನನಗೆ ಪ್ರೇರಣೆ ನೀಡಿ, ನಾಗರಿಕ ಸೇವೆ ಎಂದರೆ ಏನು ಎಂಬುದನ್ನು ಅರ್ಥೈಸಿತು. ಅಧಿಕಾರಿಯಾದರೆ ಯಾರಿಗೂ ಹೆದರದೆ ಕೆಲಸ ಮಾಡಬಹುದು ಅನಿಸಿತು. ಮೂರು ಹುದ್ದೆ ತೊರೆದು ಮೂರು ವರ್ಷಗಳಿಂದ ಸತತವಾಗಿ ಅಭ್ಯಾಸ ಮಾಡಿದೆ ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

ಅನಿರುದ್ಧ

786 ನೇ ರ‍್ಯಾಂಕ್

ಬಳ್ಳಾರಿ: ಬಳ್ಳಾರಿಯ ಅನಿರುದ್ಧ ಕಟ್ಟಿಮನಿ ಅವರು ಯುಪಿಎಸ್‌ಸಿ ಪರೀಕ್ಷೆಯಲ್ಲಿ 786ನೇ ರ‍್ಯಾಂಕ್ ಗಳಿಸಿದ್ದಾರೆ. ತಂದೆ ಪುರುಷೋತ್ತಮ್ ಜೆಸ್ಕಾಂನಲ್ಲಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್. ತಾಯಿ ನಾಗಮಣಿ ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿ ಮುಖ್ಯ ವ್ಯವಸ್ಥಾಪಕರಾಗಿ ಸ್ವಯಂ ನಿವೃತ್ತಿ ಪಡೆದಿದ್ದಾರೆ.

ಬಳ್ಳಾರಿಯ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿಯಾದ ಅನಿರುದ್ಧ ಐಐಟಿ ಮದ್ರಾಸ್‌ನಿಂದ ಭೌತಶಾಸ್ತ್ರದಲ್ಲಿ ಬಿ.ಟೆಕ್ ಪದವಿ ಪಡೆದಿದ್ದಾರೆ. 2023ರಲ್ಲಿ ತಮ್ಮ ಮೊದಲ ಪ್ರಯತ್ನದಲ್ಲೇ ಐಎಫ್‌ಎಸ್ ಪಾಸು ಮಾಡಿದರು. ಸದ್ಯ ಡೆಹ್ರಾಡೂನ್‌ನ ಇಂದಿರಾಗಾಂಧಿ ರಾಷ್ಟ್ರೀಯ ಅರಣ್ಯ ಪ್ರತಿಷ್ಠಾನದಲ್ಲಿ ತರಬೇತಿಯಲ್ಲಿದ್ದಾರೆ. ತಮ್ಮ ಮೂರನೇ ಪ್ರಯತ್ನದಲ್ಲಿ ಅವರು ನಾಗರಿಕ ಸೇವಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. 'ಐಎಎಸ್ ಅಧಿಕಾರಿ ಆಗಬೇಕು ಎಂಬ ಉದ್ದೇಶದಿಂದಲೇ ನಾನು ಸಿವಿಲ್ಸ್ ಪರೀಕ್ಷೆ ಬರೆದಿದ್ದೆ. ಇನ್ನೂ ಉನ್ನತ ರ‍್ಯಾಂಕ್ ಪಡೆಯುವ ಉದ್ದೇಶವಿತ್ತು ಎಂದರು.

ಚಂದ್ರಶೇಖರ ದೊರೆ

880 ನೇ ರ‍್ಯಾಂಕ್

ಯಾದಗಿರಿ: 880ನೇ ರ‍್ಯಾಂಕ್ ಪಡೆದಿರುವ ಚಂದ್ರಶೇಖರ ದೊರೆ ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಚೆನ್ನೂರ (ಕೆ) ಗ್ರಾಮದ ನಿವಾಸಿ. ಬಿ.ಇ ಎಲೆಕ್ಟ್ರಾನಿಕ್ & ಕಮ್ಯುನಿಕೇಷನ್ ಪದವೀಧರ. ಕೃಷಿಕ, ದಿವಂಗತ ಮಾನಶಪ್ಪ ದೊರೆ ಹಾಗೂ ಗೃಹಿಣಿ ರತ್ನಮ್ಮ ಅವರ ಪುತ್ರ. ವನದುರ್ಗದ ಸರ್ಕಾರಿ ಪ್ರೌಢಶಾಲೆ, ಕಲಬುರಗಿ ಶ್ರೀಗುರು ಪಿಯು ವಿಜ್ಞಾನ ಕಾಲೇಜು, ಬೆಂಗಳೂರಿನ ಬಿಎಂಎಸ್ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ & ಕಮ್ಯುನಿಕೇಷನ್ ಪದವಿ ಮುಗಿಸಿದರು. ಯುಪಿಎಸ್‌ಸಿಯಲ್ಲಿ ಮಾನವಶಾಸ್ತ್ರ ಐಚ್ಛಿಕ ವಿಷಯವಾಗಿತ್ತು.

ಯುಪಿಎಸ್‌ಸಿ ಆಕಾಂಕ್ಷಿಗಳಿಗೆ ಕೋಚಿಂಗ್ ನೀಡುತ್ತಿದ್ದೆ. ನಮ್ಮ ಅಣ್ಣ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಮೂರು ಬಾರಿ ಸಂದರ್ಶನ ನೀಡಿದ್ದರೂ ಉತ್ತೀರ್ಣನಾಗಿರಲಿಲ್ಲ. ಅಣ್ಣನ ಕಾಳಜಿ ಹಾಗೂ ಒತ್ತಡದಿಂದ ಪ್ರೇರಣೆ ಪಡೆದು ಅಭ್ಯಾಸ ಮಾಡಿ ಕೊನೆಗೂ ಯುಪಿಎಸ್‌ಸಿಯಲ್ಲಿ ಯಶಸ್ವಿಯಾದೆ. ಎಂದು ಚಂದ್ರಶೇಖರ ಅವರು ತಮ್ಮ ಅನುಭವವನ್ನು ಹಂಚಿಕೊಂಡರು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

07 ಮಾರ್ಚ್ 2026 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಚತುರ್ಥಿ ಗಂ. 19-18 ನಕ್ಷತ್ರ: ಚಿತ್ತಾ ಗಂ. 11-16 ಯೋಗ: ವೃದ್ಧಿ ಗಂ. 6-53 ಕರಣ: ಬವ ಗಂ 6-32 ಕುಂಭ ಮಾಸದ 22 ನೇ ದಿನ. ಮಳೆ ನಕ್ಷತ್ರ : ಪೂರ್ವಾಭಾದ್ರ 1 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 - 10-30, ಸೂರ್ಯೋದಯ : 06-46 ಸೂರ್ಯಾಸ್ತ : 06-37, ಮುಸ್ಲಿಂ ದಿನಾಂಕ : 17 ರಂಜಾನ್, ಅದೃಷ್ಟ ಸಂಖ್ಯೆ : 4, 12

ಮೇಷ: ಬುದ್ಧಿಶಕ್ತಿಯನ್ನು ಒಳ್ಳೆಯ ಕೆಲಸಗಳಿಗೆ ಉಪಯೋಗಿಸಿಕೊಂಡು ಅದರಲ್ಲಿ ಯಶಸ್ಸನ್ನು ಪಡೆಯುವಿರಿ. ವಿಚಾರದ ಬಗೆಗಿನ ಯೋಚನೆಯಿಂದ ಉಳಿದೆಲ್ಲಾ ಕೆಲಸದಲ್ಲಿ ಮನಸ್ಸಿಲ್ಲದಂತಾಗುವುದು.

ವೃಷಭ: ಸತ್ಯನಾರಾಯಣ ಸ್ವಾಮಿ ಸೇವೆಯನ್ನು ಮಾಡುವುದರಿಂದ ಜಟಿಲ ಸಮಸ್ಯೆಗಳು ಸೌಹಾರ್ದಯುತವಾಗಿ ಬಗೆಹರಿಯಲಿವೆ. ಉನ್ನತ ವಿದ್ಯಾಭ್ಯಾಸ ಮಾಡುವ ಕನಸಿಗೆ, ಪರಿಚಿತರಿಂದ ಆರ್ಥಿಕ ಬಲ ಸಿಗಲಿದೆ.

ಮಿಥುನ: ಕೇವಲ ಕ್ಷಣಿಕ ಸುಖಗಳಿಗೆ ಗಮನ ನೀಡದೆ ಗಂಭೀರವಾಗಿ ಆಲೋಚಿಸಿ ತೀರ್ಮಾನ ತೆಗೆದುಕೊಳ್ಳುವುದು ಉತ್ತಮ. ಸ್ವಲ್ಪ-ಸ್ವಲ್ಪ ಜವಾಬ್ದಾರಿ ಹೊರುವುದಕ್ಕಿಂತ ನಿರ್ದಿಷ್ಟ ಕೆಲಸಕ್ಕೆ ಸಂಪೂರ್ಣ ಗಮನ ಕೊಡಿ.

ಕರ್ಕಾಟಕ: ದೈವಾನುಗ್ರಹದಿಂದ ಸಂತಾನ ಭಾಗ್ಯದ ಸುದ್ದಿ ಕೇಳುವಿರಿ. ಅದರ ಫಲವಾಗಿ ಮನೆಯಲ್ಲಿ ಸಡಗರದ ವಾತಾವರಣ ಸೃಷ್ಟಿಯಾಗಲಿದೆ. ಕೆಲಸಗಳು ತೀವ್ರಗತಿಯಲ್ಲಿ ಸಾಗುತ್ತಿರುವುದು ತುಸು ಸಂತಸವೆನಿಸುವುದು.

ಸಿಂಹ: ಕೆಲಸ ಕಾರ್ಯದಲ್ಲಿ ಗುಣ-ದೋಷದ ಬಗ್ಗೆ ಯೋಚನೆ ಮಾಡದೇ ಮುಂದುವರಿಯುವುದು ಸರಿಯಲ್ಲ. ಉಷ್ಣಾಧಿಕ್ಯವಾಗಿ ಆರೋಗ್ಯದಲ್ಲಿ ಏರುಪೇರಾಗಬಹುದು. ಬರಹಗಾರರಿಗೆ ಅವಕಾಶಗಳು ದೊರೆಯಲಿವೆ.

ಕನ್ಯಾ: ತರಕಾರಿ ವ್ಯಾಪಾರಿಗಳು ಉದ್ವೇಗಕ್ಕೆ ಒಳಗಾಗದೆ ತಾಳ್ಮೆಯಿಂದ ವ್ಯವಹರಿಸಿದರೆ ಹಾದಿ ಸುಗಮವಾಗಿ ಸಾಗುತ್ತದೆ. ಹಿರಿಯರು ಹೇಳಿದಂತೆ ದೂರ ದೃಷ್ಟಿ ಇಟ್ಟುಕೊಂಡು ಕಾರ್ಯ ಪ್ರವೃತ್ತರಾಗುವುದನ್ನು ಕಲಿಯಿರಿ.

ತುಲಾ: ಅಸೂಯೆ ಪಡುವ ಸಹೋದ್ಯೋಗಿಗಳ ನಡುವೆ ಕೆಲಸ ನಿರ್ವಹಿಸಬೇಕಾಗುತ್ತದೆ. ವಿದ್ಯಾರ್ಥಿಗಳಿಗೆ ಗುರಿ ಮುಟ್ಟುವ ವಿಚಾರದಲ್ಲಿ ಅತಿ ಪ್ರಯತ್ನ ಅತ್ಯಗತ್ಯ. ದೇಹದಲ್ಲಿ ಉಷ್ಣಾಧಿಕ್ಯ ಆಗುವ ಲಕ್ಷಣಗಳಿವೆ.

ವೃಶ್ಚಿಕ: ಸಾಂಸಾರಿಕವಾಗಿ ಹಾಗೂ ಸಾಮಾಜಿಕವಾಗಿ ವರ್ತನೆಯಲ್ಲಿ ಸಮತೋಲನ ಹಾಗೂ ಸ್ಥಿರತೆ ಕಾಯ್ದುಕೊಳ್ಳುವುದು ಬದುಕಿಗೆ ಕಾರಣವಾಗುತ್ತದೆ. ಸರಕು ಸಾಗಾಣೆ ಮತ್ತು ಸಾರಿಗೆ ವ್ಯವಸ್ಥೆಯವರಿಗೆ ಆದಾಯ ಇರುತ್ತದೆ.

ಧನು: ದೂರ ಪ್ರಯಾಣ ಮಾಡುವ ಅನಿವಾರ್ಯತೆ ಬಂದಲ್ಲಿ ರಾಹುಕಾಲದ ನಂತರದಲ್ಲಿ ಪ್ರಯಾಣ ಬೆಳೆಸಿ. ಎಲ್ಲಾ ಕೆಲಸಗಳೂ ಉತ್ತಮ ಉದ್ದೇಶವನ್ನೇ ಹೊಂದಿರುವುದು. ಅವಿವಾಹಿತರಿಗೆ ಶುಭ ಫಲಗಳು ಲಭಿಸಲಿವೆ.

ಮಕರ: ಕೈಕೆಳಗಿನ ನೌಕರರ ನೆರವು ಅಗತ್ಯವೆನಿಸಲಿದೆ. ಶ್ರಮದ ದುಡಿಮೆಗೆ ಉತ್ತಮ ಫಲ ದೊರೆತಂತೆ ಆಗುವುದು. ವಿಮೆ ಸಲಹೆಗಾರರಿಗೆ ವೃತ್ತಿ ರಂಗದಲ್ಲಿ ಉತ್ತಮ ಪ್ರಚೋದನೆಯಿಂದ ಯಶಸ್ಸು ಕಂಡುಬರಲಿದೆ.

ಕುಂಭ: ಸಮಸ್ಯೆಗಳ ಪರಿಹಾರಕ್ಕಾಗಿ ಹಿತ ಚಿಂತಕರೊಡನೆ ಮಾತುಕತೆ ನಡೆಸುವುದು ಒಳ್ಳೆಯದು. ನಿಧಾನವಾಗಿಯಾದರೂ ಸ್ವಂತ ವ್ಯವಹಾರದ ಲಾಭವು ಬಂದು ಕೈ ಸೇರಿದ ಸಂತಸ ನಿಮ್ಮದಾಗುವುದು.

ಮೀನ: ಒಳ್ಳೆಯ ಮಿತ್ರರಿಂದ ಕಂಪನಿಯ ಮುಖ್ಯ ವ್ಯಕ್ತಿಯ ಪರಿಚಯ ಹಾಗೂ ಅಭಿವೃದ್ಧಿ ಮಾಹಿತಿ ದೊರೆಯುತ್ತದೆ. ಗುಂಪು ಚಟುವಟಿಕೆಗಳಿಗೆ ಮುಂದಾಳತ್ವವು ಅಗತ್ಯವಾಗಿರುವುದು.

ಪದಬಂಧ 6336

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮಿಡಿ ಹಿಡಿದಿರುವ ವಯ್ಯಾರಿ (5)
4.ಸದ್ಯದ ಪರಿಸ್ಥಿತಿ (3)
5.ವ್ಯಾಕರಣದಲ್ಲಿ ಕ್ರಿಯೆಗೆ ನಿಮಿತ್ತವಾಗಿರುವುದು (3)
6.ಕೊನೆಗೆ ಹಿಸ್ಸೆಯಿರುವ ಅಂಚೆ! (3)
8. ರಾಜ ಸಭೆಯಿದು(3)
10.ಗಡಿಯಲ್ಲಿ ಖರೀದಿಸಿರುವ ಮಣ್ಣಿನ ಪಾತ್ರೆ (3)
11.ದನ,ಕುದುರೆ ಮೊದಲಾದವುಗಳ ಕೊಳಗು (3)
15.ನಕ್ಷತ್ರದ ಹೆಸರೂ ಆಗಿರುವ ಕರಂಡಕ (3)
16.ಅರ್ಧಗೋಳಾಕಾರದ ಗೋಪುರ (3)
17.ಆಕಾಶವನ್ನು ಮುಟ್ಟುವಂಥದ್ದು (5)

ಮೇಲಿಂದ ಕೆಳಕ್ಕೆ

1.ಮಿತದಲ್ಲಿನ ಸ್ಪಂದನ! (3)
2.ಚಪ್ಪಾಳೆಯನ್ನು ಹೀಗೆನ್ನಿ (5)
3.ಕಾವು ಇದ್ದಾಗ ಕಾಣಿಸಿದ್ದು ಹೊರಗಿನ ಅಂದ (3)
4.ನೋವು ಹೀಗೆ ಬಂದಿದೆ (3)
7.ಈತ ಸಂಪ್ರದಾಯ ವಿರೋಧಿ (3)
9.ಸ್ಥಿರವಾದುದು ಇದು (3)
10.ಆನೆಯ ನಡಿಗೆ (5)
12.ವೀರಯೋಧ ಇಲ್ಲಿದ್ದಾನೆ (3)
13.ಗಾಣದಿಂದ ಎಣ್ಣೆ ತೆಗೆಯುವವನು (3)
14. ಮುಳ್ಳುಗಳ ನಡುವೆ ಅರಳುವ ಹೂವು (3)



6335ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ನಿಷ್ಠಾವಂತ 3.ಕಲಗಚ್ಚು
5.ಕನ್ನಡ 6.ಪತಿ
8.ವರಾತ 12.ಕೆರೆತ
13.ಹಸು 15.ಬಡವ
16.ಮೃಗಜಲ 17.ಸೆರೆಮನೆ

ಮೇಲಿಂದ ಕೆಳಕ್ಕೆ:

1.ನಿಕ್ಷೇಪ 2.ತಕರಾರು
3.ಕಡವರ 7.ತಿಳಿವಳಿಕೆ
9.ತಲೆಬರಹ 10.ಹತಬಲ
11.ಭರವಸೆ 14.ಸುಮ್ಮನೆ

ಸುಡೊಕು 6720

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		4	9		2	1		6
1		6					8	
	8			6		3		5
7								
	5		7	1	4	2		8
4					6			7
2		5		7			6	
	6					8		
8		1	6		3			9

6719 ಸುಡೊಕು

4	3	8	2	1	9	5	6	7
1	2	9	6	5	7	3	4	8
7	6	5	8	4	3	2	9	1
3	4	2	9	6	1	8	7	5
8	7	6	3	2	5	9	1	4
5	9	1	7	8	4	6	3	2
9	1	7	5	3	2	4	8	6
6	5	3	4	7	8	1	2	9
2	8	4	1	9	6	7	5	3

ಒಳಮೀಸಲಿಗಾಗಿ ವಿವಿಧೆಡೆ ಪ್ರತಿಭಟನೆ

ದಾವಣಗೆರೆ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ಹೆದ್ದಾರಿ ತಡೆ, ಸರ್ಕಾರದ ವಿರುದ್ಧ ಕಿಡಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಮಾದಿಗ ಸಂಘಟನೆಗಳ ಒಕ್ಕೂಟ ಶುಕ್ರವಾರ ಕರೆ ನೀಡಿದ್ದ ಬಂದ್‌ಗೆ ನಗರದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತ ವಾಯಿತು. ಮಾರುಕಟ್ಟೆ, ಮುಖ್ಯ ರಸ್ತೆ ಹಾಗೂ ಪ್ರಮುಖ ಬೀದಿಗಳಲ್ಲಿ ಮಧ್ಯಾಹ್ನದವರೆಗೆ ಅಂಗಡಿ ಬಾಗಿಲು ಮುಚ್ಚಿದ್ದವು.

ಬೆಳಿಗ್ಗೆ ಮಾದಿಗ ಸಂಘಟನೆಗಳ ಒಕ್ಕೂಟದ ಸದಸ್ಯರು ಟೈರ್‌ಗಳಿಗೆ ಬೆಂಕಿ ಹಚ್ಚಿ ವಾಹನ ಸಂಚಾರ ತಡೆದರು. ನೇಮಕಾತಿ ಪ್ರಕ್ರಿಯೆಯಲ್ಲಿ ಮಾದಿಗ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಸಾರಿಗೆ ಸಂಚಾರಕ್ಕೆ ಅಡ್ಡಿಪಡಿಸುತ್ತಿದ್ದ ಪ್ರತಿಭಟನಕಾರರನ್ನು ಪೊಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು. ಇದರಿಂದ ಆಕ್ರೋಶಗೊಂಡ ಯುವಕನೊಬ್ಬ ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಳ್ಳಲು ಮುಂದಾದ. ಸ್ಥಳದಲ್ಲಿದ್ದ ಪೊಲೀಸರು ಇದನ್ನು ತಡೆದರು. ದ್ವಿಚಕ್ರ ವಾಹನ ಸವಾರರ ಮೇಲೆ ಪ್ರತಿಭಟನಕಾರರು ಹಲ್ಲೆ ನಡೆಸಿದ್ದರಿಂದ ಗಲಾಟೆ ಉಂಟಾಯಿತು.

ಕಡೂರು: ಮಹದೇವಪ್ಪ ವಿರುದ್ಧ ಬೇಸರ

ಕಡೂರು (ಚಿಕ್ಕಮಗಳೂರು): ಒಳ ಮೀಸಲಾತಿ ಜಾರಿ ಮಾಡದೆ ಹುದ್ದೆಗಳ ಭರ್ತಿ ನಿಲ್ಲಿಸಬೇಕು ಎಂದು ಆಗ್ರಹಿಸಿ ಮಾದಿಗ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ನೂರಾರು ಜನ ರಸ್ತೆ ತಡೆದು ಪ್ರತಿಭಟಿಸಿದರು.

ಕಡೂರು, ಅಜ್ಜಂಪುರ, ತರೀಕೆರೆ, ಚಿಕ್ಕಮಗಳೂರಿನಿಂದ ಬಂದಿದ್ದ ನೂರಾರು ಜನ ಪ್ರವಾಸಿ ಮಂದಿರದಲ್ಲಿ ಜಮಾಯಿಸಿದ್ದರು. ಅಲ್ಲಿಂದ ಹೊರಟು ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಅವರ ಅಣಕು ಶವಯಾತ್ರೆ ನಡೆಸಿ ಪ್ರತಿಕೃತಿ ದಹಿಸಿದರು.

ಮುಖಂಡರಾದ ಶೂದ್ರ ಶ್ರೀನಿವಾಸ್, ಶಿವಪ್ರಸಾದ್,ಮಹೇಂದ್ರ ಸ್ವಾಮಿ, ಬಿ.ಟಿ. ಚಂದ್ರಶೇಖರ್, ಜಗದೀಶ್, ಮಲ್ಲಿಕಾರ್ಜುನ್ ಇದ್ದರು.

ಧಾರವಾಡದ ನರೇಂದ್ರ ಗ್ರಾಮ ಸಮೀಪ ರಾಷ್ಟ್ರೀಯ ಹೆದ್ದಾರಿಯಲ್ಲಿ ಪ್ರತಿಭಟನಾಕಾರರನ್ನು ಪೊಲೀಸರು ವಶಕ್ಕೆ ಪಡೆದು ವಾಹನಕ್ಕೆ ಹತ್ತಿಸಿದರು

ಧಾರವಾಡ, ಗದಗದಲ್ಲೂ ಆಕ್ರೋಶ

ಧಾರವಾಡ: 'ಒಳಮೀಸಲಾತಿಗೆ ಸಂಬಂಧಿಸಿದಂತೆ ಫೆ. 27ರ ಡಿಪಿಎಆರ್ ಆದೇಶ ಹಿಂಪಡೆದು ಪರಿಷ್ಕೃತ ರೋಸ್ಟರ್ ಬಿಂದು ಗುರುತಿಸಿ 56 ಸಾವಿರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು' ಎಂದು ಒತ್ತಾಯಿಸಿ ರಾಷ್ಟ್ರೀಯ ಮಾದಿಗ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಶುಕ್ರವಾರ ಇಲ್ಲಿ ಪ್ರತಿಭಟಿಸಿದರು.

ರಾಷ್ಟ್ರೀಯ ಹೆದ್ದಾರಿಯ ನರೇಂದ್ರ ಗ್ರಾಮದ ಬಳಿ ನಡೆದ ಪ್ರತಿಭಟನೆ ವೇಳೆ, ಮಾಜಿ ಸಚಿವ ಹನುಮಂತಪ್ಪ ಅಲ್ಕೋಡ್, ಮಾಜಿ ಶಾಸಕ ವೀರಭದ್ರಪ್ಪ ಹಾಲಹರವಿ ಮತ್ತಿತರ ಪ್ರಮುಖರು ಭಾಗವಹಿಸಿದ್ದರು.

ಮನವಿ ಸ್ವೀಕರಿಸಲು ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಸಿ.ಡಿ ಅವರು ಸ್ಥಳಕ್ಕೆ ಬಂದಾಗ, 'ಜಿಲ್ಲಾಧಿಕಾರಿ ಸ್ಥಳಕ್ಕೆ ಬಂದು, ಮನವಿಪತ್ರ ಸ್ವೀಕರಿಸಬೇಕು' ಎಂದು ಪಟ್ಟು ಹಿಡಿದರು. ಪೊಲೀಸರು 30ಕ್ಕೂ ಹೆಚ್ಚು ಪ್ರತಿಭಟನಕಾರರನ್ನು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದರು. ಗದಗ ಜಿಲ್ಲೆಯ ನರಗುಂದ, ಲಕ್ಷ್ಮೇಶ್ವರದಲ್ಲೂ ಮಾದಿಗ ಸಂಘಟನೆ ಪ್ರಮುಖರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ಆರ್ಡರ್ಲಿಗೆ ಪರ್ಯಾಯ ವ್ಯವಸ್ಥೆ: ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೂ ಸೇರಿ ಹಿರಿಯ ಅಧಿಕಾರಿಗಳಿಗೆ ನೀಡಲಾಗಿದ್ದ ಆರ್ಡರ್ಲಿಗೆ ಪರ್ಯಾಯ ವ್ಯವಸ್ಥೆ ರೂಪಿಸಿ ಗೃಹ ಇಲಾಖೆ ಆದೇಶಿಸಿದೆ.

ಈ ಹಿಂದೆ ಪೊಲೀಸ್ ಕಾನ್‌ಸ್ಟೆಬಲ್ ಅಥವಾ ಹೆಡ್ ಕಾನ್‌ಸ್ಟೆಬಲ್‌ಗಳನ್ನು ಆರ್ಡರ್ಲಿಗಳನ್ನಾಗಿ ನೇಮಕ ಮಾಡಿಕೊಳ್ಳಲಾಗಿತ್ತು. ಈಗ ಆರ್ಡರ್ಲಿಗಳ ಸ್ಥಾನಕ್ಕೆ ಹೋಮ್ ಗಾರ್ಡ್ಸ್ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ನೇಮಿಸಿಕೊಳ್ಳಲು ಆದೇಶಿಸಲಾಗಿದೆ.

ಹೊಸ ಆದೇಶದ ಅನ್ವಯ ಎಸ್.ಪಿ ಸೇರಿದಂತೆ ಡಿಜಿಪಿ–ಐಜಿಪಿ ಹಂತದ ಅಧಿಕಾರಿಗಳಿಗೆ ಒಟ್ಟು 373 ಆರ್ಡರ್ಲಿ ಅಥವಾ ಅನುಯಾಯಿಗಳನ್ನು ನೇಮಿಸಿಕೊಳ್ಳಬಹುದು. ಒಂದು ವೇಳೆ ಅನುಯಾಯಿಗಳ ಅಗತ್ಯವಿಲ್ಲದವರು, ತಮಗೆ ನೇಮಿಸಿಕೊಳ್ಳಲು ನಿಗದಿಪಡಿಸಿದಂತೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ಪಡೆದು ಆರ್ಡರ್ಲಿ ಭತ್ಯೆ ಪಡೆಯಲು ಅವಕಾಶ ಇದೆ ಎಂದು ಉಲ್ಲೇಖಿಸಲಾಗಿದೆ.

ಆರ್ಡರ್ಲಿಗೆ ನೇಮಕಗೊಂಡಿದ್ದ ಪೊಲೀಸ್ ಸಿಬ್ಬಂದಿ, ಹಿರಿಯ ಅಧಿಕಾರಿಗಳ ಮನೆಯಲ್ಲಿ ಅಡುಗೆ ಕೆಲಸ ಸೇರಿದಂತೆ ವಿವಿಧ ಕೆಲಸಗಳನ್ನು ಮಾಡಿಕೊಂಡಿದ್ದರು. ಕಾನೂನು ಮತ್ತು ಸುವ್ಯವಸ್ಥೆ ಕೆಲಸಕ್ಕೆ ನೇಮಕೊಂಡ ಸಿಬ್ಬಂದಿಯಿಂದ, ಹಿರಿಯ ಅಧಿಕಾರಿಗಳ ಮನೆಯಲ್ಲಿ ಮನೆ ಕೆಲಸ ಮಾಡಿಸುವುದು ಸರಿಯಲ್ಲ ಎಂಬ ಅಭಿಪ್ರಾಯವಿತ್ತು. ಈಗ ಆರ್ಡರ್ಲಿ ಕೆಲಸಕ್ಕೆ ಪರ್ಯಾಯ ವ್ಯವಸ್ಥೆ ಮಾಡಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಆದೇಶಿಸಿದ್ದಾರೆ.

ಶೆಡ್‌ಗೆ ಬೆಂಕಿ: 700 ಕುರಿಗಳ ದಹನ

ಸಿಂಧನೂರು (ರಾಯಚೂರು ಜಿಲ್ಲೆ): ತಾಲ್ಲೂಕಿನ ಮುಕ್ಕುಂದಾ ಗ್ರಾಮದ ಹೊರವಲಯದಲ್ಲಿ ಕುರಿ ಸಾಕಣೆ ಶೆಡ್‌ಗೆ ಶುಕ್ರವಾರ ಬೆಂಕಿ ತಗುಲಿದ್ದು 700 ಕುರಿಗಳು ಸತ್ತಿವೆ. ಶಾರ್ಟ್ ಸರ್ಕಿಟ್ ಕಾರಣ ಎನ್ನಲಾಗಿದೆ. ವೈ.ಹೇಮಲತಾ ಮಧುಸೂದನ್ ರಾವ್ ಅವರಿಗೆ ಸೇರಿದ ಶೆಡ್‌ಗೆ ಬೆಂಕಿ ತಗುಲಿದ್ದು ಅಗ್ನಿಶಾಮಕ ದಳ ಸಿಬ್ಬಂದಿ ಬರುವ ವೇಳೆಗೆ ಕುರಿಗಳು ಮೃತಪಟ್ಟಿದ್ದವು. ಸಿಂಧನೂರು ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

23ರಿಂದ ವ್ಯಕ್ತಿತ್ವ ಪರೀಕ್ಷೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ನೇಮಕಾತಿಗೆ ಮಾರ್ಚ್ 23ರಿಂದ ಮೇ 4ವರೆಗೆ ವ್ಯಕ್ತಿತ್ವ ಪರೀಕ್ಷೆ (ಸಂದರ್ಶನ) ನಡೆಸಲು ಕೆಪಿಎಸ್‌ಸಿ ನಿರ್ಧರಿಸಿದೆ. ಮುಖ್ಯ ಪರೀಕ್ಷೆಯಿಂದ1:3 ಅನುಪಾತದಲ್ಲಿ 1,152 ಅಭ್ಯರ್ಥಿಗಳು ವ್ಯಕ್ತಿತ್ವ ಪರೀಕ್ಷೆಗೆ ಅರ್ಹತೆ ಪಡೆದಿದ್ದಾರೆ.

ನಿಧನ ವಾರ್ತೆ

ವಿನಾಯಕ ದೇಶಪಾಂಡೆ

ಹುಬ್ಬಳ್ಳಿ: ಕ್ರೀಡಾ ಪತ್ರಕರ್ತ, ಧಾರವಾಡದ ಸಿದ್ಧಾರ್ಥ ಕಾಲೊನಿಯ ನಿವಾಸಿ ವಿನಾಯಕ ನಾರಾಯಣರಾವ್ ದೇಶಪಾಂಡೆ (71) ಶುಕ್ರವಾರ ಬೆಂಗಳೂರಿನಲ್ಲಿ ಹೃದಯಾಘಾತದಿಂದ ನಿಧನರಾದರು.

ಅವರು ಸಂಯುಕ್ತ ಕರ್ನಾಟಕ, ನವನಾಡು, ವಿಶಾಲ ಕರ್ನಾಟಕ, ವಿಶ್ವವಾಣಿ ಸೇರಿ ವಿವಿಧ ಪತ್ರಿಕೆಗಳಲ್ಲಿಯೂ ಕಾರ್ಯನಿರ್ವಹಿಸಿದ್ದರು. ಅವರಿಗೆ ಪತ್ನಿ, ಪುತ್ರ ಇದ್ದಾರೆ. ಬೆಂಗಳೂರಿನಲ್ಲಿ ಅಂತ್ಯಕ್ರಿಯೆ ನೆರವೇರಿದೆ.

ನರಹಳ್ಳಿ ಜ್ಞಾನೇಶ್

ಪಾಂಡವಪುರ (ಮಂಡ್ಯ): ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಸದಸ್ಯ ಮತ್ತು ಸಂಕಲನಕಾರ ನರಹಳ್ಳಿ ಜ್ಞಾನೇಶ್ (48) ಗುರುವಾರ ರಾತ್ರಿ ಹೃದಯಾಘಾತದಿಂದ ನಿಧನರಾದರು.

ಅವರು ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಮೇಲುಕೋಟೆ ಹೋಬಳಿಯ ನರಹಳ್ಳಿಯ ಬಿ. ಬೋರೇಗೌಡ– ಮರಿಲಿಂಗಮ್ಮ ದಂಪತಿ ಪುತ್ರ.

ನಾಗಮಂಡಲ, ಹಿಮಪಾತ, ಮುಂಗಾರಿನ ಮಿಂಚು, ಅಮೃತ ವರ್ಷಿಣಿ, ಲಾಲಿ ಮೊದಲಾದ ಚಿತ್ರಗಳಿಗೆ ಸಹಾಯಕ ಸಂಕಲನಕಾರನಾಗಿದ್ದರು. 'ಅರ್ಥ' ಸಿನಿಮಾದಲ್ಲಿ ಸ್ವತಂತ್ರ ಸಂಕಲನಕಾರರಾದರು. 'ಪವಾಡ ಪುರುಷ ಶ್ರೀ ಸಿದ್ದಪ್ಪಾಜಿ' ಮತ್ತು 'ಪಂಚಾಮೃತ' ಚಿತ್ರಗಳಿಗೆ ಸಹ ನಿರ್ಮಾಪಕರಾಗಿದ್ದರು. 'ಗಾಂಧಿ ಮಾರ್ಗ' ಹಾಗೂ ಬಿಡುಗಡೆ ಯಾಬೇಕಿರುವ 'ಬನದ ಹೂ' ಎರಡು ಚಿತ್ರಗಳನ್ನು ನಿರ್ದೇಶಿಸಿದ್ದರು. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ಗ್ರಾಮದಲ್ಲಿ ನಡೆಯಿತು.

ಶಿವ ಮುನೋಳಿ

ಬೆಂಗಳೂರು: ಚಿತ್ರ ಕಲಾವಿದ ಶಿವ ಎಸ್. ಮುನೋಳಿ (85) ಅವರು ಶುಕ್ರವಾರ ಬೆಳಿಗ್ಗೆ ಹೈದರಾಬಾದ್‌ನಲ್ಲಿ ನಿಧನರಾಗಿದ್ದಾರೆ.

ಕರ್ನಾಟಕ–ಮಹಾರಾಷ್ಟ್ರದ ಗಡಿ ಪ್ರದೇಶವಾದ ವಾಗ್ದಾರಿ ಗ್ರಾಮದಲ್ಲಿ 1941ರಲ್ಲಿ ಜನಿಸಿದ ಅವರು, ಬರೋಡಾದಲ್ಲಿ ಚಿತ್ರಕಲೆ ವಿಭಾಗದಲ್ಲಿ ಉನ್ನತ ಶಿಕ್ಷಣ ಪಡೆದಿದ್ದರು. ಹೈದರಾಬಾದ್‌ನ ವೀವರ್ಸ್ ಸೆಂಟರ್‌ನಲ್ಲಿ ಕಲಾವಿದರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದರು. ಕರ್ನಾಟಕದಲ್ಲಿ ಅನೇಕ ಕಲಾ ಚಟುವಟಿಕೆಗಳನ್ನು ನಡೆಸಿದ್ದ ಅವರು, ಕರ್ನಾಟಕ ಲಲಿತಕಲಾ ಅಕಾಡೆಮಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. ಇವರ ಕಲಾ ಸಾಧನೆಗೆ ಕರ್ನಾಟಕ ಸರ್ಕಾರ ನೀಡುವ 'ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ' ಸೇರಿ ವಿವಿಧ ಪ್ರಶಸ್ತಿಗಳು ಸಂದಿವೆ.

ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕರ್ನಾಟಕ ಒಂದು ರಾಜ್ಯ, ಹಲವು ಜಗತ್ತುಗಳು. ಪ್ರವಾಸೋದ್ಯಮ ಇಲಾಖೆ

CIN :U70100KA2015SGC081817

ನಂ.54, 5ನೇ ಮಹಡಿ, ಇಂಧನಭವನ, ರೇಸ್ ಕೋರ್ಸ್ ರಸ್ತೆ, ರಿನೇಸನ್ಸ್ ಹೋಟೆಲ್ ಎದುರು, ಬೆಂಗಳೂರು–560001. ದೂರವಾಣಿ : 080–22352525

ಸಂಖ್ಯೆ: ಕೆ.ಟಿ.ಐ.ಎಲ್/ಯೋ–01/ಬೆ.ವಿ/ಗ.ಜಿ/05/2025–26/276 ದಿನಾಂಕ: 04.03.2026

ಟೆಂಡರ್ ಪ್ರಕಟಣೆ

ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮದಿಂದ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಈ ಕೆಳಕಂಡ ಟೆಂಡರ್‌ಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಪ್ರಕಟಿಸಲಾಗಿರುತ್ತದೆ. ಟೆಂಡರ್‌ಗೆ ಸಂಬಂಧಿಸಿದ ವೇಳಾಪಟ್ಟಿ ಮತ್ತು ಟೆಂಡರ್ ದಾಖಲೆಗಳು ಕೆ.ಪಿ.ಪಿ.ಪಿ ವೇದಿಕೆಯಲ್ಲಿ ಲಭ್ಯವಿರುತ್ತದೆ.

ಕ್ರ. ಸಂ	ಕಾಮಗಾರಿಯ ವಿವರ	ಟೆಂಡರ್ ಸಂಖ್ಯೆ
1.	ಗದಗ ಜಿಲ್ಲೆ ಲಕ್ಕುಂಡಿ ಗ್ರಾಮದ ಹಜರತ್ ಜಿಂದೇಶಾವಲಿ ದರ್ಗಾದಲ್ಲಿ ಸುಲಭ ಶೌಚಾಲಯ ಹಾಗೂ ಸ್ನಾನದ ಗೃಹ ನಿರ್ಮಾಣ ಕಾಮಗಾರಿ.	KTIL/2025-26/ BD/WORK_ INDENT41, Dt: 04.03.2026
2.	ಗದಗ ಜಿಲ್ಲೆ, ಗದಗ ತಾಲ್ಲೂಕಿನ ಹುಲಕೋಟಿ ಗ್ರಾಮದಲ್ಲಿರುವ ಇತಿಹಾಸ ಪ್ರಸಿದ್ದ ಪುರಾತನವಾದ ಶ್ರೀ ಸೋಮೇಶ್ವರ ದೇವಾಲಯದ ಪುನರುಜ್ಜೀವನ ಕಾಮಗಾರಿ.	KTIL/2025-26/ BD/WORK_ INDENT42, Dt: 04.03.2026
3.	ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ Swadesh Darshan 2.0 ಯೋಜನೆಯ Challenge Based Destination (CBDD), ಬೀದರ್‌ನ್ನು ಸಾಂಸ್ಕೃತಿಕ ಮತ್ತು ಪಾರಂಪರಿಕ ಪ್ರವಾಸೋದ್ಯಮ ತಾಣವಾಗಿ ಅಭಿವೃದ್ಧಿ ಪಡಿಸುವ ಕಾಮಗಾರಿ.	KTIL/2025-26/ BD/ WORK_INDENT43
4.	ಕೊಪ್ಪಳ ಜಿಲ್ಲೆಯ ಅಂಜನಾದ್ರಿ ಬೆಟ್ಟದ (ಹಂತ–2) ಅಭಿವೃದ್ಧಿಗಾಗಿ ಯೋಜನಾ ಅಭಿವೃದ್ದಿ ಮತ್ತು ನಿರ್ವಹಣಾ ಸಲಹೆಗಾರರನ್ನು (ಪಿ.ಡಿ.ಎಮ್.ಸಿ) ಆಯ್ಕೆ ಮಾಡುವ ಕುರಿತು(2ನೇ ಕರೆ).	KTIL/2025-26/SE0058

ಟೆಂಡರ್ ವಿವರಗಳು ಕೆ.ಪಿ.ಪಿ.ಪಿ ವೇದಿಕೆಯಲ್ಲಿ ಲಭ್ಯವಿದ್ದು (https://www.kppp.karnataka.gov.in) ಡೌನಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು https://www.kppp.karnataka.gov.in ನಲ್ಲಿ ವಿದ್ಯುನ್ಮಾನ (Electronic) ವಿಧಾನದಲ್ಲಿ ಪಾವತಿಸಬೇಕಾಗಿರುತ್ತದೆ. ಆಸಕ್ತಿಯುಳ್ಳ ಸಂಸ್ಥೆಗಳು ಸದರಿ ಟೆಂಡರ್ ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ನೊಂದಾಯಿಸುವ ಅಗತ್ಯವಿದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು, ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ
ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ.

DIPR/CP/6057/NR/2025-26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಅಧೀನಕ್ಕೆ ಒಳಪಟ್ಟಿದೆ)

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೃಭಾಜನಿನಿ, ಐಬಿಸಿ, ನಿಮಪೋ ವಿಭಾಗ, ರಾಂಪೂರ (ಪ.ಅ). ದೂರವಾಣಿ ಸಂಖ್ಯೆ: 08488–224328, ಇ–ಮೇಲ್:kbjnleerampur@gmail.com.

ಸಂಖ್ಯೆ:ಕೃಭಾಜನಿನಿ/ಐಬಿಸಿ/ನಿಮಪೋ/ವಿರಾಂ/ಪಿಬಿ–2/2025–26/3345 ದಿನಾಂಕ:03.03.2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಪರವಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ, ರಾಂಪೂರ (ಪ.ಅ) ಇವರು 2025–26ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ 02 ಸಂಖ್ಯೆಯ ಕಾಮಗಾರಿಗಳ ಶೇಕಡಾವಾರು ದರದ ಟೆಂಡರನ್ನು ಏಕಮಾತ್ರ ಲಕೋಟೆ ಮತ್ತು ದ್ವಿಲಕೋಟೆ ಪದ್ಧತಿಯ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ ಮೂಲಕ ವೆಬ್ ಸೈಟ್ https://kppp.karnataka.gov.in ಮಾಹಿತಿ ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು. ಕಾಮಗಾರಿಯ ವಿವರಗಳು

ಕಾಮಗಾರಿ ಹೆಸರು : 1) Protection wall to escape nala at km 16.12 of distributary-11 of IBC at farmer land Sy No-5 in Kulekumatagi Village taluka Sindagi ಅಂದಾಜು ಮೊತ್ತ ರೂ: 40.00 ಲಕ್ಷಗಳು.

2) **Improvements of Ayacut road from Ganganahalli to Sirakanahalli Km 0.00 to 2.00 [Ganganahalli village to Govt School] in Devarhippargi Tq, Vijayapur District." (I No. 2750) ಅಂದಾಜು ಮೊತ್ತ ರೂ: 145.00 ಲಕ್ಷಗಳು**

* ಕೆ.ಪಿ.ಪಿ.ಪಿ.ಪೋರ್ಟಲ್ https://kppp.karnataka.gov.in ವೆಬ್‌ಸೈಟ್ ನಿಂದ ಖಾಲಿ ಟೆಂಡರ್ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು ಮತ್ತು ಭರ್ತಿ ಮಾಡಿದ ಬಿಡ್ ದಾಖಲೆಗಳನ್ನು ಸಲ್ಲಿಸುವ **ದಿನಾಂಕ: 09.03.2026 ರಿಂದ 18.03.2026** ರ ಸಾಯಂಕಾಲ 5.30 ಗಂಟೆಯವರೆಗೆ ಸಲ್ಲಿಸುವುದು.
* ಗುತ್ತಿಗೆದಾರರು **ದಿನಾಂಕ: 09.03.2026 ರಿಂದ 18.03.2026** ಸಾಯಂಕಾಲ 5.30 ಗಂಟೆಯವರೆಗೆ ಇ–ಟೆಂಡರ ಪುಸ್ತಕವನ್ನು Access ಮಾಡಬಹುದು.
* ಭರ್ತಿಗೊಳಿಸಿದ ಇ–ಟೆಂಡರ ಪುಸ್ತಕವನ್ನು **ದಿನಾಂಕ: 09.03.2026 ರಿಂದ 18.03.2026** ರ ಸಾಯಂಕಾಲ 5.30 ಗಂಟೆಯವರೆಗೆ ಸಲ್ಲಿಸುವದು.
* ಏಕಮಾತ್ರ ಲಕೋಟೆ ಮತ್ತು ದ್ವಿ–ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ನಿಮಪೋ ವಿಭಾಗ ರಾಂಪೂರ (ಪಿಎ) ತಾ: ಸಿಂದಗಿ ಜಿಲ್ಲೆ: ವಿಜಯಪೂರ ಕಛೇರಿಯಲ್ಲಿ ದಿನಾಂಕ: **20.03.2026** ರ ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವದು.
* ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ ರಾಂಪೂರ (ಪ.ಅ) ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ https://kppp.karnataka.gov.in ವೆಬ್‌ಸೈಟ್ ನಿಂದ ಪಡೆಯಬಹುದು.
* ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವುದು.
* ಯಾವುದೇ ಕಾರಣ ನೀಡದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳು ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ನಿಮಪೋ ಐಬಿಸಿ ವಿಭಾಗ, ರಾಂಪೂರ (ಪ.ಅ)

ವಾಸಾಸಂಇ/ವಿಜಯಪುರ/776/ಕೆಎಸ್‌ಎಂಸಿಎ/2025–26

ಸಮಗ್ರ ಶಿಕ್ಷಣ–ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು–01

ಸಂಖ್ಯೆ: SSK/ADMN/C5/54/2025-JDA/E-73792 ದಿನಾಂಕ: 06/03/2026

ಇ–ಟೆಂಡರ್ ಪ್ರಕಟಣೆ (ಎರಡನೇ ಕರೆ)

2025–26 ನೇ ಸಾಲಿಗೆ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು, ಈ ಕಛೇರಿಗೆ ಅಗತ್ಯವಿರುವ ಮಾಸಿಕ ಗುತ್ತಿಗೆ ಆಧಾರದ ಮೇರೆಗೆ AC ಹಾಗೂ NON AC ವಾಹನಗಳ ಸೇವೆಯನ್ನು ಒಂದು ವರ್ಷದ ಅವಧಿಗೆ ಒದಗಿಸುವ ಸಲುವಾಗಿ, ಸಮಗ್ರ ಶಿಕ್ಷಣ ಕರ್ನಾಟಕ ಕಛೇರಿ ವತಿಯಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮರುಟೆಂಡರ್ ಆಹ್ವಾನಿಸಲಾಗಿದೆ. (Tender Reference NO: SSK/2025-26/SE0321/CALL-2) ಟೆಂಡರ್‌ಗೆ ಸಂಬಂಧಿತ ವಿವರಗಳು https://kppp.karnataka.gov.in ನಲ್ಲಿ ಲಭ್ಯವಿರುತ್ತವೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 20/03/2026 ಸಮಯ ಸಂಜೆ 5:30 ಗಂಟೆಯವರೆಗೆ.

ಸಹಿ/– ರಾಜ್ಯ ಯೋಜನಾ ನಿರ್ದೇಶಕರು,
ಸಮಗ್ರ ಶಿಕ್ಷಣ–ಕರ್ನಾಟಕ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ತ/6058/ಆಕಾರ್/2025–26

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಛೇರಿ, ಗೋಪನಕೊಪ್ಪ, ಹುಬ್ಬಳ್ಳಿ

Tel/Fax No: (0836) 2322771/2324307

Website: https://hescom.karnataka.gov.in

e-mail : seeit@hescom.co.in CIN : U31401KA2002SGC030437

ಸಂಖ್ಯೆ:ಹೆಸ್ಕಾಂ/ಅಅ(ಮಾ&ತಂ)/ಕಾನಿಅ–ಐಟಿ–2/1431/2025–26/cys-25492

ದಿನಾಂಕ : 06.03.2026

ಆಸಕ್ತಿಯ ಅಭಿವ್ಯಕ್ತಿ (EOI) ಅಧಿಸೂಚನೆ ಟೆಂಡರ್ ಸಲ್ಲಿಕೆಯ ಕೊನೆಯ ದಿನಾಂಕ ವಿಸ್ತರಣೆ

BBPS ಪ್ಲಾಟ್‌ಫಾರ್ಮ್ ಮೂಲಕ ವಿದ್ಯುತ್ ಬಿಲ್ ಪಾವತಿಗಳನ್ನು ಸಂಗ್ರಹಿಸಲು ಏಜೆನ್ಸಿ – ಭಾರತ್ ಬಿಲ್ ಪಾವತಿ ಆಪರೇಟಿಂಗ್ ಯುನಿಟ್ (BBPOU) ಆಯ್ಕೆಗಾಗಿ BBPOU ನಿಂದ ಆಸಕ್ತಿಯ ಅಭಿವ್ಯಕ್ತಿಯನ್ನು (EOI) ಅನ್ನು HESCOM/SEE (IT&MT)/EE-IT2/1431/2025-26/cys-11577 ದಿನಾಂಕ : 26.02.2026 ರಂದು ಆಹ್ವಾನಿಸಲಾಗಿದೆ.

ಮೊಹರು ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕವನ್ನು **12.03.2026** ರಿಂದ **18.03.2026** ರವರೆಗೆ ವಿಸ್ತರಿಸಲಾಗಿದೆ ಮತ್ತು ಅದನ್ನು **18.03.2026** ರಂದು ಮಧ್ಯಾಹ್ನ 1.00 ಗಂಟೆಗೆ ಅಧೀಕ್ಷಕ ಎಂಜಿನಿಯರ್ (ಐಟಿ ಮತ್ತು ಎಂಟಿ), ಕಾರ್ಪೊರೇಟ್ ಕಚೇರಿ, ವಿದ್ಯುತ್ ಭವನ, ಹೆಸ್ಕಾಂ, ಗೋಪನಕೊಪ್ಪ, ಹುಬ್ಬಳ್ಳಿ–580023 ರ ಕಚೇರಿಗೆ ಸಲ್ಲಿಸಬೇಕು ಮತ್ತು ಟೆಂಡರ್ ದಾಖಲೆಗಳನ್ನು **18.03.2026** ರಂದು ಸಂಜೆ 4.30 ಗಂಟೆಗೆ ತೆರೆಯಲಾಗುತ್ತದೆ. ವಿವರವಾದ EOI ಸಂಬಂಧಪಟ್ಟ ದಾಖಲೆಗಳು, ನಿಯಮಗಳು ಮತ್ತು ಷರತ್ತುಗಳನ್ನು ಹೆಸ್ಕಾಂ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಬಹುದು (https://hescom.karnataka.gov.in).

ಸಹಿ/– ಅಧೀಕ್ಷಕ ಅಭಿಯಂತರರು(ವಿ)
(ಐಟಿ&ಎಮ್‌ಟಿ) ಹೆಸ್ಕಾಂ, ಹುಬ್ಬಳ್ಳಿ

ವಾಸಾಸಂಇ/ಧಾ/ಕೆಎಸ್‌ಎಂಸಿಎ/1316/2025–26

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.

ಐ.ಎಫ್.ಟಿ.ಸಂ: ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/4059–CMIDP 2025–26/5143 ದಿನಾಂಕ:06.03.2026

ಅಲ್ಪಾವಧಿ ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಇಂಜಿನಿಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರವೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4ರಲ್ಲಿ ಲೆಕ್ಕ ಶೀರ್ಷಿಕೆ 4059–80–051–0–60–132 ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ಅಡಿಯಲ್ಲಿನ ರಾಜ್ಯ ಹೆದ್ದಾರಿ ರಸ್ತೆ ಹಾಗೂ ಜಿಲ್ಲಾ ಮುಖ್ಯ ರಸ್ತೆ ಅಡಿಯಲ್ಲಿ ಒಟ್ಟು 4 ಕಾಮಗಾರಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು, ಅದರಲ್ಲಿ ಗರಿಷ್ಠ ಮತ್ತು ಕನಿಷ್ಠ ಅಂದಾಜು ಮೊತ್ತ ರೂ. 990 & ರೂ. 450.00 ಲಕ್ಷಗಳು, ಮುಂಗಡ ಠೇವಣಿ ಗರಿಷ್ಠ ಮತ್ತು ಕನಿಷ್ಠ ಮೊತ್ತ ರೂ.15,00,000/– & ರೂ. 6,75,000/– ಸದರ ಕಾಮಗಾರಿಗಳ ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಜಿ.ಎಸ್.ಟಿ ಪ್ರತ್ಯೇಕವಾಗಿ ನೀಡಲಾಗುವದು. ಹಾಗೂ ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. 1) ಗುತ್ತಿಗೆದಾರರ ಪೂರ್ವ ಭಾವಿ ಸಭೆ ದಿನಾಂಕ:–12.03.2026ರ ಮುಂಜಾನೆ 11.00 ಗಂಟೆಗೆ 2) ಟೆಂಡರಗಳನ್ನು ಸ್ವೀಕರಿಸುವ ದಿನಾಂಕ:–16.03.2026 ರ ಸಂಜೆ 4.30 ಗಂಟೆಯವರೆಗೆ, 3) ಟೆಂಡರಗಳ ತಾಂತ್ರಿಕ್ ಬೀಡ್‌ಗಳನ್ನು ತೆರೆಯುವ ದಿನಾಂಕ: 17.03.2026 ರ ಸಂಜೆ 4.31 ಗಂಟೆಗೆ 4) ಟೆಂಡರಗಳ ಆರ್ಥಿಕ ಬೀಡ್‌ಗಳನ್ನು ತೆರೆಯುವ ದಿನಾಂಕ.18.03.2026 ರ ಸಂಜೆ 4.31 ಗಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ https://kppp. karnataka.gov.in (ಪೋನ್ ನಂ.91 80 46010000, +91 80 68948777 ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/782/ಕೆಎಸ್‌ಎಂಸಿಎ/2025–26

ಬೆಂಗಳೂರು ಉತ್ತರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ದಾಸರಹಳ್ಳಿ ವಿಭಾಗ, ವಲಯ–2, ಹೆಸರಘಟ್ಟ ಮುಖ್ಯರಸ್ತೆ, ಎಂಇಐ ಬಡಾವಣೆ, ಬಾಗಲಗುಂಟೆ, ಬೆಂಗಳೂರು–560 073.

ಸಂಖ್ಯೆ: ಬೆಂಉನಪಾ/ಕಾಪಾಅ/ದಾವಿ/ಟೆಂಡರ್/08/2025–26 ದಿನಾಂಕ: 06.03.2026

ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ)–(ಅಲ್ಪಾವಧಿ ಟೆಂಡರ್)

(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿ ಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬೆಂಉನಪಾ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್–ಕೆಡಬ್ಲ್ಯೂ–1, 2, 3 & 4)

ಕ್ರ. ಸಂ.	ಕಾಮಗಾರಿಯ ಹೆಸರು/ಪ್ರವರ್ಗ
1	ವಾರ್ಡ್ ಸಂಖ್ಯೆ.15, ಕಮ್ಮಗೊಂಡನಹಳ್ಳಿಯಲ್ಲಿ 2025–26ನೇ ಸಾಲಿಗೆ ಹೂಳು ಮತ್ತು ಟ್ರ್ಯಾಕ್ಟರ್ ಮೂಲಕ ಚರಂಡಿಗಳಲ್ಲಿ ಹೂಳು ತೆಗೆಯುವಿಕೆ ಹಾಗೂ ನಿರ್ವಹಣೆ ಕಾಮಗಾರಿ. (ಪ.ಜಾತಿ) – **ಟೆಂಡರ್‌ಗಿಟ್ಟ ಮೊತ್ತ: ರೂ. 28.41 ಲಕ್ಷಗಳು. ಇ.ಎಂ.ಡಿ ಮೊತ್ತ: ರೂ.28,410/–.**
2	ವಾರ್ಡ್ ಸಂಖ್ಯೆ.16, ಮಲ್ಲಸಂದ್ರದಲ್ಲಿ 2025–26ನೇ ಸಾಲಿಗೆ ಹೂಳು ಮತ್ತು ಟ್ರ್ಯಾಕ್ಟರ್ ಮೂಲಕ ಚರಂಡಿಗಳಲ್ಲಿ ಹೂಳು ತೆಗೆಯುವಿಕೆ ಹಾಗೂ ನಿರ್ವಹಣೆ ಕಾಮಗಾರಿ. (ಪ.ಜಾತಿ) – **ಟೆಂಡರ್‌ಗಿಟ್ಟ ಮೊತ್ತ: ರೂ. 28.41 ಲಕ್ಷಗಳು. ಇ.ಎಂ.ಡಿ ಮೊತ್ತ: ರೂ.28,410/–.**
3	ವಾರ್ಡ್ ಸಂಖ್ಯೆ.17, ಚಿಕ್ಕಸಂದ್ರದಲ್ಲಿ 2025–26ನೇ ಸಾಲಿಗೆ ಹೂಳು ಮತ್ತು ಟ್ರ್ಯಾಕ್ಟರ್ ಮೂಲಕ ಚರಂಡಿಗಳಲ್ಲಿ ಹೂಳು ತೆಗೆಯುವಿಕೆ ಹಾಗೂ ನಿರ್ವಹಣೆ ಕಾಮಗಾರಿ. (ಇತರರು) – **ಟೆಂಡರ್‌ಗಿಟ್ಟ ಮೊತ್ತ: ರೂ. 28.41 ಲಕ್ಷಗಳು. ಇ.ಎಂ.ಡಿ ಮೊತ್ತ: ರೂ.56,820/–.**
4	ವಾರ್ಡ್ ಸಂಖ್ಯೆ.18, ಬಾಗಲಗುಂಟೆಯಲ್ಲಿ 2025–26ನೇ ಸಾಲಿಗೆ ಹೂಳು ಮತ್ತು ಟ್ರ್ಯಾಕ್ಟರ್ ಮೂಲಕ ಚರಂಡಿಗಳಲ್ಲಿ ಹೂಳು ತೆಗೆಯುವಿಕೆ ಹಾಗೂ ನಿರ್ವಹಣೆ ಕಾಮಗಾರಿ. (ಪ್ರವರ್ಗ–1) – **ಟೆಂಡರ್‌ಗಿಟ್ಟ ಮೊತ್ತ: ರೂ. 28.41 ಲಕ್ಷಗಳು. ಇ.ಎಂ.ಡಿ ಮೊತ್ತ: ರೂ.28,410/–.**
5	ವಾರ್ಡ್ ಸಂಖ್ಯೆ.19, ಟಿ.ದಾಸರಹಳ್ಳಿಯಲ್ಲಿ 2025–26ನೇ ಸಾಲಿಗೆ ಹೂಳು ಮತ್ತು ಟ್ರ್ಯಾಕ್ಟರ್ ಮೂಲಕ ಚರಂಡಿಗಳಲ್ಲಿ ಹೂಳು ತೆಗೆಯುವಿಕೆ ಹಾಗೂ ನಿರ್ವಹಣೆ ಕಾಮಗಾರಿ. (ಇತರರು) – **ಟೆಂಡರ್‌ಗಿಟ್ಟ ಮೊತ್ತ: ರೂ. 28.41 ಲಕ್ಷಗಳು. ಇ.ಎಂ.ಡಿ ಮೊತ್ತ: ರೂ.56,820/–.**
6	ಶೆಟ್ಟಿಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ.15, ಮೇಡರಹಳ್ಳಿ ಕಾಲೋನಿಯಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆಗಳ ಕಾಮಗಾರಿ. (ಪ್ರವರ್ಗ–II(A)) – **ಟೆಂಡರ್‌ಗಿಟ್ಟ ಮೊತ್ತ: ರೂ. 73.72 ಲಕ್ಷಗಳು. ಇ.ಎಂ.ಡಿ ಮೊತ್ತ: ರೂ.73,720/–.**
7	ಶೆಟ್ಟಿಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ.15, ಮೇಡರಹಳ್ಳಿ ಕಾಲೋನಿಯಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿ. (ಇತರರು) – **ಟೆಂಡರ್‌ಗಿಟ್ಟ ಮೊತ್ತ: ರೂ. 125.00 ಲಕ್ಷಗಳು. ಇ.ಎಂ.ಡಿ ಮೊತ್ತ: ರೂ.1,85,500/–.**
8	ಶೆಟ್ಟಿಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ.15, ಕಮ್ಮಗೊಂಡನಹಳ್ಳಿ, ಕೆ.ಜಿ.ಹಳ್ಳಿ, ಎ.ಕೆ.ಕಾಲೋನಿಯಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆಯ ಕಾಮಗಾರಿ. (ಇತರರು) – **ಟೆಂಡರ್‌ಗಿಟ್ಟ ಮೊತ್ತ: ರೂ. 80.69 ಲಕ್ಷಗಳು. ಇ.ಎಂ.ಡಿ ಮೊತ್ತ: ರೂ.1,61,380/–.**
9	ಶೆಟ್ಟಿಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ.15 ರ ಮೇಡರಹಳ್ಳಿ ಕಾಲೋನಿಯಲ್ಲಿನ ಉದ್ಯಾನವನದ ಅಭಿವೃದ್ಧಿ. (ಇತರರು) – **ಟೆಂಡರ್‌ಗಿಟ್ಟ ಮೊತ್ತ: ರೂ. 23.48 ಲಕ್ಷಗಳು. ಇ.ಎಂ.ಡಿ ಮೊತ್ತ: ರೂ.46,960/–.**
10	ಶೆಟ್ಟಿಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ.15, ಲಕ್ಷ್ಮೀಪುರದಲ್ಲಿನ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆಯ ಕಾಮಗಾರಿ. (ಇತರರು) – **ಟೆಂಡರ್‌ಗಿಟ್ಟ ಮೊತ್ತ: ರೂ. 72.01 ಲಕ್ಷಗಳು. ಇ.ಎಂ.ಡಿ ಮೊತ್ತ: ರೂ.1,44,020/–.**
11	ಶೆಟ್ಟಿಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ.15, ಕಾನ್ಷೀರಾಂ ನಗರದಲ್ಲಿನ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆಯ ಕಾಮಗಾರಿ. (ಇತರರು) – **ಟೆಂಡರ್‌ಗಿಟ್ಟ ಮೊತ್ತ: ರೂ. 69.61 ಲಕ್ಷಗಳು. ಇ.ಎಂ.ಡಿ ಮೊತ್ತ: ರೂ.1,39,220/–.**
12	ಶೆಟ್ಟಿಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ.15, ಲಕ್ಷ್ಮೀಪುರದ ಸರ್ಕಾರಿ ಶಾಲೆ ಸುತ್ತಮುತ್ತ ಪ್ರದೇಶದ ಅಡ್ಡರಸ್ತೆಗಳಲ್ಲಿ ಚರಂಡಿಗಳ ನಿರ್ಮಾಣ ಕಾಮಗಾರಿ. (ಪ್ರವರ್ಗ–II(A)) – **ಟೆಂಡರ್‌ಗಿಟ್ಟ ಮೊತ್ತ: ರೂ. 40.23 ಲಕ್ಷಗಳು. ಇ.ಎಂ.ಡಿ ಮೊತ್ತ: ರೂ.40,230/–.**
13	ಶೆಟ್ಟಿಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ.16, ಶೆಟ್ಟಿಹಳ್ಳಿ ಕಾಲೋನಿಯಲ್ಲಿ ರಸ್ತೆಗಳು ಹಾಗೂ ಚರಂಡಿಗಳ ನಿರ್ಮಾಣ ಕಾಮಗಾರಿ. (ಪ.ಜಾತಿ) – **ಟೆಂಡರ್‌ಗಿಟ್ಟ ಮೊತ್ತ: ರೂ. 29.11 ಲಕ್ಷಗಳು. ಇ.ಎಂ.ಡಿ ಮೊತ್ತ: ರೂ.29,110/–.**
14	ಶೆಟ್ಟಿಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ.16, ಶೆಟ್ಟಿಹಳ್ಳಿ ಕಾಲೋನಿಯಲ್ಲಿ 'ಇ' ಗ್ರಂಥಾಲಯ ಕಟ್ಟಡ ಹಾಗೂ ಶೌಚಾಲಯ ನಿರ್ಮಾಣ ಕಾಮಗಾರಿ. (ಇತರರು) – **ಟೆಂಡರ್‌ಗಿಟ್ಟ ಮೊತ್ತ: ರೂ. 44.39 ಲಕ್ಷಗಳು. ಇ.ಎಂ.ಡಿ ಮೊತ್ತ: ರೂ.88,780/–.**
15	ಟಿ.ದಾಸರಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ. 19, ಕಾಳಸ್ತಿನಗರದಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆ ಕಾಮಗಾರಿ. (ಇತರರು) – **ಟೆಂಡರ್‌ಗಿಟ್ಟ ಮೊತ್ತ: ರೂ. 16.14 ಲಕ್ಷಗಳು. ಇ.ಎಂ.ಡಿ ಮೊತ್ತ: ರೂ.32,280/–.**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ಮುಖಾಂತರ **ದಿನಾಂಕ: 07.03.2026 ರಿಂದ** ಡೌನ್‌ಲೋಡ್ ಮಾಡಕೊಳ್ಳಬಹುದು. 2) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಆನ್‌ಲೈನ್‌ನಲ್ಲಿ **ದಿನಾಂಕ: 17.03.2026 ಸಂಜೆ 4.00 ಗಂಟೆಯೊಳಗೆ ಅಥವಾ ಅದಕ್ಕೂ ಮುಂಚಿತವಾಗಿ** ಸಲ್ಲಿಸಬಹುದು. 3) ತಾಂತ್ರಿಕ ಬಿಡ್‌ಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ **ದಿನಾಂಕ: 18.03.2026 ಸಂಜೆ 4.30 ಗಂಟೆಗೆ** ಕಾರ್ಯಪಾಲಕ ಅಭಿಯಂತರರ ಕಛೇರಿ, ದಾಸರಹಳ್ಳಿ ವಿಭಾಗ, ಬೆಂಉನಪಾ ಇಲ್ಲಿ ತೆರೆಯಲಾಗುವುದು. 4) ಆರ್ಥಿಕ ಬಿಡ್‌ಗಳನ್ನು ವೆಬ್‌ಸೈಟ್: https://kppp.karnataka.gov.in ನಲ್ಲಿ **ದಿನಾಂಕ: 23.03.2026ರ ಸಂಜೆ 4.30 ಗಂಟೆಗೆ** ಕಾರ್ಯಪಾಲಕ ಅಭಿಯಂತರರ ಕಛೇರಿ, ದಾಸರಹಳ್ಳಿ ವಿಭಾಗ, ಬೆಂಉನಪಾ ಇಲ್ಲಿ ತೆರೆಯಲಾಗುವುದು. (ಸಾಧ್ಯವಾದಲ್ಲಿ)

ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಚೇರಿಯನ್ನು ಕಚೇರಿ ವೇಳೆಯಲ್ಲಿ ಎಲ್ಲಾ ಕೆಲಸದ ದಿವಸಗಳಂದು ಅಥವಾ ಕೆಪಿಪಿ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರು
ದಾಸರಹಳ್ಳಿ ವಿಭಾಗ, ವಲಯ–2,
ಬೆಂಗಳೂರು ಉತ್ತರ ನಗರ ಪಾಲಿಕೆ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.1, ಸಕಲೇಶಪುರ, ಹಾಸನ ಜಿಲ್ಲೆ. ದೂರವಾಣಿ ಸಂಖ್ಯೆ:08173–244454

ನೋಂದಾಯಿತಕಛೇರಿ ವಿಳಾಸ: ನಂ.148, ಎಂಬೆಸಿ ಸ್ಕ್ವೇರ್, ಇನ್‌ಫೇಂಟ್ರಿ ರೋಡ್, ಬೆಂಗಳೂರು–560001 ಪೊ: 080–22289966/22256688, ಫ್ಯಾಕ್ಸ್: 080–22264477 ಇ–ಮೇಲ್: mdvjnl@gmail.com ವೆಬ್‌ಸೈಟ್: www.vjnl.in CIN No: U41000KA2016SGC097260

ಸಂ:ಕಾಇಂ/ವಿಜನಿನಿ/ಎಯೋವಿ.1/ಸ/ಟೆಂಡರ್ ಪ್ರಕಟಣೆ/07(ಮೂರನೇ ಕರೆ)/2025–26/1891 ದಿನಾಂಕ:04.03.2026

ಶೇಕಡಾವಾರು ಟೆಂಡರ್ ಪ್ರಕಟಣೆ ಸಂಖ್ಯೆ : 07 (ಮೂರನೇ ಕರೆ) /2025–26 ದಿ : 04.03.2026 ಉಲ್ಲೇಖ: ಶೇಕಡಾವಾರು ಟೆಂಡರ್ ಪ್ರಕಟಣೆ ಸಂಖ್ಯೆ : 07/2025–26 ದಿ : 22.08.2025 & 07 (ಎರಡನೇ ಕರೆ) /2025–26 ದಿ : 30.01.2026 PERCENTAGE TENDER NOTIFICATION (Two Tender Document System) (ಕೆ.ಪಿ.ಪಿ.ಪಿ ಪೋರ್ಟಲ್ ಪದ್ಧತಿ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಈ ವಿಭಾಗದಡಿಯಲ್ಲಿ 01 ಕಾಮಗಾರಿಗಳಿಗೆ (ಮೂರನೇ ಕರೆ) ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ.283.86 ಲಕ್ಷಗಳು (ಜಿ.ಎಸ್.ಟಿ. ಮೊತ್ತ ಹೊರತುಪಡಿಸಿ) ಆಗಿರುತ್ತದೆ. ಟೆಂಡರ್ ದಸ್ತಾವೇಜುಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಈ ಕೆಳಕಂಡಂತೆ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಕ್ರ.ಸಂ	ಟೆಂಡರ್ ಕಾಮಗಾರಿ ಕ್ರ.ಸಂ.	ಕಾಮಗಾರಿಯ ಇಂಡೆಂಟ್ ಸಂಖ್ಯೆ:	ಟೆಂಡರ್ ದಸ್ತಾವೇಜುಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ	ಭರ್ತಿ ಮಾಡಿದ ಟೆಂಡರ್ ದಸ್ತಾವೇಜುಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ ಬಿಡ್ (ಲಕೋಟೆ–1) ತೆರೆಯುವ ದಿನಾಂಕ
1	01	407 (Call-3)	07.03.2026 ರಿಂದ 16.03.2026, ಸಂಜೆ 5.30 ರ ವರೆಗೆ	16.03.2026, ಸಂಜೆ 5.30 ರ ವರೆಗೆ	ದಿನಾಂಕ:18.03.2026 ರವರೆಗೆ ಬೆಳಿಗ್ಗೆ 11.00 ಗಂಟೆಗೆ

ತಾಂತ್ರಿಕ ಬಿಡ್‌ನ್ನು ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.1, ಸಕಲೇಶಪುರ ಇಲ್ಲಿ ತೆರೆಯಲಾಗುವುದು. ಸದರಿ ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ/ಪೂರ್ವಾರ್ಹತ ಷರತ್ತುಗಳು/ಇ.ಎಂ.ಡಿ ಮೊತ್ತ/ಬಿಡ್ಡುದಾರರ ಅರ್ಹತೆ/ಟೆಂಡರ್ ನಿಭಂಧನೆಗಳು/ಪೂರ್ವ ಬಿಡ್ ಸಭೆಯ ವಿವರಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್‌ಗಳನ್ನು ಒಪ್ಪಿಕೊಳ್ಳುವ ಹಾಗೂ ಯಾವುದೇ ಕಾರಣ ನೀಡದೆ ಎಲ್ಲಾ ಅಥವಾ ಯಾವುದೇ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಸಕ್ಷಮ ಪ್ರಾಧಿಕಾರವು ಹೊಂದಿರುತ್ತದೆ ಹಾಗೂ ಕಡಿಮೆ ಮೊತ್ತದ ಟೆಂಡರ್ ಸ್ವೀಕರಿಸಲು ಬದ್ಧವಾಗಿರುವುದಿಲ್ಲ. ಯಾವುದೇ ಮಾರ್ಪಾಡುಗಳು ಅಥವಾ ತಿದ್ದುಪಡಿಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ಸಮಯದಲ್ಲಿ ಈ ಕೆಳ ಸಹಿದಾರರಿಂದ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ, https://kppp.karnataka.gov.in/#/portal/portal-home ರಲ್ಲಿ ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ
ಯೋಜನಾ ವಿಭಾಗ, ನಂ.1 ಸಕಲೇಶಪುರ.

ವಾಸಾಸಂಇ/ಹಿಸನಿ/ಹಾಸನ/1158/ಕೆಎಸ್‌ಎಂಸಿಎ/2025–26

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಮಾನವ ಕುಲಕ್ಕೆ ಒಳಿತಾಗಬೇಕಾದರೆ ಒಬ್ಬನೇ ದೇವರು, ಒಂದೇ ಧರ್ಮ ಮತ್ತು ಒಂದೇ ಜಾತಿ ಇರಬೇಕು.

–ನಾರಾಯಣಗುರು

ಸಂಪಾದಕೀಯ

‘ಕಲ್ಯಾಣ’ಗಳ ಮೇಲೆ ಅಕ್ಕರೆ ಅಭಿವೃದ್ಧಿಗೂ ಸಿಕ್ಕಿದೆ ಆಸರೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ₹ 4.48 ಲಕ್ಷ ಕೋಟಿ ಗಾತ್ರದ 2026-27ನೇ ಸಾಲಿನ ರಾಜ್ಯ ಬಜೆಟ್ ಅನ್ನು ಶುಕ್ರವಾರ ಮಂಡಿಸಿದ್ದಾರೆ. ದಾಖಲೆಯ ಹದಿನೇಳನೆಯ ಬಾರಿಗೆ ಬಜೆಟ್ ಮಂಡಿಸಿರುವ ಅವರು, ಯಥಾಪ್ರಕಾರ ಜನಕಲ್ಯಾಣದ ಜಪ ಮಾಡುತ್ತಲೇ ಅಭಿವೃದ್ಧಿ ಕಾರ್ಯಗಳಿಗೂ ಒತ್ತು ನೀಡುವ ಇರಾದೆಯನ್ನು ವ್ಯಕ್ತಪಡಿಸಿದ್ದಾರೆ. ಬಜೆಟ್‌ನ ಗಾತ್ರ ಹಿಗ್ಗಿರುವುದರಿಂದ ‘ಗ್ಯಾರಂಟಿ’ಗಳ ಬಾಬತ್ತು ಮೊದಲಿನಂತೆ ಭಾರವಾಗದ ಮೂಲಸೌಕರ್ಯದ ಅಭಿವೃದ್ಧಿಗೂ ಹಣ ಒದಗಿಬರಲಿದೆ ಎಂಬ ಆತ್ಮವಿಶ್ವಾಸವನ್ನು ಅವರು ಪ್ರಕಟಿಸಿದ್ದಾರೆ. ಈ ದಿಸೆಯಲ್ಲಿ ಅವರು ಕಂಡುಕೊಂಡಿರುವ ಹಾದಿ ವಿಶಿಷ್ಟವಾದುದು. ‘ಅಹಿಂದ’ ವರ್ಗಗಳ ಮೇಲಿರುವ ಸಿದ್ದರಾಮಯ್ಯನವರ ಪ್ರೇಮ ಎಲ್ಲರಿಗೂ ಗೊತ್ತಿರುವಂಥದ್ದು. ಆದರೆ, ಹತ್ತು-ಹಲವು ಯೋಜನೆಗಳ ಮೂಲಕ ಇತರ ಎಲ್ಲ ಸಮುದಾಯಗಳನ್ನೂ ಒಂದಿಲ್ಲೊಂದು ರೀತಿ ತಲುಪುವ ಪ್ರಯತ್ನವನ್ನು ಅವರು ಮಾಡಿದ್ದಾರೆ. ತಳಸಮುದಾಯಗಳನ್ನು ಕೇಂದ್ರವಾಗಿಟ್ಟುಕೊಂಡು ಒಟ್ಟು ಸಮಾಜದ ಏಳಿಗೆಗಾಗಿ ಅವರು ಹಾತೊರೆಯುತ್ತಿರುವುದು ಬಜೆಟ್‌ನಲ್ಲಿ ಎದ್ದು ಕಾಣುತ್ತದೆ. ಕರ್ನಾಟಕದ ಸಶಕ್ತ ಹಾಗೂ ಸುಸ್ಥಿರ ಅಭಿವೃದ್ಧಿ ಮಾದರಿಗಳನ್ನು ರೂಪಿಸಿರುವ ಅವರು, ಅವುಗಳನ್ನು ‘11ಜಿ’ ಮಾದರಿ ಅರ್ಥಿಕತೆ ಎಂದು ವ್ಯಾಖ್ಯಾನಿಸಿದ್ದಾರೆ.

ಗ್ಯಾರಂಟಿ ಕಾರ್ಯಕ್ರಮಗಳ ಮುಂದುವರಿಕೆಯ ಜೊತೆಗೆ ಅಭಿವೃದ್ಧಿ ಚಟುವಟಿಕೆಗಳಿಗೂ ಒತ್ತು ನೀಡಿರುವ ರಾಜ್ಯ ಬಜೆಟ್, ಎಲ್ಲ ಸಮುದಾಯಗಳ ಆಶೋತ್ತರಗಳಿಗೆ ಸ್ಪಂದಿಸಲು ಪ್ರಯತ್ನಿಸಿದೆ.

ಜನಕಲ್ಯಾಣ, ಶಿಕ್ಷಣ, ಕೃಷಿ, ಕಾರ್ಮಿಕ ಕಲ್ಯಾಣ, ಕೈಗಾರಿಕೆ, ನಗರಾಭಿವೃದ್ಧಿ– ಹೀಗೆ ಎಲ್ಲವನ್ನೂ ಈ ‘11ಜಿ’ ಮಾದರಿ ಅರ್ಥಿಕತೆ ಒಳಗೊಂಡಿದೆ. ರಾಜ್ಯದ ಯುವ ಸಮುದಾಯದ ಉದ್ಯೋಗದ ಹಸಿವನ್ನು ಮುಖ್ಯಮಂತ್ರಿ ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ ಎನ್ನುವುದಕ್ಕೂ ನಿದರ್ಶನಗಳಿವೆ. ಈಗಾಗಲೇ ಆರಂಭಿಸಲಾಗಿರುವ 56,432 ಹುದ್ದೆಗಳ ಭರ್ತಿ ಪ್ರಕ್ರಿಯೆಗೆ ತಮ್ಮ ಬದ್ಧತೆಯನ್ನು ಪ್ರದರ್ಶಿಸಿರುವ ಅವರು, ಮುಂಬರುವ ಆರ್ಥಿಕ ವರ್ಷದಲ್ಲಿ ಹೊಸದಾಗಿ ಸುಮಾರು 32 ಸಾವಿರ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವುದಾಗಿಯೂ ಘೋಷಿಸಿದ್ದಾರೆ. ರಾಜ್ಯದ ರಸ್ತೆ ಮತ್ತು ಮೂಲಸೌಕರ್ಯ ಅಭಿವೃದ್ಧಿಗಾಗಿ ಕಳೆದ ವರ್ಷ ‘ಮುಖ್ಯಮಂತ್ರಿ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ’ವನ್ನು ರೂಪಿಸಿದ್ದ ಅವರು, ಮುಂದಿನ ದಿನಗಳಲ್ಲಿ ಈ ಯೋಜನೆಗಾಗಿ ಮತ್ತೆ ₹4,000 ಕೋಟಿ ವ್ಯಯಿಸಲು ತೀರ್ಮಾನಿಸಿದ್ದಾರೆ. ಬಜೆಟ್ ಭಾಷಣದುದ್ದಕ್ಕೂ ಕೃತಕ ಬುದ್ಧಿಮತ್ತೆಯ (ಎಐ) ಜಪ ಮಾಡಿರುವ ಅವರು, ಶಾಲಾಹಂತದ ವಿದ್ಯಾರ್ಥಿಗಳಿಂದ ಉದ್ಯೋಗದ ನಿರೀಕ್ಷೆಯಲ್ಲಿರುವ ಯುವ ಸಮುದಾಯದವರೆಗೆ ಎಲ್ಲರಿಗೂ ಎಐ ಆಧಾರಿತ ಕೌಶಲ ತರಬೇತಿ ನೀಡುವ ಮಾತುಗಳನ್ನಾಡಿದ್ದಾರೆ. ಅವರದೇ ಮಾತಿನಲ್ಲಿ ಹೇಳುವುದಾದರೆ, ‘ಇದು, ಬೆಂಕಿಯನ್ನು ಬೆಳಕಾಗಿಸುವ ಯತ್ನ’.

ಬೃಹತ್ ಗಾತ್ರದ ಯೋಜನೆಗಳ ಬದಲಾಗಿ ಸಣ್ಣ-ಪುಟ್ಟ ಅಭಿವೃದ್ಧಿ ಕಾರ್ಯಗಳ ಮೂಲಕ ಮಹತ್ವವನ್ನು ಸಾಧಿಸುವ ತಂತ್ರವನ್ನು ಸಿದ್ದರಾಮಯ್ಯನವರು ಕಂಡಿದ್ದಾರೆ. ಶಾಲಾ ಕಟ್ಟಡಗಳ ದುರಸ್ತಿ, ಹಾಸ್ಟೆಲ್‌ಗಳ ನಿರ್ಮಾಣ, ಕಿರು ಅಣೆಕಟ್ಟುಗಳು, ಸೇತುವೆಗಳು, ಕಾಲುಸಂಕಗಳ ನಿರ್ಮಾಣ, ಹತ್ತು-ಹಲವು ಏತ ನೀರಾವರಿ ಮತ್ತು ಕೆರೆ ತುಂಬಿಸುವ ಯೋಜನೆಗಳ ಅನುಷ್ಠಾನದ ಘೋಷಣೆಗಳನ್ನು ಈ ಮಾತಿಗೆ ಉದಾಹರಣೆಯಾಗಿ ನೀಡಬಹುದು. ‘ಮುಖ್ಯಮಂತ್ರಿ ಕೃಷಿ ವಿಸ್ತಾರ’ ಯೋಜನೆಯ ಘೋಷಣೆ ಕೃಷಿಕರ ಹರ್ಷಕ್ಕೆ ಕಾರಣವಾಗಬಹುದು. ಸಾಮಾಜಿಕ ಜಾಲತಾಣಗಳ ಮಿತಿ ಮೀರಿದ ಬಳಕೆಯ ಆತಂಕಕಾರಿ ಬದಲಾವಣೆ ಸರ್ಕಾರದ ಗಮನವನ್ನೂ ಸೆಳೆದಿದೆ. ಆದ್ದರಿಂದಲೇ 16 ವರ್ಷದೊಳಗಿನವರಿಗೆ ಸಾಮಾಜಿಕ ಜಾಲತಾಣ ಬಳಕೆ ನಿರ್ಬಂಧಿಸುವ ಅಭಿಲಾಷೆಯನ್ನು ಬಜೆಟ್‌ನಲ್ಲಿ ವ್ಯಕ್ತಪಡಿಸಲಾಗಿದೆ. ಆದರೆ, ಅದು ಎಷ್ಟರಮಟ್ಟಿಗೆ ಸಾಧ್ಯ ಎನ್ನುವ ಪ್ರಶ್ನೆಗೆ ಉತ್ತರವಿಲ್ಲ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ಮನರೇಗಾ) ಯೋಜನೆಯ ಮರುಸ್ಥಾಪನೆಗಾಗಿ ಕಾನೂನು ಹೋರಾಟಕ್ಕೂ ಸಿದ್ಧ ಎಂದು ಘೋಷಿಸಿರುವ ಮುಖ್ಯಮಂತ್ರಿ, ಮನರೇಗಾದ ರೂಪಾಂತರವಾದ ‘ವಿಬಿ ಜಿ ರಾಮ್ ಜಿ’ ಯೋಜನೆಯನ್ನು ಹೇಗೆ ಅನುಷ್ಠಾನಗೊಳಿಸಲಾಗುವುದು ಎಂಬುದನ್ನು ಸ್ಪಷ್ಟಪಡಿಸಿಲ್ಲ.

ರಾಜ್ಯಕ್ಕೆ ಜಿಎಸ್‌ಟಿ ಬಾಬ್ತಿನಲ್ಲಿ ಸಿಗುತ್ತಿದ್ದ ವರಮಾನದಲ್ಲಿ ಜಿಎಸ್‌ಟಿ ದರ ಸರಳೀಕರಣದ ಬಳಿಕ ₹15 ಸಾವಿರ ಕೋಟಿಯಷ್ಟು ಖೋತಾ ಆಗಿದೆ. ಈ ಕುರಿತು ಆಕ್ಷೇಪ ಎತ್ತಿರುವ ಮುಖ್ಯಮಂತ್ರಿ, 16ನೇ ಹಣಕಾಸು ಆಯೋಗವು ರಾಜ್ಯಕ್ಕೆ ಶೇ 4.13ರಷ್ಟು ತೆರಿಗೆ ಪಾಲು ನಿಗದಿ ಮಾಡಿರುವುದಕ್ಕೆ ಅಲ್ಪತೃಪ್ತಿಯನ್ನೂ ವ್ಯಕ್ತಪಡಿಸಿದ್ದಾರೆ. ಗಣಿಗಾರಿಕೆಯಲ್ಲಿ ಅಕ್ರಮ-ಸಕ್ರಮದ ಮೂಲಕ ದೊಡ್ಡ ವರಮಾನವನ್ನು ಅವರು ನಿರೀಕ್ಷಿಸಿದ್ದಾರೆ. ಸಂಪನ್ಮೂಲದ ಕ್ರೋಡೀಕರಣಕ್ಕಾಗಿ ಪರಿಸರಕ್ಕೆ ಹಾನಿ ಮಾಡುವಂತಹ ಅಕ್ರಮ ಗಣಿಗಳನ್ನು ಸಕ್ರಮಗೊಳಿಸಬೇಕೇ ಎನ್ನುವ ಪ್ರಶ್ನೆಯೂ ಏಳುತ್ತದೆ. ಅಬಕಾರಿ ಸುಂಕ ವ್ಯವಸ್ಥೆಯಲ್ಲಿ ಸುಧಾರಣೆ ತರುವ ಅವರ ಮಾತುಗಳಲ್ಲೇ ತೆರಿಗೆ ಹೆಚ್ಚಳ ಅಪಾಯದ ಸುಳಿವೂ ಇದೆ. ಹಾಗೆಯೇ ಆರ್ಥಿಕತೆಗೆ ಚೈತನ್ಯ ತುಂಬುವಂತಹ ಸಾಮರ್ಥ್ಯವಿರುವ ಸೇವಾವಲಯಕ್ಕೆ ಇನ್ನಷ್ಟು ಬಲ ತುಂಬುವ ಕೆಲಸ ಆಗಬೇಕಿತ್ತು ಎನ್ನುವುದು ಎದ್ದು ಕಾಣುತ್ತದೆ. 2004–05ರಲ್ಲಿ ‘ಮಿಗತೆ ಬಜೆಟ್’ ಮಂಡಿಸಿ, ದೇಶದ ಗಮನ ಸೆಳೆದಿದ್ದ ಸಿದ್ದರಾಮಯ್ಯನವರು ಕಳೆದ ಬಾರಿಯಂತೆ ಈ ಸಲವೂ ಕೊರತೆಯ ಬಜೆಟ್ ಕೊಟ್ಟಿದ್ದಾರೆ. ಸಾಲದ ಹೊರೆ ಮತ್ತೆ ಹೆಚ್ಚಿದೆ. ಅದು, ವಿತ್ತೀಯ ಕೊರತೆಯ ಮಿತಿಯೊಳಗೆ ಇದೆ ಎಂದು ಮುಖ್ಯಮಂತ್ರಿ ಸಮಾಧಾನ ವ್ಯಕ್ತಪಡಿಸಿದರೂ ಆ ಮಿತಿ ಅಂಚಿಗೆ ತಲಪಿಬಿಟ್ಟಿದೆ.

ನಾಯಕತ್ವದ ಕೊರತೆ

ಸಂಕಷ್ಟದ ಸ್ಥಿತಿಯಲ್ಲಿ ಸಮಯಪ್ರಜ್ಞೆಯಿಂದ ಸ್ಪಷ್ಟ ನಿರ್ಧಾರ ತೆಗೆದುಕೊಂಡು ರಾಜ್ಯ ಮತ್ತು ದೇಶವನ್ನು ಪಾರು ಮಾಡುವುದು, ಜನರ ದನಿಗೆ ದನಿಯಾಗುವುದು ನಾಯಕತ್ವದ ನಿಜವಾದ ಲಕ್ಷಣ! ಸದ್ಯ ಜಾಗತಿಕ ಯುದ್ಧದ ಈ ಸಂದರ್ಭದಲ್ಲಿ ದೂರದೃಷ್ಟಿ ಇಲ್ಲದ ನಾಯಕತ್ವದ ಕೊರತೆಯನ್ನು ಭಾರತ ಎದುರಿಸುತ್ತಿದೆ.

ಎಂ. ಜವರಾಜ್, ಲೇಖಕ, ‘ಫೇಸ್‌ಬುಕ್’ನಿಂದ

ಕಿಡಿನುಡಿ

ರಷ್ಯಾದಿಂದ ಕಚ್ಚಾತೈಲ ಖರೀದಿಸಲು ಭಾರತಕ್ಕೆ ‘30 ದಿನಗಳ ವಿನಾಯಿತಿ’ ನೀಡಲಾಗಿದೆ ಎಂದು ಅಮೆರಿಕದ ಸಚಿವರು ಬಹಿರಂಗವಾಗಿ ಹೇಳಿರುವುದು, ಸ್ವತಂತ್ರ ಭಾರತದ ವಿದೇಶಾಂಗ ಗೌರವಕ್ಕೆ ಬಿದ್ದಿರುವ ಅಪಮಾನಕರ ಹೊಡೆತ.

ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಬುಧವಾರ, 7-3-2001

• **ಚಿತ್ರನಟ ಪ್ರಭಾಕರ್ ಸ್ಥಿತಿ ಗಂಭೀರ**

ಬೆಂಗಳೂರು, ಮಾರ್ಚ್ 6– ಕಾಮಾಲೆ ರೋಗದಿಂದ ಬಳಲುತ್ತಿದ್ದ ಚಿತ್ರನಟ ‘ಟೈಗರ್’ ಪ್ರಭಾಕರ್ ಅವರನ್ನು ನಗರದ ಖಾಸಗಿ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಇರಿಸಲಾಗಿದೆ. ಕಾಮಾಲೆ ಹಾಗೂ ಹೃದಯ ಸಂಬಂಧಿ ತೊಂದರೆಯಿಂದ ಬಳಲುತ್ತಿದ್ದ ಪ್ರಭಾಕರ್ ಅವರನ್ನು ಭಾನುವಾರ ಸಂಜೆ 4ಗಂಟೆ ಹೊತ್ತಿಗೆ ಮಲ್ಯ ಆಸ್ಪತ್ರೆಗೆ ದಾಖಲು ಮಾಡಲಾಯಿತು. ಪ್ರಸ್ತುತ ಅವರ ಸ್ಥಿತಿ ಸ್ಥಿರವಾಗಿದೆ ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಪರಂಗುಸದಾಸ್ ತಿಳಿಸಿದ್ದಾರೆ.

ನಟ ಡಾ. ರಾಜ್‌ಕುಮಾರ್ ಮತ್ತು ಪಾರ್ವತಮ್ಮ ಅವರು ಇಂದು ಮಲ್ಯ ಆಸ್ಪತ್ರೆಗೆ ಭೇಟಿ ನೀಡಿ ಪ್ರಭಾಕರ್ ಅವರ ಆರೋಗ್ಯ ವಿಚಾರಿಸಿದರು.

75 ವರ್ಷಗಳ ಹಿಂದೆ

ಬುಧವಾರ, 7-3-1951

• **ಭಾರತಕ್ಕೆ ಅಮೆರಿಕಾದ ನೆರವು ಸದಾ ಅಗತ್ಯ**

ನವದೆಹಲಿ, ಮಾರ್ಚ್ 6– ‘ಭಾರತಕ್ಕೆ ಅಮೆರಿಕಾದ ಸಾಮಾನ್ಯ ಸಹಕಾರ ಯಾವಾಗಲೂ ಬೇಕು. ಆದರೆ, ತನಗೆ ಅವಶ್ಯಕವಾದ ವಿಷಯಗಳಲ್ಲಿ ಅಮೆರಿಕಾದ ನೆರವು ಮುಖ್ಯವಾಗಿ ಬೇಕು’

–ಹೀಗೆಂದು ಪ್ರಧಾನಿ ಪಂಡಿತ ನೆಹರೂ ಅವರು ಅಮೆರಿಕಾದ ಸ್ಯಾಟರ್‌ಡೇ ರಿವ್ಯೂ ಆಫ್ ಲಿಟರೇಚರ್ ಪತ್ರಿಕೆಯ ಸಂಪಾದಕರಾದ ನಾರ್ಮನ್ ಕಸಿನ್ಸ್ ಅವರಿಗೆ ಇತ್ತ ಭೇಟಿಯಲ್ಲಿ ತಿಳಿಸಿದರು.

‘ಗೋಧಿಯು ನಮಗೀಗ ಅತ್ಯ-ಗತ್ಯವಾಗಿ ಬೇಕಾಗಿದೆ. ಅತಿ ಉತ್ಕಟ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ’ ಎಂದು ಪ್ರಧಾನಿ ನುಡಿದರು.

ರಾಜಿ ಸಾಕು, ಮಾತನಾಡಬೇಕು!

ವಿಶ್ಲೇಷಣೆ

ಜ್ಯೋತಿ

> ರಾಜಿ ಮಾಡಿಕೊಳ್ಳುವುದನ್ನು ಹೆಣ್ಣಿಗೆ ಬಾಲ್ಯದಿಂದಲೇ ಸಮಾಜ ಅಭ್ಯಾಸ ಮಾಡಿಸುತ್ತದೆ. ಈ ರಾಜಿ, ಅವಳನ್ನು ಶೋಷಣೆಗೆ ಗುರಿಪಡಿಸಬಹುದು; ಅವಳ ಯಶಸ್ಸಿನ ಹಿಂದೆಯೂ ‘ರಾಜಿ’ಯ ಗಂಡುಹುನ್ನಾರ ಇರಬಹುದು. ‘ರಾಜಿ’ ಮನೋಭಾವದಿಂದ ಹೊರಬಾರದೆ ಹೋದರೆ ಲಿಂಗಸಮಾನತೆಯ ಪ್ರಯತ್ನಗಳು ಪೂರ್ಣಗೊಳ್ಳುವುದಿಲ್ಲ.

ಎಲ್ಲದಕ್ಕೂ ರಾಜಿ ಮಾಡಿಕೊಳ್ಳಬೇಕಾದ ಮೌನಿಯೆಂದೇ ಮಹಿಳೆಯನ್ನು ಭಾವಿಸುತ್ತಾ ಬಂದಿದ್ದೇವೆ. ಈ ರಾಜಿ ಅವಳ ಆಯ್ಕೆಯಲ್ಲದಿದ್ದರೂ, ಅವಳು ಸಾಮಾಜಿಕ ನಿರೀಕ್ಷೆಗಳ ಚೌಕಟ್ಟಿನೊಳಗೆ ಹೊಂದಿಕೊಂಡು ಬದುಕಬೇಕು ಎನ್ನುವುದು ಸಮಾಜದ ನಿರೀಕ್ಷೆ. ಪುರುಷನಂತೆ ಸಹಜವಾಗಿ ಬದುಕುವ ಹಕ್ಕು ತನಗಿದೆ ಎನ್ನುವುದನ್ನು ನಿರೂಪಿಸಬೇಕಾದರೆ, ಅವಳು ತನ್ನ ಪಾತ್ರವನ್ನು ಧೈರ್ಯದಿಂದ ಪುನರ್ ರಚಿಸಬೇಕಾಗಿದೆ.

ಮೂಲತಃ ಯಾವುದೇ ಅಧಿಕಾರವು ಎಂದೂ ತಟಸ್ಥವಾಗಿರುವುದಿಲ್ಲ ಮತ್ತು ಎಲ್ಲರನ್ನು ಒಳಗೊಳ್ಳುವುದಿಲ್ಲ. ಇಲ್ಲಿಯವರೆಗೂ ಸಮಾಜದ ಮೇಲ್ವರ್ಗದ ಒಂದು ಸಣ್ಣ ಜನಸಮೂಹ– ಭೂಮಿ, ಜ್ಞಾನ, ಸಂಪತ್ತು ಮತ್ತು ಸಂಸ್ಥೆಗಳನ್ನು ನಿಯಂತ್ರಿಸುತ್ತಾ ಬಂದಿದೆ. ಮಹಿಳೆಯರು ಮತ್ತು ಅಂಚಿನಲ್ಲಿರುವ ಸಮುದಾಯಗಳಿಗೆ ಶಿಕ್ಷಣ ಮತ್ತು ಅಧಿಕಾರದ ಪ್ರವೇಶವನ್ನು ಉದ್ದೇಶಪೂರ್ವಕವಾಗಿ ನಿರಾಕರಿಸುವ ಮೂಲಕ, ಅವರನ್ನು ಗುಲಾಮಗಿರಿಯಲ್ಲಿ ಬಂಧಿಸಿ ಸೇವೆಗಳನ್ನು ಮಾಡಿಸಿಕೊಳ್ಳುತ್ತಾ ಬರಲಾಗಿದೆ. ಈ ಹೊರಗಿಡುವ ಕಾರ್ಯತಂತ್ರವೇ ಸಮಾಜವನ್ನು ರೂಪಿಸುತ್ತಾ ಬಂದಿದೆ. ಮನುಷ್ಯನ ಸ್ವಜಾಗೃತಿಯು ಪ್ರಶ್ನಿಸುವ ಗುಣವನ್ನು ಉತ್ಪಾದಿಸುವುದರಿಂದ, ಪ್ರಶ್ನಿಸುವುದು ಸಾಮಾಜಿಕ ಶ್ರೇಣಿಯನ್ನು ಅಸ್ಥಿರಗೊಳಿಸುತ್ತದೆ. ಹಾಗಾಗಿ, ಸ್ವ–ಅರಿವುಳ್ಳ ಮಹಿಳೆಯನ್ನು ಸುಲಭವಾಗಿ ನಿಯಂತ್ರಿಸಲಾಗುವುದಿಲ್ಲ. ಅಂತಹವರ ಸಾಹಸದ ಬದುಕನ್ನು ಸಮಾಜ ಮೆಚ್ಚುವ ಬದಲು ಸಂಶಯದಿಂದ ನೋಡುತ್ತದೆ.

ಮಹಿಳೆಗೆ ಸಾಕ್ಷರತೆ ಅನಗತ್ಯ, ಗಂಡಿನ ಅಡಿಯಾಳಾಗಿ ಸಂಸಾರ ನಿರ್ವಹಣೆ ಮಾಡುವುದರಲ್ಲಿಯೇ ಅವಳ ಬದುಕಿನ ದಾರಿಯಿದೆ ಎಂದು ನಂಬಿದ್ದ ಕಾಲದಲ್ಲಿ, ಸಾವಿತ್ರಿಬಾಯಿ ಫುಲೆಯಂತಹ ಅರಿವು ಕಂಡುಕೊಂಡ ಮಹಿಳೆಯರು ಈ ಸಮಾಜವನ್ನು ಪ್ರಶ್ನಿಸಿದರು. ಅಂಬೇಡ್ಕರ್, ಶಿಕ್ಷಣವನ್ನು ಮಹಿಳಾ ವಿಮೋಚನೆಯ ಮೊದಲ ಹೆಜ್ಜೆ ಎಂದು ಘೋಷಿಸಿದರು. ‘ಶಿಕ್ಷಣ, ಚಳವಳಿ, ಸಂಘಟನೆ’ ಎಂಬ ಅವರ ಕರೆ ದಲಿತರಂತೆ ಮಹಿಳೆಗೂ ಅನ್ವಯಿಸುತ್ತದೆ. ಈ ಸಂದೇಶವು ಸ್ಪಷ್ಟಪಡಿಸುವುದೇನೆಂದರೆ, ಮಹಿಳೆಯ ಸ್ವ–ಅರಿವು ಅಧಿಕಾರ ಕೇಂದ್ರಗಳಿಗೆ ಅಡ್ಡಿಯಾಗುತ್ತದೆ.

ಇಂದು ಮಹಿಳೆಯರಿಗೆ ಅಡೆತಡೆಗಳು ಕಡಿಮೆಯಾಗಿರಬಹುದು. ವಿಸ್ಮಯವೆಂದರೆ, ಪುರುಷ ಕೇಂದ್ರಿತ ಅಧಿಕಾರ ವ್ಯವಸ್ಥೆಗಳು ಮಹಿಳೆಯ ಅರಿವಿಗೆ ಬಾರದಂತೆ ತಮ್ಮನ್ನು ತಾವು ಆಧುನೀಕರಿಸಿಕೊಂಡಿದೆ. ಪರಿಣಾಮವಾಗಿ, ಮಹಿಳೆ ಇಂದು ವಿದ್ಯಾವಂತಳಾದರೂ, ವೈಯಕ್ತಿಕ ಮಹತ್ವಾಕಾಂಕ್ಷೆ ಹೊಂದದೆ ಸಾಂಪ್ರದಾಯಿಕ ಪಾತ್ರಗಳಲ್ಲೇ ನೆಮ್ಮದಿ ಕಂಡುಕೊಳ್ಳಲು ಬಯಸುತ್ತಾಳೆ. ನಮ್ಮ ಸಾಮಾಜಿಕ ವ್ಯವಸ್ಥೆಯನ್ನು ಸುಸೂತ್ರವಾಗಿ ಮುಂದುವರಿಸಲು, ಮಹಿಳೆಯ ಈ ಮನೋಭಾವ ಪೂರಕ.

ಇಂದಿಗೂ, ತನ್ನ ಅಸ್ತಿತ್ವವನ್ನು ಕಟ್ಟಿಕೊಳ್ಳಲು ಮಹಿಳೆ ಹೋರಾಡಬೇಕಾಗುತ್ತದೆ. ಕೆಲಸದ ಸ್ಥಳದಲ್ಲಿ ತನ್ನ ಕಾರ್ಯತತ್ಪರತೆಯಿಂದ ಯಶಸ್ಸನ್ನು ಪಡೆಯಲು ಹೊರಟರೆ ಅವಳಿಗೆ ಅಡ್ಡಿಗಳು ಎದುರಾಗುತ್ತವೆ. ಇದು ಎಲ್ಲಾ ವಲಯಗಳಲ್ಲೂ ಕಾಣುವ ಸಾಮಾನ್ಯ ದೃಶ್ಯ. ತನ್ನ ಹೆಂಡತಿ ಮನೆಯೊಳಗೇ ಬಂದಿಯಾಗಿ ನಿಯಂತ್ರಣದಲ್ಲಿರಲಿ ಎಂದು ಆಶಿಸುವ ಪುರುಷನೇ, ತನ್ನೊಂದಿಗೆ ಕೆಲಸ ಮಾಡುವ ಮಹಿಳೆ ತನ್ನ ಗುಪ್ತ ಬಯಕೆಗಳಿಗೆ ಸಿಗಲಿ ಎನ್ನುವ ನಿರೀಕ್ಷೆ ಹೊಂದಿರುವುದನ್ನು, ಸಿಗದಿದ್ದಾಗ ಅವಳಿಗೆ ತೊಂದರೆ ಕೊಡುವುದನ್ನು ನಾವು ನೋಡಿದ್ದೇವೆ. ಇಷ್ಟವಿದ್ದೋ, ಇಲ್ಲದೆಯೋ, ಪುರುಷನೊಂದಿಗೆ ರಾಜಿ ಮಾಡಿಕೊಳ್ಳುವ ಮಹಿಳೆಯರು ಬೇಗನೆ ತಮ್ಮ ಕ್ಷೇತ್ರದಲ್ಲಿ ಯಶಸ್ಸುಗಳಿಸುತ್ತಾರೆ. ಪರಿಣಾಮವಾಗಿ, ವೈಯಕ್ತಿಕ ಅರ್ಹತೆಯ ಆಧಾರದಲ್ಲಿ ಯಶಸ್ಸು ಗಳಿಸಲು ಹೆಣಗಾಡುವ ಮಹಿಳೆಯರು ಹಿಂದೆಯೇ ಉಳಿದು ಬಿಡುತ್ತಾರೆ. ಇದರಿಂದಾಗಿ, ಮಹಿಳೆಯ ಯಶಸ್ಸು ಅವಳ ಅರ್ಹತೆಯಿಂದಲ್ಲ, ಅವಳು ಅಧಿಕಾರದಲ್ಲಿರುವ ಪುರುಷನಿಗೆ ಎಷ್ಟು ಸಮೀಪವಾಗಿದ್ದಾಳೆ ಎನ್ನುವುದರಿಂದ ನಿರ್ಧಾರವಾಗುತ್ತದೆ ಎನ್ನುವ ತಪ್ಪು ಸಂದೇಶ ಸಿಗುತ್ತಿದೆ.

ಕೆಲಸದ ಸ್ಥಳಗಳಲ್ಲಿ ಮಹಿಳೆ ಮಾಡಿಕೊಳ್ಳಬೇಕಾದ ರಾಜಿಯನ್ನು ‘ಕಾಸ್ಟಿಂಗ್ ಕೌಚ್’ ಎಂದು ಸಾಮಾನ್ಯವಾಗಿ ಗುರ್ತಿಸಲಾಗಿದೆ. ಇದು ಸಿನಿಮಾ ಕ್ಷೇತ್ರದಲ್ಲಿ ಸಾಕಷ್ಟು ಸುದ್ದಿಯಲ್ಲಿದ್ದರೂ, ಪುರುಷ ಕೇಂದ್ರಿತವಾಗಿರುವ ಬಹುತೇಕ ಎಲ್ಲಾ ಕ್ಷೇತ್ರಗಳಲ್ಲಿ ಈ ವ್ಯವಹಾರ ಅಸ್ತಿತ್ವದಲ್ಲಿದೆ. ಈ ಸಮಸ್ಯೆ ಶೋಷಣೆಗಿಂತ ಆಳವಾದದ್ದು. ಇಲ್ಲಿನ ಅಪಾಯವೆಂದರೆ, ಕೆಲವು ಮಹಿಳೆಯರು ಮಾಡಿಕೊಳ್ಳುವ ರಾಜಿಯಿಂದಾಗಿ ಎಲ್ಲಾ ಮಹಿಳೆಯರ ಯಶಸ್ಸನ್ನು ಸಂಶಯದಿಂದ ನೋಡುವಂತಹ ಪರಿಸ್ಥಿತಿ ಉಂಟಾಗುವುದು. ವಿರೋಧಾಭಾಸವೆಂದರೆ, ಪುರುಷ ಶಕ್ತಿಕೇಂದ್ರಗಳೊಂದಿಗೆ ಹೊಂದಿಕೊಳ್ಳುವ ಮಹಿಳೆಯರನ್ನು ‘ಸಾಧಕರು’ ಎಂದು ಸಂಭ್ರಮಿಸಲಾಗುತ್ತದೆ. ಆದರೆ, ಯಾರೊಂದಿಗೂ ರಾಜಿ ಮಾಡಿಕೊಳ್ಳದೆ ಇರುವವರನ್ನು ಮೂಲೆಗುಂಪಾಗಿಸಲಾಗುತ್ತದೆ. ಅಧಿಕಾರದ ಸಾಮೀಪ್ಯವನ್ನು ‘ಅರ್ಹತೆ’ ಎಂದು ತಪ್ಪಾಗಿ ಗ್ರಹಿಸಿದಾಗ, ನಿಜವಾದ ಸಾಧನೆ ಅದೃಶ್ಯವಾಗುತ್ತದೆ. ಆದ್ದರಿಂದ ಮಹಿಳೆ ತಾನು ಮಾಡಿಕೊಳ್ಳುವ ರಾಜಿಯ ಕುರಿತಾದ ಮೌನ ಮುರಿಯುವ ಕಾಲ ಪ್ರಸ್ತುತ ಬಂದಿದೆಯೆನ್ನಬಹುದು.

ಸ್ವಗೌರವವನ್ನು ಪ್ರತಿಪಾದಿಸುವ, ಅಥವಾ ಪುರುಷನ ಅನೈತಿಕತೆಯನ್ನು ಪ್ರಶ್ನಿಸುವ ಮಹಿಳೆಗೆ ‘ಅಸಹಕಾರ ಪ್ರವೃತ್ತಿಯವರು’ ಎಂದು ಹಣೆಪಟ್ಟಿ ಹಚ್ಚಲಾಗುತ್ತದೆ. ಅಸ್ತಿತ್ವದಲ್ಲಿರುವ ವ್ಯವಸ್ಥೆಯನ್ನು ತೊಂದರೆಗೊಳಿಸದವರನ್ನು ‘ಯಶಸ್ವಿ’ ಮಹಿಳೆಯರೆಂದು ಸಂಭ್ರಮಿಸಲಾಗುತ್ತದೆ. ಈ ವಿದ್ಯಮಾನವು ಮಹಿಳೆಗೆ ಅಪಾಯಕಾರಿ ಸಂದೇಶ ಕಳುಹಿಸುತ್ತದೆ: ಅವಳ ರಾಜಿ ಪ್ರತಿಫಲಗಳನ್ನು ತರುತ್ತದೆ; ಸ್ವಾವಲಂಬಿ ಹೋರಾಟ ಅವಳನ್ನು ಪ್ರತ್ಯೇಕಗೊಳಿಸುತ್ತದೆ. ಇಂತಹ ಪ್ರವೃತ್ತಿ ಮಹಿಳಾ ಸಬಲೀಕರಣದ ಆಶಯಗಳನ್ನು ದುರ್ಬಲಗೊಳಿಸುತ್ತದೆ ಮತ್ತು ಅವಳು ಸಾಮಾನ್ಯಳಾಗಿಯೇ ಉಳಿಯುತ್ತಾಳೆ. ಅಂದರೆ, ಅವಳ ಧೈರ್ಯಕ್ಕಿಂತ ಮೌನಕ್ಕೆ ಪ್ರತಿಫಲ ಸಿಕ್ಕಾಗ, ಅವಳ ಶೋಷಣೆ ಹಾಗೆಯೇ ಉಳಿಯುತ್ತದೆ. ಅವಳ ಗೋಚರತೆಯು ಪುರುಷನ ಪೋಷಕತ್ವ ವನ್ನು ಅವಲಂಬಿಸಿದಾಗ, ಅವಳ ಯಶಸ್ಸು ಟೊಳ್ಳಾಗಿರುತ್ತದೆ.

ಇಲ್ಲಿನ ಪ್ರಶ್ನೆ, ಮಹಿಳೆ ತನ್ನ ಸ್ವಾವಲಂಬನೆಯಿಂದ ಪಡೆಯುವ ಯಶಸ್ಸು, ಪುರುಷ ಕೇಂದ್ರಿತ ವ್ಯವಸ್ಥೆಯನ್ನು ಏಕೆ ಅತಂತ್ರಗೊಳಿಸುತ್ತದೆ? ಏಕೆಂದರೆ, ತನ್ನ ಸಾಮರ್ಥ್ಯದಿಂದ ಯಶಸ್ವಿಯಾಗುವ ಮಹಿಳೆ, ತನ್ನ ಯಶಸ್ಸಿಗೆ ಪುರುಷನ ದೃಢೀಕರಣ ಅಗತ್ಯ ಎಂಬ ಹುಸಿಪುರಾಣವನ್ನು ಒಡೆಯುತ್ತಾಳೆ. ಇದಕ್ಕಾಗಿಯೇ, ಮಹಿಳೆ ತನ್ನ ದೇಹವನ್ನು ಪೋಷಿಸಲಿ, ಬುದ್ಧಿಯನ್ನಲ್ಲ ಎಂದು ಪುರುಷ ಸಮಾಜ ಆಶಿಸುತ್ತದೆ. ಇದಕ್ಕೆ ತಕ್ಕಂತೆ, ತನ್ನ ದೇಹ ಸೌಂದರ್ಯದಲ್ಲಿ ಸಮಯ ಕಳೆಯುವ ಮಹಿಳೆ ಮತ್ತು ಜ್ಞಾನಾರ್ಜನೆಯಲ್ಲಿ ತನ್ನೆಲ್ಲಾ ಸಮಯ ಕಳೆಯುವ ಪುರುಷ, ಸಮಾನವಾಗಿ ಸ್ಪರ್ಧೆಗಿಳಿಯಲು ಸಾಧ್ಯವೆ? ಜ್ಞಾನ ಗಳಿಸಲು ಪುರುಷನನ್ನು ಹೆಣ್ಣು ಅವಲಂಬಿಸುವುದು ಅನಿವಾರ್ಯವೆನ್ನುವ ಪರಿಸ್ಥಿತಿ ನಿರ್ಮಾಣಗೊಂಡಿದೆ. ಇದನ್ನು ಮುರಿಯುವ ಹೆಣ್ಣು, ಅಂದರೆ ಜ್ಞಾನಾರ್ಜನೆಯಲ್ಲಿ, ಕೌಶಲ ತರಬೇತಿಯಲ್ಲಿ ಸಮಯ ಕಳೆಯುವ ಮಹಿಳೆ, ಪುರುಷನ ಈ ‘ಗೇಟ್ ಕೀಪಿಂಗ್’ ಕೃತಕ ಎಂದು ಸಾಬೀತುಪಡಿಸುತ್ತಾಳೆ.

ಅಸಹನೀಯ ಮೌನವನ್ನು ಮುರಿದ ಮಹಿಳೆಯರು ಪ್ರಾರಂಭಿಸಿದ ‘ಮೀ–ಟೂ’ ಅಂತಹ ಚಳವಳಿಗಳು ಪುರುಷ ಕೇಂದ್ರಿತ ಅಧಿಕಾರದ ವ್ಯಾಪಕ ದುರುಪಯೋಗವನ್ನು ಬಹಿರಂಗಪಡಿಸಿದವು. ಹೆಣ್ಣಿನ ಮೌನವು ಅಪರಾಧಿಗಳನ್ನು ರಕ್ಷಿಸುತ್ತದೆ ಎಂದು ಶೋಷಿತ ಮಹಿಳೆಯರು ಸಾಬೀತುಪಡಿಸಿದರು. ಆದರೆ, ಬಹಿರಂಗಪಡಿಸುವುದರಿಂದ ಮಾತ್ರ ಅಸಮಾನತೆ ಕೆಡವಲು ಸಾಧ್ಯವಿಲ್ಲ. ನಮಗೆ ಅಗತ್ಯವಿರುವುದು ಆಳವಾದ ಸಾಂಸ್ಕೃತಿಕ ಬದಲಾವಣೆ. ಮಹಿಳೆಗೆ ಸಬಲೀಕರಣವನ್ನು ಉಡುಗೊರೆಯಾಗಿ ನೀಡಲಾಗದು. ಅದಕ್ಕೆ ಅವಳೇ ಶ್ರಮಿಸಬೇಕು.

ನಿಜವಾದ ಸಬಲೀಕರಣವು ಅರಿವಿನೊಂದಿಗೆ ಪ್ರಾರಂಭವಾಗುತ್ತದೆ. ಹಕ್ಕುಗಳ ಅರಿವು, ವ್ಯವಸ್ಥಿತ ಪಕ್ಷಪಾತ, ಆರ್ಥಿಕ ರಚನೆಗಳು ಮತ್ತು ಒಬ್ಬರ ಸ್ವಂತ ಸಾಮರ್ಥ್ಯದ ಅರಿವು. ಆರ್ಥಿಕವಾಗಿ ಗಳಿಸುವ, ಆದರೆ ವ್ಯವಸ್ಥೆಯನ್ನು ಪ್ರಶ್ನಿಸಲು ಸಾಧ್ಯವಾಗದ ಮಹಿಳೆ ಸಂಪೂರ್ಣವಾಗಿ ಸ್ವತಂತ್ರಳಲ್ಲ. ಸಾರ್ವಜನಿಕವಾಗಿ ಭಾಗವಹಿಸುವ, ಆದರೆ ಸ್ವಂತವಾಗಿ ನಿರ್ಧರಿಸಲು ಸಾಧ್ಯವಾಗದ ಮಹಿಳೆ ಸಬಲಳಲ್ಲ.

ಮಹಿಳೆಯರ ಬಗೆಗಿನ ಸಾಮಾಜಿಕ ನಿರೀಕ್ಷೆಗಳನ್ನು ಮರು ವ್ಯಾಖ್ಯಾನಿಸಬೇಕಾಗಿದೆ ಎಂದು ನಾವು ನಿಜವಾಗಿಯೂ ನಂಬಿದರೆ, ಈ ಮರುವ್ಯಾಖ್ಯಾನವು ಆದಷ್ಟು ಬೇಗನೆ, ಅವರ ಪ್ರೌಢಾವಸ್ಥೆಯಲ್ಲಿಯೇ ಪ್ರಾರಂಭವಾಗಬೇಕಾಗಿದೆ. ನಾವು ಬಾಲ್ಯದಿಂದಲೇ ಹೆಣ್ಣುಮಕ್ಕಳಿಗೆ ಎಲ್ಲದಕ್ಕೂ ಹೊಂದಿಕೊಳ್ಳಲು ತರಬೇತಿ ನೀಡುತ್ತೇವೆ. ಕೌಟುಂಬಿಕ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗದೆ ಹೋದಾಗ, ಪಾಪಪ್ರಜ್ಞೆ ಕಾಡದೆ ಇರುವ ಮಹಿಳೆಯರನ್ನು ನಾವು ಕಾಣುವುದು ಬಹಳ ಅಪರೂಪ. ಈ ಮಾನಸಿಕ ಕಂಡೀಷನಿಂಗ್ ಅನ್ನು ಪ್ರಜ್ಞಾಪೂರ್ವಕವಾಗಿ ಬದಲಾಯಿಸಬೇಕಾಗಿದೆ.

ನಾವು ಮಹಿಳೆಯರಿಗೆ ಬಳಸುವ ಭಾಷೆ ಬದಲಾಗಬೇಕಾಗಿದೆ. ಅವಳ ತ್ಯಾಗ ವೈಭವೀಕರಿಸುವ ಬದಲು, ಸ್ವಾಭಿಮಾನದ ಕುರಿತು ಮಾತನಾಡಬೇಕಿದೆ. ಅವಳ ನಮ್ರತೆಯನ್ನು ಸದ್ಗುಣವೆಂದು ಸಮೀಕರಿಸುವ ಬದಲು, ಅವಳ ಮಹತ್ವಾಕಾಂಕ್ಷೆಯನ್ನು ಮೆಚ್ಚಬೇಕಾಗಿದೆ. ನಮ್ಮ ಮಹಿಳೆಯರಿಗೆ ಅಗತ್ಯವಾಗಿ ಬೇಕಾಗಿರುವುದು: ಸಾಂವಿಧಾನಿಕ ಹಕ್ಕುಗಳ ಅರಿವು, ಆರ್ಥಿಕ ಸಾಕ್ಷರತೆ, ಮತ್ತು ಕೆಲಸದ ಸ್ಥಳದಲ್ಲಿನ ನೈತಿಕತೆ. ಹೆಣ್ಣಿನ ಆರ್ಥಿಕ ಸ್ವಾತಂತ್ರ್ಯವೆಂದರೆ ಅದು ಸಂಬಳ ಮಾತ್ರವಲ್ಲ, ಮಾನಸಿಕ ಸ್ವಾತಂತ್ರ್ಯ ಕೂಡ.

ಮಹಿಳೆಯರು ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳುವುದನ್ನು, ನಿರ್ಭಯವಾಗಿ ಮಾತನಾಡುವುದನ್ನು ಮತ್ತು ಅನ್ಯಾಯದ ವಿರುದ್ಧ ಸಿಡಿದೇಳುವುದನ್ನು ಅಭ್ಯಾಸ ಮಾಡಿಕೊಳ್ಳಬೇಕಾಗಿದೆ. ಸಮಾಜದಲ್ಲಿರುವ ಅಸಮಾನತೆಗಳು ಸಹಾನುಭೂತಿಯಿಂದ ಕರಗುವುದಿಲ್ಲ; ಧೈರ್ಯವಾಗಿ ಎದುರಿಸಿದಾಗ ಹಿಮ್ಮೆಟ್ಟುತ್ತವೆ. ಪುರುಷ ಕೇಂದ್ರಿತ ಅಧಿಕಾರದ ಸಾಮೀಪ್ಯದಿಂದಾಗಿ ಸಿಗುವ ಸೌಲಭ್ಯಗಳು, ಪ್ರಶಸ್ತಿ ಪದೋನ್ನತಿಗಳು, ಪದವಿಗಳು ನಮಗೆ ಅಗತ್ಯವಿಲ್ಲ. ನಮ್ಮ ಸಾಮರ್ಥ್ಯಕ್ಕೆ ಸಮನಾದ ಮಾನ್ಯತೆ ಬೇಕು.

ವಾಚಕರ ವಾಣಿ

ವಿದ್ಯುತ್ ಕಣ್ಣಾಮುಚ್ಚಾಲೆ: ರೈತರ ಸಂಕಟ

ರೈತರಿಗೆ ಸಮರ್ಪಕವಾಗಿ ತ್ರಿಫೇಸ್ ವಿದ್ಯುತ್ ನೀಡುವುದರಲ್ಲಿ ರಾಜ್ಯ ಸರ್ಕಾರ ಎಡವಿದೆ. ವಿದ್ಯುತ್ ಪೂರೈಕೆಯಲ್ಲಿನ ಅಸ್ತವ್ಯಸ್ತತೆಯಿಂದಾಗಿ ರೈತರು ತೊಂದರೆ ಅನುಭವಿಸುವಂತಾಗಿದೆ. ಕೃಷಿ ಪಂಪ್‌ಸೆಟ್‌ಗಳಿಗೆ ಹೆಚ್ಚಾಗಿ ರಾತ್ರಿವೇಳೆ ವಿದ್ಯುತ್ ನೀಡಲಾಗುತ್ತದೆ. ಜಮೀನುಗಳಿಗೆ ತೆರಳುವ ರೈತರು ವಿಷಜಂತುಗಳ ಹಾವಳಿಗೆ ಸಿಲುಕಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ರೈತ ಮೃತಪಟ್ಟರೆ ಆತನ ಇಡೀ ಕುಟುಂಬ ಸಂಕಷ್ಟಕ್ಕೆ ಸಿಲುಕುತ್ತದೆ. ರಾತ್ರಿವೇಳೆ ವಿದ್ಯುತ್ ಪೂರೈಕೆಯಲ್ಲಿ ಸಮಸ್ಯೆಯಾದರೆ ಸರಿಪಡಿಸಲು ಸಾಧ್ಯವಾಗುವುದಿಲ್ಲ. ಸಂತ್ರಸ್ತ ಕುಟುಂಬಕ್ಕೆ ಸರ್ಕಾರದಿಂದ ಹೆಚ್ಚಿನ ಪರಿಹಾರವೂ ದೊರೆಯುವುದಿಲ್ಲ. ಹಗಲಿನ ಹೊತ್ತು ವಿದ್ಯುತ್ ಪೂರೈಸುವುದೇ ಈ ಸಮಸ್ಯೆಗಿರುವ ಏಕೈಕ ಪರಿಹಾರ. ರೈತರ ಹಿತದೃಷ್ಟಿಯಿಂದ ಸರ್ಕಾರ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳು ಈ ದಿಸೆಯಲ್ಲಿ ಹೆಜ್ಜೆ ಇಡಲಿ.

ಷಣ್ಮುಖ ಎಸ್.ಎಚ್., ದಾವಣಗೆರೆ

ಅಲಿಪ್ತ ನೀತಿ: ವಿದಾಯ ಹೇಳಲಾಗಿದೆಯೆ?

ಭಾರತದ ವಿದೇಶಾಂಗ ನೀತಿಯು ಜನಸಾಮಾನ್ಯರಿಗೆ ಅರ್ಥವಾಗಬೇಕು; ಅದರ ಆಳ ಅಗಲವನ್ನು ಸರ್ಕಾರ ದೇಶಕ್ಕೆ ತಿಳಿಸಬೇಕೆಂದು ನಾಗರಿಕರು ಬಯಸುವುದಿಲ್ಲ. ಆದರೆ, ಸರ್ಕಾರದ ಇತ್ತೀಚಿನ ಕೆಲವು ನಿರ್ಧಾರಗಳನ್ನು ಉಲ್ಲೇಖಿಸಬಹುದಾದರೆ, ಪ್ರಧಾನಿ ನರೇಂದ್ರ ಮೋದಿ ಅವರ ಇಸ್ರೇಲ್ ಭೇಟಿ ಬೆನ್ನಲ್ಲೇ ಇರಾನ್‌ನ ಪರಮೋಚ್ಚ ನಾಯಕ ಅಯಾತೊಲ್ಲಾ ಖಮೇನಿ ಅವರನ್ನು ಅಮೆರಿಕ ಮತ್ತು ಇಸ್ರೇಲ್ ಸೇರಿ ಹತ್ಯೆ ಮಾಡಿವೆ. ಅದಕ್ಕಾಗಿ ಸಂತಾಪ ಸೂಚಿಸಲು ಐದು ದಿನ ಸಮಯ ತೆಗೆದುಕೊಂಡಿದ್ದನ್ನು ನೋಡಿದರೆ, ಭಾರತ ತನ್ನ ಮೂಲಭೂತ ‘ಅಲಿಪ್ತ ನೀತಿ’ಯಿಂದ ದೂರ ಸರಿಯುತ್ತಿದೆಯೇನೋ ಎಂಬ ಅನುಮಾನ ಕಾಡದಿರದು.

ಶಾಂತಕುಮಾರ್, ಸರ್ಜಾಪುರ

ದೇವದಾಸಿ ಪದ್ಧತಿಯು ಕೊನೆಗೊಳ್ಳಲಿ

ದೇವದಾಸಿ ಪದ್ಧತಿಯು ಕ್ರೂರ ಹಾಗೂ ಅಮಾನವೀಯ. ದೇವರ ಹೆಸರಿನಲ್ಲಿ ಬಾಲಕಿಯರನ್ನು ದೇವಾಲಯಗಳಿಗೆ ಅರ್ಪಿಸುವ ಈ ಪದ್ಧತಿ, ಅವರ ಬಾಲ್ಯ, ಶಿಕ್ಷಣ ಮತ್ತು ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತದೆ. ಕಾನೂನಿನಿಂದ ನಿಷೇಧಗೊಂಡಿದ್ದರೂ, ಸಾಮಾಜಿಕ ಒತ್ತಡ ಮತ್ತು ಅಜ್ಞಾನದಿಂದಾಗಿ ಈ ಪದ್ಧತಿ ಗುಪ್ತವಾಗಿ ಮುಂದುವರಿದಿದೆ. ಹೆಣ್ಣುಮಕ್ಕಳನ್ನು ದೇವರಿಗೆ ಅರ್ಪಿಸುವುದು ಧರ್ಮವಲ್ಲ, ಅದು ಶೋಷಣೆ ಹಾಗೂ ಮೌಢ್ಯ. ಇದರ ನಿಗ್ರಹಕ್ಕೆ ಕಾನೂನು ಮಾತ್ರ ಸಾಲದು; ಜಾಗೃತಿ ಮತ್ತು ಶಿಕ್ಷಣದ ಮೂಲಕ ಸಮಾಜದ ಮನಃಸ್ಥಿತಿಯನ್ನು ಬದಲಾಯಿಸಬೇಕಿದೆ. ಸಂಘಟಿತ ಪ್ರಯತ್ನದಿಂದ ಈ ಅನಿಷ್ಟ ಪದ್ಧತಿಯ ನಿರ್ಮೂಲನೆ ಸಾಧ್ಯ.

ಎಚ್. ನಾಗಮ್ಮ ಭಂಡಾರ್, ಹೊಸಪೇಟೆ

ಶುಲ್ಕ ಹೆಚ್ಚಳ, ಪಠ್ಯಪುಸ್ತಕಗಳೂ ದುಬಾರಿ!

ಶಾಲಾ ಪಠ್ಯಪುಸ್ತಕಗಳ ಬೆಲೆ ಹೆಚ್ಚಳದ ಸುದ್ದಿ ಓದಿ ಆಘಾತವಾಯಿತು. ಸರ್ಕಾರವು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತಿದೆ. ಕರ್ನಾಟಕ ಪಠ್ಯಪುಸ್ತಕಗಳ ಸಂಘವು ಸರ್ಕಾರದೊಂದಿಗೆ ಮಾತುಕತೆ ನಡೆಸಿ ಮಕ್ಕಳಿಗೆ ಭಾರವಾಗದಂತೆ ಬೆಲೆ ಇಳಿಸುವುದು ಒಳಿತು. ಬೆಲೆ ಇಳಿದರೆ ಕಡಿಮೆ ದರ ದಲ್ಲಿ ಪುಸ್ತಕಗಳು ದೊರೆಯುತ್ತವೆ. ಈ ಬಾರಿ ಶೇ 12ರಷ್ಟು ಶಾಲಾ ಶುಲ್ಕ ಹೆಚ್ಚಿಸಲು ಖಾಸಗಿ ಶಿಕ್ಷಣ ಸಂಸ್ಥೆಗಳು ಸಜ್ಜಾಗಿವೆ. ಪೋಷಕರು ಅಗತ್ಯವಸ್ತುಗಳ ಬೆಲೆ ಮತ್ತು ಶಾಲಾ ಶುಲ್ಕದ ಹೊರೆ ತಾಳಲಾರದೆ ಬಸವಳಿದಿದ್ದಾರೆ. ಈಗ ಪುಸ್ತಕಗಳ ಬೆಲೆಯನ್ನೂ ಹೆಚ್ಚಿಸಿದರೆ ಅವರಿಗೆ ಮತ್ತಷ್ಟು ಹೊರೆಯಾಗಲಿದೆ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಕೆರೆನೀರಿಗೆ ದೊಣೆ ನಾಯಕನ ಅಪ್ಪಣೆಯೆ?

ರಷ್ಯಾದಿಂದ ಕಚ್ಚಾತೈಲ ಖರೀದಿಸಲು ಅಮೆರಿಕವು ಭಾರತಕ್ಕೆ ಮೂವತ್ತು ದಿನಗಳ ತಾತ್ಕಾಲಿಕ ಸಡಿಲಿಕೆ ನೀಡಿದೆ ಎಂಬ ಸುದ್ದಿ ಚರ್ಚೆಗೆ ಗ್ರಾಸವಾಗಿದೆ. ನಮ್ಮ ಅಗತ್ಯಗಳಿಗೆ ನಮ್ಮದೇ ದುಡ್ಡು ಖರ್ಚು ಮಾಡಿ ತೈಲ ಖರೀದಿಸಲು ಮತ್ತೊಬ್ಬರ ಅನುಮತಿಗೆ ಕಾಯಬೇಕಾದ ದುಃಸ್ಥಿತಿ ಏಕೆ? ಭಾರತವು ಸ್ವಾತಂತ್ರ್ಯಗೊಂಡ ಬಳಿಕ ತನ್ನ ವಿದೇಶಾಂಗ ಮತ್ತು ಆರ್ಥಿಕ ನೀತಿಯಲ್ಲಿ ಸ್ವಾಯತ್ತತೆ ಉಳಿಸಿಕೊಳ್ಳಲು ಸದಾ ಪ್ರಯತ್ನಿಸಿದೆ. ಆದರೆ, ಇತ್ತೀಚಿನ ಅಮೆರಿಕದ ನಿರ್ಬಂಧಗಳು ಮತ್ತು ಒತ್ತಡಗಳು ಭಾರತವನ್ನು ಸಂಕಷ್ಟಕರ ಪರಿಸ್ಥಿತಿಗೆ ಹಾಗೂ ಮುಜುಗರಕ್ಕೆ ತಳ್ಳಿವೆ.

ಪ್ರಜಾಪ್ರಭುತ್ವ ರಾಷ್ಟ್ರವಾಗಿ ದೇಶದ ಆರ್ಥಿಕ ಮತ್ತು ವಿದೇಶಾಂಗ ನೀತಿಗೆ ಸಂಬಂಧಿಸಿದ ನಿರ್ಧಾರಗಳನ್ನು ಸ್ವತಂತ್ರವಾಗಿ, ಮತ್ತು ದೇಶದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡೇ ತೆಗೆದುಕೊಳ್ಳಬೇಕು. ಬೇರೆಯವರ ಕೈಗೊಂಬೆಯಾದರೆ ಭಾರತ ತನ್ನ ಘನತೆ ಕಳೆದುಕೊಂಡಂತೆಯೇ ಸರಿ. ಅಮೆರಿಕದಂತಹ ದೊಡ್ಡ ರಾಷ್ಟ್ರಗಳೊಂದಿಗೆ ಸ್ನೇಹಪೂರ್ಣ ಸಂಬಂಧ ಇರಿಸಿಕೊಳ್ಳುವುದು ಅಗತ್ಯ. ಆದರೆ, ಅದೇ ಸಮಯದಲ್ಲಿ ಭಾರತದ ಸಾರ್ವಭೌಮತೆ, ಸ್ವಾಯತ್ತತೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಗಾಸಿಯಾಗದಂತೆ ಜಾಗ್ರತೆವಹಿಸುವುದು ಅತಿಮುಖ್ಯ.

ಎಂ.ಎಸ್. ಅಲ್ಲಮ ಪ್ರಭು, ಬೆಂಗಳೂರು

ಬೀದಿನಾಯಿಗಳ ಉಪಟಳ ನಿಯಂತ್ರಿಸಿ

ಪ್ರತಿದಿನ ಮಾಧ್ಯಮಗಳಲ್ಲಿನ ಸುದ್ದಿ ಗಮನಿಸಿದಾಗ ಬೀದಿನಾಯಿಗಳ ಹಾವಳಿ ಹೆಚ್ಚುತ್ತಿರುವುದು ಮನದಟ್ಟಾಗುತ್ತದೆ. ಈಗಾಗಲೇ, ನಾಯಿಗಳ ಹಾವಳಿಯಿಂದ ನಾಗರಿಕರು, ಮಕ್ಕಳು ಅಸುನೀಗಿದ ಉದಾಹರಣೆಗಳಿವೆ. ಚಿಕ್ಕಮಕ್ಕಳನ್ನು ಕಚ್ಚಿ ಎಳೆದೊಯ್ಯುವ ದೃಶ್ಯಗಳು ಕರುಳು ಹಿಂಡುವಂತಿರುತ್ತವೆ. ನಾಯಿಗಳ ಹಾವಳಿಯಿಂದ ಶಾಲೆಗೆ ಹೋಗುವ ಮಕ್ಕಳಷ್ಟೇ ಭಯಭೀತರಾಗದೆ, ಅವರ ಪೋಷಕರು, ಹಾದಿಹೋಕರು, ವಯೋವೃದ್ಧರು ಸಾಕಷ್ಟು ನೋವು ಅನುಭವಿಸುತ್ತಿದ್ದಾರೆ. ಪ್ರಾಣಿದಯಾ ಸಂಘದವರು ಅವುಗಳನ್ನು ತಮ್ಮ ಇತಿಮಿತಿಯಲ್ಲಿ ಸಾಕುವುದಾದರೆ ಅವರಿಗೆ ನೀಡುವಂತಾಗಬೇಕು. ಉಳಿದ ನಾಯಿಗಳನ್ನು ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಿ ಸರ್ಕಾರದಿಂದಲೇ ಪೋಷಿಸುವಂತಹ ಕೆಲಸವಾಗಲಿ.

ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

ಚುರುಮುರಿ

ನಾನ್ ಲಾಫಿಂಗ್ ಬುದ್ಧೂ !

• ತುರುವೇಕೆರೆ ಪ್ರಸಾದ್

‘ರಾಣೆಬೆನ್ನೂರಲ್ಲಿ ರತಿ ಮನ್ಮಥರ ನಗಿಸಕ್ಕೆ 13 ಲಕ್ಷ ರೂಪಾಯಿ ಬಹುಮಾನ ಮಡಗಿದ್ರಂತೆ. ಆದ್ರೂ ಯಾರ್ ಕೈಲೂ ಆಗ್ಲಿಲ್ವಂತೆ ಕಣ್ರಲಾ’ ಎಂದ ಗುದ್ಲಿಂಗ ಹರಟೆಕಟ್ಟೇಲಿ!

‘ವೂ ಕಣ್ಲಾ, ಪೇಪರ್‍ರಲ್ಲಿ ಓದ್ದೆ. ಸಿಂಗಲ್ ಮೀನಿಂಗ್, ಡಬ್ಬಲ್ ಮೀನಿಂಗ್ ಯಾವ್ದಕ್ಕೂ ಜಪ್ಪಯ್ಯ ಅಂದಿಲ್ವಂತೆ! ಪರಪರ ತಲೆ ಕೆರ್ಕಂಡು, ಅಂಗಿ ಹರ್ಕಂಡು ಮಂಗನ್ ತರ ತಿಪ್ಪರ್‌ಲಾಗ ಆಕುದ್ರೂ ಅವರು ಮಾತ್ರ ಕಿಸಕ್ ಅನ್ನಲ್ವಂತೆ’ ಎಂದ ಮಾಲಿಂಗ!

‘ಟ್ರಂಪ್ ಪ್ರಪಂಚಕ್ಕೇ ಬೆಂಕಿ ಹಾಕಿ ಶಾಂತಿ ನೊಬೆಲ್ ತಗೋಬೇಕು ಅಂತಾವ್ನಲ್ಲ, ಅದ್ನ ಯೋಳಿದ್ರೆ ನಗ್ತಿದ್ರೇನೋ?’

‘ಅಥವಾ ನಮ್ ಮಲ್ಲೇಶಣ್ಣಂದು ಒಂದು ಚುರುಮುರಿ ಓಗೆದಿದ್ರೆ ಬಿದ್ ಬಿದ್ ನಗ್ತಿದ್ರೇನೋ?’

‘ಇಂಗೇ ಬಾಳಾ ಜನ ಅವ್ರೆ... ಯಥಾ ರಾಜಾ, ತಥಾ ಪ್ರಜಾ!’

‘ಅಂಗಂದ್ರೇನ್ಲಾ?’

‘ಕೆಲವ್ರು ರಾಜಕೀಯದೋರು ನಗಕೇ ಇಲ್ಲ ಕಣ್ಲಾ! ನೋವು ನೀಗ್ಸಾದು ಇರಲಿ, ಕನಿಷ್ಠ ನಗುಸ್ಬಾರ್ದ? ಬೇಸಿದ ಗೆಣಸಿನ್ ತರ ಮುಖ ಕಿವುಚ್ಕಂಡಿರ್ತಾರೆ, ನಾನ್ ಲಾಪಿಂಗ್ ಬುದ್ಧೂಸ್’.

‘ಜಗಣ್ಣ ಜೋಶಿ, ಪಟೇಲಣ್ಣ ಬುಟ್ರೆ ಮನಮೋಹನ್ನು, ಕಾರೆಟ್ಟು, ಮಮತಾ, ರಾಜನಾಥಸಿಂಗ್, ನಮ್ ದೊಡ್ ಗೌಡ್ರು, ಧರ್ಮಣ್ಣ, ಸಿದ್ದಣ್ಣ... ಯಾರಾದ್ರೂ ಒಬ್ರು ಒಂದೆರೆಡು ಜೋಕ್ ಯೋಳವ್ರಾ? ಲಾಫಿಂಗ್ ಬುದ್ಧ ಫೇಮಸ್ಸು. ಆದ್ರೆ ಬುದ್ಧದೇವ ಭಟ್ಟಾಚಾರ್ಯ ಅಂತ ಹೆಸರಿಟ್ಕೊಂಡು ನಗುಸ್ಲೇ ಇಲ್ಲ’ ಎಂದ ಕಲ್ಲೇಶಿ.

‘ರಾಜಾವುಲಿ ಒಂದ್ಸಾರಿ ಈ ರತಿ ಮನ್ಮಥರನ್ನ ವಿಧಾನಸೌಧಕ್ಕೆ ಕರ್ಕೊಂಡ್ ಓಗಿತ್ತಂತೆ’.

‘ಮುಗೀತು ಬುಡು. ಸದನದಲ್ಲಿ ತಲೆ ತಲಾಂತರಗಳಿಂದ ನಗ್ದೇ ಮೂತೀನ ಹಲಸಿನಕಾಯ್ ತರ ಹಾಕ್ಕಂಡು ಕುಂತ್ಕಳೋ ಮುತ್ಸದ್ದಿಗಳು ಶಾನೆ ಅವ್ರೆ! ರಂಗನ್ ಮುಂದೆ ಸಿಂಗನಾ? ಅವರನ್ನೆಲ್ಲಾ ನೋಡ್ಕಂಡು ಬಂದ್ಮೇಲೆ ಇವರು ಜನ್ಮೇಪಿ ನಗಕಿಲ್ಲ’ ಎಂದು ರೂಲಿಂಗ್ ಕೊಟ್ಟ ಪರ್ಮೇಶಿ.

ಸಂಗತ

ಮಹಿಳಾ ಶೋಷಣೆ: ಆತ್ಮಾವಲೋಕನ ಅಗತ್ಯ

ಹೆಣ್ಣನ್ನು ದೇವಿ ಅಥವಾ ತಾಯಿ ಎಂದು ಗೌರವಿಸುವುದರಿಂದ ಉಪಯೋಗವಿಲ್ಲ. ಗೃಹಕೃತ್ಯಗಳ ಹೊರತಾಗಿ ಮಹಿಳೆಯ ಸ್ವಂತಿಕೆ ಗುರ್ತಿಸುವ ಪ್ರಯತ್ನಗಳು ಅಗತ್ಯ.

• ರಾಜಕುಮಾರ ಕುಲಕರ್ಣಿ

ಉತ್ತರಪ್ರದೇಶದ ಜಿಲ್ಲೆಯೊಂದರಲ್ಲಿ ಗರ್ಭಿಣಿಯೊಬ್ಬಳು ಹೆರಿಗೆ ನೋವು ತಾಳಲಾರದೆ ಚಾಕುವಿನಿಂದ ಹೊಟ್ಟೆ ಕೊಯ್ದುಕೊಂಡು ಮಗುವನ್ನು ಹೊರತೆಗೆಯಲು ಯತ್ನಿಸಿದ ಘಟನೆಯನ್ನು ಪತ್ರಿಕೆಗಳಲ್ಲಿ ಓದಿ ಮನಸ್ಸಿಗೆ ಖೇದವಾಯಿತು. ಆ ಘಟನೆ ನಡೆದ ಸಂದರ್ಭದಲ್ಲೇ ಬಳ್ಳಾರಿ ಜಿಲ್ಲೆಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅತಿಥಿ ಶಿಕ್ಷಕನೊಬ್ಬ ವಿದ್ಯಾರ್ಥಿನಿಯನ್ನು ಲೈಂಗಿಕವಾಗಿ ಶೋಷಿಸಿ ಅಟ್ಟಹಾಸ ಮೆರೆದಿದ್ದಾನೆ. ಈ ಘಟನೆಗಳು ಮಹಿಳೆಯರ ಸ್ಥಿತಿಗತಿ ಮತ್ತು ಅವರ ಮೇಲಾಗುತ್ತಿರುವ ಶೋಷಣೆಗೆ ಜ್ವಲಂತ ಸಾಕ್ಷಿಯಾಗಿವೆ.

ಇವತ್ತಿಗೂ ಅಡುಗೆ ಮತ್ತಿತರ ಮನೆಯ ಕೆಲಸಗಳಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರ ಬಗ್ಗೆ ಸಮಾಜ ಮತ್ತು ಕುಟುಂಬಗಳಲ್ಲಿ ಗೌರವದ ವಾತಾವರಣವಿಲ್ಲ. ಮನೆಕೆಲಸಗಳಲ್ಲಿ ತೊಡಗಿಕೊಂಡಿರುವ ಮಹಿಳೆಯರನ್ನು ಅಸಡ್ಡೆಯಿಂದ ಕಾಣಲಾಗುತ್ತಿದೆ. ವೃತ್ತಿಯಲ್ಲಿರುವ ಮಹಿಳೆಯರೊಂದಿಗೆ ಹೋಲಿಸಿ ಮನೆಯ ಗೃಹಿಣಿಯರನ್ನು ಅಪ್ರಯೋಜಕರು ಎನ್ನುವ ಅರ್ಥದಲ್ಲಿ ನೋಡಲಾಗುತ್ತಿದೆ. ಅಡುಗೆ ಹಾಗೂ ಮನೆಯ ಇನ್ನಿತರ ಕೆಲಸಗಳು ಹೊರಜಗತ್ತಿನ ಬೇರೆ ಕೆಲಸಗಳಂತೆ ಶ್ರಮದಾಯಕ ಕಾರ್ಯಗಳಾದರೂ, ಅವುಗಳಿಗೆ ಪ್ರಾಮುಖ್ಯತೆ ಇಲ್ಲವಾಗಿದೆ.

ಕುಟುಂಬ ಘಟಕದಲ್ಲಿ ಮಹಿಳೆಯರದು ಎಂದಿಗೂ ತ್ಯಾಗ ಮತ್ತು ಬಲಿದಾನದ ಪಾತ್ರ ಎಂದು ಬಿಂಬಿಸಲಾಗುತ್ತಿದೆ. ಸೀತೆ, ಸಾವಿತ್ರಿ, ಮಂಡೋದರಿ, ಅಹಲ್ಯೆ ಮುಂತಾದವರನ್ನು ತ್ಯಾಗ ಮತ್ತು ಬಲಿದಾನಕ್ಕೆ ಶ್ರೇಷ್ಠ ಉದಾಹರಣೆಗಳಾಗಿ ಜನರ ನೆನಪಿನಲ್ಲಿ ಅಚ್ಚೊತ್ತಲಾಗಿದೆ. ಆಧುನಿಕ ತಂತ್ರಜ್ಞಾನದ ಯುಗದಲ್ಲೂ ಈ ಪಾತ್ರಗಳನ್ನು ಮಾದರಿಯಾಗಿ ಮಹಿಳೆಯರಿಗೆ ಬೋಧಿಸಲಾಗುತ್ತಿದೆ. ಗಂಡಾಳ್ವಿಕೆಯನ್ನು ಧಿಕ್ಕರಿಸುವ ಎಲ್ಲಮ್ಮ, ಕಾಳಮ್ಮ, ದುರ್ಗಮ್ಮ, ಹುಲಿಗೆಮ್ಮ ದೇವತೆಗಳು ಮಹಿಳೆಯರಿಗೆ ಆದರ್ಶಪ್ರಾಯರು ಮತ್ತು ಅನುಕರಣೀಯರೂ ಆಗಿಲ್ಲದಿರುವುದು ಅಚ್ಚರಿಯ ಸಂಗತಿ.

ಕೆಲವು ಮಡಿವಂತ ಕುಟುಂಬಗಳಲ್ಲಿ ಮನೆಯ ಮಹಿಳಾ ಸದಸ್ಯರನ್ನು ಈಗಲೂ ಅಸ್ಪೃಶ್ಯರಂತೆ ನಡೆಸಿಕೊಳ್ಳಲಾಗುತ್ತದೆ. ಮುಟ್ಟಾದ ಸಂದರ್ಭದಲ್ಲಿ ಮಹಿಳೆಯರಿಗೆ ಅಡುಗೆಮನೆ ಮತ್ತು ದೇವರಕೋಣೆ ಪ್ರವೇಶಿಸಲು ಅವಕಾಶವಿರುವುದಿಲ್ಲ. ಮನೆಯ ಸದಸ್ಯರನ್ನೂ ಮುಟ್ಟಿಸಿಕೊಳ್ಳದಂತೆ ಪ್ರತ್ಯೇಕವಾಗಿ ವಾಸಿಸಬೇಕು. ಮದುವೆ ಮತ್ತಿತರ ಶುಭ ಸಮಾರಂಭಗಳಲ್ಲಿ ಭಾಗವಹಿಸುವಂತಿಲ್ಲ.

ಹೆಚ್ಚಿನ ಪಾಲಕರು ಹೆಣ್ಣುಮಕ್ಕಳ ಶಿಕ್ಷಣವನ್ನು ನಿರ್ಲಕ್ಷಿಸಿ ಗಂಡುಮಕ್ಕಳ ಶಿಕ್ಷಣಕ್ಕೆ ಆದ್ಯತೆ ಕೊಡುವುದು ಸಾಮಾನ್ಯ ಎನ್ನುವಂತಾಗಿದೆ. ಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿನಿಯರು ತಮ್ಮ ಸಹಪಾಠಿಗಳಿಂದ ಹಾಗೂ ಬೋಧಕರಿಂದ ಶೋಷಣೆಗೆ ಒಳಗಾಗುತ್ತಿದ್ದಾರೆ. ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಮತ್ತು ಶೋಷಣೆ ನಿರಂತರವಾಗಿ ಮುಂದುವರಿದಿದೆ. ವೃತ್ತಿ ಕ್ಷೇತ್ರದಲ್ಲಿ ಮಹಿಳೆಯರನ್ನು ಎರಡನೇ ದರ್ಜೆ ನಾಗರಿಕರಂತೆ ನೋಡಲಾಗುತ್ತಿದೆ. ಅದೆಷ್ಟೋ ಕ್ಷೇತ್ರಗಳಲ್ಲಿ ಮಹಿಳೆಯರು ಬೌದ್ಧಿಕವಾಗಿ ಮತ್ತು ವೈಚಾರಿಕವಾಗಿ ಹಿಂದುಳಿದವರು ಎನ್ನುವ ಭಾವನೆ ಬಲವಾಗಿದೆ. ಮಹಿಳಾ ಶೋಷಣೆಯು ನಾಗರಿಕ ಮತ್ತು ಸುಸಂಸ್ಕೃತ ಸಮಾಜದಲ್ಲೇ ಹೆಚ್ಚು ಕಾಣಿಸಿಕೊಳ್ಳುತ್ತಿರುವುದು ವ್ಯಂಗ್ಯವಾದರೂ ಕಟುಸತ್ಯ. ಪ್ರತಿಭಟಿಸಿದರೆ ಕುಟುಂಬ ಘಟಕ ಒಡೆದು ಛಿದ್ರವಾಗುವುದೆಂಬ ಭಯ ವಿದ್ಯಾವಂತ ಮಹಿಳೆಯರು ಶೋಷಣೆಯನ್ನು ಸಹಿಸಿಕೊಳ್ಳುವುದಕ್ಕೆ ಕಾರಣವಾಗಿದೆ. ಹಿಂದುಳಿದ ಮತ್ತು ಅನಕ್ಷರಸ್ಥ ಸಮಾಜದಲ್ಲಿನ ಮಹಿಳೆಯರಲ್ಲಿರುವ ಪ್ರತಿಭಟನೆಯ ಧಾಡಸೀತನವನ್ನು ಸುಸಂಸ್ಕೃತ ಸಮಾಜದ ಮಹಿಳೆಯರು ಇನ್ನೂ ಮೈಗೂಡಿಸಿಕೊಂಡಿಲ್ಲ.

ಶತಮಾನ ಕಳೆದರೂ ಸಿನಿಮಾ ಮಾಧ್ಯಮ ಪುರುಷ ಪಾರಮ್ಯದಿಂದ ಹೊರಬಂದಿಲ್ಲ. ಸಿನಿಮಾಗಳಲ್ಲಿ ಮಹಿಳಾ ಪಾತ್ರಗಳನ್ನು ಅಂಗಾಂಗ ಪ್ರದರ್ಶನಕ್ಕೆ ಇಲ್ಲವೇ ಶೋಷಣೆಗೊಳಗಾಗುವುದಕ್ಕೆ ಸೀಮಿತಗೊಳಿಸಲಾಗುತ್ತಿದೆ. ಸಿನಿಮಾ ಕ್ಷೇತ್ರದಲ್ಲಿ ಮಹಿಳಾ ಕಲಾವಿದರ ಮೇಲಾಗುತ್ತಿರುವ ಲೈಂಗಿಕ ದೌರ್ಜನ್ಯವನ್ನು ‘ಮೀ–ಟೂ’ ಅಭಿಯಾನ ಅನಾವರಣಗೊಳಿಸಿದೆ. ಗುಪ್ತವಾಗಿ ನಡೆಯುತ್ತಿದ್ದ ದೌರ್ಜನ್ಯ ಕೆಲವು ಧೈರ್ಯವಂತ ನಟಿಯರಿಂದ ಬೆಳಕಿಗೆ ಬಂತು. ದುರಂತವೆಂದರೆ, ಪುರುಷ ಕಲಾವಿದರ ಭಂಡಗುಣ ಹೊರಗೆಳೆದ ಕಲಾವಿದೆಯರನ್ನು ಚಿತ್ರೋದ್ಯಮದ ಮಂದಿಯೇ ಹೀನಾಯವಾಗಿ ನಡೆಸಿಕೊಂಡರು.

ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದವರ ಪಟ್ಟಿಯಲ್ಲಿ ಪುರುಷರದ್ದೇ ಸಿಂಹಪಾಲಿದೆ. ಮಹಿಳೆಯೊಬ್ಬರನ್ನು ಆ ಸ್ಥಾನದಲ್ಲಿ ನೋಡಲು ಐವತ್ತು ವರ್ಷ ಕಾಯಬೇಕಾಯಿತು. ಇದುವರೆಗಿನ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಹೆಸರುಗಳ ಪಟ್ಟಿಯಲ್ಲಿ ಲೇಖಕಿಯರ ಸಂಖ್ಯೆ ಬರೀ ಐದು ಮಾತ್ರ. ‘ಮಹಿಳೆಯ ಪಾಲಿಗೆ ಬರವಣಿಗೆ ಏಕಕಾಲಕ್ಕೆ ಚರಿತ್ರೆಯನ್ನೂ ಮತ್ತು ವರ್ತಮಾನದ ಆತಂಕಗಳನ್ನೂ ಎದುರುಹಾಕಿಕೊಂಡ ನಿರಂತರ ಹೋರಾಟದಂತೆಯೇ ಸರಿ. ತನ್ನ ಪರಿಸರದ ಕಟುಸಂಪ್ರದಾಯ, ಆಚರಣೆ, ನಂಬಿಕೆ, ಮೌಢ್ಯಗಳೊಂದಿಗೆ ಧಾರ್ಮಿಕ, ಕೌಟುಂಬಿಕ ದಬ್ಬಾಳಿಕೆಯನ್ನು ಪ್ರಶ್ನಿಸುತ್ತಲೇ ಆಕೆಯೊಳಗಿನ ಲೇಖಕಿ ಶತಮಾನಗಳ ಪುರುಷ ಪ್ರಧಾನ ಯಜಮಾನ್ಯವನ್ನು ಒಡೆಯಬೇಕಾಗುತ್ತದೆ. ಹಾಗಾಗಿ, ಬರವಣಿಗೆ ಎನ್ನುವುದು ಮಹಿಳೆಯ ಪಾಲಿಗೆ ದಣಿವರಿಯದ ಹಾದಿ’ ಎನ್ನುತ್ತಾರೆ ಇಂಗ್ಲಿಷ್‌ನಲ್ಲಿ ಬರೆಯುವ ಲೈಲಾ ಅಹ್ಮದ್.

ಅಮೆರಿಕನ್ ಬರಹಗಾರ್ತಿ ಮಾಯಾ ಏಂಜೆಲೊ ಮಹಿಳೆಯರ ಆತ್ಮಸ್ಥೈರ್ಯ ಹೆಚ್ಚಿಸಲು ಹೇಳಿದ ಮಾತುಗಳು ಹೀಗಿವೆ: ‘ನಮಗೆ ಸೋಲುಗಳು ಎದುರಾಗಬಹುದು. ನಾವು ಎದೆಗುಂದಬಾರದು. ವಜ್ರವಾಗಲು ಹೆಚ್ಚು ಸಮಯ, ಒತ್ತಡ ಎರಡನ್ನೂ ತಡೆದುಕೊಳ್ಳಬೇಕು. ಅದಕ್ಕಿಂತ ಕಡಿಮೆ ಸಮಯವಾದರೆ ಸ್ಫಟಿಕವಾಗುವಿರಿ. ಅದಕ್ಕಿಂತಲೂ ಕಡಿಮೆ ಸಮಯವಾದರೆ ಇದ್ದಿಲು. ಅದಕ್ಕಿಂತ ಕಡಿಮೆ ಸಮಯವಾದರೆ ಕೊಳೆತ ಎಲೆ. ಅದಕ್ಕಿಂತಲೂ ಕಡಿಮೆ ಸಮಯವಾದರೆ ಬರಿ ಕಸ’. ಮಹಿಳಾ ಶೋಷಣೆ ಅವ್ಯಾಹತವಾಗಿ ನಡೆಯುತ್ತಿರುವ ಹೊತ್ತಿನಲ್ಲಿ ಮಹಿಳೆ ವಜ್ರವಾಗುವುದರತ್ತ ಹೆಜ್ಜೆ ಹಾಕಲಿ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಯಾವ ಜಿಲ್ಲೆಗೆ ಏನು ಕೊಡುಗೆ?



1. ಬೀದರ್
- ಬಸವಕಲ್ಯಾಣದಲ್ಲಿ ವಚನ ವಿವಿ ಸ್ಥಾಪನೆಗೆ 25 ಎಕರೆ ಜಮೀನು
- ಬೀದರ್ ಮಹಾನಗರ ಪಾಲಿಕೆಗೆ ₹200 ಕೋಟಿ
- ₹4 ಕೋಟಿ ವೆಚ್ಚದಲ್ಲಿ ತಾರಾಲಯ ಸ್ಥಾಪನೆ
- ಹುಮನಾಬಾದ್ ತಾಲ್ಲೂಕಿನ ಹಳ್ಳಿಖೇಡ್ ಕೆರೆ ಅಭಿವೃದ್ಧಿ

2. ಕಲಬುರಗಿ
- 135 ಕಿ.ಮೀ. ಉದ್ದದ ವಾಗ್ದಾರಿ–ರಿಬ್ಬನ್‌ಪಲ್ಲಿ ರಸ್ತೆ ವಿಸ್ತರಣೆ
- ಪಿ.ಎಂ.ಮಿತ್ರ ಮೆಗಾ ಜವಳಿ ಪಾರ್ಕ್‌ಗೆ ₹75 ಕೋಟಿ ಅನುದಾನ
- ₹16 ಕೋಟಿ ವೆಚ್ಚದಲ್ಲಿ ಷ್ನೈಡರ್ ಎಲೆಕ್ಟ್ರಿಕ್ ಯೂತ್ ಇಂಪ್ಯಾಕ್ಟ್ ಕೇಂದ್ರ ಸ್ಥಾಪನೆ
- ₹18 ಕೋಟಿ ವೆಚ್ಚದಲ್ಲಿ ನಿಂಬರ್ಗಾದಲ್ಲಿ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜು ಸ್ಥಾಪನೆ
- ಸಿಲ್ಕ್ ಪಾರ್ಕ್ ಸ್ಥಾಪನೆಗೆ ಕ್ರಮ

3. ವಿಜಯಪುರ
- ಬಬಲೇಶ್ವರ ತಾಲ್ಲೂಕಿನ ಬಾಬಾ ನಗರದಲ್ಲಿ 0.67ಟಿಎಂಸಿ ಅಡಿ ಸಾಮರ್ಥ್ಯದ ಜಲ ಸಂಗ್ರಹಾಗಾರ ಸ್ಥಾಪನೆ
- ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಡಿಪಿಆರ್; ವಿಜಯಪುರ, ಚಡಚಣದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸ್ಥಾಪನೆ
- ಮುದ್ದೇಬಿಹಾಳದಲ್ಲಿ ತಾಲ್ಲೂಕು ಕ್ರೀಡಾಂಗಣಕ್ಕೆ ₹2 ಕೋಟಿ
- ತೊರವಿಯಲ್ಲಿ ಕೋಲ್ಡ್ ಸ್ಟೋರೇಜ್ ನಿರ್ಮಾಣ
- ಚಡಚಣ-ಝಳಕಿ-ಇಂಡಿ-ಅಫಜಲಪುರ-ಗಾಣಗಾಪುರ ಸಂಪರ್ಕ ರಸ್ತೆ (117ಕಿ.ಮೀ) ನಿರ್ಮಾಣ
- ಮುದ್ದೇಬಿಹಾಳ, ಬಸವನ ಬಾಗೇವಾಡಿ, ಬಬಲೇಶ್ವರ, ಇಂಡಿ, ಸಿಂದಗಿಯಲ್ಲಿ ಶ್ರಮಿಕ ವಸತಿ ಶಾಲೆ ನಿರ್ಮಾಣ, ವಿಜಯಪುರದಲ್ಲಿ ಕ್ರೈಸ್ ವಸತಿ ಶಾಲೆ ಪ್ರಾರಂಭ
- ಪಿಪಿಪಿ ಮಾದರಿಯಲ್ಲಿ ವಿಮಾನ ತರಬೇತಿ ಶಾಲೆ ಆರಂಭ

4. ಯಾದಗಿರಿ
- ಯಾದಗಿರಿಯಲ್ಲಿ ₹100 ಕೋಟಿಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ
- ಸುರಪುರ ತಾಲ್ಲೂಕಿನ ಕಕ್ಕೇರಾದಲ್ಲಿ ₹18 ಕೋಟಿ ವೆಚ್ಚದಲ್ಲಿ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜು, ಹೊಸ ಪೊಲೀಸ್ ಠಾಣೆ
- ಶಹಾಪುರ ಮತ್ತು ಗುರುಮಠಕಲ್‌ನಲ್ಲಿ ಶ್ರಮಿಕ ವಸತಿ ಶಾಲೆಗಳು
- ಯಾದಗಿರಿ ಜಿಲ್ಲೆಯಲ್ಲಿ ಕರ್ನಾಳ್ ಏತ ನೀರಾವರಿ ಯೋಜನೆ

5. ಬೆಳಗಾವಿ
- ಏಳು ಏತ ನೀರಾವರಿ ಯೋಜನೆಗಳಿಗೆ ಅನುಮೋದನೆ
- ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಶ್ರಮಿಕ ವಸತಿ ಶಾಲೆ
- ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸ್ಥಾಪನೆ, 2 ಉದ್ಯೋಗಸ್ಥ ಮಹಿಳೆಯರ ಹಾಸ್ಟೆಲ್, 2 ವಿದ್ಯಾರ್ಥಿಗಳ ಹಾಸ್ಟೆಲ್
- ಸುವರ್ಣ ವಿಧಾನಸೌಧ ಬಳಿ ಭದ್ರತಾ ಸಿಬ್ಬಂದಿಗೆ ₹20 ಕೋಟಿ ವೆಚ್ಚದಲ್ಲಿ ವಸತಿ ಬ್ಯಾರಕ್, ಬೈಲಹೊಂಗಲದಲ್ಲಿ ‘ಪ್ರಜಾಸೌಧ’, ಯರಗಟ್ಟಿಯಲ್ಲಿ ಪೊಲೀಸ್ ಠಾಣೆ, ಬೆಳಗುಂದಿಯಲ್ಲಿ ಕುಸ್ತಿ ಅಖಾಡ ನಿರ್ಮಾಣ
- ಮಲಪ್ರಭಾ ನದಿಗೆ ಅಕ್ವಾಡಕ್ಟ್ ನಿರ್ಮಾಣ, ಗೊಣ್ಣಾಗರ ಗ್ರಾಮದ ಹತ್ತಿರ ಮಲಪ್ರಭಾ ನದಿಗೆ ತಡೆಗೋಡೆ ನಿರ್ಮಾಣ

6. ಬಾಗಲಕೋಟೆ
- ಬಾಗಲಕೋಟೆ ಸರ್ಕಾರಿ ವೈದ್ಯಕೀಯ ಕಾಲೇಜು ಆರಂಭಕ್ಕೆ ಕ್ರಮ
- ಬಾಗಲಕೋಟೆಯಲ್ಲಿ ಸುಸಜ್ಜಿತ ಮೀನು ಮಾರುಕಟ್ಟೆ ಸ್ಥಾಪನೆ
- ಗುಳೇದಗುಡ್ಡ ತಾಲ್ಲೂಕು ಕ್ರೀಡಾಂಗಣಕ್ಕೆ ₹2 ಕೋಟಿ
- ಬಾಗಲಕೋಟೆ, ಬಾದಾಮಿ, ಹುನಗುಂದ, ಮುಧೋಳದಲ್ಲಿ ಶ್ರಮಿಕ ವಸತಿ ಶಾಲೆ

7. ರಾಯಚೂರು
- ₹10 ಕೋಟಿ ವೆಚ್ಚದಲ್ಲಿ ತುರ್ತು ಚಿಕಿತ್ಸಾ ಕೇಂದ್ರ ಮಂಜೂರು
- ರಾಯಚೂರು ಐಐಐಟಿಯಲ್ಲಿ ₹5 ಕೋಟಿ ವೆಚ್ಚದಲ್ಲಿ ಎಐ ಶ್ರೇಷ್ಠತಾ ಕೇಂದ್ರ ಸ್ಥಾಪನೆ
- ಮಸ್ಕಿಯಲ್ಲಿ ₹2 ಕೋಟಿ ವೆಚ್ಚದಲ್ಲಿ ತಾಲ್ಲೂಕು ಕ್ರೀಡಾಂಗಣ ನಿರ್ಮಾಣ
- ಸಿಂಧನೂರಿನ ಅಂಬಾಮಠದಲ್ಲಿ ₹18 ಕೋಟಿ ವೆಚ್ಚದಲ್ಲಿ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜು ಸ್ಥಾಪನೆ
- ರಾಯಚೂರು ಪಾಲಿಕೆಗೆ ಮಹಾತ್ಮ ಗಾಂಧಿ ನಗರ ವಿಕಾಸ್ ಯೋಜನೆ 2.0ರಡಿ ₹200 ಕೋಟಿ

8. ಧಾರವಾಡ
- ಹುಬ್ಬಳ್ಳಿ-ಧಾರವಾಡದಲ್ಲಿ ಕೌಶಲ ತರಬೇತಿ ಅಕಾಡೆಮಿ ಸ್ಥಾಪನೆಗೆ ₹ 200 ಕೋಟಿ
- ಧಾರವಾಡದಲ್ಲಿ ₹ 10 ಕೋಟಿ ವೆಚ್ಚದಲ್ಲಿ ಡಿಜಿಟಲ್ ಗ್ರಂಥಾಲಯ, ಅಧ್ಯಯನ ಕೇಂದ್ರ
- ಧಾರವಾಡದಲ್ಲಿ ನಾಲ್ಕು ‘ವಿದ್ಯಾರ್ಥಿ ಇಂದಿರಾ ಕ್ಯಾಂಟೀನ್’
- ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ₹ 2 ಕೋಟಿ
- ಧಾರವಾಡದ ಐಐಟಿ ಸಹಯೋಗದಲ್ಲಿ ₹ 5 ಕೋಟಿ ವೆಚ್ಚದಲ್ಲಿ 8–12ನೇ ತರಗತಿ ವಿದ್ಯಾರ್ಥಿಗಳಿಗಾಗಿ ಎಐ ಡಿಜಿಟಲ್ ಟ್ಯೂಟರ್ ಸೌಲಭ್ಯ
- ಹುಬ್ಬಳ್ಳಿಯಲ್ಲಿ ಹಜ್ ಭವನ ನಿರ್ಮಾಣ
- ಧಾರವಾಡದಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಬಿಸಿಎಂ ಹಾಸ್ಟೆಲ್ ಸ್ಥಾಪನೆ
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯೋಗಸ್ಥ ಮಹಿಳೆಯರಿಗೆ ಹುಬ್ಬಳ್ಳಿ-ಧಾರವಾಡದಲ್ಲಿ ವಸತಿನಿಲಯ
- ಕಾರ್ಮಿಕ ಇಲಾಖೆಯಿಂದ ಕಲಘಟಗಿ, ನವಲಗುಂದ, ಧಾರವಾಡ, ಕುಂದಗೋಳದಲ್ಲಿ ಶ್ರಮಿಕ ವಸತಿ ಶಾಲೆ
- ಹುಬ್ಬಳ್ಳಿಯಲ್ಲಿ ಪ್ಯಾರಾ ಮೆಡಿಕಲ್ ಕೋರ್ಸ್ ಆರಂಭ

9. ಗದಗ
- ಮುಂಡರಗಿ ತಾಲ್ಲೂಕಿನ ಡಂಬಳದಲ್ಲಿ ತೋಟಗಾರಿಕೆ ಕಾಲೇಜು ಸ್ಥಾಪನೆಗೆ ಪ್ರಥಮ ಹಂತದ ಮೂಲಸೌಕರ್ಯ
- ಗದಗ-ಕಪ್ಪತಗುಡ್ಡ-ಲಕ್ಕುಂಡಿ ಪ್ರವಾಸೋದ್ಯಮ ಸರ್ಕಿಟ್ ಅಭಿವೃದ್ಧಿ
- ಗದಗದಲ್ಲಿ ಹೊಸ ಬಸ್ ನಿಲ್ದಾಣ
- ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಕೆರೆಗಳನ್ನು ತುಂಬುವ ಕಾಮಗಾರಿ

10. ಕೊಪ್ಪಳ
- ಕೊಪ್ಪಳ ತಾಲ್ಲೂಕಿನ ಮುನಿರಾಬಾದ್‌ನಲ್ಲಿ ಕ್ಯಾನ್ಸರ್ ಆಸ್ಪತ್ರೆ ಸ್ಥಾಪನೆ
- ಕೊಪ್ಪಳದ ಜಿಟಿಟಿಸಿ–ಎಂಎಸ್‌ಡಿಸಿಯಲ್ಲಿ ₹20 ಕೋಟಿ ವೆಚ್ಚದಲ್ಲಿ ತಂತ್ರಜ್ಞಾನ ಕೇಂದ್ರ ಸ್ಥಾಪನೆ
- ಕಾರ್ಮಿಕರ ಮಕ್ಕಳಿಗೆ ಎರಡು ಹಂತಗಳಲ್ಲಿ ಯಲಬುರ್ಗಾ, ಕಾರಟಗಿ ಹಾಗೂ ಕೊಪ್ಪಳದಲ್ಲಿ ಶ್ರಮಿಕ ವಸತಿ ಶಾಲೆ
- ಯಲಬುರ್ಗಾ ತಾಲ್ಲೂಕಿನ ಬೇವೂರು ಗ್ರಾಮದಲ್ಲಿ ವಸತಿಸಹಿತ ಪ್ರಥಮ ದರ್ಜೆ ಕಾಲೇಜು ಸ್ಥಾಪನೆಗೆ ₹18 ಕೋಟಿ
- ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಅರಿವು ಮೂಡಿಸಲು ಕೊಪ್ಪಳದಲ್ಲಿ ₹4 ಕೋಟಿ ವೆಚ್ಚದಲ್ಲಿ ತಾರಾಲಯ

11. ಉತ್ತರ ಕನ್ನಡ
- ಕಾರವಾರದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ (ಕ್ರಿಮ್ಸ್) ಸೂಪರ್ ಸ್ಪೆಷಾಲಿಟಿ ಸೌಲಭ್ಯ ಕಲ್ಪಿಸಲು ₹100 ಕೋಟಿ
- ಎಲೆಚುಕ್ಕಿ ರೋಗದ ಸಂಶೋಧನೆಗೆ ₹10 ಕೋಟಿ
- ತದಡಿ ಬಂದರಿನಲ್ಲಿ ಖಾಸಗಿ ಸಾರ್ವಜನಿಕ ಸಹಭಾಗಿತ್ವದಲ್ಲಿ ಪ್ರವಾಸಿ ಮಾಹಿತಿ ಕೇಂದ್ರ ಸೇರಿದಂತೆ ಪರಿಸರಸ್ನೇಹಿ ಕಾರಿಡಾರ್ ಸ್ಥಾಪನೆ

12. ಹಾವೇರಿ
- ಹಾವೇರಿಯಲ್ಲಿ ಸಿಲ್ಕ್ ಪಾರ್ಕ್ ಸ್ಥಾಪನೆ
- ಸಂತ ಶಿಶುನಾಳ ಷರೀಫರ ಹೆಸರಿನಲ್ಲಿ ಪ್ರತಿಷ್ಠಾನ ಸ್ಥಾಪನೆ
- ಗಾಂಧೀಜಿ ಭೇಟಿ ನೀಡಿದ ಸ್ಥಳಗಳಲ್ಲಿ ಗಾಂಧಿ ಸ್ಮಾರಕ ಸ್ತಂಭ ನಿರ್ಮಾಣ; ಗಾಂಧಿ ಭವನ ಪುನಶ್ಚೇತನ
- ಹಾವೇರಿ, ರಾಣೆಬೆನ್ನೂರು, ಶಿಗ್ಗಾವಿ, ಹಾನಗಲ್, ಹಿರೇಕೆರೂರಿನಲ್ಲಿ ಶ್ರಮಿಕ ವಸತಿ ಶಾಲೆ ನಿರ್ಮಾಣ
- ಹಾನಗಲ್ ತಾಲ್ಲೂಕಿನ ತಿಳವಳ್ಳಿ ಪ್ರತ್ಯೇಕ ಪೊಲೀಸ್ ಠಾಣೆ ಸ್ಥಾಪನೆ
- ಮದಗ–ಮಾಸೂರು ಕೆರೆಗೆ ನೀರು ತುಂಬಿಸುವ ಯೋಜನೆ
- ಹಾನಗಲ್ ಭಾಗದ 111 ಕೆರೆಗಳಿಗೆ ವರದಾ ನದಿಯಿಂದ ಏತ ನೀರಾವರಿ; ರಟ್ಟೀಹಳ್ಳಿ ತಾಲ್ಲೂಕಿನಲ್ಲಿ ಚೆಕ್ ಡ್ಯಾಂ ಹಾಗೂ ತಡೆಗೋಡೆ ನಿರ್ಮಾಣ; ಶಿಗ್ಗಾವಿ ತಾಲ್ಲೂಕಿನಲ್ಲಿ ಸೇತುವೆ ಸಹಿತ ಚೆಕ್ ಡ್ಯಾಂ ನಿರ್ಮಾಣ

13. ವಿಜಯನಗರ
- ತುಂಗಭದ್ರಾ ಅಣೆಕಟ್ಟೆಯ ಎಲ್ಲಾ 33 ಕ್ರೆಸ್ಟ್‌ಗೇಟ್ ಅಳವಡಿಕೆ ಕಾಮಗಾರಿ ಮುಂಗಾರಿಗೂ ಮೊದಲು ಪೂರ್ಣ
- ಹೊಸಪೇಟೆಯ ಜಿಲ್ಲಾ ಕ್ರೀಡಾಂಗಣ ಕೆಕೆಆರ್‌ಡಿಬಿ ಮತ್ತು ಕೆಎಂಇಆರ್‌ಸಿ ಅನುದಾನದಲ್ಲಿ ಮೇಲ್ದರ್ಜೆಗೆ
- ಕೆಕೆಆರ್‌ಡಿಬಿ ಮೈಕ್ರೊ ಅನುದಾನದೊಂದಿಗೆ ಹರಪನಹಳ್ಳಿಯಲ್ಲಿ ಒಳಚರಂಡಿ ಕಾಮಗಾರಿ
- ₹4 ಕೋಟಿ ವೆಚ್ಚದಲ್ಲಿ ತಾರಾಲಯ ನಿರ್ಮಾಣ
- ತೃತೀಯ ಹಂತದ ಕ್ಯಾನ್ಸರ್ ಆರೈಕೆ ಒದಗಿಸಲು ಮುನಿರಾಬಾದ್‌ನ ಟಿ.ಬಿ.ಡ್ಯಾಂನಲ್ಲಿ ಕ್ಯಾನ್ಸರ್ ಆಸ್ಪತ್ರೆ ಸ್ಥಾಪನೆ

14. ಬಳ್ಳಾರಿ
- 150 ಸಂಖ್ಯಾಬಲದ 50 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸ್ಥಾಪನೆ
- ಕಂಪ್ಲಿಯಲ್ಲಿ ಕೈಗಾರಿಕಾ ವಸಾಹತು ಸ್ಥಾಪನೆ
- ₹4 ಕೋಟಿ ವೆಚ್ಚದಲ್ಲಿ ಬಳ್ಳಾರಿಯಲ್ಲಿ ತಾರಾಲಯ
- ಸಿರುಗುಪ್ಪದಲ್ಲಿ ಪ್ರಜಾಸೌಧ ನಿರ್ಮಾಣ
- ಬಳ್ಳಾರಿ, ಸಂಡೂರು, ಕುರುಗೋಡುಗಳಲ್ಲಿ ಶ್ರಮಿಕ ವಸತಿ ಶಾಲೆ

15. ಶಿವಮೊಗ್ಗ
- ಕುವೆಂಪು ವಿವಿಯಲ್ಲಿ ಯು.ಆರ್.ಅನಂತಮೂರ್ತಿ ಅವರ ಹೆಸರಿನಲ್ಲಿ ಅಧ್ಯಯನ ಕೇಂದ್ರ ಸ್ಥಾಪನೆ
- ಶಿವಮೊಗ್ಗ ವಿಮಾನ ನಿಲ್ದಾಣದ ಆವರಣದಲ್ಲಿ ವಿಮಾನ ತರಬೇತಿ ಶಾಲೆ ಸ್ಥಾಪನೆ. ಪಿಪಿಪಿ ಮಾದರಿಯಲ್ಲಿ ವಿಮಾನಗಳ ತಯಾರಿಕೆ/ಜೋಡಣಾ ಘಟಕ

16. ದಾವಣಗೆರೆ
- ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತ ಸಮುದಾಯ ಹೆಚ್ಚಾಗಿ ವಾಸಿಸುತ್ತಿರುವ ವಿವಿಧ ಭಾಗಗಳ ಅಭಿವೃದ್ಧಿಗೆ ₹ 100 ಕೋಟಿ
- ತೋಟಗಾರಿಕಾ ಉತ್ಪನ್ನಗಳ ಸಂಸ್ಕರಣೆಗಾಗಿ ದಾವಣಗೆರೆಯಲ್ಲಿ ಕೋಲ್ಡ್ ಸ್ಟೋರೇಜ್ ನಿರ್ಮಾಣ
- 150 ಸಂಖ್ಯಾಬಲದ ಬಿಸಿಎಂ ವಿದ್ಯಾರ್ಥಿ ನಿಲಯ
- ಹೊನ್ನಾಳಿಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಡಿಪೋ ನಿರ್ಮಾಣ

17. ಚಿತ್ರದುರ್ಗ
- ಭದ್ರಾ ಮೇಲ್ದಂಡೆ ಯೋಜನೆಯ ಚಿತ್ರದುರ್ಗ ಶಾಖಾ ಕಾಲುವೆ ತ್ವರಿತ ಕಾಮಗಾರಿ; 157 ಕೆರೆ ತುಂಬಿಸುವುದು
- ₹4 ಕೋಟಿ ವೆಚ್ಚದಲ್ಲಿ ತಾರಾಲಯ ಸ್ಥಾಪನೆ
- ಮೊಳಕಾಲ್ಮೂರಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಆರಂಭ
- ಹಿರಿಯೂರಿನಲ್ಲಿ ಸಂಚಾರ ಪೊಲೀಸ್ ಠಾಣೆ ಸ್ಥಾಪನೆ
- ಹೊಸದುರ್ಗ, ಚಳ್ಳಕೆರೆಯಲ್ಲಿ ಶ್ರಮಿಕ ವಸತಿ ಶಾಲೆ ಆರಂಭ

18. ಉಡುಪಿ
- ಕೊಲ್ಲೂರು ಮೂಕಾಂಬಿಕಾ ದೇವಾಲಯದ ಸಮಗ್ರ ಪ್ರಗತಿಗಾಗಿ ಅಭಿವೃದ್ಧಿ ಪ್ರಾಧಿಕಾರ
- ಮೀನು ಮಾರುಕಟ್ಟೆ ನಿರ್ಮಾಣ
- ಗ್ರಾಮೀಣ ಪ್ರದೇಶಗಳಲ್ಲಿ ಕಾಲುಸಂಕ ನಿರ್ಮಾಣ
- ಪಂಜರ ಮೀನು ಕೃಷಿಗೆ ಉತ್ತೇಜನ

19. ಚಿಕ್ಕಮಗಳೂರು
- ಮುಳ್ಳಯ್ಯನಗಿರಿ-ಸೀತಾಳಯ್ಯನಗಿರಿಯಿಂದ ಕೈಮರದ ತನಕ ಪಿಪಿಪಿ ಮಾದರಿಯಲ್ಲಿ ರೋಪ್-ವೇ ನಿರ್ಮಾಣ
- ಚಿಕ್ಕಮಗಳೂರಿನಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳ ನಿರ್ಮಾಣಕ್ಕೆ ₹12 ಕೋಟಿ
- ಕಡೂರು ತಾಲ್ಲೂಕಿನಲ್ಲಿ 25 ಕೆರೆಗಳಿಗೆ ನೀರು ತುಂಬಿಸುವ ಹಾಗೂ ಕಾಲುವೆ ಆಧುನೀಕರಣ ಯೋಜನೆ
- ಅಜ್ಜಂಪುರ ತಾಲ್ಲೂಕಿನ 19 ಕೆರೆಗಳಿಗೆ ನೀರು ತುಂಬಿಸಲು ಏತ ನೀರಾವರಿ ಯೋಜನೆ
- ಕಡೂರಿನಲ್ಲಿ ಶ್ರಮಿಕ ವಸತಿ ಶಾಲೆ
- ತರೀಕೆರೆಯಲ್ಲಿ ಬಸ್ ಡಿಪೊ

20. ತುಮಕೂರು
- ಕೊರಟಗೆರೆ ತಾಲ್ಲೂಕು ವಡೆಯರಪುರ ಬಳಿ 1.7 ಟಿಎಂಸಿ ಸಾಮರ್ಥ್ಯದ ಸಮತೋಲನ ಜಲಾಶಯ ನಿರ್ಮಾಣ
- ಕ್ರೀಡಾ ಮೂಲಸೌಕರ್ಯ ಅಭಿವೃದ್ಧಿಗೆ ₹3 ಕೋಟಿ
- ತುಮಕೂರಿನಲ್ಲಿ ₹5 ಕೋಟಿ ವೆಚ್ಚದಲ್ಲಿ ಸೀಜಿಂಗ್ ಯಾರ್ಡ್ ನಿರ್ಮಾಣ
- ಜಿಲ್ಲೆಯ ನಾಲ್ಕು ಕಡೆ (ಕುಣಿಗಲ್, ತಿಪಟೂರು, ಮಧುಗಿರಿ, ಶಿರಾ) ಶ್ರಮಿಕ ವಸತಿ ಶಾಲೆ ಆರಂಭ

21. ಬೆಂಗಳೂರು ಗ್ರಾಮಾಂತರ
- ದೇವನಹಳ್ಳಿ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಚೆಕ್ ಡ್ಯಾಂ ನಿರ್ಮಾಣ, ಕಾರಹಳ್ಳಿ ಕೆರೆ ಅಭಿವೃದ್ಧಿ
- ಗೋಪಾಲಪುರ ಕೆರೆಯಿಂದ ನೆಲಮಂಗಲ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ 119 ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆಗೆ ₹650 ಕೋಟಿ
- ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆ ಮತ್ತು ನಂದಗುಡಿ ಹೋಬಳಿಗಳ 59 ಕೆರೆಗಳಿಗೆ ಎಚ್.ಎನ್ ವ್ಯಾಲಿ ಯೋಜನೆಯಿಂದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಏತ ನೀರಾವರಿ ಮೂಲಕ ತುಂಬಿಸುವ ಕಾಮಗಾರಿಗೆ ₹140 ಕೋಟಿ
- ದೊಡ್ಡಬಳ್ಳಾಪುರದಲ್ಲಿ ಪ್ಯಾರಾಮೆಡಿಕಲ್ ಕೋರ್ಸ್ ಪ್ರಾರಂಭ

22. ಚಿಕ್ಕಬಳ್ಳಾಪುರ
- ಹೆಬ್ಬಾಳ-ನಾಗವಾರ ಕಣಿವೆಯ ಮೂರನೇ ಹಂತದಲ್ಲಿ ಶಿಡ್ಲಘಟ್ಟದ ಅಮಾನಿ ಕೆರೆಯಿಂದ ತಾಲ್ಲೂಕಿನ 45 ಕೆರೆಗಳು ಮತ್ತು ಚಿಂತಾಮಣಿ ತಾಲ್ಲೂಕಿನ 119 ಕೆರೆಗಳು ಸೇರಿ ಒಟ್ಟಾರೆ 164 ಕೆರೆಗಳಿಗೆ ನೀರು ತುಂಬಿಸುವ ₹237 ಕೋಟಿಯ ಯೋಜನೆ
- ಜೀವಿತಾವಧಿ ಮುಗಿದ ವಾಹನಗಳನ್ನು ಸುರಕ್ಷಿತ ರೀತಿಯಲ್ಲಿ ವಿಲೇವಾರಿ ಮಾಡಲು ಕೆಐಎಡಿಬಿ ಮೂಲಕ ಜಿಲ್ಲೆಯಲ್ಲಿ 100 ಎಕರೆ ಪ್ರದೇಶದಲ್ಲಿ ವಾಹನ ಸ್ಕ್ರ್ಯಾಪಿಂಗ್ ಘಟಕ ಸ್ಥಾಪನೆ
- ಶಿಡ್ಲಘಟ್ಟದಲ್ಲಿ ಸಿಲ್ಕ್ ಪಾರ್ಕ್ ಸ್ಥಾಪನೆಗೆ ಕ್ರಮ
- ಡ್ರೋನ್ ಪರೀಕ್ಷಾ ಸೌಲಭ್ಯ ಕೇಂದ್ರ ಸ್ಥಾಪನೆ

23. ದಕ್ಷಿಣ ಕನ್ನಡ
- ಮಂಗಳೂರು ಮೀನುಗಾರಿಕಾ ಕಾಲೇಜಿನಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಸ್ಥಾಪನೆ
- ಮಂಗಳೂರಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯೋಗಸ್ಥ ಮಹಿಳೆಯರಿಗೆ 50 ಸಂಖ್ಯಾಬಲದ ವಸತಿ ನಿಲಯ
- ಕುಕ್ಕೆ ಸುಬ್ರಹ್ಮಣ್ಯ ದೇವಾಲಯ ಮೂಲ ಸೌಲಭ್ಯ ಹಾಗೂ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪ್ರಾಧಿಕಾರ ರಚನೆ
- ಮಂಗಳೂರಿನಲ್ಲಿ 150 ಸಂಖ್ಯಾಬಲದ ಮೆಟ್ರಿಕ್ ನಂತರದ ಬಿಸಿಎಂ ವಿದ್ಯಾರ್ಥಿನಿಲಯ ಸ್ಥಾಪನೆ

24. ಹಾಸನ
- ಹಾಸನ ಮಹಾನಗರ ಪಾಲಿಕೆಗೆ ಮಹಾತ್ಮಗಾಂಧಿ ನಗರ ವಿಕಾಸ್ ಯೋಜನೆ 2.0ರಡಿ ₹ 200 ಕೋಟಿ
- ಸಾಲಗಾಮೆ, ಕೆಂಚನಕಟ್ಟೆಯಲ್ಲಿ ಚೆಕ್ ಡ್ಯಾಂ ನಿರ್ಮಾಣ
- ಐಗೂರು ಕೆರೆ, ಬಾಗೂರು ಕೆರೆ ಅಭಿವೃದ್ಧಿ

25. ಮಂಡ್ಯ
- ಪಾಂಡವಪುರವನ್ನು ಸಂಪೂರ್ಣ ಸಾವಯವ ತಾಲ್ಲೂಕನ್ನಾಗಿ ಪರಿವರ್ತಿಸಲು ಅಧಿಕೃತ ಸಾವಯವ ಪ್ರಮಾಣೀಕರಣ ವ್ಯವಸ್ಥೆ ಜಾರಿ
- ಮಂಡ್ಯದಲ್ಲಿ ₹500 ಕೋಟಿಯಲ್ಲಿ ಅತ್ಯಾಧುನಿಕ ನಿರ್ಮಾಣ ಮತ್ತು ಮೂಲಸೌಕರ್ಯ ಸಲಕರಣೆಗಳ ಪರೀಕ್ಷಾ ಘಟಕ ಸ್ಥಾಪನೆಗೆ ಸರ್ಕಾರದಿಂದ 100 ಎಕರೆ ಜಮೀನು
- ಕಾರ್ಮಿಕ ಇಲಾಖೆಯಿಂದ ಮಂಡ್ಯ, ಮದ್ದೂರು, ಮಳವಳ್ಳಿ, ಶ್ರೀರಂಗಪಟ್ಟಣ ಮತ್ತು ಮೇಲುಕೋಟೆ ವಿಧಾನಸಭಾ ಕ್ಷೇತ್ರಗಳಲ್ಲಿ ಶ್ರಮಿಕ ವಸತಿ ಶಾಲೆಗಳ ಸ್ಥಾಪನೆ

26. ಬೆಂಗಳೂರು ದಕ್ಷಿಣ
- ಮೇಕೆದಾಟು ಅಣೆಕಟ್ಟೆ ಯೋಜನೆಗೆ ಹೊಸ ಡಿಪಿಆರ್
- ರಾಮನಗರದಲ್ಲಿ ಸಿಲ್ಕ್ ಪಾರ್ಕ್ ಸ್ಥಾಪನೆ
- ರಾಮನಗರದಲ್ಲಿ ಜಿಲ್ಲಾ ನ್ಯಾಯಾಲಯ ಸಂಕೀರ್ಣ ನಿರ್ಮಾಣ
- ಕನಕಪುರದಲ್ಲಿ ತಾಲ್ಲೂಕು ಕ್ರೀಡಾಂಗಣ ನಿರ್ಮಾಣಕ್ಕೆ ₹2 ಕೋಟಿ
- ಬೆಂಗಳೂರು ನಗರ ಸಂಚಾರ ದಟ್ಟಣೆ ತಗ್ಗಿಸಲು ನೆಲಮಂಗಲ-ತಾವರೆಕೆರೆ-ಬಿಡದಿ ಮಧ್ಯಂತರ ವರ್ತುಲ ರಸ್ತೆಯನ್ನು ಬಿಎಂಆರ್‌ಡಿಎ ಹಾಗೂ ಸ್ಥಳೀಯ ಯೋಜನಾ ಪ್ರಾಧಿಕಾರಗಳ ಆರ್ಥಿಕ ಸಂಪನ್ಮೂಲಗಳಿಂದ ನಿರ್ಮಿಸುವುದು

27. ಬೆಂಗಳೂರು ನಗರ
- ಬೆಂಗಳೂರಿನ ಬೃಹತ್ ಮೂಲಸೌಕರ್ಯ ಯೋಜನೆಗಳಿಗೆ ₹7,000 ಕೋಟಿ ಅನುದಾನ
- ₹6,939 ಕೋಟಿ ವೆಚ್ಚದಲ್ಲಿ ಕಾವೇರಿ 6ನೇ ಹಂತದ ಯೋಜನೆಯಡಿ ಹೆಚ್ಚುವರಿಯಾಗಿ ಆರು ಟಿ.ಎಂ.ಸಿ. ಅಡಿ ನೀರು ಪೂರೈಕೆ
- ಮುಂದಿನ ಮೂರು ವರ್ಷದಲ್ಲಿ ₹3,000 ಕೋಟಿ ವೆಚ್ಚದಲ್ಲಿ 450 ಕಿ.ಮೀ ರಸ್ತೆಗೆ ವೈಟ್ ಟಾಪಿಂಗ್
- ಬಿಡಿಎ ವತಿಯಿಂದ ಹೆಬ್ಬಾಳ ಜಂಕ್ಷನ್‌ನಿಂದ ಮೇಖ್ರಿ ವೃತ್ತದವರೆಗೆ ₹2,250 ಕೋಟಿ ವೆಚ್ಚದಲ್ಲಿ ಸುರಂಗ ರಸ್ತೆ

28. ಕೋಲಾರ
- ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಡಿಪಿಆರ್
- ಪ್ರತಿ ತಾಲ್ಲೂಕಿನಲ್ಲಿ ರೈತ ಮಾಲ್ ಸ್ಥಾಪನೆ
- ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ನೂತನ ಪೊಲೀಸ್ ಠಾಣೆ
- ಬಂಗಾರಪೇಟೆ, ಮಾಲೂರು, ಕೆಜಿಎಫ್‌ನಲ್ಲಿ ಶ್ರಮಿಕ ವಸತಿ ಶಾಲೆ
- ಬಂಗಾರಪೇಟೆ ತಾಲ್ಲೂಕು ಕ್ರೀಡಾಂಗಣ ನಿರ್ಮಿಸಲು ₹ 2 ಕೋಟಿ
- ಕೋಲಾರದ ತೇರಹಳ್ಳಿ ಬೆಟ್ಟದ ಶಿವಗಂಗೆಯಲ್ಲಿರುವ ‘ಆದಿಮ ಸಾಂಸ್ಕೃತಿಕ ಕೇಂದ್ರ’ಕ್ಕೆ ಅನುದಾನ
- ಡಾ.ಬಿ.ಆರ್.ಅಂಬೇಡ್ಕರ್ ಭೇಟಿ ನೀಡಿದ ನೆನಪಿಗೆ ಅವರ ಹೆಸರಿನಲ್ಲಿ ಕ್ರೈಸ್ ವಸತಿ ಶಾಲೆ ಪ್ರಾರಂಭ

29. ಕೊಡಗು
- ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಪರಿಶಿಷ್ಟ ಪಂಗಡದ ನೈಜ ದುರ್ಬಲ ಬುಡಕಟ್ಟು ಸಮುದಾಯ (ಪಿವಿಟಿಜಿ)ಗಳಿಗಾಗಿ ‘ಕರ್ನಾಟಕ ಆದಿವಾಸಿ ಅಭಿವೃದ್ಧಿ ನಿಗಮ’ದ ಸ್ಥಾಪನೆ
- ವಿರಾಜಪೇಟೆ, ಸೋಮವಾರಪೇಟೆಯಲ್ಲಿ ಶ್ರಮಿಕ ವಸತಿ ಶಾಲೆ
- ಹಾರಂಗಿ ಜಲಾಶಯದ ಕೆಳಭಾಗದಲ್ಲಿ ಸೇತುವೆ ನಿರ್ಮಾಣ
- ಮಡಿಕೇರಿ–ಕುಶಾಲನಗರ, ಪೊನ್ನಂಪೇಟೆ, ಸೋಮವಾರಪೇಟೆ ಮುಂತಾದೆಡೆ ಚೆಕ್ ಡ್ಯಾಂ, ನಾಲೆ, ತಡೆಗೋಡೆ ನಿರ್ಮಾಣ

30. ಮೈಸೂರು
- ನಂಜನಗೂಡು ತಾಲ್ಲೂಕಿನ ತಾಂಡವಪುರದಲ್ಲಿ ‘ಸಿಲ್ಕ್ ಪಾರ್ಕ್’ ಸ್ಥಾಪನೆ
- ‘ಬೋಯರ್’ ಮೇಕೆ, ಬಂಡೂರು ಕುರಿ ತಳಿ ಸಂವರ್ಧನಾ ಕೇಂದ್ರದ ಅಭಿವೃದ್ಧಿ
- ಮೈಸೂರಿನ ಬಂಬೂಬಜಾರ್‌ನಲ್ಲಿರುವ ರಾಜ್ಯ ಉಗ್ರಾಣ ನಿಗಮದ ಕೇಂದ್ರದಲ್ಲಿ ಸಾರ್ವಜನಿಕ ವಾಣಿಜ್ಯ ಸಂಕೀರ್ಣ ನಿರ್ಮಾಣ
- ಮೈಸೂರಿನ ನರಸಿಂಹರಾಜ ಕ್ಷೇತ್ರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸ್ಥಾಪನೆ
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯೋಗಸ್ಥ ಮಹಿಳೆಯರಿಗೆ ತಲಾ 50 ಸಂಖ್ಯಾಬಲದ ವಸತಿನಿಲಯ
- ಮೈಸೂರಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶೈಕ್ಷಣಿಕ ಅನುಕೂಲಕ್ಕಾಗಿ 150 ಸಂಖ್ಯಾಬಲದ 50 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ
- ಮೈಸೂರಿನಲ್ಲಿ ₹ 75 ಲಕ್ಷ ವೆಚ್ಚದಲ್ಲಿ ಆಧುನಿಕ ಲ್ಯಾಂಡ್ರಿ ಸ್ಥಾಪನೆ
- ಮೈಸೂರನ್ನು ರಾಜ್ಯದ 2ನೇ ಐಟಿ ಸಿಟಿ ಆಗಿ ಅಭಿವೃದ್ಧಿಪಡಿಸುವ ಘೋಷಣೆ
- ಮೈಸೂರು ವಿಮಾನ ನಿಲ್ದಾಣದ ಸಮೀಪದಲ್ಲಿ ಕೆಐಎಡಿಬಿಯಿಂದ ‘ಏರೋಸ್ಪೇಸ್ ಪಾರ್ಕ್’
- ಮೈಸೂರಿನ ದಟ್ಟಗಳ್ಳಿಯಲ್ಲಿ ಆಧುನಿಕ ಸೈಕ್ಲಿಂಗ್ ವೆಲೋಡ್ರಮ್
- ಮೈಸೂರಿನಲ್ಲಿರುವ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಸಮಗ್ರ ಮೂಲಸೌಕರ್ಯ ಅಭಿವೃದ್ಧಿಗೆ ₹ 10 ಕೋಟಿ.
- ಮೈಸೂರಿನ ಚಾಮರಾಜೇಂದ್ರ ಮೃಗಾಲಯದಲ್ಲಿ ಪಿಪಿಪಿ ಮಾದರಿಯಲ್ಲಿ ಪ್ರಕೃತಿ ನಿರೂಪಣಾ ಕೇಂದ್ರ ಸ್ಥಾಪನೆ
- ಮೈಸೂರು ಫಿಲಂ ಸಿಟಿಯಲ್ಲಿ ಥೀಮ್ ಪಾರ್ಕ್, ಸ್ಟಾರ್ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳನ್ನು ಒಳಗೊಂಡು ಪಿಪಿಪಿ ಮಾದರಿಯಲ್ಲಿ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ವ್ಯವಹಾರ ವಹಿವಾಟುದಾರರ ನೇಮಕ
- ಮೈಸೂರು ನಗರದಲ್ಲಿರುವ ‘ಲಿಂಗಾಂಬುಧಿ ಸಸ್ಯತೋಟ’ದ ಸಮಗ್ರ ಅಭಿವೃದ್ಧಿ
- ಮೈಸೂರು ನಗರದಲ್ಲಿ ಪ್ರಾಯೋಗಿಕವಾಗಿ ‘ಇ-ಕೋರ್ಟ್’ ಸ್ಥಾಪನೆ

31. ಚಾಮರಾಜನಗರ
- ಹನೂರು ತಾಲ್ಲೂಕಿನಲ್ಲಿ ಅಂತರ್ಜಲ ಹೆಚ್ಚಿಸಲು ಕುಡಿಯುವ ನೀರಿನ ಸಮಸ್ಯೆ ನೀಗಲು ಹಾಗೂ 12 ಸಾವಿರ ಎಕರೆ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಒದಗಿಸಲು ಉಡುತೊರೆಹಳ್ಳ ಯೋಜನೆ ಅನುಷ್ಠಾನಕ್ಕೆ ₹490 ಕೋಟಿ

ಸಾವಿರ ಕೋಟಿಯಿಂದ ಲಕ್ಷ ಕೋಟಿಯವರೆಗೆ...

ಸಿದ್ದರಾಮಯ್ಯ ಅವರು ಎಚ್.ಡಿ.ದೇವೇಗೌಡ ಅವರ ಸರ್ಕಾರದಲ್ಲಿ 1995–96ರಲ್ಲಿ ಹಣಕಾಸು ಸಚಿವರಾಗಿ ತಮ್ಮ ಮೊದಲ ಬಜೆಟ್ ಮಂಡಿಸಿದ್ದರು. ಆಗ ಬಜೆಟ್‌ನ ಗಾತ್ರ ₹10,859 ಕೋಟಿಯಷ್ಟಿತ್ತು. ಈಗ ಅವರು ಮಂಡಿಸಿರುವ ಬಜೆಟ್‌ನ ಗಾತ್ರ ₹4.48 ಲಕ್ಷ ಕೋಟಿಯಷ್ಟಿದೆ. ಈವರೆಗೆ ಅವರು 17 ಬಾರಿ ಬಜೆಟ್ ಮಂಡನೆ ಮಾಡಿದ್ದಾರೆ

1995-96	₹10,859 ಕೋಟಿ (ವಾಸ್ತವ ವೆಚ್ಚ)
1996-97	₹12,339 ಕೋಟಿ
1997-98	₹13,644 ಕೋಟಿ
1998-99	₹15,519 ಕೋಟಿ
1999-2000	₹17,332 ಕೋಟಿ
2004-05	₹31,591 ಕೋಟಿ
2005-06	₹34,615 ಕೋಟಿ
2013-14	₹1.22 ಲಕ್ಷ ಕೋಟಿ
2014-15	₹1.38 ಲಕ್ಷ ಕೋಟಿ
2015-16	₹1.43 ಲಕ್ಷ ಕೋಟಿ
2016-17	₹1.63 ಲಕ್ಷ ಕೋಟಿ
2017-18	₹1.86 ಲಕ್ಷ ಕೋಟಿ
2018-19	₹2.09 ಲಕ್ಷ ಕೋಟಿ
2023-24	₹3.28 ಲಕ್ಷ ಕೋಟಿ
2024-25	₹3.71 ಲಕ್ಷ ಕೋಟಿ
2025-26	₹4.09 ಲಕ್ಷ ಕೋಟಿ
2026-27	₹4.48 ಲಕ್ಷಕೋಟಿ

2004–05ರ ಸಾಲಿನ ಬಜೆಟ್ ಅನ್ನು ಸಿದ್ದರಾಮಯ್ಯ ಅವರು ಮಂಡಿಸಿದ ಸಂದರ್ಭದ ಚಿತ್ರ

2013-14ರವರೆಗೆ ಏಳು ಬಾರಿ ಅವರು ಹಣಕಾಸು ಸಚಿವರಾಗಿ ಬಜೆಟ್ ಮಂಡಿಸಿದ್ದರು. ನಂತರ ಬಜೆಟ್ ಮಂಡಿಸಿದ್ದೆಲ್ಲಾ ಮುಖ್ಯಮಂತ್ರಿಯಾಗಿ.

ರಾಜ್ಯದ ಆರ್ಥಿಕ ಸ್ಥಿತಿ ಆಶಾದಾಯಕ: ಸಮೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಆರ್ಥಿಕ ಸ್ಥಿತಿ, ಒಟ್ಟು ಆಂತರಿಕ ಉತ್ಪಾದನೆ (ಜಿಎಸ್‌ಡಿಪಿ) ಹಾಗೂ ತಲಾವಾರು ಆದಾಯದ ವಿಚಾರವಾಗಿ ಬಹಳ ಆಶಾದಾಯಕವಾದ ಚಿತ್ರಣವೊಂದನ್ನು ‘ಕರ್ನಾಟಕ ಆರ್ಥಿಕ ಸಮೀಕ್ಷೆ 2025–26’ ವರದಿಯು ನೀಡಿದೆ.

ಅಂದಾಜಿನ ಪ್ರಕಾರ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ರಾಜ್ಯದ ಆರ್ಥಿಕ ಬೆಳವಣಿಗೆ ದರವು ಶೇಕಡ 8.1ರಷ್ಟು ಇರಲಿದೆ ಎಂದು ವರದಿಯು ಹೇಳಿದೆ. ಇದು ದೇಶದ ಆರ್ಥಿಕ ಬೆಳವಣಿಗೆಯ ಅಂದಾಜು ಆಗಿರುವ ಶೇ7.4ಕ್ಕಿಂತ ಹೆಚ್ಚು.

ವರದಿಯನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ ಶುಕ್ರವಾರ ಮಂಡಿಸಲಾಗಿದೆ. ತಲಾವಾರು ಆದಾಯದ ವಿಚಾರದಲ್ಲಿಯೂ ಕರ್ನಾಟಕವು ರಾಷ್ಟ್ರೀಯ ಸರಾಸರಿಗಿಂತ ಮುಂದೆ ಇದೆ. ದೇಶದ ಇತರ ಹಲವು ರಾಜ್ಯಗಳಿಗಿಂತಲೂ ಮುಂದೆ ಇದೆ ಎಂದು ವರದಿ ಉಲ್ಲೇಖಿಸಿದೆ.

ಹಣದುಬ್ಬರದ ಪರಿಣಾಮವನ್ನು ಪರಿಗಣನೆಗೆ ತೆಗೆದುಕೊಳ್ಳದೆ ಇದ್ದರೆ ರಾಜ್ಯದ ತಲಾ ಆದಾಯವು ಹಾಲಿ ಆರ್ಥಿಕ ವರ್ಷದಲ್ಲಿ ₹4.33 ಲಕ್ಷ ಆಗುತ್ತದೆ. ಇದು ರಾಷ್ಟ್ರಮಟ್ಟದಲ್ಲಿ ₹2.19 ಲಕ್ಷ ಆಗಿದೆ.

ಕೋವಿಡ್ ನಂತರ ತಲಾ ಆದಾಯದಲ್ಲಿನ ಏರಿಕೆ

2020-21	₹2.21 ಲಕ್ಷ
2021-22	₹2.68 ಲಕ್ಷ
2022-23	₹3.11 ಲಕ್ಷ
2023-24	₹3.46 ಲಕ್ಷ
2024-25	₹3.86 ಲಕ್ಷ
2025-26	₹4.33 ಲಕ್ಷ

ಹಣದುಬ್ಬರದ ಪರಿಣಾಮವನ್ನು ಪರಿಗಣನೆಗೆ ತೆಗೆದುಕೊಂಡಾಗ ರಾಜ್ಯದ ತಲಾ ಆದಾಯವು ₹2.23 ಲಕ್ಷ ಆಗುತ್ತದೆ.

ಜಿಎಸ್‌ಡಿಪಿಯಲ್ಲಿ ಸೇವಾ ವಲಯದ ಸಿಂಹಪಾಲು ಮುಂದುವರಿದಿರುವುದನ್ನು ಆರ್ಥಿಕ ಸಮೀಕ್ಷೆಯು ದಾಖಲಿಸಿದೆ. ಈ ವಲಯವು ಜಿಎಸ್‌ಡಿಪಿಯಲ್ಲಿ ಶೇ 69.8ರಷ್ಟು ಪಾಲು ಹೊಂದಿದೆ. ನಂತರದ ಸ್ಥಾನಗಳಲ್ಲಿ ಕೈಗಾರಿಕಾ ವಲಯ (ಶೇ 19.4) ಹಾಗೂ ಕೃಷಿ ವಲಯ (ಶೇ 10.8ರಷ್ಟು ಪಾಲು) ಇವೆ.



ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕೃಷಿ ವಲಯದ ಬೆಳವಣಿಗೆ ಪ್ರಮಾಣವು, ಹಣದುಬ್ಬರದ ಪರಿಣಾಮವನ್ನು ಗಣನೆಗೆ ತೆಗೆದುಕೊಂಡ ನಂತರದಲ್ಲಿಯೂ ಶೇ 9.1ರಷ್ಟು ಇರಬಹುದು ಎಂದು ವರದಿಯು ಅಂದಾಜು ಮಾಡಿದೆ. ಅಲ್ಲದೆ, ಕೈಗಾರಿಕಾ ವಲಯದ ಬೆಳವಣಿಗೆಯು ಶೇ 6.7ರಷ್ಟು ಹಾಗೂ ಸೇವಾ ವಲಯವು ಶೇ 8.1ರಷ್ಟು ಬೆಳವಣಿಗೆ ಕಾಣಬಹುದು ಎಂದು ಅಂದಾಜು ಮಾಡಲಾಗಿದೆ.

ಜಿಎಸ್‌ಡಿಪಿಯಲ್ಲಿ ಬೆಂಗಳೂರು ನಗರ ಜಿಲ್ಲೆಯ ಪಾಲು ಶೇ 40.4ರಷ್ಟಿದೆ. ಜಿಲ್ಲಾವಾರು ಜಿಎಸ್‌ಡಿಪಿ ಪಟ್ಟಿಯಲ್ಲಿ ಬೆಂಗಳೂರು ನಗರವು ಮೊದಲ ಸ್ಥಾನದಲ್ಲಿದೆ. ಎರಡನೆಯ ಹಾಗೂ ಮೂರನೆಯ ಸ್ಥಾನಗಳಲ್ಲಿ ಕ್ರಮವಾಗಿ ದಕ್ಷಿಣ ಕನ್ನಡ (ಶೇ 5.3ರಷ್ಟು) ಹಾಗೂ ಬೆಳಗಾವಿ (ಶೇ 3.9ರಷ್ಟು) ಇವೆ. ಮೊದಲ ಹಾಗೂ ಎರಡನೆಯ ಸ್ಥಾನಗಳಲ್ಲಿ ಇರುವ ಜಿಲ್ಲೆಗಳ ನಡುವಿನ ಅಂತರವು ಆರ್ಥಿಕ ಚಟುವಟಿಕೆಗಳು ಬೆಂಗಳೂರು ನಗರ ಜಿಲ್ಲೆಯಲ್ಲಿ ಭಾರಿ ಪ್ರಮಾಣದಲ್ಲಿ ಕೇಂದ್ರೀಕೃತವಾಗಿರುವುದನ್ನು ಸ್ಪಷ್ಟವಾಗಿ ತೋರಿಸುತ್ತಿವೆ.

ರಫ್ತು ಹೆಚ್ಚಳ

ರಾಜ್ಯದ ಒಟ್ಟು ರಫ್ತುಗಳ ಪ್ರಮಾಣವನ್ನು 2024–25ಕ್ಕೆ ಹೋಲಿಸಿದಾಗ 2025–26ರಲ್ಲಿ ಶೇ 13.78ರಷ್ಟು ಹೆಚ್ಚಾಗಿದೆ.

ಕೃಷಿ ಉತ್ಪನ್ನಗಳ ರಫ್ತುಗಳು 2023–24ರಲ್ಲಿ ₹18,765 ಕೋಟಿ ಇದ್ದದ್ದು, 2024–25ರಲ್ಲಿ ₹22,568 ಕೋಟಿಗೆ ಹೆಚ್ಚಳವಾಗಿ ಸುಮಾರು ಶೇ 20ರಷ್ಟು ಏರಿಕೆ ದಾಖಲಿಸಿದೆ.

ಗ್ಯಾರಂಟಿ ನಿರಾತಂಕ: ಅಭಿವೃದ್ಧಿಗೂ ಅಂಕ

ಒಂದನೇ ಪುಟದಿಂದ...

ಲಾಗಾಯ್ತಿನಿಂದಲೂ ದಮನಿತರು, ಮಹಿಳೆಯರು, ಪರಿಶಿಷ್ಟರು, ಹಿಂದುಳಿದವರು, ಅಲ್ಪಸಂಖ್ಯಾತರು, ರೈತರ ಪರವಾದ ನಿಲುವನ್ನು ತಮ್ಮ ಬಜೆಟ್‌ಗಳಲ್ಲಿ ಪ್ರತಿಬಿಂಬಿಸಿದ್ದ ಅವರು ಈ ಬಾರಿಯೂ ಅದನ್ನೇ ಮುಂದುವರಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಮತ ಬ್ಯಾಂಕ್ ಆಗಿರುವ ಪರಿಶಿಷ್ಟರು ಹಾಗೂ ಅಹಿಂದ ಸಮುದಾಯವನ್ನು ಕೇಂದ್ರೀಕರಿಸಿ ಬಜೆಟ್ ರೂಪಿಸಿದ್ದಾರೆ.

ಸದ್ಯದಲ್ಲಿ ಎಲ್ಲ ಕ್ಷೇತ್ರಗಳನ್ನೂ ಪ್ರಭಾವಿಸುತ್ತಿರುವ ಕೃತಕ ಬುದ್ಧಿಮತ್ತೆಯ (ಎ.ಐ) ಬಗ್ಗೆ ಜಾಗೃತ ಹೆಜ್ಜೆ ಇಡುವತ್ತ ಬಜೆಟ್ ಲಕ್ಷ್ಯ ವಹಿಸಿದ್ದು, ಅದಕ್ಕೆ ನಾಡ ಜನರನ್ನು ತಯಾರು ಮಾಡುವ ರೂಪುರೇಷೆಗಳು ಬಜೆಟ್‌ನ ಭಾಗವಾಗಿವೆ. ‘ಕೃತಕ ಬುದ್ಧಿಮತ್ತೆಯ (AI) ಕ್ರಾಂತಿಕಾರಕ ಬೆಳವಣಿಗೆಗಳಿಂದ ಜಾಗತಿಕ ಉತ್ಪಾದನಾ ವಿಧಾನಗಳು ದಿನ ದಿನಕ್ಕೂ ಬದಲಾಗುತ್ತಿವೆ. ಈ ಸಂದರ್ಭದಲ್ಲಿ ನಾವು ಬೆಂಕಿಯನ್ನು ಬೆಳಕಾಗಿಸಿಕೊಳ್ಳುವ ಸಂಕಲ್ಪ ಹೊತ್ತು ಮುನ್ನಡೆಯಬೇಕಾಗಿದೆ’ ಎಂಬ ಸೂಕ್ಷ್ಮತೆ ಬಜೆಟ್‌ನ ರೂಪಣೆಯ ಹಿಂದಿನ ಶಕ್ತಿಯಾದಂತೆ ತೋರುತ್ತದೆ. ಕೃತಕ ಬುದ್ಧಿಮತ್ತೆಯ ಸಮರ್ಪಕ ಬಳಕೆಯ ಬಗ್ಗೆ ಅನೇಕ ಕಡೆ ಉದ್ದೇಶಿತ ಪ್ರಸ್ತಾವಗಳು ಇವೆ.

ಮೂಲಸೌಕರ್ಯ, ಕೈಗಾರಿಕೆ, ಇಂಧನ ಕ್ಷೇತ್ರಗಳಲ್ಲಿನ ಬಂಡವಾಳ ವೆಚ್ಚವನ್ನು ಹೆಚ್ಚಿಸುವ ಬಗ್ಗೆ ಬಜೆಟ್ ಒತ್ತು ನೀಡಿದೆ. ಬೆಂಗಳೂರು ಕೇಂದ್ರಿತವಲ್ಲದೇ, ಎರಡು ಮತ್ತು ಮೂರನೇ ಹಂತದ ನಗರಗಳಿಗೆ ಉದ್ಯಮ ಸೃಷ್ಟಿಯ ಅವಕಾಶದ ಬಾಗಿಲನ್ನು ಬಜೆಟ್‌ನಲ್ಲಿ ತೆರೆಯಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್ ಮಂಡಿಸುವುದನ್ನು ಬೆಂಗಳೂರಿನ ಕೆ.ಎಸ್‌ಆರ್‌ಟಿ.ಸಿ ಬಸ್ ನಿಲ್ದಾಣದ ಟಿವಿಯಲ್ಲಿ ಶುಕ್ರವಾರ ಪ್ರಯಾಣಿಕರು ವೀಕ್ಷಿಸಿದರು ಪ್ರಜಾವಾಣಿ ಚಿತ್ರ. ಪ್ರಶಾಂತ್ ಎಚ್‌ಜಿ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಉಸ್ತುವಾರಿಯಲ್ಲಿರುವ ಜಲಸಂಪನ್ಮೂಲ ಇಲಾಖೆಯ ಮಹತ್ವದ ಯೋಜನೆಗಳಿಗೆ ದೊಡ್ಡ ಮೊತ್ತದ ಅನುದಾನ ನೀಡಿಲ್ಲ. ಮೇಕೆದಾಟು, ಕೃಷ್ಣ ಮೇಲ್ದಂಡೆ, ಮಹದಾಯಿ, ಎತ್ತಿನ ಹೊಳೆ ಯೋಜನೆಗಳನ್ನು ಪ್ರಸ್ತಾಪಿಸಲಾಗಿದೆ. ಕೇಂದ್ರದ ಅನುಮತಿ, ಕಾನೂನು ತೊಡಕು ವಿಷಯಗಳನ್ನು ಬಜೆಟ್‌ನಲ್ಲಿ ಉಲ್ಲೇಖಿಸಲಾಗಿದ್ದು, ಅವುಗಳ ತೀರುವಳಿ ಬಳಿಕ ಯೋಜನೆ ಅನುಷ್ಠಾನ ಮಾಡಲಾಗುವುದು ಎಂದು ಭರವಸೆಯ ಮಾತುಗಳನ್ನಷ್ಟೇ ಆಡಲಾಗಿದೆ. ಭದ್ರಾ ಮೇಲ್ದಂಡೆ ಯೋಜನೆಯ 135 ಕಿ.ಮೀ ಉದ್ದದ ಚಿತ್ರದುರ್ಗ ಶಾಖಾ ಕಾಲುವೆ ಹಾಗೂ ಫೀಡರ್ ಕಾಮಗಾರಿಗಳನ್ನು ಮುಗಿಸಿ 2027ರಲ್ಲಿ 157 ಕೆರೆಗಳನ್ನು ತುಂಬಿಸಲಾಗುವುದು ಎಂದು ಪ್ರಸ್ತಾಪಿಸಲಾಗಿದೆ.

ದೊಡ್ಡ ನೀರಾವರಿ ಯೋಜನೆಗಳಿಗೆ ಆದ್ಯತೆ ನೀಡದೇ ಇದ್ದರೂ ಸಣ್ಣ ನೀರಾವರಿ ಯೋಜನೆಗಳು, ಕೆರೆಗಳ ಅಭಿವೃದ್ಧಿ, ಏತ ನೀರಾವರಿ ಯೋಜನೆಗಳಿಗೆ ಅನುದಾನ ಮೀಸಲಿಡಲಾಗಿದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದವರು ಹಾಗೂ ಅಲ್ಪಸಂಖ್ಯಾತರ ಏಳಿಗೆಗೆ ಆದ್ಯತೆ ಸಿಕ್ಕಿದೆ. ಸುಮ್ಮನೆ ಅನುದಾನ ನೀಡುವ ಬದಲು, ಶಾಲೆ–ಕಾಲೇಜು, ವಿದ್ಯಾರ್ಥಿ ನಿಲಯಗಳ ನಿರ್ಮಾಣ, ಅಂಬೇಡ್ಕರ್ ಹಾಗೂ ಸಂತ ಶಿಶುನಾಳ ಷರೀಫರ ಹೆಸರಿನಲ್ಲಿ ವಸತಿ ಶಾಲೆಗಳ ಆರಂಭ, ಕೌಶಲ ತರಬೇತಿಗೆ ಒತ್ತುವ ನೀಡುವ ಯೋಜನೆಗಳನ್ನು ಘೋಷಿಸಿ ಅನುದಾನ ನಿಗದಿಪಡಿಸಲಾಗಿದೆ.

ಪರಿಶಿಷ್ಟ ಪಂಗಡಗಳ ಆಯೋಗ, ಕರ್ನಾಟಕ ಆದಿವಾಸಿ ಅಭಿವೃದ್ಧಿ ನಿಗಮ, ಬೌದ್ಧ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡುವುದಾಗಿ ಘೋಷಿಸಲಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಇಲಾಖೆ ವ್ಯಾಪ್ತಿಯ ನಿಗಮಗಳಲ್ಲಿ 2021ರಿಂದ ಈಚೆಗೆ ಮಾಡಿರುವ ಸಾಲವನ್ನು ಪಾವತಿಸಿದರೆ ಒಂದಾವರ್ತಿ ಬಡ್ಡಿ ಮನ್ನಾ ಮಾಡುವ ಘೋಷಣೆ ಮಾಡಿದ್ದಾರೆ.

ಗೃಹ ಲಕ್ಷ್ಮಿಗೆ ₹28,608 ಕೋಟಿ, ಗೃಹ ಜ್ಯೋತಿಗೆ ₹10,578 ಕೋಟಿ, ಅನ್ನಭಾಗ್ಯದ ಬದಲು ಜಾರಿ ಮಾಡಿರುವ ಇಂದಿರಾ ಆಹಾರ ಕಿಟ್‌ಗೆ ₹6,200 ಕೋಟಿ, ಶಕ್ತಿ ಯೋಜನೆಗೆ ₹5,300 ಕೋಟಿ ಹಾಗೂ ಯುವನಿಧಿಗೆ ₹600 ಕೋಟಿ ಸೇರಿ ಒಟ್ಟು ₹51,286 ಕೋಟಿ ಒದಗಿಸಲಾಗಿದೆ. ಕಳೆದ ಸಾಲಿನಲ್ಲಿ ಈ ಮೊತ್ತವು ₹51,034 ಕೋಟಿಯಷ್ಟಿತ್ತು.



ಬೆಂಗಳೂರು ಕೇವಲ ಒಂದು ನಗರವಷ್ಟೇ ಅಲ್ಲ. ಇದು ಅಸಂಖ್ಯಾತ ಕನಸುಗಳ ನೆಲೆಬೀಡು. ನಾಡಪ್ರಭು ಕೆಂಪೇಗೌಡರ ಆಡಳಿತದಿಂದ ಹಿಡಿದು ಇಂದಿನ ಸ್ಟಾರ್ಟ್‌ಅಪ್ ಕ್ರಾಂತಿಯವರೆಗೆ ಈ ನಗರವು ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಬೆಂಗಳೂರನ್ನು ವಿಶ್ವದ ಅತ್ಯುತ್ತಮ ವಾಸಯೋಗ್ಯ ನಗರವನ್ನಾಗಿ ಮಾಡುವುದು ನಮ್ಮ ಸರ್ಕಾರದ ಮುಖ್ಯ ಉದ್ದೇಶವಾಗಿರುತ್ತದೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

₹160 ಕೋಟಿ ಹೊರ ವರ್ತುಲ ರಸ್ತೆಯ ಮೆಟ್ರೊ ವಯಾಡಕ್ಟ್ ಉದ್ದಕ್ಕೂ 9 ಕಿ.ಮೀ. ಪಾದಚಾರಿ ನಡಿಗೆ ಮಾರ್ಗವನ್ನು ಹೊರ ವರ್ತುಲ ಕಂಪನಿಗಳ ಸಂಘದ (ಒಆರ್‌ಆರ್‌ಸಿಎ) ಪ್ರಾಯೋಜಕತ್ವದಲ್ಲಿ ನಿರ್ಮಿಸಲಾಗುವುದು

₹15 ಕೋಟಿ ಗೋವಿಂದರಾಜನಗರದ ಬಿಬಿಎಂಪಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ 'ಜಯದೇವ ಹೃದ್ರೋಗ ಸಂಸ್ಥೆಯ ಪ್ರಾದೇಶಿಕ ಕೇಂದ್ರ'

₹1 ಕೋಟಿ ವಾಣಿ ವಿಲಾಸ್ ಆಸ್ಪತ್ರೆಯಲ್ಲಿ ಐ.ವಿ.ಎಫ್ ಕೇಂದ್ರ ಸ್ಥಾಪನೆ

₹10 ಕೋಟಿ ವಿಕ್ಟೋರಿಯಾ ಆಸ್ಪತ್ರೆಯನ್ನು 'ಶಾಂತವೇರಿ ಗೋಪಾಲಗೌಡ ಆಸ್ಪತ್ರೆ' ಎಂದು ಮರುನಾಮಕರಣ ಮಾಡಲಾಗುವುದು

₹ 5 ಕೋಟಿ ಕೆಂಗೇರಿಯಲ್ಲಿ ಆಸಿರ್ವನಂ ಬೆನಿಡಿಕ್ಟಿನ್ ಮೊನಾಸ್ಟರಿಯ ಎರಡು ಎಕರೆ ಜಾಗದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ತರಬೇತಿ ಕೇಂದ್ರ

₹10 ಕೋಟಿ ಬೆಂಗಳೂರು ವೈದ್ಯಕೀಯ ಕಾಲೇಜಿನಲ್ಲಿ ಬಾಲಕರ ಹಾಸ್ಟೆಲ್ ನಿರ್ಮಾಣ

₹233 ಕೋಟಿ ಬೆಂಗಳೂರಿನ ಆದಿನಾರಾಯಣ ಹೊಸಹಳ್ಳಿಯಲ್ಲಿ ಅತ್ಯಾಧುನಿಕ ಸೌಲಭ್ಯವುಳ್ಳ 'ವಿಜ್ಞಾನ ನಗರ' ಸ್ಥಾಪನೆ. ಕೇಂದ್ರದ ಅನುಮೋದನೆ ನಂತರ ಡಿಪಿಆರ್ ತಯಾರಿ

₹650 ಕೋಟಿ ವೃಷಭಾವತಿ ವ್ಯಾಲಿಯಿಂದ ದ್ವಿತೀಯ ಹಂತದಲ್ಲಿ ಸಂಸ್ಕರಿಸಿದ 308 ಎಂಎಲ್‌ಡಿ ನೀರನ್ನು ಗೋಪಾಲಪುರ ಕೆರೆಯಿಂದ ನೆಲಮಂಗಲ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ 119 ಕೆರೆಗಳಿಗೆ ತುಂಬಿಸುವುದು

₹20 ಕೋಟಿ ಐಐಎಂ ಬೆಂಗಳೂರು, ಯೂನಿವರ್ಸಿಟಿ ಆಫ್ ನ್ಯೂ ಸೌತ್‌ವೇಲ್ಸ್, ಆಸ್ಟ್ರೇಲಿಯಾ ಹಾಗೂ ಐಐಎಸ್ಸಿ- ಬೆಂಗಳೂರು ಇವರ ಸಹಯೋಗದಲ್ಲಿ ಸ್ಟಾರ್ಟ್‌ಅಪ್‌ಗಳಿಗೆ 'ಇನ್‌ಕ್ಯುಬೇಷನ್ ಸೆಂಟರ್'

ಅನುದಾನದ ಭಾರಿ ನಿರೀಕ್ಷೆಯಲ್ಲಿದ್ದ ಐದು ನಗರ ಪಾಲಿಕೆಗಳಿಗೆ 'ಮುನಿಸಿಪಲ್ ಬಾಂಡ್' ಆಧಾರ; ಜಿಬಿಎಯಿಂದಲೇ ಬೃಹತ್ ಅಭಿವೃದ್ಧಿ ಕಾಮಗಾರಿ

'ಗ್ರೇಟರ್ ಐದು' ನಿರೀಕ್ಷೆಗೆ ತಣ್ಣೀರು

₹7,000 ಕೋಟಿ ಬೆಂಗಳೂರು ಅಭಿವೃದ್ಧಿಗೆ 2026–27ನೇ ಸಾಲಿನಲ್ಲಿ ನೀಡಲಾಗುವ ಒಟ್ಟು ಅನುದಾನ

₹3,000 ಕೋಟಿ ಮುಂದಿನ ಮೂರು ವರ್ಷದಲ್ಲಿ 450 ಕಿ.ಮೀ ರಸ್ತೆಗೆ ವೈಟ್ ಟಾಪಿಂಗ್

₹2,000 ಕೋಟಿ ವಿಶ್ವಬ್ಯಾಂಕ್ ನೆರವಿನಲ್ಲಿ ರಾಜಕಾಲುವೆಗಳ ಅಭಿವೃದ್ಧಿ/ ಮೇಲ್ದರ್ಜೆ ಕಾಮಗಾರಿ

₹2,250 ಕೋಟಿ ಬಿಡಿಎ ವತಿಯಿಂದ ಹೆಬ್ಬಾಳ ಜಂಕ್ಷನ್‌ನಿಂದ ಮೇಖ್ರಿ ವೃತ್ತದವರೆಗೆ ಸುರಂಗ ರಸ್ತೆ- ಮೇಲ್ಸೇತುವೆ

ಮಾಸ್ಟರ್ ಪ್ಲಾನ್‌ಗೆ ಗಡುವು

ಬಹುನಿರೀಕ್ಷಿತ ಬೆಂಗಳೂರಿನ ಹೊಸ ಪರಿಷ್ಕೃತ ಮಾಸ್ಟರ್ ಪ್ಲಾನ್- 2041 (ಆರ್‌ಎಂಪಿ) ಜಾರಿಗೆ ಬಜೆಟ್‌ನಲ್ಲಿ ಗಡುವು ವಿಧಿಸಲಾಗಿದೆ. 2027ರ ಅಂತ್ಯಕ್ಕೆ ಆರ್‌ಎಂಪಿ ಜಾರಿಗೊಳಿಸಲು ನಿರ್ಧರಿಸಲಾಗಿದೆ. ಇದರ ಜೊತೆಗೆ ಸಮಗ್ರ ಮೊಬಿಲಿಟಿ ಯೋಜನೆಯನ್ನು (ಸಿಎಂಪಿ) ಆರು ತಿಂಗಳಲ್ಲಿ ರೂಪಿಸುವುದಾಗಿಯೂ ಹೇಳಲಾಗಿದೆ.

ಅಪಘಾತ ಸ್ಥಳಗಳನ್ನು ಗುರುತಿಸಲು ಮತ್ತು ಅವುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಐ.ಐ.ಟಿ. ಮದ್ರಾಸ್ ಮತ್ತು ಎನ್.ಐ.ಸಿ. ರವರ ಸಹಯೋಗದೊಂದಿಗೆ ಡ್ಯಾಶ್ ಬೋರ್ಡ್ ಒಳಗೊಂಡ ಆಧುನಿಕ ತಂತ್ರಾಂಶವನ್ನು ₹5 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು. ಕಾಗದರಹಿತ, ಸಮರ್ಥ ಮತ್ತು ನಾಗರಿಕ-ಕೇಂದ್ರಿತ ನ್ಯಾಯಾಂಗವನ್ನು ಜಾರಿಗೆ ತರಲು ಬೆಂಗಳೂರಿನಲ್ಲೂ ಇ-ಕೋರ್ಟ್ ಸ್ಥಾಪಿಸಲಾಗುತ್ತದೆ. ಅಡ್ವೋಕೇಟ್ ಜನರಲ್‌ರವರ ಕಚೇರಿಗೆ ಗ್ರಂಥಾಲಯ ಸೌಲಭ್ಯ ಒದಗಿಸಲು ಹಾಗೂ ಕಚೇರಿಗಳಲ್ಲಿನ ಸಿಸಿಎಂಎಸ್ ಮತ್ತು ಇ-ಫೈಲಿಂಗ್ ಅಗತ್ಯ ವ್ಯವಸ್ಥೆ ಒದಗಿಸುವುದಾಗಿ ತಿಳಿಸಲಾಗಿದೆ. ಕೆಂಪೇಗೌಡ ವೃತ್ತದಲ್ಲಿ ಬಂಡಿಶೇಷಮ್ಮ ಛತ್ರದ ಜಾಗದಲ್ಲಿ ವಿದ್ಯಾರ್ಥಿ ನಿಲಯ ಹಾಗೂ ವಾಣಿಜ್ಯ ಸಂಕೀರ್ಣವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿ (ಪಿಪಿಪಿ) ನಿರ್ಮಿಸಲು ಯೋಜನೆ ರೂಪಿಸಲಾಗಿದೆ.

● ಆರ್. ಮಂಜುನಾಥ್

ಬೆಂಗಳೂರು: ಮೊದಲ ಬಜೆಟ್ ಮಂಡಿಸುವ ಉತ್ಸಾಹದಲ್ಲಿರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಐದು ನಗರ ಪಾಲಿಕೆಗಳ ಭಾರಿ ನಿರೀಕ್ಷೆಗೆ ರಾಜ್ಯ ಸರ್ಕಾರದ ಬಜೆಟ್ ತಣ್ಣೀರೆರಚಿದೆ. ಸಾವಿರಾರು ಕೋಟಿ ಅನುದಾನ ಸರ್ಕಾರದಿಂದ ನೇರವಾಗಿ ನಗರ ಪಾಲಿಕೆಗಳಿಗೇ ಬರುತ್ತದೆ ಎಂಬ ಆಸೆಯೂ ಕಮರಿಹೋಗಿದ್ದು, ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ 'ಮುನಿಸಿಪಲ್ ಬಾಂಡ್' ಮಾತ್ರ ಆಸರೆಯಾಗಿದೆ.

ಆಡಳಿತ ಯಂತ್ರ ಜನಸಾಮಾನ್ಯರ ಬಾಗಿಲ ಬಳಿಗೆ ಕೊಂಡೊಯ್ಯುವ ಉದ್ದೇಶದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು (ಬಿಬಿಎಂಪಿ) ವಿಭಜಿಸಿ ಐದು ನಗರ ಪಾಲಿಕೆಗಳನ್ನು ಐದು ತಿಂಗಳ ಹಿಂದಷ್ಟೇ ರಚಿಸಲಾಗಿತ್ತು. ಈ ಬಾರಿ ಮೊದಲ ಬಜೆಟ್ ಮಂಡಿಸಲು ಸಜ್ಜಾಗಿರುವ ಐದು ನಗರ ಪಾಲಿಕೆಗಳಿಗೆ, ಸರ್ಕಾರವೇ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿರುವಂತೆ ಜೂನ್‌ನೊಳಗೆ ಚುನಾವಣೆಯೂ ನಡೆಯಬೇಕಿದೆ. ನಗರ ಪಾಲಿಕೆಗಳಿಗೆ ಮೊದಲ ಬಾರಿಗೆ ಚುನಾವಣೆ ನಡೆಯುತ್ತಿರುವಾಗ ಅತಿ ಹೆಚ್ಚಿನ ಅನುದಾನ, ಯೋಜನೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಜೆಟ್‌ನಿಂದ ನಿರೀಕ್ಷಿಸಲಾಗಿತ್ತು. ಆದರೆ, ಅದು ಈಡೇರಿಲ್ಲ. ಹೀಗಾಗಿ, ನಗರ ಪಾಲಿಕೆಗಳು ಸಂಪನ್ಮೂಲ ಕ್ರೋಡೀಕರಣಕ್ಕೆ ನಾಗರಿಕರಿಂದ ಹಣ ಹೂಡಿಕೆಯನ್ನೇ ಆಶ್ರಯಿಸಬೇಕಾಗಿದೆ.

ಜನರ ಮೂಲ ಸಮಸ್ಯೆಗಳಾದ ರಸ್ತೆ, ಚರಂಡಿ, ಪಾದಚಾರಿ ಮಾರ್ಗ, ಉದ್ಯಾನ, ಶೌಚಾಲಯ, ಕೆರೆ, ತೋಟಗಾರಿಕೆ, ಸೌಂದರ್ಯೀಕರಣಕ್ಕೆ ಹೆಚ್ಚು ಒತ್ತು ನೀಡಲು ಯೋಜನೆಗಳನ್ನು ಬಜೆಟ್‌ನಲ್ಲಿ ರೂಪಿಸಲು ನಗರ ಪಾಲಿಕೆಗಳು ಸನ್ನದ್ಧವಾಗಿದ್ದವು. ಇದಕ್ಕಾಗಿ, ರಾಜ್ಯ ಸರ್ಕಾರದಿಂದ ಸುಮಾರು ₹7,500 ಕೋಟಿ ಅನುದಾನದ ನಿರೀಕ್ಷೆಯಲ್ಲಿದ್ದವು. ರಾಜ್ಯ ಸರ್ಕಾರ ₹7 ಸಾವಿರ ಕೋಟಿ ಅನುದಾನವನ್ನು ಈ ಬಾರಿಯ ಬಜೆಟ್‌ನಲ್ಲಿ ಪ್ರಕಟಿಸಿದೆಯಾದರೂ, ಅದರಲ್ಲಿ ನಗರ ಪಾಲಿಕೆಗಳ ಖಾತೆಗೆ ನೇರವಾಗಿ ಒಂದಷ್ಟೂ ಹಣವೂ ಹೋಗುವುದಿಲ್ಲ.

₹3,000 ಕೋಟಿ ಅನುದಾನದಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ ಮೇಲ್ಸೇತುವೆ, ವೈಟ್ ಟಾಪಿಂಗ್ ಹಾಗೂ ಇತರೆ ಮೂಲಸೌಕರ್ಯ ಕಾಮಗಾರಿಗಳಿಗೆ ವೆಚ್ಚವಾಗುತ್ತದೆ. ಉಳಿದ ₹4,000 ಕೋಟಿ ಕಳೆದ ವರ್ಷದ್ದೂ ಬಾಕಿ ಉಳಿದಿದ್ದು, ಈ ವರ್ಷದ ಅಷ್ಟೇ ಮೊತ್ತ ಸೇರಿ ಬಿ-ಸ್ಮೈಲ್‌ಗೆ ವರ್ಗಾವಣೆಯಾಗಲಿದೆ. ಈ ಮೂಲಕ, ಸುರಂಗ ರಸ್ತೆ, ಮೇಲ್ಸೇತುವೆ, ವೈಟ್ ಟಾಪಿಂಗ್ ನಂತರ ಬೃಹತ್ ಯೋಜನೆಗಳು ನಿರ್ವಹಣೆಯಾಗಲಿವೆ.

2025-26ನೇ ಸಾಲಿನಲ್ಲಿ ಕೈಗೊಂಡ ಉಪಕ್ರಮಗಳು

₹1,255 ಕೋಟಿ ಐದು ನಗರ ಪಾಲಿಕೆಗಳಲ್ಲಿ ವಾರ್ಡ್ ರಸ್ತೆ ಮತ್ತು ಮೂಲಸೌಕರ್ಯ ಅಭಿವೃದ್ಧಿ

₹1,700 ಕೋಟಿ 158 ಕಿ.ಮೀ ಉದ್ದದ ರಸ್ತೆಯ ವೈಟ್ ಟಾಪಿಂಗ್

₹1,936 ಕೋಟಿ ಮುಖ್ಯ ಮತ್ತು ಉಪಮುಖ್ಯ ರಸ್ತೆಗಳ ಅಭಿವೃದ್ಧಿ

₹450 ಕೋಟಿ ಸಿಲ್ಕ್‌ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್.ಪುರ ಮೆಟ್ರೊ ನಿಲ್ದಾಣದವರೆಗೂ ಹೊರ ವರ್ತುಲ ರಸ್ತೆಯನ್ನು ಅಭಿವೃದ್ಧಿಪಡಿಸುವ ಯೋಜನೆ

₹273 ಕೋಟಿ (ಅಂದಾಜು) ಮೊತ್ತದಲ್ಲಿ ರಾಜಕಾಲುವೆಗಳ ಮೇಲ್ದರ್ಜೆಗೇರಿಸುವುದು ಮತ್ತು ಕೆರೆ ಅಭಿವೃದ್ಧಿ ಕಾಮಗಾರಿಗಳು

ಮುನಿಸಿಪಲ್ ಬಾಂಡ್: ಐದು ನಗರ ಪಾಲಿಕೆಗಳು ಆರಂಭದಿಂದಲೇ ಆರ್ಥಿಕ ಮುಗ್ಗಟ್ಟಿನಲ್ಲಿದ್ದು, ಆಸ್ತಿ ತೆರಿಗೆ ಸೇರಿದಂತೆ ಉದ್ದಿಮೆ ಪರವಾನಗಿ, ಜಾಹೀರಾತು ಸೇರಿದಂತೆ ಹಲವು ಬಾಬ್ತುಗಳಿಂದ ಸಂಪನ್ಮೂಲ ಕ್ರೋಡೀಕರಿಸುವಲ್ಲಿ ವಿಫಲವಾಗಿದೆ. ಹೀಗಾಗಿ, ಹೆಚ್ಚಿನ ಅನುದಾನವನ್ನು ಬಯಸಿದ್ದವು. ಆದರೆ, ಇದೀಗ ನಗರ ಪಾಲಿಕೆಗಳು ಯೋಜನೆ–ಕಾಮಗಾರಿಗೆ 'ಮುನಿಸಿಪಲ್ ಬಾಂಡ್' ಮೂಲಕ ಹಣವನ್ನು ಕ್ರೋಡೀಕರಿಸಬೇಕಿದೆ. ಸಾರ್ವಜನಿಕ ವಲಯದಿಂದ ಹಣವನ್ನು ಬಾಂಡ್ ಭರಿಸಿಕೊಂಡು, ಅದಕ್ಕೆ ಬಡ್ಡಿ ನೀಡಬೇಕಿದೆ. ಈ ಬಾಂಡ್‌ಗಳನ್ನೂ ನಗರ ಪಾಲಿಕೆಗಳ 'ಬ್ಯಾಲೆನ್ಸ್ ಶೀಟ್' ಆಧರಿಸಿ ವಿತರಿಸಬೇಕು ಎಂಬ ಷರತ್ತನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ.

175 ಜಂಕ್ಷನ್‌ಗಳ ಸೌಂದರ್ಯೀಕರಣ, 500 ಕಿ.ಮೀ. ಪಾದಚಾರಿ ಮಾರ್ಗಗಳ ಅಭಿವೃದ್ಧಿ, 100 ಸ್ಕೈವಾಕ್ ನಿರ್ಮಾಣವನ್ನು ಬಜೆಟ್‌ನಲ್ಲಿ ಘೋಷಿಸಿದ್ದರೂ, ಅವುಗಳನ್ನು ನಗರ ಪಾಲಿಕೆಗಳ ಸ್ವಂತ ಸಂಪನ್ಮೂಲದಲ್ಲಿ ಮುಂದಿನ ಮೂರು ವರ್ಷದಲ್ಲಿ ನಿರ್ಮಿಸಲಾಗುತ್ತದೆ ಎಂದು ಹೇಳಲಾಗಿದೆ. ಈ ಮೂಲಕ ನಗರ ಪಾಲಿಕೆಗಳು ಕ್ರೋಡೀಕರಿಸುವ ಸಂಪನ್ಮೂಲದಿಂದ ಯಾವ ಕಾಮಗಾರಿ ಕೈಗೊಳ್ಳಬೇಕು ಎಂಬುದನ್ನೂ ಸರ್ಕಾರ ನಿರ್ದೇಶಿಸಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಅಧ್ಯಕ್ಷರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಜಿಬಿಎ ಆಡಳಿತದಲ್ಲಿರುವ ಸಿಬ್ಬಂದಿ ವೆಚ್ಚವನ್ನೂ ಬಜೆಟ್‌ನಲ್ಲಿ ಘೋಷಿಸಿಲ್ಲ. ಜಿಬಿಎ ಆಡಳಿತ ವೆಚ್ಚವನ್ನು ಸರ್ಕಾರವೇ ಭರಿಸಬೇಕೆಂದು ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯಲ್ಲಿ (ಜಿಬಿಜಿಎ) ನಮೂದಾಗಿದೆ. ಆದರೆ ಈ ಬಗ್ಗೆ ಯಾವುದೇ ಪ್ರಸ್ತಾಪ ಬಜೆಟ್‌ನಲ್ಲಿಲ್ಲ. ಇದೂ ನಗರ ಪಾಲಿಕೆಗಳ ಮೇಲೆ ಹೊರೆಯಾಗುವ ಸಾಧ್ಯತೆ ಇದೆ.

ನಮ್ಮ ಮೆಟ್ರೊ ರೈಲು ಜಾಲವನ್ನು 41 ಕಿ.ಮೀಯಷ್ಟು ಪೂರ್ಣಗೊಳಿಸುವುದಾಗಿ ಹೇಳಲಾಗಿದ್ದು, ಹೊಸ ಮಾರ್ಗಗಳ ಘೋಷಣೆಯಾಗಿಲ್ಲ. ಕಾವೇರಿ 6ನೇ ಹಂತವನ್ನು ಜೈಕಾ ನೆರವಿನಿಂದ ಅನುಷ್ಠಾನಗೊಳಿಸಿ ಆರು ಟಿಎಂಸಿ ಟಿ ನೀರನ್ನು ಬೆಂಗಳೂರಿನ 1.40 ಕೋಟಿ ಜನರಿಗೆ ಕುಡಿಯುವ ನೀರು ತಲುಪಿಸುವುದಾಗಿ ಹೇಳಲಾಗಿದೆ.

ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿರುವ, ಬಿಡಿಎಯ ಬೆಂಗಳೂರು ಬ್ಯುಸಿನೆಲ್ ಕಾರಿಡಾರ್ ಭಾಗ-1ರ ನಿರ್ಮಾಣವನ್ನು ನಾಲ್ಕು ವರ್ಷಗಳಲ್ಲಿ ಮುಗಿಸುವ ಗುರಿಯನ್ನೂ ಬಜೆಟ್‌ನಲ್ಲಿ ನೀಡಲಾಗಿದೆ. ನಗರದಲ್ಲಿ ವಾಹನ ದಟ್ಟಣೆಯನ್ನು ಕಡಿಮೆ ಮಾಡಲು ನೆಲಮಂಗಲ- ತಾವರೆಕೆರೆ- ಬಿಡದಿ ಮಧ್ಯಂತರ ವರ್ತುಲ ರಸ್ತೆ ನಿರ್ಮಾಣವನ್ನು ಬಜೆಟ್‌ನಲ್ಲಿ ಘೋಷಿಸಲಾಗಿದ್ದು, ಬಿಎಂಆರ್‌ಡಿಎ ಹಾಗೂ ಸ್ಥಳೀಯ ಯೋಜನಾ ಪ್ರಾಧಿಕಾರಗಳಿಗೆ ಇದರ ಆರ್ಥಿಕ ಜವಾಬ್ದಾರಿಯನ್ನು ವಹಿಸಲಾಗಿದೆ.

ಒಟ್ಟಾರೆ, ಬೆಂಗಳೂರಿನ ಬೃಹತ್ ಯೋಜನೆಗಳಿಗೆ ಹಿಂದಿನ ವರ್ಷ ನೀಡಲಾಗಿದ್ದ ಅನುದಾನವನ್ನೇ ಮುಂದುವರಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಹೊಸ ಯೋಜನೆ ಅಥವಾ ಆರ್ಥಿಕ ನೆರವನ್ನು ಘೋಷಿಸಿಲ್ಲ. ಹೀಗಾಗಿ, ಜನರಿಗೆ ಅತ್ಯಗತ್ಯವಾಗಿರುವ ಕಾಮಗಾರಿಗಳಿಗೆ ನಗರ ಪಾಲಿಕೆಗಳು ಹಾಗೂ ಸ್ಥಳೀಯ ಯೋಜನಾ ಪ್ರಾಧಿಕಾರಗಳೇ ಸಂಪನ್ಮೂಲಗಳನ್ನು ಕ್ರೋಡೀಕರಿಸಿಕೊಳ್ಳಬೇಕಿದೆ.

ಕಳೆದ ವರ್ಷದ ಅನುದಾನವೇ ಮುಂದುವರಿಕೆ

ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು 'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಯಲ್ಲಿ ಘೋಷಿಸಲಾಗಿದ್ದ ಯೋಜನೆಗಳನ್ನೇ 2025–26ರಲ್ಲಿ ಪ್ರಕಟಿಸಿ, 'ವಿಶೇಷ ಮೂಲಸೌಕರ್ಯಕ್ಕೆ ಬಂಡವಾಳ ಬೆಂಬಲ' ಯೋಜನೆಯಡಿಯ ₹3 ಸಾವಿರ ಕೋಟಿಯನ್ನು ₹7 ಸಾವಿರ ಕೋಟಿಗೆ ಹೆಚ್ಚಿಸಲಾಗಿತ್ತು. ಈ ಅನುದಾನದಲ್ಲಿ ಬೃಹತ್ ಮೂಲಸೌಕರ್ಯ ಯೋಜನೆಗಳನ್ನು ನಿರ್ವಹಿಸಲು 'ವಿಶೇಷ ಉದ್ದೇಶಿತ ಸಂಸ್ಥೆ' (ಎಸ್‌ಪಿವಿ) ಸ್ಥಾಪಿಸುವುದಾಗಿ ಹೇಳಲಾಗಿತ್ತು.

ಅದರಂತೆ, 'ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್' (ಬಿ-ಸ್ಮೈಲ್) ಸ್ಥಾಪನೆಯಾಗಿದೆ. ₹3 ಸಾವಿರ ಕೋಟಿ ಅನುದಾನ ಹಿಂದಿನಂತೆ ಬಿಡುಗಡೆಯಾಗಿದೆ. ಆದರೆ, ₹4 ಸಾವಿರ ಕೋಟಿಯಲ್ಲಿ ಇನ್ನೂ ಒಂದು ಪೈಸೆಯೂ ಬಿಡುಗಡೆ ಆಗಿಲ್ಲ. ಬಿ-ಸ್ಮೈಲ್ ನಿರ್ವಹಿಸುವ ಕಾಮಗಾರಿಗಳು ಇನ್ನೂ ಟೆಂಡರ್ ಹಂತದಲ್ಲಿಯೇ ಇವೆ. ಸುರಂಗ ರಸ್ತೆಗೆ ಕಳೆದ ವರ್ಷದ ಬಜೆಟ್‌ನಲ್ಲಿಯೇ ಸಾಲದ ಖಾತರಿಯನ್ನು ಸರ್ಕಾರ ನೀಡಿತ್ತು. ಈ ಯೋಜನೆಯೂ ಟೆಂಡರ್ ಪ್ರಕ್ರಿಯೆಯಲ್ಲೇ ಸ್ಥಗಿತಗೊಂಡಿದೆ.

ಕಳೆದ ಆರ್ಥಿಕ ವರ್ಷದಲ್ಲಿ ಘೋಷಿಸಿದ್ದ ₹7 ಸಾವಿರ ಕೋಟಿ ಅನುದಾನವನ್ನೇ 2026–27ನೇ ಸಾಲಿಗೂ ಮುಂದುವರಿಸಲಾಗಿದೆ. ಈ ಅನುದಾನವೆಲ್ಲ ಜಿಬಿಎ- ಬಿಸ್ಮೈಲ್ ವತಿಯಿಂದಲೇ ನಿರ್ವಹಣೆಯಾಗುತ್ತದೆ. ಇದನ್ನು ಹೊರತುಪಡಿಸಿದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಜಲಮಂಡಳಿಗೆ ಯಾವುದೇ ರೀತಿಯ ಅನುದಾನ ಬಜೆಟ್‌ನಲ್ಲಿ ಘೋಷಣೆಯಾಗಿಲ್ಲ.

- ಉನ್ನತ ವ್ಯಾಸಂಗ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗಾಗಿ ಬರುವ ವಿದ್ಯಾರ್ಥಿಗಳಿಗಾಗಿ ಬೆಂಗಳೂರಿನಲ್ಲಿ ಎರಡು ವಿದ್ಯಾರ್ಥಿ ಇಂದಿರಾ ಕ್ಯಾಂಟೀನ್
- ಜೈಕಾ ನೆರವಿನಿಂದ ₹6,939 ಕೋಟಿ ವೆಚ್ಚದಲ್ಲಿ ಹೆಚ್ಚುವರಿಯಾಗಿ ಆರು ಟಿ.ಎಂ.ಸಿ. ಅಡಿ ನೀರನ್ನು ಪೂರೈಸಲು ಕಾವೇರಿ 6ನೇ ಹಂತದ ಯೋಜನೆ
- ಬೆಂಗಳೂರಿನಲ್ಲಿ ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ನಿರ್ಮಿಸಲು ಎಎಐನಿಂದ ತಾಂತ್ರಿಕ ಅಭಿಪ್ರಾಯ ಪಡೆದು ಕಾರ್ಯಸಾಧ್ಯತಾ ವರದಿ ತಯಾರಿ
- ಸ್ತನ ಮತ್ತು ಗರ್ಭಕಂಠ ಕ್ಯಾನ್ಸರ್ ತಪಾಸಣೆ, ಗರ್ಭಕಂಠ ಕ್ಯಾನ್ಸರ್ ತಡೆಗಟ್ಟುವ ಲಸಿಕಾ ಕಾರ್ಯಕ್ರಮ ನಗರದಲ್ಲಿ ಪ್ರಾಯೋಗಿಕವಾಗಿ ಪ್ರಾರಂಭ
- ಬೆಂಗಳೂರಿನಲ್ಲಿ 100 ಸಂಖ್ಯಾಬಲದ ಉದ್ಯೋಗಸ್ಥ ಮಹಿಳೆಯರ ನಾಲ್ಕು ವಸತಿನಿಲಯ
- ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ 'ಮಾದಕ ದ್ರವ್ಯ ವ್ಯಸನ ಮುಕ್ತ ಕೇಂದ್ರ'ವನ್ನು ಸ್ಥಾಪನೆ. ಈ ಕಾರಾಗೃಹವನ್ನು 'ಗರಿಷ್ಠ ಭದ್ರತಾ ಕೇಂದ್ರ ಕಾರಾಗೃಹ'ವನ್ನಾಗಿಸಲು ನಿರ್ಧಾರ.
- ಜಿಬಿಎ ಹಾಗೂ ಕಾರ್ಪೊರೇಟ್ ಸಿಎಸ್‌ಆರ್ ನಿಧಿಯಲ್ಲಿ ಪೊಲೀಸಿಂಗ್ ಸವಾಲು ಪರಿಹರಿಸಲು 'ನಗರ ಪೊಲೀಸಿಂಗ್ ನಾವೀನ್ಯ ಸಂಸ್ಥೆ' ಸ್ಥಾಪನೆ

ಪ್ರಗತಿ ಪಥದಲ್ಲಿ ನೀಲಿ ಮಾರ್ಗ....

ಪ್ರಜಾವಾಣಿ ಚಿತ್ರ: ರಂಜು ಪಿ

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ನಿರ್ಮಾಣದ ಹಂತದಲ್ಲಿರುವ ನಮ್ಮ ಮೆಟ್ರೊ ನೀಲಿ ಮಾರ್ಗ

ಬೆಂಗಳೂರು ಹಬ್ಬಕ್ಕೆ ₹5 ಕೋಟಿ

ಪ್ರಜಾವಾಣಿ ವಾರ್ತೆ

ರಾಜ್ಯದ ವಿವಿಧ ಕಲಾ ಪ್ರಕಾರಗಳನ್ನು ಒಂದೆಡೆ ಸೇರಿಸಿ 'ಬೆಂಗಳೂರು ಹಬ್ಬ' ಸಂಯೋಜಕರ ಸಹಯೋಗದೊಂದಿಗೆ ಪ್ರತಿ ವರ್ಷ ರಂಗಭೂಮಿ, ಲಲಿತಕಲೆ, ಚಿತ್ರಕಲೆ, ಶಿಲ್ಪಕಲೆ ಇತ್ಯಾದಿ ಕಲಾಪ್ರಕಾರಗಳ ಕಾರ್ಯಕ್ರಮಗಳನ್ನು ಆಯೋಜಿಸಲು ₹5 ಕೋಟಿ ನೀಡಲಾಗುತ್ತದೆ.

ಹೆಸರಘಟ್ಟ ಕೆರೆಯಲ್ಲಿ ಪಿಪಿಪಿ ಮಾದರಿಯಲ್ಲಿ ಕಯಾಕಿಂಗ್, ಕ್ಯಾನೊಯಿಂಗ್ ಕೇಂದ್ರ ಸ್ಥಾಪನೆ ಮಾಡಲು ನಿರ್ಧರಿಸಲಾಗಿದೆ. ಹೆಸರಘಟ್ಟ ಹುಲ್ಲುಗಾವಲಿನ ಒಟ್ಟು 5,676 ಎಕರೆ 'ಗ್ರೇಟರ್ ಹೆಸರಘಟ್ಟ ಹುಲ್ಲುಗಾವಲು ಸಂರಕ್ಷಣಾ ಮೀಸಲು' ಪ್ರದೇಶವನ್ನು ಸಂರಕ್ಷಿಸಿ, ಅಭಿವೃದ್ಧಿಗೊಳಿಸಲಾಗುವುದು. ಮಾದಪ್ಪನಹಳ್ಳಿಯ 153 ಎಕರೆ ಪ್ರದೇಶವನ್ನು ಶ್ವಾಸತಾಣವನ್ನಾಗಿ ಪರಿವರ್ತಿಸಿ, ಸಾಂಸ್ಕೃತಿಕ ನಾಯಕ ಬಸವಣ್ಣ ಜೈವಿಕ ವೈವಿಧ್ಯ ಉದ್ಯಾನ ನಿರ್ಮಿಸಲಾಗುವುದು.

ಚಿರತೆ ಪುನರ್ವಸತಿ ಕೇಂದ್ರ: ಹೊರವಲಯದ ವಸತಿ ಪ್ರದೇಶಗಳಲ್ಲಿ ಕಾಣಿಸಿಕೊಳ್ಳುವ ಚಿರತೆಗಳನ್ನು ಸೆರೆಹಿಡಿದ ಸಂದರ್ಭಗಳಲ್ಲಿ ಅವುಗಳ ಪುನರ್ವಸತಿಗಾಗಿ ಬನ್ನೇರುಘಟ್ಟದಲ್ಲಿ ₹5 ಕೋಟಿ ವೆಚ್ಚದಲ್ಲಿ ಚಿರತೆ ಪುನರ್ವಸತಿ ಕೇಂದ್ರ ಸ್ಥಾಪಿಸಲಾಗುವುದು. ಬನ್ನೇರುಘಟ್ಟ ಉದ್ಯಾನಕ್ಕೆ ಆಕರ್ಷಿಸಲು ಹಾಗೂ ಪ್ರವಾಸಿಗರ ಅನುಕೂಲತೆಗಾಗಿ ಪಿಪಿಪಿ ಮಾದರಿ 'ಪ್ರಕೃತಿ ನಿರೂಪಣಾ ಕೇಂದ್ರ' ಸ್ಥಾಪಿಸುವುದಾಗಿ ಹೇಳಲಾಗಿದೆ.

ಮೆಟ್ರೊ: 41 ಕಿ.ಮೀ ಸೇರ್ಪಡೆ

ನಮ್ಮ ಮೆಟ್ರೊ, ಉಪನಗರ ರೈಲು, ಬಸ್, ರೈಲು ಸಹಿತ ನಗರದ ಮೂಲಸೌಕರ್ಯಗಳ ಪ್ರಗತಿ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. 2026–27ರಲ್ಲಿ 41 ಕಿ.ಮೀ. ಹೆಚ್ಚುವರಿ ಮೆಟ್ರೊ ಮಾರ್ಗಗಳನ್ನು ಪೂರ್ಣಗೊಳಿಸಲು ಯೋಜಿಸಲಾಗಿದೆ. ಇದರಿಂದ ಮೆಟ್ರೊ ಪ್ರಯಾಣಿಕರ ಸಂಖ್ಯೆ 15 ಲಕ್ಷಕ್ಕೆ ಏರಿಕೆಯಾಗಲಿದೆ.

ಬೆಂಗಳೂರು ಉಪನಗರ ರೈಲು ಯೋಜನೆಗೆ ಸಂಬಂಧಿಸಿದಂತೆ ಪ್ರಸಕ್ತ ಸಾಲಿನಲ್ಲಿ ₹500 ಕೋಟಿ ಒದಗಿಸಲಾಗಿದೆ. ಬೈಯಪ್ಪನಹಳ್ಳಿ-ಹೊಸೂರು ಹಾಗೂ ಯಶವಂತಪುರ-ಚನ್ನಸಂದ್ರ ದ್ವಿಪಥೀಕರಣ ಯೋಜನೆಯಡಿ 70 ಕಿ.ಮೀ. ರೈಲು ಮಾರ್ಗಗಳ ಯೋಜನೆಗಳಿಗೆ ಪ್ರಸಕ್ತ ಬಜೆಟ್‌ನಲ್ಲಿ ₹100 ಕೋಟಿ ಒದಗಿಸಲಾಗಿದೆ.

ವಿಶ್ವಬ್ಯಾಂಕ್ ನೆರವಿನೊಂದಿಗೆ ₹2,000 ಕೋಟಿ ಮೊತ್ತದಲ್ಲಿ ಕರ್ನಾಟಕ ಎಲೆಕ್ಟ್ರಿಕ್ ಬಸ್ ಯೋಜನೆಯಡಿ ಬಿಎಂಟಿಸಿಯ 32 ಹಾಗೂ ಇತರೆ ರಸ್ತೆ ಸಾರಿಗೆ ನಿಗಮಗಳ 62 ಎಲೆಕ್ಟ್ರಿಕ್ ಬಸ್ ಡಿಪೊಗಳನ್ನು ಅಭಿವೃದ್ಧಿಪಡಿಸಲು ಮತ್ತು 4,000 ವಿದ್ಯುತ್ ಚಾಲಿತ ಬಸ್ಸುಗಳನ್ನು ಒದಗಿಸಲು ನಿರ್ಧರಿಸಲಾಗಿದೆ.

ತಜ್ಞರ ಅಭಿಪ್ರಾಯ

ನಗರ ಪಾಲಿಕೆಗಳಿಗೆ ಅನುದಾನ ಹಂಚಿಕೆಯಾಗಲಿ



ಕಳೆದ ವರ್ಷಗಳಂತೆಯೇ ಈ ಬಾರಿಯೂ ಬೆಂಗಳೂರಿಗೆ ಅನುದಾನ ಅದೇ ಪ್ರಮಾಣದಲ್ಲಿ ಹಂಚಿಕೆಯಾಗಿದೆ. ನಾಗರಿಕರಿಗೆ ಇದರಿಂದ ಹೇಗೆ ಅನುಕೂಲವಾಗುತ್ತದೆ ಎಂಬುದು ಸ್ಪಷ್ಟವಾಗಬೇಕಿದೆ. ಕೆಲವು ನಗರ ಪಾಲಿಕೆಗಳಲ್ಲಿ ಆದಾಯದ ಕೊರತೆಯಿದ್ದು, ₹7 ಸಾವಿರ ಕೋಟಿಯ ಅನುದಾನದಲ್ಲಿ ಒಂದಷ್ಟು ಭಾಗ ನಗರ ಪಾಲಿಕೆಗಳಿಗೆ ಹಂಚಿಕೆಯಾಗಬೇಕಿದೆ. ಮುನ್ಸಿಪಲ್ ಬಾಂಡ್‌ಗಳು ಹಣಕಾಸಿನ ನೆರವಿಗೆ ಪೂರಕವಾಗಿದ್ದರೂ, ಕಾಲಾನಂತರದಲ್ಲಿ ಅವುಗಳನ್ನು ಮರುಪಾವತಿಸಲು ಅಗತ್ಯ ಸಂಪನ್ಮೂಲಗಳನ್ನು ಹೊಂದಿರಬೇಕು. ಆ ಹಣವನ್ನು ಆದ್ಯತೆಯ ಯೋಜನೆಗಳಿಗೇ ಬಳಸಬೇಕು ಎಂಬ ನಿರ್ಧಾರ ಆಗಬೇಕು. ಈ ಬಜೆಟ್‌ನಲ್ಲಿ ಆದಾಯ ಲಭ್ಯತೆಯ ಕೊರತೆಯಿಂದಾಗಿ ಹಂಚಿಕೆಯು ಸೀಮಿತವಾಗಿದೆ. ಚುನಾಯಿತ ಕಾರ್ಪೊರೇಟರ್‌ಗಳು ಬಂದ ನಂತರ ಕೇಂದ್ರ ಮತ್ತು ರಾಜ್ಯ ಹಣಕಾಸು ನಿಧಿಯಿಂದ ಈ ಅನುದಾನಗಳು ಹೆಚ್ಚಾಗಲಿವೆ. ಇದಲ್ಲದೆ, ಮೆಗಾ ಸಿಟಿಗಳು ಮತ್ತು ಹೊರವಲಯದ ಪ್ರದೇಶಗಳಿಗೆ ಲಭ್ಯವಿರುವ ಕೇಂದ್ರ ಸರ್ಕಾರದ ಅನುದಾನವನ್ನೂ ನಗರದ ಅಭಿವೃದ್ಧಿಗೆ ಬಳಸಿಕೊಳ್ಳಬಹುದಾಗಿದೆ. ಎಸ್‌ಟಿಆರ್‌ಆರ್ ಮತ್ತು ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ ನಡುವಿನ ಮಧ್ಯಂತರ ವರ್ತುಲ ರಸ್ತೆಯ ಯೋಜನೆ ಉತ್ತಮ ಬೆಳವಣಿಗೆಯಾದರೂ, ಅದು ಕೇವಲ ಹೊರ ವರ್ತುಲ ರಸ್ತೆಯಂತೆ ದಾಖಲಾಗದೆ, ಸ್ಥಳೀಯ ಪ್ರದೇಶದ ಅಭಿವೃದ್ಧಿಯನ್ನೂ ಒಳಗೊಂಡಿರಬೇಕು. ಹೆಬ್ಬಾಳ ಜಂಕ್ಷನ್‌ನಲ್ಲಿ ಕಿರು ಸುರಂಗ ರಸ್ತೆ ಯೋಜನೆ ಸ್ವಾಗತಾರ್ಹವಾದುದು. ವಾಯುಗುಣಮಟ್ಟವನ್ನು ಸುಧಾರಿಸಲು ಮಿಯಾವಾಕಿ ಅರಣ್ಯ ಬೆಳೆಸುವುದು ಸೂಕ್ತ. ಆದರೆ, ಮಕ್ಕಳು ಹಾಗೂ ವಾಯುವಿಹಾರಿಗಳನ್ನು ಗಮನದಲ್ಲಿಟ್ಟುಕೊಂಡು ಇವು ನಿರ್ಮಾಣವಾಗಬೇಕು.

ವಿ. ರವಿಚಂದರ್, ನಗರ ಯೋಜನೆ ತಜ್ಞ

ಸುರಂಗ ರಸ್ತೆ ಬದಲು ರಸ್ತೆ, ಬಿಎಂಟಿಸಿಗೆ ಆದ್ಯತೆ ಬೇಕಿತ್ತು

ನಾಗರಿಕರ ಪ್ರತಿಭಟನೆಗಳು, ಎನ್‌ಜಿಟಿ ಮತ್ತು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಸಲ್ಲಿಕೆಯಾಗಿದ್ದರೂ, ಸರ್ಕಾರವು ₹40,000 ಕೋಟಿ ವೆಚ್ಚದಲ್ಲಿ 40 ಕಿಲೋಮೀಟರ್ ಸುರಂಗ ರಸ್ತೆ ನಿರ್ಮಿಸುವ ತನ್ನ ಯೋಜನೆಗಳೊಂದಿಗೆ ಮುಂದೆ ಸಾಗುತ್ತಿದೆ. ಈ ವೆಚ್ಚದ ಬಹುಪಾಲು ಭಾಗವನ್ನು ಕರ್ನಾಟಕದ ಎಲ್ಲಾ ತೆರಿಗೆದಾರರು ಭರಿಸಬೇಕಾಗುತ್ತದೆ. ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರದ (ಬಿಎಂಎಲ್‌ಟಿಎ) ನಿಯಮಗಳಿಗೆ 'ನಿಯಮ 24' ಅನ್ನು ಸೇರಿಸುವ ಮೂಲಕ ಈ ಯೋಜನೆಯನ್ನು ಪ್ರಶ್ನಿಸಲು ಸಾಧ್ಯವಾಗದಂತೆ ಮಾಡಲಾಗುತ್ತಿದೆ. ಈ ನಿಯಮದ ಪ್ರಕಾರ, ಈ ನಿಯಮಗಳು ರೂಪಿತವಾಗುವ ಮೊದಲು ತೆಗೆದುಕೊಳ್ಳಲಾದ ಎಲ್ಲಾ ನಿರ್ಧಾರಗಳನ್ನು ಹಿಂಪಡೆಯಲು ಸಾಧ್ಯವಿಲ್ಲ. ಇದೇ ಹಣವನ್ನು ಮುಖ್ಯ–ಉಪಮುಖ್ಯ ರಸ್ತೆಗಳು, ಬಸ್ ರ್ಯಾಪಿಡ್ ಟ್ರಾನ್ಸ್‌ಪೋರ್ಟ್ ಸಿಸ್ಟಮ್ (ಬಿಆರ್‌ಟಿಎಸ್) ಅಭಿವೃದ್ಧಿಪಡಿಸಲು, ಬಿಎಂಟಿಸಿ ಬಸ್ ಸೇವೆ ಹೆಚ್ಚಿಸಲು, ಕೊನೆಯ ಮೈಲಿ ಸಂಪರ್ಕಕ್ಕಾಗಿ ಮಿನಿ ಬಸ್‌ಗಳನ್ನು ಒದಗಿಸಲು ಬಳಸಬಹುದಿತ್ತು. ಇದೇ ಹಣವನ್ನು ಮೂಲೆಗುಂಪಾಗಿರುವ ಉಪನಗರ ರೈಲು ಯೋಜನೆಯನ್ನು ವೇಗಗೊಳಿಸಲು ಸಹ ಬಳಸಬಹುದಿತ್ತು. ಜಲ ಭದ್ರತೆ ಮತ್ತು ವಿಪತ್ತು ಸ್ಥಿತಿಸ್ಥಾಪಕತ್ವ ಕಾರ್ಯಕ್ರಮದ ಅಡಿಯಲ್ಲಿ ವಿಶ್ವಬ್ಯಾಂಕ್ ₹2,000 ಕೋಟಿ ವೆಚ್ಚದಲ್ಲಿ ಬೃಹತ್ ರಾಜಕಾಲುವೆ ಯೋಜನೆಗೆ ಹಣ ಒದಗಿಸಿದೆ. ಆದರೆ, ಕೆಲವು ವಾರ್ಡ್‌ಗಳಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಗಮನಿಸಿದರೆ, ಮಳೆನೀರು ಸಂಗ್ರಹ ಗುಂಡಿಗಳಿಲ್ಲದೆಯೇ ಬಾಕ್ಸ್ ಚರಂಡಿಗಳನ್ನು ನಿರ್ಮಿಸಲಾಗುತ್ತಿದೆ. ಇದು ಬೆಂಗಳೂರಿನಾದ್ಯಂತ ಉಂಟಾಗುತ್ತಿರುವ ಭೀಕರ ಪ್ರವಾಹವನ್ನು ತಡೆಯಲು ಯಾವುದೇ ರೀತಿಯಲ್ಲೂ ಸಹಕಾರಿಯಾಗುವುದಿಲ್ಲ. ಬೆಂಗಳೂರಿಗಾಗಿ ಹೊಸ ಪರಿಷ್ಕೃತ ಮಾಸ್ಟರ್ ಪ್ಲಾನ್, ಸಮಗ್ರ ಚಲನಶೀಲತಾ ಯೋಜನೆ ಸಿದ್ಧಪಡಿಸಲಾಗುತ್ತಿದೆ. ಆದರೆ, 74ನೇ ಸಾಂವಿಧಾನಿಕ ತಿದ್ದುಪಡಿ ಕಾಯ್ದೆಯಡಿ ಕಡ್ಡಾಯಗೊಳಿಸಲಾದ ಮಹಾನಗರ ಯೋಜನಾ ಸಮಿತಿಯ ಅನುಪಸ್ಥಿತಿಯಲ್ಲಿ ಈ ಯೋಜನೆಗಳನ್ನು ರೂಪಿಸಲಾಗುತ್ತಿದೆ.

ಕಾತ್ಯಾಯಿನಿ ಚಾಮರಾಜ್, ಕಾರ್ಯಕಾರಿ ಟ್ರಸ್ಟಿ, ಸಿವಿಕ್–ಬೆಂಗಳೂರು

ಎ.ಐಗೆ ಹೆಚ್ಚಿದ ಆದ್ಯತೆ

ಎಐ ಮತ್ತು ರೋಬೊಟಿಕ್ಸ್ ತಂತ್ರಜ್ಞಾನ ಪಾರ್ಕ್ (ಆರ್ಟ್–ಪಾರ್ಕ್), ಇಸ್ರೊ ಮತ್ತು ಕಿಯೋನಿಕ್ಸ್ ಸಹಯೋಗದಲ್ಲಿ 'ಬೆಂಗಳೂರು ರೋಬೋಟಿಕ್ಸ್ ಮತ್ತು ಎಐ ಇನ್ನೊವೇಶನ್ ಝೋನ್ (ಬ್ರೈನ್ಜ್) ಎಂಬ ರೋಬೊಟಿಕ್ಸ್ ಮತ್ತು ಎಐ ಕ್ಯಾಂಪಸ್ ಸ್ಥಾಪನೆಯಾಗಲಿದೆ.

ಇನ್‌ಸ್ಟಿಟ್ಯೂಟ್ ಆಫ್ ಬಯೋ ಇನ್‌ಫಾರ್ಮೆಟಿಕ್ಸ್ ಆ್ಯಂಡ್ ಅಪ್ಲೈಡ್ ಬಯೊಟೆಕ್ನಾಲಜಿ, ಸೆಂಟರ್ ಫಾರ್ ಸೆಲ್ಯುಲರ್ ಆ್ಯಂಡ್ ಮಾಲಿಕ್ಯುಲರ್ ಪ್ಲಾಟ್‌ಫಾರ್ಮ್ಸ್ ಹಾಗೂ ನ್ಯಾಸ್‌ಕಾಮ್ ಸಂಸ್ಥೆಯ ಸಹಭಾಗಿತ್ವದಲ್ಲಿ ₹16 ಕೋಟಿ ವೆಚ್ಚದಲ್ಲಿ ಎರಡು ಎಐ ಉತ್ಕೃಷ್ಟತಾ ಕೇಂದ್ರ ಸ್ಥಾಪನೆಗೊಳ್ಳಲಿವೆ.

ಕೆಐಎಡಿಬಿ ಏರೋಸ್ಪೇಸ್ ಪಾರ್ಕ್‌ನಲ್ಲಿ ₹30 ಕೋಟಿ ವೆಚ್ಚದಲ್ಲಿ ಏರೋಸ್ಪೇಸ್ ಕಾಮನ್ ಫೆಸಿಲಿಟಿ ಸೆಂಟರ್ ಸ್ಥಾಪಿಸಲು ಮುಂದಾಗಿದ್ದು, ₹10 ಕೋಟಿ ಅನುದಾನವನ್ನು ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಲಾಗಿದೆ.

ಉನ್ನತ ಮಟ್ಟದ ಜಾಗತಿಕ ಸಮ್ಮೇಳನಗಳು, ಶೃಂಗಸಭೆಗಳು ಮತ್ತು ಪ್ರದರ್ಶನಗಳನ್ನು ಆಯೋಜಿಸಲು ಬೆಂಗಳೂರಿನ ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್ ಆವರಣದಲ್ಲಿ ಅಂತರರಾಷ್ಟ್ರೀಯ ಮಟ್ಟದ ಸಮಾವೇಶ ಕೇಂದ್ರ ಸಂಕೀರ್ಣವನ್ನು ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿಪಡಿಸುವುದಾಗಿ ಘೋಷಿಸಲಾಗಿದೆ.

ಶ್ರೀಸಾಮಾನ್ಯರ ಪ್ರತಿಕ್ರಿಯೆಗಳು

ಪ್ರತಿ ಬಜೆಟ್‌ನಲ್ಲಿ ಬೆಂಗಳೂರಿನ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ಘೋಷಿಸಲಾಗುತ್ತದೆ. ಆದರೆ, ಅವು ಅನುಷ್ಠಾನವಾಗಿವೆಯೇ ಎಂಬುದರ ಕುರಿತು ಮಾಹಿತಿ ಇರುವುದಿಲ್ಲ. ಸಂಚಾರ ದಟ್ಟಣೆ, ಹೊಸ ರಸ್ತೆಗಳು ಹಾಗೂ ಸುರಂಗ ಮಾರ್ಗದಂತಹ ಯೋಜನೆಗಳು ಸಮಸ್ಯೆಗೆ ಪರಿಹಾರವಿಲ್ಲ

ಅನುಶ್ರೀ, ವಿಶ್ವಪ್ರಿಯಾ ಬಡಾವಣೆ

ಲಿಂಗತ್ವ ಅಲ್ಪಸಂಖ್ಯಾತ ಸಮುದಾಯಕ್ಕೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ, ಅಭಿವೃದ್ಧಿಗೆ ಮಂಡಳಿ ಸ್ಥಾಪಿಸಬೇಕಿತ್ತು. ಪ್ರಬುದ್ಧತೆಯೇ ಇಲ್ಲದ ಸರ್ಕಾರಕ್ಕೆ ಸಮುದಾಯಗಳ ಬಗ್ಗೆ ಇರುವ ಅಸಡ್ಡೆ ಮುಂದುವರಿದಿದೆ.ಈ ಸಮುದಾಯವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ

ಅಕ್ಕೈ ಪದ್ಮಶಾಲಿ, ಹೋರಾಟಗಾರ್ತಿ

ಬೆಂಗಳೂರು ನಗರದ ಮೂಲಸೌಕರ್ಯ ಅಭಿವೃದ್ಧಿಗೆ ಮಹತ್ವದ ಯೋಜನೆಗಳನ್ನು ಘೋಷಣೆ ಮಾಡಲಾಗಿದೆ. ₹3 ಸಾವಿರ ಕೋಟಿ ವೆಚ್ಚದಲ್ಲಿ 450 ಕಿ.ಮೀ ರಸ್ತೆಗೆ ವೈಟ್ ಟಾಪಿಂಗ್, 175 ಜಂಕ್ಷನ್‌ಗಳ ಸೌಂದರ್ಯೀಕರಣ, 100 ಸ್ಕೈವಾಕ್‌ಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ

ಹುಸೇನಸಾಬ ನದಾಫ್, ಸಹಾಯಕ ಪ್ರಾಧ್ಯಾಪಕ

ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಹಾಗೂ ಮೀನುಗಾರಿಕೆ ಹೆಚ್ಚು ಒತ್ತು ನೀಡಲಾಗಿದೆ. ಕೃಷಿಯಲ್ಲಿ ಎ.ಐ ಅಳವಡಿಸಿ ರೈತರ ಸಮಸ್ಯೆಗಳಿಗೆ ತ್ವರಿತ ಪರಿಹಾರ ನೀಡಲು ಒತ್ತು ನೀಡಲಾಗಿದೆ. ವಸುಧಾಮೃತ, ಸಸ್ಯ ಸಂಜೀವಿನಿ ಹಾಗೂ ರೈತ ಮಾಲ್ ಸ್ಥಾಪನೆ ಆದ್ಯತೆ ನೀಡಿರುವುದು ಶ್ಲಾಘನೀಯ

ಎಸ್.ವಿ. ಸುರೇಶ, ಕೃಷಿ ವಿಶ್ವವಿದ್ಯಾಲಯ ಕುಲಪತಿ

ಬೆಂಗಳೂರು ನಗರದ ಅಭಿವೃದ್ಧಿಗೆ ಸಾವಿರಾರು ಕೋಟಿ ಅನುದಾನ ಘೋಷಣೆ ಮಾಡಲಾಗುತ್ತದೆ. ಆದರೆ, ರಸ್ತೆ ಗುಂಡಿ ಸಮಸ್ಯೆ, ಸಂಚಾರ ದಟ್ಟಣೆ, ತ್ಯಾಜ್ಯ ಸಮಸ್ಯೆಗಳಿಗೆ ಮಾತ್ರ ಪರಿಹಾರ ಸಿಕ್ಕಿಲ್ಲ. ಈ ಬಾರಿಯ ಬಜೆಟ್‌ನಲ್ಲಿ ಈ ಸಮಸ್ಯೆಗಳಿಗೆ ಪರಿಹಾರಕ್ಕೆ ಆದ್ಯತೆ ನೀಡಬೇಕಿತ್ತು

ಶಶಿಕಲಾ ನಾಗರಾಜ್, ಶಾಂತಿನಗರ

ಹೆಬ್ಬಾಳ–ಸಿಲ್ಕ್ ಬೋರ್ಡ್ ಮತ್ತು ಕೆ.ಆರ್. ಪುರ–ಮೈಸೂರು ರಸ್ತೆ ಸಂಪರ್ಕಿಸುವ ಸುಮಾರು 40 ಕಿ.ಮೀ ಉದ್ದದ ಸುರಂಗ ಮಾರ್ಗ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ. ರಸ್ತೆಗುಂಡಿ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಬೇಕಿತ್ತು

ಅಕ್ಷತಾ ನಾಯಕ, ಸಹಾಯಕ ಪ್ರಾಧ್ಯಾಪಕಿ



ಅಂಗನವಾಡಿ ಕಾರ್ಯಕರ್ತೆಯರಿಗೆ ಈ ಬಾರಿ ಬಜೆಟ್‌ನಲ್ಲಿ ನಿರಾಶೆಯಾಗಿದೆ. ಅವರಿಗೆ ಗ್ರಾಚ್ಯುಟಿ ನೀಡುವ ಘೋಷಣೆ ಮಾಡಿಲ್ಲ. ಆದರೆ ಸಮವಸ್ತ್ರ ನೀಡುವುದಾಗಿ ಘೋಷಿಸಲಾಗಿದೆ. ಸದ್ಯ ನೀಡಿರುವ ಸಮವಸ್ತ್ರಗಳನ್ನು ಕಳಪೆಯಾಗಿವೆ

ಜಿ.ಆರ್. ಶಿವಶಂಕರ್, ಹೋರಾಟಗಾರ

ರಸ್ತೆ ಸಮಸ್ಯೆ, ಸಂಚಾರ ದಟ್ಟಣೆ ಮುಂತಾದ ಗಂಭೀರ ಸಮಸ್ಯೆಗಳಿಗೆ ದೀರ್ಘಕಾಲೀನ ಪರಿಹಾರ ನೀಡುವ ಯೋಜನೆಗಳು ಬಜೆಟ್‌ನಲ್ಲಿ ಘೋಷಣೆ ಮಾಡಿಲ್ಲ. ಮೂಲಸೌಕರ್ಯ ಸುಧಾರಣೆ ಕುರಿತು ಸ್ಪಷ್ಟ ಕಾರ್ಯಯೋಜನೆಯ ಕೊರತೆ ಕಾಣುತ್ತಿದೆ

ಎಲ್. ಜೀವನ್, ಹೋರಾಟಗಾರ

ಈ ಬಾರಿಯ ಬಜೆಟ್‌ನಲ್ಲಿ ₹40 ಸಾವಿರ ಕೋಟಿ ವೆಚ್ಚದ ಸುರಂಗ ಮಾರ್ಗದಂತ ಬೃಹತ್ ಯೋಜನೆಗೆ ಒತ್ತು ನೀಡಲಾಗಿದ್ದು, ಶುದ್ಧ ಕುಡಿಯುವ ನೀರಿನ ಬಿಕ್ಕಟ್ಟಿಗೆ ಪರಿಹಾರ ಸೂಚಿಸಿಲ್ಲ. ಹದಗೆಟ್ಟ ರಸ್ತೆಗಳಂತಹ ಸಮಸ್ಯೆಗಳಿಗೆ ಪರಿಹಾರ ನೀಡಿಲ್ಲ

ರಾಜೇಶ್ ಭಟ್, ಬೆಂಗಳೂರು ಉಳಿಸಿ ಸಮಿತಿ



ಐದಾರು ವರ್ಷಗಳಿಂದ ಕಾಮಗಾರಿ ನಡೆಯುತ್ತಿರುವ ಮೆಟ್ರೊ ಮಾರ್ಗವು ಈ ವರ್ಷ ತೆರೆಯಲು ಸಿದ್ಧಗೊಂಡಿರುವುದನ್ನೇ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಮೆಟ್ರೊ ಕಾಮಗಾರಿಗಳಿಗೆ ವೇಗ ನೀಡಲು ಯಾವುದೇ ಯೋಜನೆಗಳಿಲ್ಲ

ಪಿ. ಪವಿತ್ರಾ, ಸಾಫ್ಟ್‌ವೇರ್ ಉದ್ಯೋಗಿ

‘ಪುಷ್ಪ ಕೃಷಿ’ಗೆ ನೀರೆರೆಯದ ಬಜೆಟ್

ವಾರ್ಷಿಕ ₹10 ಸಾವಿರ ಕೋಟಿ ವಹಿವಾಟು ನಿರ್ಲಕ್ಷ್ಯಕ್ಕೆ ಹೂ ಬೆಳೆಗಾರರ ಬೇಸರ

● ನಟರಾಜ ನಾಗಸಂದ್ರ

ಮುಖ್ಯಾಂಶಗಳು

- ದೇವನಹಳ್ಳಿ ವಿಮಾನ ನಿಲ್ದಾಣ ಮುಖಾಂತರ 60 ದಶಲಕ್ಷ ಗುಲಾಬಿ ರಫ್ತು
- ಹೂವುಗಳ ಸಂಖ್ಯೆಯಲ್ಲಿ ಶೇ 38ರಷ್ಟು ಬೆಳವಣಿಗೆ
- ಹೊರದೇಶ–ಹೊರರಾಜ್ಯಕ್ಕೂ ರವಾನೆ

ದೊಡ್ಡಬಳ್ಳಾಪುರ ತಾಲ್ಲೂಕಿನ ನಾರಸಿಂಹನಹಳ್ಳಿಯಲ್ಲಿನ ಬಿ.ಶ್ರೀಕಾಂತ್ ಅವರು ಪಾಲಿ ಹೌಸ್‌ನಲ್ಲಿ ಬೆಳೆದಿರುವ ವಿದೇಶಿ ತಳಿಯ ಹೂವು(ಸಂಗ್ರಹ ಚಿತ್ರ)

ದೊಡ್ಡಬಳ್ಳಾಪುರ: ದೇಶದ ಪುಷ್ಪ ಕೃಷಿಯಲ್ಲಿ ಪ್ರಥಮ ಸ್ಥಾನದಲ್ಲಿರುವ ಕರ್ನಾಟಕ ಫ್ಲವರ್ ಹಬ್ ಆಗಿ ಗುರುತಿಸಿಕೊಂಡಿದೆ. ಆದರೆ ಬಜೆಟ್‌ನಲ್ಲಿ ಪುಷ್ಪ ಕೃಷಿಗೆ ಸಂಬಂಧಿಸಿದಂತೆ ಒಂದೂ ಸಾಲು ಇಲ್ಲದಿರುವುದು ಹೂ ಬೆಳೆಗಾರರಲ್ಲಿ ಬೇಸರ ಮೂಡಿಸಿದೆ.

ಭಾರತ ವಿದೇಶಿ ಹೂವುಗಳ ಆಮದು ಮಾಡಿಕೊಳ್ಳಲು ವಾರ್ಷಿಕ ₹1 ಸಾವಿರ ಕೋಟಿ ಖರ್ಚು ಮಾಡುತ್ತಿತ್ತು. ಈಗ ವಿದೇಶಿ ತಳಿಯ ಹೂವುಗಳನ್ನು ಸ್ಥಳೀಯವಾಗಿ ನಮ್ಮ ರೈತರು ಬೆಳೆಯುತ್ತಿರುವುದರಿಂದ ಈ ಹಣ ಉಳಿತಾಯವಾಗಿದೆ. ದೇಶಿಯ ಮಾರುಕಟ್ಟೆಯಲ್ಲಿ ವಾರ್ಷಿಕ ₹10 ಸಾವಿರ ಕೋಟಿ ವಹಿವಾಟು ನಡೆಸುತ್ತಿರುವ ಪುಷ್ಪ ಕೃಷಿಗೆ ರಾಜ್ಯ ಬಜೆಟ್‌ನಲ್ಲಿ ಯಾವುದೇ ರೀತಿಯ ಪ್ರೋತ್ಸಾಹ ನೀಡಿದೆ ನಿರ್ಲಕ್ಷ್ಯ ಮಾಡಲಾಗಿದೆ ಎಂದು ರೈತರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ದೇವನಹಳ್ಳಿ ವಿಮಾನ ನಿಲ್ದಾಣ ಬಿಡುಗಡೆ ಮಾಡಿರುವ ಅಂಕಿ, ಅಂಶದಂತೆ 2026ರ ಜನವರಿ-ಫೆಬ್ರುವರಿಯಲ್ಲಿ 60 ದಶಲಕ್ಷಕ್ಕಿಂತಲೂ ಹೆಚ್ಚು ಗುಲಾಬಿ ಹೂವುಗಳನ್ನು ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ರಫ್ತು ಮಾಡಲಾಗಿದೆ. ವರ್ಷದಿಂದ ವರ್ಷಕ್ಕೆ ಶೇ 64 ರಷ್ಟು ಟನ್ ರಫ್ತು ಬೆಳವಣಿಗೆಯಾಗಿದೆ. ವಿಮಾನ ನಿಲ್ದಾಣದಿಂದ 26 ಅಂತರರಾಷ್ಟ್ರೀಯ, 47 ದೇಶೀಯ ಮಾರುಕಟ್ಟೆಗಳಿಗೆ ಸುಮಾರು 60 ದಶಲಕ್ಷ ಗುಲಾಬಿ ಹೂವು ರಫ್ತು ಮಾಡಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಹೂವುಗಳ ಸಂಖ್ಯೆಯಲ್ಲಿ ಶೇ 38 ರಷ್ಟು ಮತ್ತು ಒಟ್ಟು ತೂಕದಲ್ಲಿ ಶೇ 64 ರಷ್ಟು ಬೆಳವಣಿಗೆಯಾಗಿದೆ.

ಸಿಂಗಾಪುರ, ಕ್ವಾಲಾಲಂಪುರ, ಅಬುಧಾಬಿ, ನ್ಯೂಯಾರ್ಕ್, ಕುವೈತ್, ಲಾಸ್ ಏಂಜಲೀಸ್ ಹಾಗೂ ಯೂರೋಪ್ ದೇಶಗಳಿಗೆ ಹಾಗೂ ದೆಹಲಿ, ಕೋಲ್ಕತ್ತ, ಗುವಾಹಟಿ, ಮುಂಬೈ, ಜೈಪುರ ಸೇರಿದಂತೆ ಹಲವು ಪ್ರಮುಖ ನಗರಗಳಿಗೆ ರಾಜ್ಯದ ಹೂವು ರಫ್ತಾಗುತ್ತಿದೆ. ಇಷ್ಟೆಲ್ಲಾ ಮಾರುಕಟ್ಟೆಯನ್ನು ಹೊಂದಿರುವ ಪುಷ್ಪ ಕೃಷಿಗೆ ಬಜೆಟ್‌ನಲ್ಲಿ ಯಾವುದೇ ರೀತಿಯ ಉತ್ತೇಜನ ಇಲ್ಲದೆ ನಿರ್ಲಕ್ಷ್ಯ ಮಾಡಲಾಗಿದೆ ಎನ್ನುವ ಆರೋಪ ಕೇಳಿಬಂದಿದೆ.

ಕೇಂದ್ರದಿಂದ ಮಾತ್ರ ನೆರವು

ಈ ಹಿಂದೆ ಕೃಷಿ ಭಾಗ್ಯ ಯೋಜನೆಯಲ್ಲಿ ಪಾಲಿಹೌಸ್ ನಿರ್ಮಾಣಕ್ಕೆ ಸಹಾಯಧನ ನೀಡಲಾಗುತ್ತಿತ್ತು. ಆದರೆ ಈಗ ಕೇಂದ್ರ ಸರ್ಕಾರದ ರಾಷ್ಟ್ರೀಯ ತೋಟಗಾರಿಕಾ ಮಂಡಳಿ ಯೋಜನೆಯಲ್ಲಿ ದೊರೆಯುತ್ತಿರುವ ಸೌಲಭ್ಯ ಹೊರತುಪಡಿಸಿ ರಾಜ್ಯ ಸರ್ಕಾರದಿಂದ ಯಾವುದೇ ರೀತಿಯ ಸೌಲಭ್ಯಗಳು ಇಲ್ಲ. ಗ್ರಾಮೀಣ ಪ್ರದೇಶದ ವಿದ್ಯಾವಂತ ಯುವ ಪೀಳಿಗೆ ಮತ್ತು ಮಹಿಳೆಯರಿಗೆ ನಿರಂತರವಾಗಿ ಪುಷ್ಪ ಕೃಷಿ ಉದ್ಯೋಗ ಸೃಷ್ಟಿಸುತ್ತಿದೆ. ಈ ಕ್ಷೇತ್ರಕ್ಕೆ ಮುಂದಿನ ಬಜೆಟ್‌ನಲ್ಲಾದರೂ ಆದ್ಯತೆ ಸಿಗುವಂತೆ ಆಗಲಿ ಎಂದು ಭಾರತ ಹೂವು ಬೆಳೆಗಾರರ ಮಂಡಳಿ ಅಧ್ಯಕ್ಷ ಹಾಗೂ ದಕ್ಷಿಣ ಭಾರತ ಪುಷ್ಪ ಕೃಷಿ ಸಂಘ ನಿರ್ದೇಶಕ ಬಿ.ಶ್ರೀಕಾಂತ್ ಆಶಿಸಿದ್ದಾರೆ.

‘ಹಾಲುಮತ ಎಳೆದು ತರುವುದು ತಪ್ಪು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿದ್ದರಾಮಯ್ಯ ಅವರು ಆಡಳಿತದ ವೈಫಲ್ಯವನ್ನು ಮುಚ್ಚಿ ಹಾಕಲು ಹಾಲಿನಂಥ ಹಾಲುಮತವನ್ನು ಎಳೆದು ತರುವ ಮೂಲಕ ಸಮಾಜಕ್ಕೆ ತಪ್ಪು ಸಂದೇಶ ನೀಡಿರುವುದು ನೋವಿನ ಸಂಗತಿ’ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ವಿ. ಸೋಮಣ್ಣ

ಶುಕ್ರವಾರ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಕುರಿ ಕಾಯುವವನು ಮುಖ್ಯಮಂತ್ರಿ ಆಗಿರುವುದನ್ನು ಸಹಿಸುತ್ತಿಲ್ಲ ಎಂದು ಸಿದ್ದರಾಮಯ್ಯ ಹೇಳಿಕೆ ನೀಡಿದ್ದಾರೆ. ದೀರ್ಘವಾದ ಆಡಳಿತ ನೀಡಲು ಅವಕಾಶ ಪಡೆದ ಬಳಿಕ ಇಂಥ ಮಾತುಗಳನ್ನಾಡಿದ್ದಾರೆ. ದಿಕ್ಕುದೆಸೆ ಇಲ್ಲದ ಆಡಳಿತ ನೀಡಿದ ಕೀರ್ತಿ ನಿಮ್ಮದು. ಅದನ್ನು ಮುಚ್ಚಿ ಹಾಕಲು ರಾಜಕೀಯ ಮಾಡುತ್ತಿದ್ದೀರಿ’ ಎಂದು ಟೀಕಿಸಿದರು.

‘ಆದಾಯ ಮೂಲವಿಲ್ಲದ ಸಾಲದ ಬಜೆಟ್ ಅನ್ನು ಈ ಬಾರಿ ಮಂಡಿಸಿದ್ದಾರೆ. ಇತ್ತೀಚೆಗೆ ಸಿಎಜಿ ಒಂದು ವರದಿಯನ್ನು ನೀಡಿತ್ತು. ಶೇ 50ರಷ್ಟು ಈಗಾಗಲೇ ಸಾಲ ಮಾಡಿದ್ದೀರಿ. ಇನ್ನು ಹೆಚ್ಚು ಸಾಲ ಮಾಡುವ ಅಧಿಕಾರ ನಿಮಗಿಲ್ಲ. ಒಂದು ವೇಳೆ ಮತ್ತೆ ಸಾಲ ಮಾಡಿದರೆ ರಾಜ್ಯ ಸಂಕಷ್ಟಕ್ಕೆ ಸಿಲುಕಲಿದೆ ಎಂದು ಸಿಎಜಿ ವರದಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ. ಆದರೂ ಮತ್ತೆ ಸಾಲದ ಬಜೆಟ್ ಮಂಡಿಸಲಾಗಿದೆ’ ಎಂದು ತಿಳಿಸಿದರು.

‘ನಾಲ್ಕು ಸಾವಿರ ಕನ್ನಡ ಶಾಲೆಗಳನ್ನು ಮುಚ್ಚಿದ್ದಾರೆ. ಆದರೆ, ಅಲ್ಪಸಂಖ್ಯಾತರ ಹೆಸರಿನಲ್ಲಿರುವ ಶಾಲೆಗಳಿಗೆ ₹4,000 ಕೋಟಿ ಕೊಟ್ಟಿದ್ದಾರೆ. ವಕ್ಫ್ ಆಸ್ತಿ ಉಳಿಸಲು ₹150 ಕೋಟಿ ಕೊಟ್ಟಿದ್ದಾರೆ. ಉರ್ದು ಶಾಲೆಗಳಿಗೆ ₹100 ಕೋಟಿ ಇಟ್ಟಿದ್ದಾರೆ. ಮುಲ್ಲಾಗಳಿಗೆ ₹ 6000 ವೇತನ ನಿಗದಿ ಮಾಡಿದ್ದಾರೆ. ಆದರೆ, ದೇವಸ್ಥಾನಗಳ ಅರ್ಚಕರಿಗೆ ವೇತನ ಹೆಚ್ಚಿಸಿಲ್ಲ. ದೇವಸ್ಥಾನಗಳ ಅಭಿವೃದ್ಧಿಗೆ ಅನುದಾನ ನೀಡಿಲ್ಲ’ ಎಂದು ಟೀಕಿಸಿದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	24,765
ಇಂದಿನ ಅಂತ್ಯ:	24,450
ದಿನದ ಕನಿಷ್ಠ:	24,415
↓	315

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹480
12 ಕ್ಕೆ	₹63
ಮೈಸೂರು: 100 ಕ್ಕೆ	₹480

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹212.50
ಆರ್‌ಎಸ್‌ಎಸ್-5	₹205
ಗುಡ್ ಲಾಟ್	₹192

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹444-750
ದ್ವಿತಳಿ (ಬಿ.ವಿ)	₹361-892

ಮುದ್ರೆಮನೆ ಕಾಫಿ

ಎಪಿ	₹22900
ಎಸಿ	₹13150
ಆರ್‌ಪಿ	₹18350
ಆರ್‌ಸಿ	₹9900

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1650 (1660)
ಸೋಯಾ (ರಿಫೈನ್ಡ್)	₹1370 (1390)
ಸೂರ್ಯಕಾಂತಿ (ರಿಫೈನ್ಡ್)	₹1620 (1630)
ಪಾಮೋಲಿನ್	₹1345 (1335)

ಭಾರತ–ಇ.ಯು ಒಪ್ಪಂದ ಪರಿಶೀಲನೆ ಜುಲೈಗೆ ಪೂರ್ಣ

ನವದೆಹಲಿ (ಪಿಟಿಐ): ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವಿನ ಮುಕ್ತ ವ್ಯಾಪಾರ ಒಪ್ಪಂದದ (ಎಫ್‌ಟಿಎ) ಕಾನೂನು ಪರಿಶೀಲನೆ ಜುಲೈ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಒಪ್ಪಂದಕ್ಕೆ ಸಹಿ ಹಾಕಿದ ಬಳಿಕ, ಮುಂದಿನ ವರ್ಷದಿಂದ ಒಪ್ಪಂದ ಜಾರಿಗೆ ಬರುವ ನಿರೀಕ್ಷೆ ಇದೆ.

ಈ ವರ್ಷದ ಜನವರಿ 27ರಂದು ಭಾರತ ಮತ್ತು ಐರೋಪ್ಯ ಒಕ್ಕೂಟವು (ಇ.ಯು) ಮುಕ್ತ ವ್ಯಾಪಾರ ಒಪ್ಪಂದದ ಬಗ್ಗೆ ಮಾತುಕತೆ ಪೂರ್ಣಗೊಂಡಿರುವುದಾಗಿ ಘೋಷಿಸಿವೆ. ಈ ಒಪ್ಪಂದವನ್ನು ಅತಿದೊಡ್ಡ ಮುಕ್ತ ವ್ಯಾಪಾರ ಒಪ್ಪಂದ ಎಂದು ಬಣ್ಣಿಸಲಾಗಿದೆ.

ಈ ಒಪ್ಪಂದವು ಜಾರಿಗೆ ಬಂದ ನಂತರದಲ್ಲಿ ಭಾರತದಿಂದ ಇ.ಯು ದೇಶಗಳಿಗೆ ರಫ್ತಾಗುವ ಶೇ 93ರಷ್ಟು ಉತ್ಪನ್ನಗಳು ಸುಂಕ ರಹಿತವಾಗಿ ಅಲ್ಲಿನ ಮಾರುಕಟ್ಟೆ ಪ್ರವೇಶಿಸಲಿವೆ. ಅಲ್ಲದೆ, ಇ.ಯು. ದೇಶಗಳ ಐಷಾರಾಮಿ ಕಾರುಗಳು ಹಾಗೂ ವೈನ್‌ಗಳ ಬೆಲೆಯು ಭಾರತದಲ್ಲಿ ಕಡಿಮೆ ಆಗಲಿದೆ.

ಈ ಎಫ್‌ಟಿಎ ಅಂದಾಜು 200 ಕೋಟಿ ಜನರ ಬೃಹತ್ ಮಾರುಕಟ್ಟೆಯನ್ನು ಸೃಷ್ಟಿಸಲಿದೆ.

ಅಡಿಕೆ ಧಾರಣೆ

ಕುಮಟಾ					
ಚಾಲಿ	46969-50211	ಸರಕು	62800-87440	ಚಾಲಿ	43299-47861
ಚಿಪ್ಪು	31089-36699	**ಸಿದ್ದಾಪುರ**		ಕೆಂಪುಗೋಟು	24118-39299
ಕೋಕ	15689-33999	ಬಿಳಿಗೋಟು	28609-37609	ರಾಶಿ	50018-54799
ಫ್ಯಾಕ್ಟರಿ	10029-28379	ಚಾಲಿ	41299-49699	**ಯಲ್ಲಾಪುರ**	
ಹೊಸಚಾಲಿ	40696-47029	ಕೋಕ	24699-36899	ಆಪಿ	58800-62066
ಪುತ್ತೂರು		ಹಳೆಚಾಲಿ	47099-49099	ಬಿಳಿಗೋಟು	16012-41089
ಕೋಕ	20000-37500	ಕೆಂಪುಗೋಟು	28089-35300	ಕೋಕ	12000-34299
ಹೊಸತು	26000-47000	ರಾಶಿ	48699-53899	ಹಳೆಚಾಲಿ	48009-50266
ಶಿವಮೊಗ್ಗ		ತಟ್ಟಿಬೆಟ್ಟೆ	36699-43119	ಹೊಸಚಾಲಿ	39009-47599
ಬೆಟ್ಟೆ	55100-58800	**ಶಿರಸಿ**		ಕೆಂಪುಗೋಟು	18899-39109
ಗೊರಬಲು	19010-41679	ಬೆಟ್ಟೆ	40150-53561	ರಾಶಿ	38810-58295
ರಾಶಿ	48199-56169	ಬಿಳಿಗೋಟು	20609-41299	ತಟ್ಟಿಬೆಟ್ಟೆ	36111-52479

ರಷ್ಯಾ ತೈಲ ಖರೀದಿಗೆ ಉಮೇದು

ಭಾರತದ ಸನಿಹದಲ್ಲಿ ಇರುವ ರಷ್ಯಾ ತೈಲ ಹೊತ್ತ ಹಡಗುಗಳು

ನವದೆಹಲಿ (ಪಿಟಿಐ): ಭಾರತದ ತೈಲ ಸಂಸ್ಕರಣಾ ಕಂಪನಿಗಳು ರಷ್ಯಾದಿಂದ ಕಚ್ಚಾ ತೈಲವನ್ನು ಮತ್ತೆ ಬಹಳ ಉಮೇದಿನಿಂದ ಖರೀದಿಸಲು ಆರಂಭಿಸಿವೆ.

ಸಮುದ್ರದಲ್ಲಿ ಇರುವ ಹಡಗುಗಳಲ್ಲಿನ ರಷ್ಯಾ ತೈಲವನ್ನು ಖರೀದಿಸಲು ಅಮೆರಿಕವು ಮೂವತ್ತು ದಿನಗಳ ಅನುಮತಿಯನ್ನು ನೀಡಿರುವುದು ಇದಕ್ಕೆ ಕಾರಣ. ಆದರೆ, ಅಮೆರಿಕದಿಂದ ನಿರ್ಬಂಧಕ್ಕೆ ಗುರಿಯಾಗಿರುವ ಕಂಪನಿಗಳಿಂದಲೂ ತೈಲವನ್ನು ಖರೀದಿಸಬಹುದೇ ಎಂಬ ವಿಚಾರವಾಗಿ ಭಾರತದ ಕಂಪನಿಗಳು ಕಾನೂನು ಸ್ಪಷ್ಟನೆ ಕೋರಿವೆ.

ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲದ ಪೂರೈಕೆಗೆ ಅಡಚಣೆ ಆಗದಿರಲಿ ಎಂಬ ಕಾರಣಕ್ಕೆ, ಸಮುದ್ರ ಮಾರ್ಗದಲ್ಲಿ ಈಗಾಗಲೇ ಇರುವ ರಷ್ಯಾದ ಕಚ್ಚಾ ತೈಲವನ್ನು ಖರೀದಿಸಲು ಅಮೆರಿಕವು ಮೂವತ್ತು ದಿನಗಳ ಅನುಮತಿ ನೀಡಿದೆ.

ಭಾರತದ ತೈಲ ಸಂಸ್ಕರಣಾ ಕಂಪನಿಗಳು ಅಂದಾಜು 2 ಕೋಟಿ ಬ್ಯಾರೆಲ್‌ನಷ್ಟು ಕಚ್ಚಾ ತೈಲವನ್ನು ರಷ್ಯಾದ ಕಂಪನಿಗಳಿಂದ ಖರೀದಿಸಿವೆ,

ನಿರ್ಬಂಧಕ್ಕೆ ಗುರಿಯಾಗದ ಕಂಪನಿಗಳಿಂದಲೇ ಅವು ಹೆಚ್ಚಿನ ಪ್ರಮಾಣದ ತೈಲ ಖರೀದಿಸಿವೆ ಎಂದು ಮೂಲಗಳು ಹೇಳಿವೆ.

ಡಿಸೆಂಬರ್ ನಂತರದಲ್ಲಿ ರಷ್ಯಾದಿಂದ ತೈಲ ಖರೀದಿ ಮಾಡದೆ ಇದ್ದ ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್), ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೊಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್) ಈಗ ಮತ್ತೆ ರಷ್ಯಾದಿಂದ ಖರೀದಿ ಆರಂಭಿಸಿವೆ ಎಂದು ಗೊತ್ತಾಗಿದೆ. ರಿಲಯನ್ಸ್ ಇಂಡಸ್ಟ್ರೀಸ್ ಕೂಡ ರಷ್ಯಾದಿಂದ ತೈಲ ಖರೀದಿಸಲು ಮುಂದಾಗಿದೆ.

‘ಭಾರತಕ್ಕೆ ಅಗತ್ಯವಿರುವ ಕಚ್ಚಾ ತೈಲದಲ್ಲಿ ಶೇ 50ರಷ್ಟು ಪಾಲು ಹೊರ್ಮುಜ್ ಜಲಸಂಧಿಯ ಮೂಲಕ ಬರುತ್ತದೆ. ಹೀಗಾಗಿ, ಅಲ್ಲಿನ ಅಡಚಣೆಯು ಭಾರತದ ಮೇಲೆ ತೀವ್ರ ಪರಿಣಾಮ ಉಂಟುಮಾಡುತ್ತದೆ’ ಎಂದು ಕೆಪ್ಲರ್ ಸಂಸ್ಥೆಯ ವಿಶ್ಲೇಷಕ ಸುಮಿತ್ ರಿತೋಲಿಯಾ ಹೇಳಿದ್ದಾರೆ.

ಭಾರತದ ತೈಲ ಸಂಸ್ಕರಣಾ ಕಂಪನಿಗಳು ರಷ್ಯಾದಿಂದ ದಿನವೊಂದಕ್ಕೆ ಅಂದಾಜು 10 ಲಕ್ಷ ಬ್ಯಾರೆಲ್ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತಿದ್ದವು. ಹೀಗಾಗಿ ಈಗ ಅಮೆರಿಕ ನೀಡಿರುವ ವಿನಾಯಿತಿಯಿಂದಾಗಿ, ಇದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲ ಖರೀದಿಸಲು ಹಸಿರು ನಿಶಾನೆ ಸಿಕ್ಕಂತಾಗಿದೆ ಎಂದು ಅವರು ವಿವರಿಸಿದ್ದಾರೆ.

ಅಮೆರಿಕದ ಕ್ರಮದ ಪರಿಣಾಮವಾಗಿ ಭಾರತದ ತೈಲ ಸಂಸ್ಕರಣಾ ಕಂಪನಿಗಳು ರಷ್ಯಾದಿಂದ ದಿನವೊಂದಕ್ಕೆ 20 ಲಕ್ಷ ಬ್ಯಾರೆಲ್‌ವರೆಗೆ ಕಚ್ಚಾ ತೈಲ ಖರೀದಿಸುವ ಸಾಧ್ಯತೆ ಇದೆ ಎಂದು ಅವರು ಹೇಳಿದ್ದಾರೆ.

‘ರಷ್ಯಾದಿಂದ ಖರೀದಿ ನಿಂತಿರಲಿಲ್ಲ’

ಪಶ್ಚಿಮ ಏಷ್ಯಾದ ದೇಶಗಳಲ್ಲಿ ಸಿಗುವ ಕಚ್ಚಾ ತೈಲದ ಪೂರೈಕೆಗೆ ಅಡಚಣೆ ಎದುರಾಗಿದ್ದರಿಂದಾಗಿ ಭಾರತದ ಕಂಪನಿಗಳು ಅಮೆರಿಕದ ವಿನಾಯಿತಿ ಪ್ರಕಟ ಆಗುವ ಮುನ್ನವೇ ರಷ್ಯಾದಿಂದ ಕಚ್ಚಾ ತೈಲ ಖರೀದಿ ಆರಂಭಿಸಿದ್ದವು ಎಂದು ಗೊತ್ತಾಗಿದೆ.

ಬೇರೆ ಬೇರೆ ಕಡೆಗಳಿಂದ ಇಂಧನ ಖರೀದಿಸುವ ನೀತಿಯನ್ನು ಅನುಸರಿಸುತ್ತಿರುವ ಭಾರತವು, ಅಮೆರಿಕದ ಒತ್ತಡ ಇದ್ದರೂ ರಷ್ಯಾದಿಂದ ಕಚ್ಚಾ ತೈಲ ಖರೀದಿಯನ್ನು ನಿಲ್ಲಿಸಿರಲೇ ಇಲ್ಲ. ಅಮೆರಿಕ–ಇಸ್ರೇಲ್ ಸೇನೆಯು ಇರಾನ್ ಮೇಲೆ ದಾಳಿ ನಡೆಸುವ ಮೊದಲು, ಫೆಬ್ರುವರಿ ಅಂತ್ಯದ ವೇಳೆಗೆ ಭಾರತವು ರಷ್ಯಾದಿಂದ ಪ್ರತಿದಿನ 10.4 ಲಕ್ಷ ಬ್ಯಾರೆಲ್‌ನಷ್ಟು ಕಚ್ಚಾ ತೈಲ ಖರೀದಿಸಿತ್ತು ಎಂದು ಕೇಂದ್ರ ಪೆಟ್ರೋಲಿಯಂ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ಅಮೆರಿಕದಿಂದ ನಿರ್ಬಂಧಕ್ಕೆ ಗುರಿಯಾಗದೆ ಇದ್ದ ಕಂಪನಿಗಳಿಂದ ಈ ಖರೀದಿ ಮಾಡಲಾಗಿತ್ತು.

ಅರಬ್ಬಿ ಸಮುದ್ರ ಹಾಗೂ ಬಂಗಾಳ ಕೊಲ್ಲಿಯಲ್ಲಿ ಇರುವ ಹಡಗುಗಳಲ್ಲಿ ಅಂದಾಜು 1.5 ಕೋಟಿ ಬ್ಯಾರೆಲ್‌ನಷ್ಟು ರಷ್ಯಾದ ಕಚ್ಚಾ ತೈಲ ಲಭ್ಯವಿದೆ. 70 ಲಕ್ಷ ಬ್ಯಾರೆಲ್‌ನಷ್ಟು ರಷ್ಯಾದ ಕಚ್ಚಾ ತೈಲ ಹೊತ್ತಿರುವ ಹಡಗುಗಳು ಸಿಂಗಪುರದ ಸನಿಹದಲ್ಲಿವೆ. ಇನ್ನೊಂದಿಷ್ಟು ಹಡಗುಗಳು ಮೆಡಿಟರೇನಿಯನ್ ಸಮುದ್ರ ಹಾಗೂ ಸೂಯಜ್ ಕಾಲುವೆ ಬಳಿ ಇವೆ. ಇವೆಲ್ಲ ಒಂದು ತಿಂಗಳ ಒಳಗೆ ಭಾರತದ ಬಂದರುಗಳನ್ನು ತಲುಪಲಿವೆ.

ಸುದ್ದಿ 2 ನಿಮಿಷ

ಕಚ್ಚಾ ತೈಲ ಬೆಲೆ ಏರಿಕೆ ಷೇರುಪೇಟೆ ಸೂಚ್ಯಂಕ ಕುಸಿತ

ಮುಂಬೈ (ಪಿಟಿಐ): ದೇಶದ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಶೇ 1ಕ್ಕೂ ಹೆಚ್ಚು ಇಳಿಕೆ ಕಂಡಿವೆ. ಗುರುವಾರದ ವಹಿವಾಟಿನಲ್ಲಿ ಕೊಂಚ ಏರಿಕೆ ಕಂಡಿದ್ದ ಸೂಚ್ಯಂಕಗಳು ಶುಕ್ರವಾರ ‘ಕರಡಿ ಕುಣಿತ’ಕ್ಕೆ ಮತ್ತೆ ನಲುಗಿದವು.

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧವು ಏಳನೇ ದಿನಕ್ಕೆ ಕಾಲಿಟ್ಟಿರುವುದು ಮತ್ತು ಕಚ್ಚಾ ತೈಲ ಬೆಲೆಯಲ್ಲಿನ ಹೆಚ್ಚಳವು ದೇಶದ ಷೇರುಪೇಟೆಗಳ ಮೇಲೆ ಪರಿಣಾಮ ಬೀರಿದ್ದರಿಂದ ಸೂಚ್ಯಂಕಗಳು ಇಳಿಕೆ ಕಂಡಿವೆ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ವಿದೇಶಿ ಬಂಡವಾಳದ ಹೊರಹರಿವು ಸಹ ಸೂಚ್ಯಂಕಗಳ ಇಳಿಕೆಗೆ ಕಾರಣವಾದವು ಎಂದು ಅವರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,097 ಅಂಶ (ಶೇ 1.37ರಷ್ಟು) ಕುಸಿದು 78,918ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 315 ಅಂಶ (ಶೇ 1.27ರಷ್ಟು) ಇಳಿಕೆಯಾಗಿ, 24,450ಕ್ಕೆ ಕೊನೆಗೊಂಡಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ದರವು ಶೇ 2.53ರಷ್ಟು ಹೆಚ್ಚಳವಾಗಿದ್ದು, ಪ್ರತೀ ಬ್ಯಾರಲ್ ದರವು 87.57 ಡಾಲರ್ ಆಗಿದೆ.



ಚಿನ್ನ, ಬೆಳ್ಳಿ ದರ ಇಳಿಕೆ: 10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹1,100 ಕಡಿಮೆಯಾಗಿ, ₹1,64,100ರಂತೆ ಮಾರಾಟವಾಗಿದೆ. ಬೆಳ್ಳಿ ದರವು ಕೆ.ಜಿಗೆ ₹600 ಇಳಿಕೆಯಾಗಿ, ₹2,71,700 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಲಾಭದ ಗಳಿಕೆಗಾಗಿ ಹೂಡಿಕೆದರರು ಚಿನ್ನ ಮತ್ತು ಬೆಳ್ಳಿ ಮಾರಾಟಕ್ಕೆ ಮುಂದಾಗಿದ್ದರಿಂದ ಈ ಲೋಹಗಳ ಬೆಲೆಯು ಇಳಿಕೆಯಾಗಿದೆ ಎಂದು ಹೇಳಿದೆ.

‘ರಫ್ತುದಾರರ ನೆರವಿಗೆ ಬದ್ಧ’

ನವದೆಹಲಿ (ಪಿಟಿಐ): ‘ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಬಿಕ್ಕಟ್ಟಿನಿಂದಾಗಿ ತೊಂದರೆ ಅನುಭವಿಸುತ್ತಿರುವ ರಫ್ತುದಾರರಿಗೆ ನೆರವು ನೀಡಲಾಗುವುದು’ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಭರವಸೆ ನೀಡಿದ್ದಾರೆ.

ಈ ಕುರಿತು ಪ್ರತಿನಿತ್ಯ ಮೇಲ್ವಿಚಾರಣೆ ನಡೆಸಲು ಸರ್ಕಾರವು, ಅಂತರ-ಸಚಿವಾಲಯ ಗುಂಪನ್ನು ರಚಿಸಿದೆ ಎಂದು ತಿಳಿಸಿದ್ದಾರೆ.

ಸರ್ಕಾರದ ಪ್ರತಿ ಯೋಜನೆ ಮತ್ತು ರಫ್ತು ಉತ್ತೇಜನಾ ಮಿಷನ್ ರಫ್ತುದಾರರಿಗೆ ನೆರವಾಗಲಿದೆ. ಇದರಿಂದಾಗಿ ರಫ್ತುದಾರರಿಗೆ ಅನುಕೂಲ ಆಗಲಿದೆ ಎಂದು ಹೇಳಿದ್ದಾರೆ.

ರಫ್ತುದಾರರಿಗೆ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ವಾಣಿಜ್ಯ ಸಚಿವಾಲಯವು, ಬಂದರು ಮತ್ತು ಜಲಸಾರಿಗೆ ಸಚಿವಾಲಯ ಮತ್ತು ಹಡಗು ಕಂಪನಿಗಳೊಂದಿಗೆ ಮಾತುಕತೆ ನಡೆಸುತ್ತಿದೆ ಎಂದು ತಿಳಿಸಿದ್ದಾರೆ.

ಆಂಧ್ರಪ್ರದೇಶ: 13 ವರ್ಷದೊಳಗಿನ ಮಕ್ಕಳಿಗೆ ಜಾಲತಾಣ ಬಳಕೆ ನಿಷೇಧ

ಅಮರಾವತಿ (ಪಿಟಿಐ): ಆಂಧ್ರಪ್ರದೇಶದಲ್ಲಿ 13 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಸಾಮಾಜಿಕ ಜಾಲತಾಣಗಳನ್ನು ಬಳಕೆ ಮಾಡದಂತೆ ನಿಷೇಧ ಹೇರುವುದಾಗಿ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಗುರುವಾರ ಘೋಷಿಸಿದ್ದಾರೆ. ಮುಂದಿನ 90 ದಿನಗಳ ಒಳಗೆ ಈ ನಿಯಮವನ್ನು ಜಾರಿಗೊಳಿಸುವುದಾಗಿಯೂ ಹೇಳಿದ್ದಾರೆ.

ಸಾಮಾಜಿಕ ಜಾಲತಾಣಗಳ ಬಳಕೆಯಿಂದಾಗಿ ಮಕ್ಕಳ ಮೇಲೆ ಆಗುತ್ತಿರುವ ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ಬಳಕೆಗೆ ನಿಷೇಧ ಹೇರುವುದಾಗಿ ಕರ್ನಾಟಕ ಸರ್ಕಾರ ಘೋಷಿಸಿರುವಂತೆಯೇ ಆಂಧ್ರ ಸರ್ಕಾರದ ಈ ಕ್ರಮ ಗಮನಸೆಳೆದಿದೆ.

ವಿಧಾನಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ‘ಈ ನಿರ್ಬಂಧವನ್ನು 13 ವಯಸ್ಸಿನಿಂದ 16ನೇ ವಯಸ್ಸಿನವರೆಗೆ ವಿಸ್ತರಿಸಬಹುದೇ ಎಂಬುದರ ಬಗ್ಗೆಯೂ ಚರ್ಚೆಗಳು ನಡೆಯುತ್ತಿವೆ. ಶೀಘ್ರವೇ ಈ ಸಂಬಂಧಿಸಿದ ನಿರ್ಧಾರವನ್ನೂ ಕೈಗೊಳ್ಳಲಾಗುವುದು’ ಎಂದಿದ್ದಾರೆ.

ಇಂಡೊನೇಷ್ಯಾ: ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿಷೇಧ

ಜಕಾರ್ತ (ಎಎಫ್‌ಪಿ): ಇಂಡೊನೇಷ್ಯಾದಲ್ಲಿ 16 ವರ್ಷ ವಯಸ್ಸಿನೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ಬಳಕೆಯನ್ನು ನಿಷೇಧಿಸುವುದಾಗಿ ಅಲ್ಲಿನ ಸರ್ಕಾರ ಶುಕ್ರವಾರ ಹೇಳಿದೆ.

‘ಆನ್‌ಲೈನ್‌ನಲ್ಲಿ ಅಶ್ಲೀಲ ದೃಶ್ಯಗಳ ವೀಕ್ಷಣೆ, ಸೈಬರ್ ಬೆದರಿಕೆ, ಆನ್‌ಲೈನ್ ವಂಚನೆ ಮತ್ತು ಇಂಟರ್‌ನೆಟ್ ಗೀಳನ್ನು ಕಡಿಮೆ ಮಾಡುವ ಸಲುವಾಗಿ 16 ವರ್ಷದೊಳಗಿನ ಮಕ್ಕಳ ಸಾಮಾಜಿಕ ಜಾಲತಾಣ ಖಾತೆಗಳನ್ನು ನಿಷ್ಕ್ರಿಯಗೊಳಿಸಲಾಗುತ್ತದೆ. ಇದು ಮಾರ್ಚ್ 28ರಿಂದ ಅನುಷ್ಠಾನಗೊಳ್ಳಲಿದೆ’ ಎಂದು ಇಂಡೊನೇಷ್ಯಾದ ಸಂವಹನ ಸಚಿವರು ತಿಳಿಸಿದ್ದಾರೆ.

‘ಆರಂಭದಲ್ಲಿ ಯುಟ್ಯೂಬ್, ಟಿಕ್‌ಟಾಕ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಥ್ರೆಡ್ಸ್, ಎಕ್ಸ್, ಬಿಗೊ ಲೈವ್ ಮತ್ತು ರೊಬ್ಲಾಕ್ಸ್ ಬಳಕೆಯನ್ನು ನಿಯಂತ್ರಿಸಲಾಗುತ್ತದೆ. ಎಲ್ಲ ಸಾಮಾಜಿಕ ಜಾಲತಾಣಗಳು ಮಾರ್ಗಸೂಚಿಗಳನ್ನು ಪಾಲಿಸುವವರೆಗೆ ಹಂತ ಹಂತವಾಗಿ ನಿರ್ಬಂಧವನ್ನು ಹೇರಲಾಗುತ್ತದೆ’ ಎಂದು ಹೇಳಿದ್ದಾರೆ.

16 ವರ್ಷದ ಒಳಗಿನ ಮಕ್ಕಳು ಕೆಲವು ಸಾಮಾಜಿಕ ಜಾಲತಾಣಗಳನ್ನು ಬಳಸುವುದನ್ನು ಆಸ್ಟ್ರೇಲಿಯಾದಲ್ಲಿ ಈಗಾಗಲೇ ನಿರ್ಬಂಧಿಸಲಾಗಿದೆ. ಅಲ್ಲಿನ ಸರ್ಕಾರ ಈ ಸಂಬಂಧ 2025ರ ಡಿಸೆಂಬರ್‌ನಲ್ಲಿ ಆದೇಶ ಹೊರಡಿಸಿದೆ. ಫ್ರಾನ್ಸ್, ಡೆನ್ಮಾರ್ಕ್, ಗ್ರೀಸ್ ಮತ್ತು ಸ್ಪೇನ್ ದೇಶಗಳು ಕೂಡಾ ಇದೇ ರೀತಿಯ ನಿಯಮ ಜಾರಿಗೊಳಿಸುವ ಚಿಂತನೆ ನಡೆಸಿವೆ.

ಪ್ರತಿಭಟನೆ

ಪ್ರಜಾವಾಣಿ ಚಿತ್ರ:

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ ರಾಜ್ಯ ಬಜೆಟ್ ಖಾಲಿ ಚೊಂಬಿನಂತಿದೆ ಎಂದು ಟೀಕಿಸಿ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರ ನೇತೃತ್ವದಲ್ಲಿ ಬಿಜೆಪಿ ಶಾಸಕರು ವಿಧಾನಸೌಧದ ಬಳಿ ಚೊಂಬು ಹಿಡಿದು ಪ್ರತಿಭಟನೆ ನಡೆಸಿದರು. ಬಿ.ವೈ.ವಿಜಯೇಂದ್ರ, ಅರವಿಂದ ಬೆಲ್ಲದ ಮತ್ತು ಇತರರು ಇದ್ದರು

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)	
ಅರಸೀಕೆರೆ	₹18000-20000
ಬೆಂಗಳೂರು	₹30000-33000
ದಾವಣಗೆರೆ	₹12750-12750
ಹಿರಿಯೂರು	₹12400-16500

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಎಲ್‌ಪಿಜಿ ಉತ್ಪಾದನೆ: ಎಸ್ಮಾ ಬಳಸಿದ ಕೇಂದ್ರ

ನವದೆಹಲಿ (ಪಿಟಿಐ): ಎಲ್‌ಪಿಜಿ ಉತ್ಪಾದನೆಯನ್ನು ಹೆಚ್ಚು ಮಾಡುವಂತೆ ಕೇಂದ್ರ ಸರ್ಕಾರವು ತೈಲ ಸಂಸ್ಕರಣಾ ಕಂಪನಿಗಳಿಗೆ ಸೂಚನೆ ನೀಡಿದೆ. ಹೀಗೆ ಸೂಚನೆ ನೀಡಲು ಸರ್ಕಾರವು ಅಗತ್ಯ ಸರಕುಗಳ ಕಾಯ್ದೆ–1955 (ಎಸ್ಮಾ) ಅಡಿಯಲ್ಲಿ ತನಗಿರುವ ಅಧಿಕಾರವನ್ನು ಬಳಸಿಕೊಂಡಿದೆ.

ಭಾರತದಲ್ಲಿ ಕಚ್ಚಾ ತೈಲ ಸಂಸ್ಕರಣಾ ಸಾಮರ್ಥ್ಯವು ಅಗತ್ಯಕ್ಕಿಂತ ಹೆಚ್ಚಿನ ಮಟ್ಟದಲ್ಲಿದೆ. ಆದರೆ ಎಲ್‌ಪಿಜಿ ಉತ್ಪಾದನೆಯು ಹೆಚ್ಚಿನ ಮಟ್ಟದಲ್ಲಿಲ್ಲ.

ತೈಲ ಸಂಸ್ಕರಣಾ ಕಂಪನಿಗಳು ತಾವು ಉತ್ಪಾದಿಸಿದ ಎಲ್‌ಪಿಜಿಯನ್ನು ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಮಾರಾಟ ಕಂಪನಿಗಳಿಗೆ ಮಾತ್ರವೇ ಲಭ್ಯವಾಗಿಸಬೇಕು ಎಂದು ಸರ್ಕಾರ ಸೂಚಿಸಿದೆ.

ಭಾರತದಲ್ಲಿ ಒಟ್ಟು 33.08 ಕೋಟಿ ಎಲ್‌ಪಿಜಿ ಗ್ರಾಹಕರು ಇದ್ದಾರೆ. ಇವರಿಗೆ ಎಲ್‌ಪಿಜಿ ಪೂರೈಕೆಯಲ್ಲಿ ಅಡಚಣೆ ಆಗದಂತೆ ನೋಡಿಕೊಳ್ಳಲು ಸರ್ಕಾರ ಯತ್ನಿಸುತ್ತಿದೆ.

ಮುಂಬೈ ಧಾರಣೆ (ಶೇಂಗಾ)

06-03-2026	
ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ (ಹೊಸ)	8200-8300
ದಪ್ಪ ಗುಜರಾತ್ (ಹೊಸ)	9500-9600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1660 (1670)
ಒಂದು ವಾರದ ಡೆಲಿವರಿ	1655 (1665)
ಪಾಮ್ ವಾರದ ಡೆಲಿವರಿ	1343 (1338)
ಸೂರ್ಯಕಾಂತಿ ಎಣ್ಣೆ ಕಚ್ಚಾ	1560 (1560)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,59,450 (1,59,000)
ಬೆಳ್ಳಿ ಕೆ.ಜಿಗೆ	2,62,500 (2,60,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಎಸ್‌ಐಆರ್: ಮಮತಾ ಧರಣಿ

ಕೋಲ್ಕತ್ತ (ಪಿಟಿಐ): ‘ಚುನಾವಣಾ ಆಯೋಗವು ನಡೆಸಿದ್ದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಬಳಿಕ, ಪಟ್ಟಿಯಿಂದ ಮತದಾರರ ಹೆಸರುಗಳನ್ನು ಮನ ಬಂದಂತೆ ತೆಗೆಯಲಾಗಿದೆ’ ಎಂದು ಆರೋಪಿಸಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಶುಕ್ರವಾರದಿಂದ ಧರಣಿ ನಡೆಸಿದರು.

ಇದರಿಂದಾಗಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮತ್ತು ಚುನಾವಣಾ ಆಯೋಗದ (ಇ.ಸಿ) ನಡುವಿನ ಸಂಘರ್ಷ ಮತ್ತಷ್ಟು ತೀವ್ರಗೊಂಡಿದೆ.

ಕೋಲ್ಕತ್ತದ ಎಸ್‌ಪ್ಲೇನೇಡ್ ಮೆಟ್ರೊ ಚಾನೆಲ್‌ನಲ್ಲಿ ಧರಣಿ ಆರಂಭಿಸಿದ ಮಮತಾ ಬ್ಯಾನರ್ಜಿ, ‘ಮತದಾರರ ಹಕ್ಕುಗಳನ್ನು ಕಸಿದುಕೊಳ್ಳಲು ಬಿಜೆಪಿ ಮತ್ತು ಚುನಾವಣಾ ಆಯೋಗ ಪಿತೂರಿ ನಡೆಸುತ್ತಿವೆ. ಇವರ ಮುಖವಾಡ ಕಳಚುತ್ತೇನೆ’ ಎಂದು ಪ್ರತಿಜ್ಞೆ ಮಾಡಿದರು.

‘ಹಲವು ಮತದಾರರು ಮೃತಪಟ್ಟಿರುವುದಾಗಿ ಪರಿಷ್ಕೃತ ಮತದಾರರ ಪಟ್ಟಿಯಲ್ಲಿ ತಪ್ಪಾಗಿ ನಮೂದಿಸಲಾಗಿದೆ. ಆಯೋಗವು ಯಾರನ್ನು ಮೃತಪಟ್ಟಿದ್ದಾರೆ ಎಂದು ಘೋಷಿಸಿದೆಯೋ, ಅಂತಹ ಮತದಾರರನ್ನು ನಾನು ಈ ಪ್ರತಿಭಟನಾ ಸ್ಥಳಕ್ಕೆ ಕರೆತಂದು ಹಾಜರುಪಡಿಸುತ್ತೇನೆ’ ಎಂದು ಹೇಳಿದರು.

ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಕೋಲ್ಕತ್ತದಲ್ಲಿ ಧರಣಿ ನಡೆಸಿದರು —ಪಿಟಿಐ ಚಿತ್ರ

ಫೆಬ್ರುವರಿ 28ರಂದು ಬಿಡುಗಡೆಯಾದ ಅಧಿಕೃತ ಮಾಹಿತಿಯ ಪ್ರಕಾರ, ಕಳೆದ ವರ್ಷ ನವೆಂಬರ್‌ನಲ್ಲಿ ಎಸ್‌ಐಆರ್ ಪ್ರಕ್ರಿಯೆ ಪ್ರಾರಂಭವಾದ ನಂತರ, ಸುಮಾರು 63.66 ಲಕ್ಷ ಹೆಸರುಗಳನ್ನು (ಒಟ್ಟು ಮತದಾರರ ಶೇ 8.3ರಷ್ಟು) ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ. ಇದರಿಂದಾಗಿ ಮತದಾರರ ಸಂಖ್ಯೆಯು ಸುಮಾರು 7.66 ಕೋಟಿಯಿಂದ 7.04 ಕೋಟಿಗೆ ಇಳಿಕೆಯಾಗಿದೆ.

60.06 ಲಕ್ಷಕ್ಕೂ ಹೆಚ್ಚು ಮತದಾರರನ್ನು ‘ವಿಚಾರಣಾ ಹಂತದಲ್ಲಿದೆ’ ಎಂಬ ವರ್ಗದಲ್ಲಿ ಇರಿಸಲಾಗಿದೆ. ಇದರರ್ಥ, ಮುಂಬರುವ ವಾರಗಳಲ್ಲಿ ಅವರ ಅರ್ಹತೆಯನ್ನು ಕಾನೂನು ಪರಿಶೀಲನೆಯ ಮೂಲಕ ನಿರ್ಧರಿಸಲಾಗುತ್ತದೆ.

ಯುದ್ಧ ವಿಮಾನ ಪತನ: ಇಬ್ಬರು ಪೈಲಟ್‌ಗಳ ಸಾವು

ನವದೆಹಲಿ (ಪಿಟಿಐ): ಅಸ್ಸಾಂನ ಕರ್ಬಿ ಆಂಗಲೋಂಗ್ ಜಿಲ್ಲೆಯಲ್ಲಿ ಸುಖೋಯ್–30 ಎಂಕೆಐ ಯುದ್ಧ ವಿಮಾನ ಪತನಗೊಂಡು ಭಾರತೀಯ ವಾಯುಪಡೆಯ (ಐಎಎಫ್) ಇಬ್ಬರು ಪೈಲಟ್‌ಗಳು ಮೃತಪಟ್ಟಿದ್ದಾರೆ.

‘ಸ್ಕ್ವಾಡ್ರನ್ ಲೀಡರ್ ಅನುಜ್ ಮತ್ತು ಫ್ಲೈಟ್ ಲೆಫ್ಟಿನೆಂಟ್ ಪೂರ್ವೇಶ್ ದುರಾಗ್ಕರ್ ಮೃತರು. ತರಬೇತಿ ಕಾರ್ಯಾಚರಣೆಯಲ್ಲಿದ್ದ ಈ ಯುದ್ಧ ವಿಮಾನವು ಜೋರಹಾಟ್ ವಾಯುನೆಲೆಯಿಂದ ಗುರುವಾರ ಸಂಜೆ ಹಾರಾಟ ಆರಂಭಿಸಿದ ಕೆಲವೇ ಸಮಯದಲ್ಲಿ (ಸಂಜೆ 7.42) ರಾಡಾರ್‌ನ ಸಂಪರ್ಕ ಕಳೆದುಕೊಂಡಿತ್ತು’ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಆಪರೇಷನ್ ಸಿಂಧೂರದಲ್ಲಿ ಭಾಗಿ: ‘ಪೂರ್ವೇಶ್ ದುರಾಗ್ಕರ್ ಹತ್ತು ದಿನಗಳ ಹಿಂದಷ್ಟೇ ಮನೆಗೆ ಭೇಟಿ ನೀಡಿದ್ದರು. ಬುಧವಾರವಷ್ಟೇ ದೂರವಾಣಿ ಮೂಲಕ ಮಾತನಾಡಿದ್ದೆವು’ ಎಂದು ಅವರ ತಂದೆ ರವೀಂದ್ರ ದುರಾಗ್ಕರ್ ಸ್ಮರಿಸಿದರು. ‘ಪಹಲ್ಗಾಮ್ ದಾಳಿಗೆ ಪ್ರತಿಯಾಗಿ ಭಾರತ ಸೇನೆ ಕೈಗೊಂಡ ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆಯಲ್ಲಿ ಪೂರ್ವೇಶ್ ಭಾಗಿಯಾಗಿದ್ದರು’ ಎಂದು ತಿಳಿಸಿದರು.

ಗುತ್ತಿಗೆದಾರರಿಗೆ ಡಿಸಿಎಂ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾನು ಹಾಗೂ ಸಚಿವರಾದ ಸತೀಶ ಜಾರಕಿಹೊಳಿ ಅವರು ಸೇರಿ ಈ ಅಧಿವೇಶನದ ವೇಳೆ ಮುಖ್ಯಮಂತ್ರಿಯವರ ಜೊತೆ ಗುತ್ತಿಗೆದಾರರ ಸಭೆ ಮಾಡಿಸುತ್ತೇವೆ. ನಿಮ್ಮ ಸಮಸ್ಯೆ ಬಗೆಹರಿಸಲು ನಾವೆಲ್ಲ ಸೇರಿ ಪರಿಹಾರ ಕಂಡುಕೊಳ್ಳಬೇಕು’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

₹37 ಸಾವಿರ ಕೋಟಿ ಬಾಕಿ ಬಿಲ್ ಬಿಡುಗಡೆಗೆ ಆಗ್ರಹಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ರಾಜ್ಯ ಗುತ್ತಿಗೆದಾರರ ಸಂಘದವರನ್ನು ಶುಕ್ರವಾರ ಭೇಟಿ ಮಾಡಿ, ಅವರು ಈ ಭರವಸೆ ನೀಡಿದರು.

‘ನನ್ನ ಇಲಾಖೆಯಲ್ಲಿ ₹13 ಸಾವಿರ ಕೋಟಿ, ಬೋಸರಾಜು ಅವರ ಇಲಾಖೆಯಲ್ಲಿ ₹3 ಸಾವಿರ ಕೋಟಿ ಸೇರಿದಂತೆ ಸುಮಾರು ₹37 ಸಾವಿರ ಕೋಟಿ ಬಿಲ್ ಬಾಕಿ ಇದೆ. ನಿಮ್ಮ ನೋವು ನಮಗೆ ಗೊತ್ತಿದೆ. ನಾನು ಚುನಾವಣೆಗೂ ಆರು ತಿಂಗಳು ಮುಂಚಿತವಾಗಿ ಹೇಳಿದ್ದೆ. ಇಲಾಖೆಗಳಲ್ಲಿ ಹಣವಿಲ್ಲದೆ ಯಾವುದೇ ಗುತ್ತಿಗೆ ಕಾಮಗಾರಿ ತಗೆದುಕೊಳ್ಳಬೇಡಿ ಎಂದು ಎಚ್ಚರಿಸಿದ್ದೆ. ಯಡಿಯೂರಪ್ಪ ಹಾಗೂ ಬೊಮ್ಮಾಯಿ ಅವರು ಹಣ ಇರಲಿ, ಬಿಡಲಿ, ಕಾಮಗಾರಿ ಕೊಟ್ಟಿದ್ದೇ ಕೊಟ್ಟಿದ್ದು. ನೀವು ಕೆಲಸ ತೆಗೆದುಕೊಂಡು ನಮ್ಮ ಎದೆ ಮೇಲೆ ಕೂತಿದ್ದೀರಿ. ಇದಕ್ಕೆ ಒಂದು ರೂಪ ನೀಡಬೇಕಿದೆ. ಇದಕ್ಕೆ ಸುಮಾರು ₹50 ಸಾವಿರ ಕೋಟಿಯಷ್ಟು ಬಾಂಡ್ ಅಥವಾ ಇತರೆ ಮಾರ್ಗ ಹುಡುಕಬೇಕು. ಆಗ ಮಾತ್ರ ಈ ಸಮಸ್ಯೆ ಬಗೆಹರಿಯಲಿದೆ’ ಎಂದರು.

ರಾಜ್ಯ ಗುತ್ತಿಗೆದಾರರ ಸಂಘದವರು ಡಿ.ಕೆ. ಶಿವಕುಮಾರ್ ಹಾಗೂ ಸತೀಶ ಜಾರಕಿಹೊಳಿ ಅವರಿಗೆ ಮನವಿ ಸಲ್ಲಿಸಿದರು. ಎನ್‌.ಎಸ್‌. ಬೋಸರಾಜು, ಸಂಘದ ಅಧ್ಯಕ್ಷ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ನಂದಕುಮಾರ್ ಉಪಸ್ಥಿತರಿದ್ದರು

‘ಬೆಂಗಳೂರು ಅಭಿವೃದ್ಧಿಗೆ ಬಿಜೆಪಿಯವರು ಹಣ ಕೊಟ್ಟಿಲ್ಲ. ಅವರು ಮಾಡಲಿ ಬಿಡಲಿ, ನಮ್ಮ ಕರ್ತವ್ಯ ನಾವು ಮಾಡಬೇಕು. ನೀವು ನಮ್ಮನ್ನು ಬಿಡಂಗಿಲ್ಲ, ನಾವು ನಿಮ್ಮನ್ನು ಬಿಡಂಗಿಲ್ಲ. ಮಾಧ್ಯಮಗಳ ಮುಂದೆ ಹೇಳಿಕೆ ನೀಡುವುದನ್ನು ಬಿಡಿ. ನೀವು ನಮ್ಮ ಬಳಿ ಬಂದು ಚರ್ಚೆ ಮಾಡಿ, ಯಾವ ರೀತಿ ಹಣ ಹೊಂದಿಸಿ ಸಮಸ್ಯೆ ಬಗೆಹರಿಸಬೇಕು ನೋಡೋಣ. ನಿಮ್ಮ ಜತೆ ನಾವಿದ್ದೇವೆ ಎಂದು ಹೇಳಲು ನಾನು, ಸತೀಶ ಜಾರಕಿಹೊಳಿ ಹಾಗೂ ಬೋಸರಾಜು ಅವರು ಬಂದಿದ್ದೇವೆ’ ಎಂದು ತಿಳಿಸಿದರು.

ಪರಿಷತ್‌ಗೆ ಗುತ್ತಿಗೆದಾರರಿಗೆ ಪ್ರಾತಿನಿಧ್ಯ: ‘ಗುತ್ತಿಗೆದಾರರು ತಮ್ಮ ಬದುಕಿಗೆ ಮಾತ್ರವಲ್ಲ ರಾಜ್ಯದ ಬದುಕಿಗೆ ಸಹಾಯ ಮಾಡುತ್ತಿದ್ದೀರಿ. ನಮ್ಮ ಸರ್ಕಾರ ತಂದಿದ್ದೀರಿ ಎಂಬ ಅರಿವು ನಮಗಿದೆ. ನಿಮಗೆ ಹಣ ಪಾವತಿ ಮಾಡಬಾರದು ಎಂಬುದು ನಮ್ಮ ಉದ್ದೇಶವಲ್ಲ. ನಿಮ್ಮ ಅಧ್ಯಕ್ಷರಾದ ಆರ್. ಮಂಜುನಾಥ್ ಅವರ ನ್ಯಾಯ ನಾನು ನೋಡುತ್ತಲೇ ಇದ್ದೇನೆ. ಅವರಿಗೆ ವಿಧಾನಸಭೆ ಅಥವಾ ವಿಧಾನ ಪರಿಷತ್ತಿನಲ್ಲಿ ಒಂದು ಜಾಗ ಕೊಡಿಸಬೇಕು. ಪರಿಷತ್ತಿನಲ್ಲಿ ಶಿಕ್ಷಕರ ಕ್ಷೇತ್ರ, ಪದವೀಧರ ಕ್ಷೇತ್ರ, ಸಿನಿಮಾ, ಕಲೆ ಸೇರಿದಂತೆ ಇತರೆ ವಲಯದವರಿಗೆ ಒಂದು ಪ್ರಾತಿನಿಧ್ಯ ನೀಡಿದಂತೆ ಗುತ್ತಿಗೆದಾರರಿಗೆ ಒಂದು ಜಾಗ ಕೊಡಿಸಬೇಕಿದೆ. ಆಗ ನಿಮ್ಮ ಸಮಸ್ಯೆ ಬಗೆಹರಿಯಬಹುದು. ಇದಕ್ಕೆ ಒಂದು ದಾರಿ ಹುಡುಕಬೇಕಿದೆ’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ತಕ್ಷಣ ಬೇಕಾಗಿದ್ದಾರೆ ಕಂಪನಿಗಳಿಗೆ ಮನೆಯಿಂದಲೇ ಕೆಲಸ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ, ವಯಸ್ಕರಿಗೆ ಮೊದಲ ಆದ್ಯತೆ 19,000-25,000 ಸಂಪಾದಿಸಿ ಕೋರಿಯರ್ ಸೌಲಭ್ಯವಿದೆ. 9964322833.

ಪ್ರವಾಸ

Travel

23-3-2026 ಆಗ್ರಾ, ದೆಹಲಿ, ಅಮೃತ್ ಸರ್, ವೈಷ್ಣೋದೇವಿ, ಹರಿದ್ವಾರ, 13-4-2026 ಅಯೋಧ್ಯೆ, ಪ್ರಯಾಗ್‌ರಾಜ್, ಕಾಶಿ, ಗಯಾ, ಬೈದ್ಯನಾಥ್, 17-4-2026 ಭುವನೇಶ್ವರ್, ಕೊಲ್ಕಾತ್ತ, 26-4-2026, 10-5-2026 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್. ಕರ್ನಾಟಕ ಹೆರಿಟೇಜ್ ಟೂರ್ಸ್(ಹನುಮಂತನಗರ) 9845035349, 9482435755

ಶ್ರೀ ಮಹದೇಶ್ವರ ಟೂರ್ಸ್ & ಟ್ರಾವೆಲ್ಸ್ 14 ದಿನಗಳ ಚಾರ್ಧಮ್ ಯಾತ್ರೆ, 10 ದಿನಗಳ ಅಮರನಾಥ ಯಾತ್ರೆ, 10 ದಿನಗಳ ಕಾಶಿ ಯಾತ್ರೆ, 12 ದಿನಗಳ ನೇಪಾಳ ಪ್ರವಾಸ ಸಂಪರ್ಕಿಸಿ: 9611801143/ 8088559962

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕಲ್ಲೂರಾಯ, ದಾಸ್‌ಗೆ ‘ಗೌರವ ಪ್ರಶಸ್ತಿ’

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು 2025–26ನೇ ಸಾಲಿನ ‘ಕರ್ನಾಟಕ ಕಲಾಶ್ರೀ’ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ‘ಗೌರವ ಪ್ರಶಸ್ತಿ’ಗೆ ಗಮಕಿ ಮಧೂರು ಮೋಹನ ಕಲ್ಲೂರಾಯ (ದಕ್ಷಿಣ ಕನ್ನಡ) ಹಾಗೂ ಕಥಾ ಕೀರ್ತನ ಕಲಾವಿದ ಲೋಕೇಶ್ ದಾಸ್ (ಹಾಸನ) ಆಯ್ಕೆಯಾಗಿದ್ದಾರೆ.

ಅಕಾಡೆಮಿ ಅಧ್ಯಕ್ಷೆ ಶುಭಾ ಧನಂಜಯ್ ಹಾಗೂ ರಿಜಿಸ್ಟ್ರಾರ್ ಎನ್. ನರೇಂದ್ರಬಾಬು ಅವರು ಪ್ರಶಸ್ತಿ ಪುರಸ್ಕೃತರ ಪಟ್ಟಿಯನ್ನು ಶುಕ್ರವಾರ ಬಿಡುಗಡೆ ಮಾಡಿದ್ದಾರೆ. ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ನೃತ್ಯ ಸೇರಿದಂತೆ ವಿವಿಧ ವಿಭಾಗಗಳಿಂದ 15 ಕಲಾವಿದರು ಹಾಗೂ ಒಂದು ಸಂಸ್ಥೆಯನ್ನು ವಾರ್ಷಿಕ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಗೌರವ ಪ್ರಶಸ್ತಿಯು ತಲಾ ₹50 ಸಾವಿರ ಹಾಗೂ ವಾರ್ಷಿಕ ಪ್ರಶಸ್ತಿ ತಲಾ ₹25 ಸಾವಿರ ನಗದು ಬಹುಮಾನ ಹೊಂದಿದೆ.

ವಾರ್ಷಿಕ ಪ್ರಶಸ್ತಿ: ಕರ್ನಾಟಕ ಸಂಗೀತ ವಿಭಾಗದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಂ. ವೆಂಕಟರಾಯ್ (ಡೋಲ್), ಕೋಲಾರದ ಎ.ವಿ.ವಿಶ್ವನಾಥ (ಹಾರ್ಮೋನಿಯಂ), ಮೈಸೂರಿನ ಹಂಸಿನಿ ನಾಗೇಂದ್ರ (ಗಾಯನ), ದಕ್ಷಿಣ ಕನ್ನಡದ ನಾಗೇಶ್ ಎ. ಬಪ್ಪನಾಡು (ನಾದಸ್ವರ), ಹಿಂದೂಸ್ತಾನಿ ಸಂಗೀತ ವಿಭಾಗದಲ್ಲಿ ಧಾರವಾಡದ ಮೃತ್ಯುಂಜಯ ಶೆಟ್ಟರ್ (ಗಾಯನ), ಬಾಗಲಕೋಟೆಯ ರವೀಂದ್ರ ಸೊರಗಾವಿ (ಗಾಯನ), ಗದಗದ ಪಂಚಾಕ್ಷರಿ ಅಣ್ಣಿಗೇರಿ (ಹಾರ್ಮೋನೀಯಂ) ಹಾಗೂ ಬೀದರ್‌ನ ವಿಠ್ಠಲ್ ಸಿದ್ದಪ್ಪ ಪೂಜಾರಿ (ತಬಲಾ) ಅವರು ವಾರ್ಷಿಕ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ನೃತ್ಯ ವಿಭಾಗದಲ್ಲಿ ಬಳ್ಳಾರಿಯ ಜಿಲಾನಿ ಭಾಷಾ (ಕೂಚಿಪುಡಿ), ಚಿತ್ರದುರ್ಗದ ಶಿವಪ್ರಕಾಶ (ಭರತನಾಟ್ಯ), ಧಾರವಾಡದ ನಾಗರತ್ನ ಹಡಗಲಿ (ಭರತನಾಟ್ಯ), ಸುಗಮ ಸಂಗೀತ ವಿಭಾಗದಲ್ಲಿ ಕೋಲಾರದ ಶ್ರೀಧರ್ ಅಯ್ಯರ್, ಕಥಾಕೀರ್ತನ ವಿಭಾಗದಲ್ಲಿ ಬೆಂಗಳೂರಿನ ಪಿ. ರಾಮಯ್ಯ (ತಬಲಾ), ಗಮಕ ವಿಭಾಗದಲ್ಲಿ ಧಾರವಾಡದ ವಿಶ್ವನಾಥ ಕುಲಕರ್ಣಿ (ವಾಚನ), ವಾದ್ಯ ತಯಾರಿಕೆಯಲ್ಲಿ ಬೆಂಗಳೂರಿನ ಕೃಷ್ಣಮೂರ್ತಿ ಅವರನ್ನು ಹಾಗೂ ಸಂಘ ಸಂಸ್ಥೆ ವಿಭಾಗದಲ್ಲಿ ಕೊಪ್ಪಳದ ಗಂಗಾವತಿಯ ಕೊಟ್ಟೂರೇಶ್ವರ ಸಂಗೀತ ವಿದ್ಯಾಲಯವನ್ನು ಆಯ್ಕೆ ಮಾಡಲಾಗಿದೆ.

‘ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗುವುದು’ ಎಂದು ಅಕಾಡೆಮಿ ಅಧ್ಯಕ್ಷೆ ಶುಭಾ ಧನಂಜಯ್ ತಿಳಿಸಿದ್ದಾರೆ.

137 ಕ್ಷೇತ್ರಗಳ ಪೈಕಿ 100ರಲ್ಲಿ ಆರ್‌ಎಸ್‌ಪಿ ಮುನ್ನಡೆ

ನೇಪಾಳ: ಬಾಲೇಂದ್ರ ಶಾ ಪಕ್ಷಕ್ಕೆ ಮುನ್ನಡೆ

ಕಾಠ್ಮಂಡು (ಪಿಟಿಐ): ನೇಪಾಳದಲ್ಲಿ ಮತ ಎಣಿಕೆ ಕಾರ್ಯ ಪ್ರಗತಿಯಲ್ಲಿದ್ದು, ರ್‍ಯಾಪರ್ ವೃತ್ತಿ ತೊರೆದು ಮೂರು ವರ್ಷಗಳ ಹಿಂದೆಯಷ್ಟೇ ರಾಜಕಾರಣಕ್ಕೆ ಧುಮುಕಿದ್ದ ಬಾಲೇಂದ್ರ ಶಾ ಅವರ ಪಕ್ಷವು ಅಭೂತಪೂರ್ವ ಗೆಲುವಿನತ್ತ ಮುನ್ನಡೆದಿದೆ.

ದೇಶದಲ್ಲಿ ಗುರುವಾರ ಮತದಾನ ನಡೆದಿತ್ತು. ಸಾಮಾಜಿಕ ಜಾಲತಾಣಗಳ ಮೇಲಿನ ನಿರ್ಬಂಧವನ್ನು ವಿರೋಧಿಸಿ ಕಳೆದ ಸೆಪ್ಟೆಂಬರ್‌ನಲ್ಲಿ ನಡೆದಿದ್ದ ಜೆನ್–ಝೀ ಸಮೂಹದ ತೀವ್ರ ಪ್ರತಿಭಟನೆ ಬಳಿಕ ನೇಪಾಳದಲ್ಲಿ ನಡೆದ ಮೊದಲ ಚುನಾವಣೆ ಇದು.

‘ಗುರುವಾರ ರಾತ್ರಿಯಿಂದಲೇ ಮತ ಎಣಿಕೆ ಆರಂಭವಾಗಿದ್ದು, ಶುಕ್ರವಾರ ರಾತ್ರಿ ಒಳಗೆ ಎಣಿಕೆ ಕಾರ್ಯ ಪೂರ್ಣಗೊಳ್ಳಲಿದೆ’ ಎಂದು ಚುನಾವಣಾ ಆಯೋಗ ಹೇಳಿದೆ.

ನೇಪಾಳದ ಒಟ್ಟು 275 ಕ್ಷೇತ್ರಗಳ ಪೈಕಿ 165 ಕ್ಷೇತ್ರಗಳಿಗೆ ಮತದಾನ ನಡೆದಿದೆ. ಈ 165 ಕ್ಷೇತ್ರಗಳ ಪೈಕಿ ವಿವಿಧ ಪಕ್ಷಗಳು ಗೆದ್ದ ಕ್ಷೇತ್ರಗಳ ಪ್ರಮಾಣಕ್ಕೆ ಅನುಗುಣವಾಗಿ ಉಳಿದ 110 ಕ್ಷೇತ್ರಗಳನ್ನು ಆಯಾ ಪಕ್ಷಗಳಿಗೆ ಹಂಚಿಕೆ ಮಾಡಲಾಗುತ್ತದೆ.

ಬಾಲೇಂದ್ರ ಶಾ (ಬಲದಿಂದ ಮೊದಲಿನವರು) ಅವರು ಸರತಿಯಲ್ಲಿ ನಿಂತು ಮತದಾನ ಮಾಡಿದರು —ಎಎಫ್‌ಪಿ ಚಿತ್ರ

35 ವರ್ಷದ ಶಾ ಅವರು ಈ ಹಿಂದೆ ರ್‍ಯಾಪರ್ ಆಗಿದ್ದರು. 2022ರಲ್ಲಿ ಇವರು ರಾಷ್ಟ್ರೀಯ ಸ್ವತಂತ್ರ ಪಕ್ಷ (ಆರ್‌ಎಸ್‌ಪಿ) ಸ್ಥಾಪಿಸಿದ್ದರು. ಇವರು ಕಾಠ್ಮಂಡುವಿನ ಮೇಯರ್ ಕೂಡ ಆಗಿದ್ದರು. ‘ಈ ಬಾರಿಯ ಚುನಾವಣೆಯಲ್ಲಿ ಯುವ ಮತದಾರರನ್ನು ಸೆಳೆಯುವಲ್ಲಿ ಶಾ ಅವರು ಮೇಲುಗೈ ಸಾಧಿಸಿದ್ದಾರೆ’ ಎಂದು ವಿಶ್ಲೇಷಿಸಲಾಗುತ್ತಿದೆ. ಮತ ಎಣಿಕೆ ಆರಂಭವಾಗಿರುವ 137 ಕ್ಷೇತ್ರಗಳ ಪೈಕಿ 100ರಲ್ಲಿ ಆರ್‌ಎಸ್‌ಪಿ ಮುನ್ನಡೆ ಸಾಧಿಸಿದೆ. ಈ ಪಕ್ಷವು ಬಹುಮತ ಪಡೆದುಕೊಂಡರೆ, ಶಾ ಅವರೇ ಪ್ರಧಾನಿಯಾಗಲಿದ್ದಾರೆ.

ನಾಲ್ಕು ಬಾರಿ ಪ್ರಧಾನಿಯಾಗಿದ್ದ ಸಿಪಿಎನ್ (ಯುಎಂಎಲ್) ಪಕ್ಷದ ಮುಖ್ಯಸ್ಥ ಕೆ.ಪಿ. ಶರ್ಮಾ ಒಲಿ ಅವರ ವಿರುದ್ಧ ಸ್ಪರ್ಧಿಸಿರುವ ಬಾಲೇಂದ್ರ ಶಾ ಅವರು ಮುನ್ನಡೆ ಸಾಧಿಸಿದ್ದಾರೆ. ಒಲಿ ಅವರಿಗಿಂತ ನಾಲ್ಕು ಪಟ್ಟು ಅಧಿಕ ಮತಗಳನ್ನು ಗಳಿಸಿದ್ದಾರೆ.

2ನೇ ಹಂತದ ಕಾರ್ಯಾಚರಣೆ: ಇಸ್ರೇಲ್

ಪಶ್ಚಿಮ ಏಷ್ಯಾ ಸಂಘರ್ಷ; ಇರಾನ್ ಅನ್ನು ವೆನೆಜುವೆಲಾಕ್ಕೆ ಹೋಲಿಸಿದ ಟ್ರಂಪ್

ವಿವಿಧೆಡೆ ಈವರೆಗೆ ಮೃತಪಟ್ಟವರ ಸಂಖ್ಯೆ

ಇರಾನ್	ಲೆಬನಾನ್	ಇಸ್ರೇಲ್	ಅಮೆರಿಕದ ಸೈನಿಕರು	ಗಲ್ಫ್ ದೇಶಗಳು
1,230	217	12	6	13

ಟೆಹರಾನ್ (ಎಎಫ್‌ಪಿ): ಪಶ್ಚಿಮ ಏಷ್ಯಾ ಯುದ್ಧವು ಶುಕ್ರವಾರ 7ನೇ ದಿನ ಪೂರೈಸಿದ್ದು, 'ಎರಡನೆಯ ಹಂತ'ದ ಕಾರ್ಯಾಚರಣೆ ಆರಂಭಿಸಿದ್ದೇವೆ' ಎಂದು ಇಸ್ರೇಲ್ ಹೇಳಿದೆ.

ಅಮೆರಿಕ ಮತ್ತು ಇಸ್ರೇಲ್ ಸೇನೆಗಳು ಟೆಹರಾನ್ ಸೇರಿದಂತೆ ಇರಾನ್‌ನ ಹಲವು ನಗರಗಳ ಮೇಲೆ ವೈಮಾನಿಕ ದಾಳಿ ನಡೆಸಿವೆ. ಇರಾನ್‌ನ ಡ್ರೋನ್ ವಾಹಕ ನೌಕೆ 'ಶಾಹಿದ್ ಬಘೇರಿ'ಯನ್ನು ನಾಶಪಡಿಸಿರುವುದಾಗಿ ಅಮೆರಿಕ ತಿಳಿಸಿದೆ.

ಇರಾನ್ ಸೇನೆ ತನ್ನ ಕ್ಷಿಪಣಿಗಳನ್ನು ಇರಿಸಿರುವ ಕೆರ್ಮನ್‌ಶಾ ನಗರದಲ್ಲಿ ಭಾರಿ ಸ್ಫೋಟದ ಸದ್ದು ಕೇಳಿಬಂದಿದೆ. ಇರಾನ್‌ನ ವಾಯು ರಕ್ಷಣಾ ವ್ಯವಸ್ಥೆ ಮತ್ತು ಕ್ಷಿಪಣಿ ಲಾಂಚರ್‌ಗಳನ್ನು ಬಹುತೇಕ ನಾಶಪಡಿಸಲಾಗಿದೆ ಎಂದು ಇಸ್ರೇಲ್ ಸೇನೆ ಹೇಳಿದೆ.

ಮತ್ತೊಂದೆಡೆ, ಇರಾನ್ ಕೂಡಾ ಕೊಲ್ಲಿ ರಾಷ್ಟ್ರಗಳ ಮೇಲಿನ ದಾಳಿಯನ್ನು ಮುಂದುವರಿಸಿದೆ.

ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ಸ್ ಕೋರ್ (ಐಆರ್‌ಜಿಸಿ) ಸಿಬ್ಬಂದಿ ಮಷಿನ್ ಗನ್‌ಗಳನ್ನು ಹಿಡಿದು ಟೆಹರಾನ್‌ನ ಬೀದಿಗಳನ್ನು ಸುತ್ತುತ್ತಿದ್ದಾರೆ. ಅವರ ಕಣ್ಣುಗಳಲ್ಲಿ ಅಮೆರಿಕನ್ನರಿಗಿಂತ ದೇಶದ ನಿವಾಸಿಗಳೇ ಶತ್ರುಗಳಾಗಿದ್ದಾರೆ. ಉಗ್ರಗಾಮಿ ಮುಖಂಡರ ಸೂಚನೆಯಂತೆ ತನ್ನದೇ ದೇಶದ ಜನರ ವಿರುದ್ಧ ಅವರು ದಾಳಿ ನಡೆಸುತ್ತಿದ್ದಾರೆ' ಎಂದು ಪ್ಯಾರಿಸ್‌ನಲ್ಲಿ ನೆಲೆಸಿರುವ ಟೆಹರಾನ್ ನಿವಾಸಿಯೊಬ್ಬರು ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

ತೈಲ, ಸಾರಿಗೆ, ಪ್ರವಾಸೋದ್ಯಮಕ್ಕೆ ಪೆಟ್ಟು: ಪಶ್ಚಿಮ ಏಷ್ಯಾದೊಳಗಿನ ಮತ್ತು ಹೊರಗಿನ 14 ದೇಶಗಳಿಗೆ ಯುದ್ಧ ವ್ಯಾಪಿಸಿದೆ. ಸಂಘರ್ಷದ ಪರಿಣಾಮವಾಗಿ ಅಂತರರಾಷ್ಟ್ರೀಯ ತೈಲ ಮಾರುಕಟ್ಟೆ ಮತ್ತು ವಿಮಾನ ಯಾನ ಕ್ಷೇತ್ರದ ಮೇಲೆ ನೇರ ಪರಿಣಾಮ ಬೀರಿದೆ.

ಪ್ರವಾಸಿಗರ ಪಾಲಿಗೆ ಸುರಕ್ಷಿತ, ಐಷಾರಾಮಿ ತಾಣಗಳು ಎಂದೇ ಹೆಸರಾಗಿರುವ ಕೊಲ್ಲಿಯ ಶ್ರೀಮಂತ ರಾಷ್ಟ್ರಗಳಿಗೂ ಯುದ್ಧದ ಬಿಸಿ ತಟ್ಟಿದೆ.

> **ಸದ್ಯ ಇರಾನ್‌ಗೆ ಅಮೆರಿಕದ ಪಡೆಗಳನ್ನು ಕಳುಹಿಸುವುದು ಸಮಯ ವ್ಯರ್ಥ ಮಾಡಿದಂತೆ. ಆದರೆ, ಇರಾನ್‌ನ ಹೊಸ ನಾಯಕನ ಆಯ್ಕೆಯಲ್ಲಿ ನನ್ನ ಪಾತ್ರ ಇರುತ್ತದೆ**
> **ಡೊನಾಲ್ಡ್ ಟ್ರಂಪ್,** ಅಮೆರಿಕದ ಅಧ್ಯಕ್ಷ

> **ಕೆಲವು ದೇಶಗಳು ಪಶ್ಚಿಮ ಏಷ್ಯಾ ಯುದ್ಧ ಕೊನೆಗೊಳಿಸಲು ಮಧ್ಯಸ್ಥಿಕೆ ಪ್ರಯತ್ನ ನಡೆಸುತ್ತಿವೆ. ಆದರೆ, ಯಾವುದೇ ಮಾತುಕತೆಯು ಯುದ್ಧ ಆರಂಭಿಸಿದವರನ್ನು ಉದ್ದೇಶಿಸಿ ಇರಬೇಕು**
> **ಮಸೂದ್ ಪೆಜೆಶ್ಕಿಯಾನ್,** ಇರಾನ್ ಅಧ್ಯಕ್ಷ

> **ಎರಡನೇ ಹಂತದ ಕಾರ್ಯಾಚರಣೆ ಆರಂಭಿಸಿದ್ದೇವೆ. ಶೀಘ್ರ ಇನ್ನಷ್ಟು ಅಚ್ಚರಿಗಳು ಕಾದಿವೆ. ಇರಾನ್ ಆಡಳಿತದ ಅಡಿಪಾಯವನ್ನೇ ಹೊಡೆದುರುಳಿಸುತ್ತೇವೆ**
> **ಲೆ. ಜನರಲ್ ಇಯಾಲ್ ಜಮೀರ್,** ಇಸ್ರೇಲ್ ಸೇನಾ ಮುಖ್ಯಸ್ಥ

ಶುಕ್ರವಾರ ಬೆಳಿಗ್ಗೆ ತನ್ನ ವಾಯುನೆಲೆಯ ಮೇಲೆ ನಡೆದ ದಾಳಿಯನ್ನು ಕತಾರ್ ತಡೆದಿದೆ. ಸೌದಿ ಅರೇಬಿಯಾವು ಇರಾನ್‌ನ ಮೂರು ಕ್ಷಿಪಣಿಗಳನ್ನು ರಿಯಾದ್‌ನಲ್ಲಿ ಹೊಡೆದುರುಳಿಸಿದೆ.

ಯುದ್ಧ ಪ್ರಾರಂಭವಾದಾಗಿನಿಂದ ಇದುವರೆಗೆ ಕೊಲ್ಲಿ ವಲಯದಲ್ಲಿ ಒಟ್ಟು 13 ಜನರು ಮೃತಪಟ್ಟಿದ್ದಾರೆ. ಇವರಲ್ಲಿ ಕುವೈತ್‌ನ 11 ವರ್ಷದ ಬಾಲಕಿಯೂ ಸೇರಿದ್ದಾಳೆ.

ಇಸ್ರೇಲ್–ಅಮೆರಿಕ ಸೇನೆ ಶುಕ್ರವಾರ ನಡೆಸಿದ ದಾಳಿಯಿಂದಾಗಿ ಇರಾನ್ ರಾಜಧಾನಿ ಟೆಹರಾನ್‌ನಲ್ಲಿ ದಟ್ಟ ಹೊಗೆ ಆವರಿಸಿತ್ತು —ಎಎಫ್‌ಪಿ ಚಿತ್ರ

ಇರಾನ್ ನಾಯಕನನ್ನು ಅಮೆರಿಕ ಆಯ್ಕೆ ಮಾಡಲಿದೆ: ಟ್ರಂಪ್

ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಅವರ ಉತ್ತರಾಧಿಕಾರಿಯಾಗಿ ಅವರ ಪುತ್ರ ಮೊಜ್ತಾಬಾ ಖಮೇನಿ (57) ಆಯ್ಕೆಯನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಳ್ಳಿಹಾಕಿದ್ದಾರೆ.

'ಜನರಿಂದ ಚುನಾಯಿತರಾಗದ ಅಥವಾ ಸರ್ಕಾರದ ಯಾವುದೇ ಹುದ್ದೆಯಲ್ಲಿ ಇಲ್ಲದ ಮೊಜ್ತಾಬಾ, ಇರಾನ್‌ನ ಪರಮೋಚ್ಚ ನಾಯಕ ಆಗಲು ಸೂಕ್ತ ವ್ಯಕ್ತಿ ಅಲ್ಲ' ಎಂದು ಟ್ರಂಪ್ ಹೇಳಿದ್ದಾರೆ.

'ಇರಾನ್‌ನಲ್ಲಿ ಶಾಂತಿ ಮತ್ತು ಸಾಮರಸ್ಯ ತರುವ ವ್ಯಕ್ತಿ ಬೇಕಾಗಿದ್ದಾರೆ. ಅಂತವರನ್ನು ಅಮೆರಿಕ ಆಯ್ಕೆ ಮಾಡಲಿದೆ. ವೆನೆಜುವೆಲಾದ ಅಧ್ಯಕ್ಷ ನಿಕೊಲಸ್ ಮಡೂರೊ ಅವರನ್ನು ವಶಕ್ಕೆ ಪಡೆದ ನಂತರ, ಅಲ್ಲಿನ ಹಂಗಾಮಿ ಅಧ್ಯಕ್ಷರಾಗಿ ಡೆಲ್ಸಿ ರಾಡ್ರಿಗಸ್ ಅವರನ್ನು ನೇಮಿಸಿದಂತೆ, ಇರಾನ್ ನಾಯಕನ ಆಯ್ಕೆಯಲ್ಲೂ ನನ್ನ ಪಾತ್ರ ಇರುತ್ತದೆ' ಎಂದು ಟ್ರಂಪ್ ಹೇಳಿದ್ದಾರೆ.

'ಶಾಲೆ ಮೇಲಿನ ದಾಳಿಗೆ ಅಮೆರಿಕ ಹೊಣೆ'

ವಾಷಿಂಗ್ಟನ್ (ಎಎಫ್‌ಪಿ): ದಕ್ಷಿಣ ಇರಾನ್‌ನ ಪ್ರಾಥಮಿಕ ಶಾಲೆಯ ಮೇಲೆ ವೈಮಾನಿಕ ದಾಳಿ ನಡೆಸಿದ್ದು ಅಮೆರಿಕ ಎಂದು ನ್ಯೂಯಾರ್ಕ್ ಟೈಮ್ಸ್‌ನ ತನಿಖಾ ವರದಿ ಹೇಳಿದೆ.

ಇರಾನ್‌ನ ಮಿನಾಬ್ ಪಟ್ಟಣದಲ್ಲಿರುವ ಶಾಲೆಯ ಮೇಲೆ ಫೆ.28ರಂದು ಅಮೆರಿಕ ನಡೆಸಿದ ವೈಮಾನಿಕ ದಾಳಿಯಲ್ಲಿ ಮಕ್ಕಳು ಸೇರಿ 150ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದರು.

ಇಸ್ರೇಲ್ ಆಗಲಿ ಅಮೆರಿಕವಾಗಲಿ ಇದುವರೆಗೆ ಈ ದಾಳಿಯ ಹೊಣೆ ಹೊತ್ತುಕೊಂಡಿಲ್ಲ. 'ಶಾಲೆಯ ಮೇಲಿನ ದಾಳಿಗೆ ಸಂಬಂಧಿಸಿದಂತೆ ತನಿಖೆ ನಡೆಯುತ್ತಿದೆ' ಎಂದಷ್ಟೇ ಅಮೆರಿಕದ ರಕ್ಷಣಾ ಇಲಾಖೆ ಹೇಳಿದೆ.

ರಷ್ಯಾ ತೈಲ ಖರೀದಿಗೆ ಅಮೆರಿಕದಿಂದ 30 ದಿನಗಳ ವಿನಾಯಿತಿ

ರಾಜಿ ಮಾಡಿಕೊಂಡಿರುವ ಮೋದಿ: ಕಾಂಗ್ರೆಸ್ ವಾಗ್ದಾಳಿ

ನವದೆಹಲಿ (ಪಿಟಿಐ): ಭಾರತದ ರಿಫೈನರಿಗಳು ರಷ್ಯಾದಿಂದ ತೈಲ ಖರೀದಿಸುವುದಕ್ಕೆ ಅನುಕೂಲ ಕಲ್ಪಿಸುವುದಕ್ಕಾಗಿ ತಾನು ವಿಧಿಸಿರುವ ನಿರ್ಬಂಧದಲ್ಲಿ 30 ದಿನಗಳಷ್ಟು ವಿನಾಯಿತಿ ನೀಡಿರುವ ಅಮೆರಿಕದ ಕ್ರಮ ಮುಂದಿಟ್ಟು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕಾಂಗ್ರೆಸ್ ಶುಕ್ರವಾರ ವಾಗ್ದಾಳಿ ನಡೆಸಿದೆ.

'ರಾಜಿ ಮಾಡಿಕೊಂಡಿರುವ ಒಬ್ಬ ವ್ಯಕ್ತಿಯನ್ನು (ಪ್ರಧಾನಿ ಮೋದಿ) ತನ್ನ ಲಾಭಕ್ಕಾಗಿ ಅಮೆರಿಕ ಬಳಸಿಕೊಳ್ಳುತ್ತಿದೆ. ಭಾರತದ ಸದ್ಯದ ವಿದೇಶಾಂಗ ನೀತಿಯು ಇಂಥ ನಡೆಗಳ ಫಲಿತವಾಗಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟೀಕಿಸಿದ್ದಾರೆ.

ಭಾರತದ ವಿದೇಶಾಂಗ ನೀತಿಯನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೂಡ ಟೀಕಿಸಿದ್ದು, 'ಕೇಂದ್ರ ಸರ್ಕಾರ ಮೇಲಿಂದ ಮೇಲೆ ದೇಶದ ರಾಜತಾಂತ್ರಿಕ ಅವಕಾಶವನ್ನು ಬೇರೆಯವರಿಗೆ ಒಪ್ಪಿಸುತ್ತಿದೆ' ಎಂದಿದ್ದಾರೆ.

'ದೇಶದ ಇಂಧನ ಸುರಕ್ಷತೆ ವಿಚಾರದಲ್ಲಿ ಕೇಂದ್ರವು ರಾಜಿ ಮಾಡಿಕೊಂಡಿದೆ' ಎಂಬುದಾಗಿ ಬಜೆಟ್ ಅಧಿವೇಶನ ವೇಳೆ ಲೋಕಸಭೆಯಲ್ಲಿ ಫೆ.11ರಂದು ತಾವು ಮಾಡಿದ್ದ ಭಾಷಣವನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿರುವ ರಾಹುಲ್, 'ಭಾರತ ಯಾರಿಂದ ತೈಲ ಖರೀದಿ ಮಾಡಬೇಕು, ಯಾರಿಂದ ಖರೀದಿ ಮಾಡಬಾರದು ಎಂಬುದನ್ನು ಅಮೆರಿಕ ನಿರ್ಧರಿಸುತ್ತಿದೆ. ಈ ಕುರಿತು ನಮ್ಮ ಪ್ರಧಾನಿ ನಿರ್ಧಾರ ಕೈಗೊಳ್ಳುವುದಿಲ್ಲ' ಎಂದು ಟೀಕಿಸಿದ್ದಾರೆ.

'ತೈಲ ರಾಜತಾಂತ್ರಿಕೆ'ಯ ಯಶಸ್ಸು'

ಅಮೆರಿಕ ನಿರ್ಬಂಧ ಸಡಿಲಿಸಿರುವ ಕ್ರಮವು ಪ್ರಧಾನಿ ನರೇಂದ್ರ ಮೋದಿ ಅವರ 'ರಕ್ಷಣಾತ್ಮಕ ತೈಲ ರಾಜತಾಂತ್ರಿಕತೆ'ಗೆ ದೊರೆತ ಯಶಸ್ಸು ಎಂದು ಬಿಜೆಪಿ ಶುಕ್ರವಾರ ಹೇಳಿದೆ.

'ದೇಶದಲ್ಲಿ ತೈಲದ ಕೊರತೆ ಇದೆ ಎಂಬುದಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸುಳ್ಳು ಸುದ್ದಿ ಹಬ್ಬಿಸಿ, ಜನರಲ್ಲಿ ಆತಂಕ ಸೃಷ್ಟಿಸುತ್ತಿದ್ದಾರೆ. ರಷ್ಯಾದಿಂದ ತೈಲ ಖರೀದಿಸುವ ವಿಚಾರದಲ್ಲಿ ಪ್ರಧಾನಿ ಮೋದಿ ಅವರ ರಾಜತಾಂತ್ರಿಕತೆಗೆ ಸಿಕ್ಕ ಯಶಸ್ಸು ಸಿಕ್ಕಿದೆ. ಈ ಕಾರಣಕ್ಕೆ, 'ಭಾರತ ವಿರೋಧಿ ಧೋರಣೆ' ಅನುಸರಿಸುತ್ತಿರುವ ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ಮುಖಭಂಗವಾಗಿದೆ' ಎಂದು ಬಿಜೆಪಿಯ ರಾಷ್ಟ್ರೀಯ ವಕ್ತಾರ ಪ್ರದೀಪ್ ಭಂಡಾರಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಪಶ್ಚಿಮ ಏಷ್ಯಾ ಸಂಘರ್ಷದ ನಡುವೆಯೂ ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ಭಾರತ ಎಚ್ಚರಿಕೆಯಿಂದ ಹೆಜ್ಜೆ ಇಡುತ್ತಿದೆ. ತಂತ್ರಗಾರಿಕೆ ವಿಚಾರದಲ್ಲಿಯೂ ಸ್ಪಷ್ಟತೆ ಹೊಂದಿದೆ. ಇದನ್ನು ಸಹಿಸದ ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್, ಕೇಂದ್ರದ ನಡೆಯನ್ನು ದ್ವೇಷಿಸುತ್ತಿದ್ದಾರೆ' ಎಂದು ಭಂಡಾರಿ ಕುಟುಕಿದ್ದಾರೆ.

ಇರಾನ್ ನೌಕೆಯ ಸಿಬ್ಬಂದಿ ರಕ್ಷಿಸಿದ ಶ್ರೀಲಂಕಾ ಸೇನೆ

ಶ್ರೀಲಂಕಾ ನೌಕಾಪಡೆ ಹಂಚಿಕೊಂಡಿರುವ ಇರಾನ್‌ನ 'ಬುಶೇರ್' ನೌಕೆಯ ಚಿತ್ರ – ಎಎಫ್‌ಪಿ ಚಿತ್ರ

ಕೊಲಂಬೊ (ಪಿಟಿಐ): ವಿಶಾಖಪಟ್ಟಣದಲ್ಲಿ ನಡೆದಿದ್ದ 'ಮಿಲನ್ 2026' ಹೆಸರಿನ ಸೇನಾ ಸಮರಾಭ್ಯಾಸ ಮುಗಿಸಿ ಹಿಂದಿರುಗುತ್ತಿದ್ದ ಇರಾನ್‌ನ 'ಬುಶೇರ್' ನೌಕೆಯಲ್ಲಿದ್ದ ಸಿಬ್ಬಂದಿಯನ್ನು ಶ್ರೀಲಂಕಾ ನೌಕಾಪಡೆ ರಕ್ಷಿಸಿದೆ.

ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ ನೌಕೆಯನ್ನು ಶ್ರೀಲಂಕಾ ಬಂದರಿನಲ್ಲಿ ನಿಲ್ಲಿಸಲು (ಡಾಕ್) ಅನುಮತಿ ಕೋರಲಾಗಿತ್ತು. ಈ ಮನವಿಗೆ ಸ್ಪಂದಿಸಿದ ಶ್ರೀಲಂಕಾ, ನೌಕೆಯಲ್ಲಿದ್ದ ಅಧಿಕಾರಿಗಳು ಸೇರಿ 204 ಸಿಬ್ಬಂದಿಯನ್ನು ರಕ್ಷಿಸಿದೆ.

ಬುಶೇರ್ ನೌಕೆಯಲ್ಲಿ ಒಟ್ಟು 208 ಮಂದಿ ಸಿಬ್ಬಂದಿ ಇದ್ದರು. ಈ ಪೈಕಿ 204 ಜನರನ್ನು ರಕ್ಷಿಸಿ, 'ಪೋರ್ಟ್ ಆಫ್ ಕೊಲಂಬೊ' ಬಂದರಿಗೆ ಕರೆತರಲಾಗಿದೆ. ಒಂದು ಎಂಜಿನ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ ನೌಕೆಯು ಶ್ರೀಲಂಕಾ ಬಂದರು ತಲುಪುವುದು ಇನ್ನೂ ಎರಡು ದಿನವಾಗಬಹುದು. ಆದ್ದರಿಂದ ಉಳಿದ ನಾಲ್ಕು ಸಿಬ್ಬಂದಿ ನೌಕೆಯಲ್ಲಿಯೇ ಉಳಿದುಕೊಂಡಿದ್ದಾರೆ.

'ಫೆ.26ರಂದೇ ಕೋರಲಾಗಿತ್ತು': 'ಬುಶೇರ್' ನೌಕೆಯನ್ನು ಮಾರ್ಚ್ 9ರಿಂದ 13ರವರೆಗೆ ಕೊಲಂಬೊ ಬಂದರಿನಲ್ಲಿ ನಿಲ್ಲಿಸಲು ಫೆ. 26ರಂದೇ ಇರಾನ್ ಕೋರಿಕೊಂಡಿತ್ತು. ನಾವು ಪರಿಸ್ಥಿತಿಯನ್ನು ಅವಲೋಕಿಸುತ್ತಿದ್ದೆವು' ಎಂದು ಶ್ರೀಲಂಕಾ ಅಧ್ಯಕ್ಷ ಅನುರಾ ಕುಮಾರ ದಿಸ್ಸನಾಯಕೆ ಹೇಳಿದರು.

'ನೌಕೆಯಲ್ಲಿದ್ದ ಒಬ್ಬ ಸಿಬ್ಬಂದಿ ಮುಗ್ಗರಿಸಿ ಸಮುದ್ರದಲ್ಲಿ ಬಿದ್ದಿದ್ದಾನೆ. ಸಹಾಯ ಮಾಡಿ ಎಂದು ಫೆ. 27ರಂದು ನಮ್ಮನ್ನು ಕೋರಲಾಗಿತ್ತು. 'ಡೆನಾ' ನೌಕೆ ಮೇಲಿನ ದಾಳಿ ಬಳಿಕ 'ಬುಶೇರ್' ನಿಲ್ಲಿಸಲು ಅನುಮತಿ ಕೋರಲಾಯಿತು' ಎಂದರು.

ಇರಾನ್‌ನ ನೌಕೆ: ಕೊಚ್ಚಿಯಲ್ಲಿ ತುರ್ತು ನಿಲುಗಡೆ

ನವದೆಹಲಿ (ಪಿಟಿಐ): ಇರಾನ್ ಯುದ್ಧನೌಕೆ 'ಐರಿಸ್ ಡೆನಾ' ಮೇಲೆ ಅಮೆರಿಕ ದಾಳಿ ನಡೆಸಿ, ಮುಳುಗಿಸುವುದಕ್ಕೂ ಕೆಲ ದಿನ ಮುನ್ನ ಇರಾನಿನ ಮತ್ತೊಂದು ನೌಕಾಪಡೆಯ ಹಡಗನ್ನು ಕೊಚ್ಚಿಯಲ್ಲಿ ತುರ್ತು ನಿಲುಗಡೆ ಮಾಡಲು ಭಾರತ ಅನುಮೋದನೆ ನೀಡಿತ್ತು ಎಂದು ಮೂಲಗಳು ಶುಕ್ರವಾರ ತಿಳಿಸಿವೆ.

ಇರಾನ್‌ನ ಹಡಗಿನಲ್ಲಿ ತಾಂತ್ರಿಕ ದೋಷ ಕಂಡು ಬಂದಿದ್ದರಿಂದ ಭಾರತ ತುರ್ತಾಗಿ ಸ್ಪಂದಿಸಿತ್ತು. 183 ಸಿಬ್ಬಂದಿ ಇದ್ದ ಹಡಗನ್ನು ಮಾನವೀಯ ಆಧಾರದ ಮೇಲೆ ಭಾರತೀಯ ನೌಕಾ ವ್ಯವಸ್ಥೆಯ ವ್ಯಾಪ್ತಿಯಲ್ಲಿ ಇರಿಸಲಾಗಿದೆ.

'ಐರಿಸ್ ಲವನ್' ಹಡಗಿನಲ್ಲಿ ತಾಂತ್ರಿಕ ಸಮಸ್ಯೆ ಕಾರಣ, ಫೆಬ್ರುವರಿ 28ರಂದು ತುರ್ತು ನಿಲುಗಡೆಗೆ ಇರಾನ್ ಕೋರಿಕೆ ಸಲ್ಲಿಸಿತು. ಮಾರ್ಚ್ 1ರಂದು ಅದಕ್ಕೆ ಅನುಮೋದನೆ ನೀಡಿ, ಮಾರ್ಚ್ 4ರಂದು ಕೊಚ್ಚಿಯಲ್ಲಿ ತುರ್ತು ನಿಲುಗಡೆಗೆ ವ್ಯವಸ್ಥೆ ಮಾಡಲಾಯಿತು' ಎಂದು ಅವರು ಮಾಹಿತಿ ನೀಡಿದ್ದಾರೆ.

'ಆರೋಪ ಅಸಂಬದ್ಧ'

ನವದೆಹಲಿ: ಶ್ರೀಲಂಕಾ ಸಾಗರದಲ್ಲಿ ದಾಳಿಗೆ ಒಳಗಾದ ಇರಾನ್ ನೌಕೆ ಬಗೆಗಿನ ಗುಪ್ತಚರ ಮಾಹಿತಿಗಳನ್ನು ಭಾರತದ ನೌಕಾಪಡೆಯು ಅಮೆರಿಕಕ್ಕೆ ನೀಡಿತ್ತು ಎಂಬ ಆರೋಪವು ಆಧಾರ ರಹಿತ, ಅಸಂಬದ್ಧವಾದದ್ದು ಎಂದು ಸರ್ಕಾರದ ಮೂಲಗಳು ಶುಕ್ರವಾರ ತಿಳಿಸಿವೆ.

ಬೈರೂತ್ ಮೇಲೆ ದಾಳಿ

ಬೈರೂತ್ ಮೇಲಿನ ಇಸ್ರೇಲ್ ವಾಯು ದಾಳಿಯಿಂದ ರಕ್ಷಣೆ ಪಡೆದುಕೊಳ್ಳಲು ತಮ್ಮ ಮನೆಯಿಂದ ಹೊರಬಂದು ಆಸರೆಗಾಗಿ ರಸ್ತೆ ಬದಿ ಬೀಡುಬಿಟ್ಟಿದ್ದ ಕುಟುಂಬ – ಎಎಫ್‌ಪಿ ಚಿತ್ರ

ಬೈರೂತ್ (ಎಎಫ್‌ಪಿ): ಲೆಬನಾನ್‌ನ ರಾಜಧಾನಿ ಬೈರೂತ್‌ನ ದಕ್ಷಿಣ ಉಪನಗರಗಳ ಮೇಲೆ ಇಸ್ರೇಲ್ ಶುಕ್ರವಾರ ಬೆಳಿಗ್ಗೆ ಭಾರಿ ವಾಯುದಾಳಿ ನಡೆಸಿದೆ.

'ಹಿಜ್ಬುಲ್ಲಾ ಉಗ್ರರ ತಾಣಗಳ ಮೇಲೆ ದಾಳಿ ನಡೆಸಲಾಗಿದೆ. ಆ ಪ್ರದೇಶಗಳಲ್ಲಿರುವ ಜನರು ಸ್ಥಳಾಂತರಗೊಳ್ಳುವಂತೆ ಮೊದಲೇ ಮುನ್ನೆಚ್ಚರಿಕೆ ನೀಡಲಾಗಿತ್ತು. ದಾಳಿಯು ಯಶಸ್ವಿಯಾಗಿದ್ದು, ಉಗ್ರರ ಮಿಲಿಟರಿ ನೆಲೆಗಳನ್ನು ನಾಶಪಡಿಸಲಾಗಿದೆ' ಎಂದು ಇಸ್ರೇಲ್ ಸೇನೆ ತಿಳಿಸಿದೆ.

ಇಸ್ರೇಲ್ ವಾಯುದಾಳಿ ನಡೆಸಿದ ಉಪನಗರಗಳ ವಸತಿ ಸಮುಚ್ಚಯಗಳು ಹಾನಿಗೊಳಗಾಗಿವೆ. ರಸ್ತೆಗಳು ಸಂಪೂರ್ಣ ಹಾಳಾಗಿದ್ದು, ಇಡೀ ಪ್ರದೇಶದಲ್ಲಿ ದೂಳು ತುಂಬಿರುವ ವಿಡಿಯೊ ತುಣಕನ್ನು ಎಎಫ್‌ಪಿಟಿವಿಯು ಬಿತ್ತರಿಸಿದೆ.

ಸೋಮವಾರದಿಂದ ನಡೆದಿರುವ ದಾಳಿಯಲ್ಲಿ 217 ಜನರು ಮೃತಪಟ್ಟಿದ್ದಾರೆ ಎಂದು ಲೆಬನಾನ್‌ನ ಆರೋಗ್ಯ ಸಚಿವಾಲಯ ತಿಳಿಸಿದೆ.

'ದಕ್ಷಿಣ ಉಪನಗರಗಳ ಬೀದಿಗಳು ಶುಕ್ರವಾರ ಬೆಳಿಗ್ಗೆ ನಿರ್ಜನವಾಗಿದ್ದವು. ನೆಲಸಮವಾಗಿದ್ದ ಕಟ್ಟಡಗಳ ಅವಶೇಷಗಳಿಂದ ಹೊಗೆ ಬರುತ್ತಿತ್ತು. ಧರೆಗುರುಳಿದ್ದ ಕಟ್ಟಡಗಳ ತ್ಯಾಜ್ಯ ತೆರವಿಗಾಗಿ ಬುಲ್ಡೋಜರ್ ಚಲಿಸುತ್ತಿರುವುದು ಬಿಟ್ಟರೆ, ಬೇರೆ ಯಾವೊಂದು ಚಲನೆಯೂ ಇಲ್ಲಿ ಕಂಡುಬರಲಿಲ್ಲ' ಎಂದು ರಾಷ್ಟ್ರೀಯ ಸುದ್ದಿಸಂಸ್ಥೆ ವರದಿ ಮಾಡಿದೆ.

ಇಸ್ರೇಲ್ ಸೋಮವಾರದಿಂದ ಇಲ್ಲಿಯವರೆಗೂ ಲೆಬನಾನ್ ಮೇಲೆ ಒಟ್ಟು 26 ಸಲ ವಾಯುದಾಳಿ ನಡೆಸಿದೆ. ಹಿಜ್ಬುಲ್ಲಾ ಬಂಡುಕೋರರ ಭದ್ರಕೋಟೆಯಂತಿದ್ದ ಕಮಾಂಡ್ ಕೇಂದ್ರಗಳ ಮೇಲೆ ಇಸ್ರೇಲ್ ಸೇನೆ ಗುರುವಾರ ರಾತ್ರಿ ಸಹ ಬೃಹತ್ ಪ್ರಮಾಣದಲ್ಲಿ ದಾಳಿ ನಡೆಸಿತ್ತು.

ಬಜೆಟ್ ಅಧಿವೇಶನದಲ್ಲಿ ಚರ್ಚೆಗೆ ಕಾಂಗ್ರೆಸ್ ಆಗ್ರಹ

ನವದೆಹಲಿ (ಪಿಟಿಐ): ಮುಂದಿನ ವಾರ ಆರಂಭವಾಗಲಿರುವ ಎರಡನೇ ಹಂತದ ಬಜೆಟ್ ಅಧಿವೇಶನದಲ್ಲಿ ಪಶ್ಚಿಮ ಏಷ್ಯಾದಲ್ಲಿನ ಉದ್ವಿಗ್ನತೆ ಮತ್ತು ಪರಿಸ್ಥಿತಿಯ ಕುರಿತು ಪೂರ್ಣ ಪ್ರಮಾಣದ ತುರ್ತು ಚರ್ಚೆಗೆ ಅವಕಾಶ ನೀಡಬೇಕು. ಸರ್ಕಾರವು ಚರ್ಚೆಗೆ ಅವಕಾಶ ನೀಡದೆ ಕೇವಲ ತನ್ನ ಹೇಳಿಕೆಯನ್ನಷ್ಟೇ ನೀಡಿದರೆ ಸಾಲದು' ಎಂದು ಕಾಂಗ್ರೆಸ್ ಶುಕ್ರವಾರ ಆಗ್ರಹಿಸಿದೆ.

'ಪಿಟಿಐ' ಸುದ್ದಿ ಸಂಸ್ಥೆಯೊಂದಿಗೆ ಮಾತನಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ಸುಮ್ಮನೆ ಸಚಿವರು ಬರುತ್ತಾರೆ. ಹೇಳಿಕೆ ನೀಡಿ ಹೋಗುತ್ತಾರೆ ಎನ್ನುವಂತಾಗಬಾರದು. ಹೀಗೆ ಮಾಡಿ, ನಮಗೆ ಪ್ರಶ್ನೆ ಕೇಳದಂತೆ ಮಾಡಲಾಗುತ್ತದೆ' ಎಂದರು.

'ಅಮೆರಿಕ, ಇಸ್ರೇಲ್ ಮತ್ತು ಇರಾನ್‌ನ ಯುದ್ಧ, ಗಲ್ಫ್ ದೇಶಗಳ ಮೇಲೆ ಇರಾನ್ ನಡೆಸುತ್ತಿರುವ ದಾಳಿ, ಹಿಂದೂಮಹಾಸಾಗರದಲ್ಲಿ ಅಮೆರಿಕದ ಚಟುವಟಿಕೆ ಕುರಿತು ಚರ್ಚೆ ನಡೆಸಬೇಕು' ಎಂದರು.

ಕುವೈತ್‌ನಲ್ಲಿ 67 ಯೋಧರಿಗೆ ಗಾಯ

ಕುವೈತ್ (ಎಎಫ್‌ಪಿ): ಇರಾನ್ ಪ್ರತೀಕಾರದ ದಾಳಿ ಪ್ರಾರಂಭಿಸಿದಾಗಿನಿಂದ ತನ್ನ 67 ಯೋಧರು ಗಾಯಗೊಂಡಿದ್ದಾರೆ ಎಂದು ಕುವೈತ್‌ನ ರಕ್ಷಣಾ ಸಚಿವಾಲಯ ತಿಳಿಸಿದೆ.

'ಶನಿವಾರದಿಂದ ಈವರೆಗೆ 212 ಕ್ಷಿಪಣಿ ಹಾಗೂ 394 ಡ್ರೋನ್‌ಗಳನ್ನು ಹೊಡೆದುರುಳಿಸಿದ್ದೇವೆ' ಎಂದು ಸಚಿವಾಲಯದ ವಕ್ತಾರ ಕರ್ನಲ್ ಸೌದ್ ಅಲ್–ಅತ್ವಾನ್ ಹೇಳಿದ್ದಾರೆ.

ವಿದೇಶಾಂಗ ಸಚಿವ ಎಸ್‌. ಜೈಶಂಕರ್ ಅವರು ನವದೆಹಲಿಯಲ್ಲಿ ಇರಾನ್‌ನ ವಿದೇಶಾಂಗ ವ್ಯವಹಾರಗಳ ಉಪ ಸಚಿವ ಸಯೀದ್ ಖತಿಬ್‌ಜೆದೇಹ್ ಅವರೊಂದಿಗೆ ಶುಕ್ರವಾರ ಮಾತುಕತೆ ನಡೆಸಿದರು – ಪಿಟಿಐ ಚಿತ್ರ

ದಾಳಿ ನಡೆಸಿದವರನ್ನು ಶಿಕ್ಷಿಸದೇ ಬಿಡುವುದಿಲ್ಲ: ಇರಾನ್

ನವದೆಹಲಿ(ಪಿಟಿಐ): 'ಯಾವುದೇ ರಕ್ಷಣಾ ವ್ಯವಸ್ಥೆಯನ್ನು ಹೊಂದಿರದ ತನ್ನ ಹಡಗನ್ನು ಅಮೆರಿಕ ಮುಳುಗಿಸಿದೆ. ತನ್ನ ನೌಕೆ ಮೇಲೆ ನಡೆದ ದಾಳಿಗೆ ತಕ್ಕ ಶಿಕ್ಷೆ ನೀಡದೇ ಬಿಡುವುದಿಲ್ಲ' ಎಂದು ಇರಾನ್ ಶುಕ್ರವಾರ ಹೇಳಿದೆ.

'ಅಮೆರಿಕದ ದಾಳಿಯಿಂದಾಗಿ ಮುಳುಗಿರುವ ಇರಾನ್‌ನ ಐಆರ್‌ಐಎಸ್ ಡೆನಾ, ಯುದ್ಧ ಮಾಡುವ ಉದ್ದೇಶಕ್ಕೆ ನಿರ್ಮಿಸಿದ್ದ ಹಡಗು ಆಗಿರಲಿಲ್ಲ' ಎಂದು ಇರಾನ್‌ನ ವಿದೇಶಾಂಗ ವ್ಯವಹಾರಗಳ ಉಪ ಸಚಿವ ಸಯೀದ್ ಖತಿಬ್‌ಜೆದೇಹ್ ಹೇಳಿದ್ದಾರೆ.

'ರೈಸಿನಾ ಸಂವಾದ'ದಲ್ಲಿ ಪಾಲ್ಗೊಳ್ಳುವುದಕ್ಕಾಗಿ ಅವರು ಭಾರತಕ್ಕೆ ಭೇಟಿ ನೀಡಿದ್ದು, ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ್ದಾರೆ.

'ಇಂಡೊ–ಪರ್ಷಿಯನ್ ಸಂಸ್ಕೃತಿ ಬೆಸೆದಿದೆ'

'ಭಾರತ ಆಯೋಜಿಸಿದ್ದ ನೌಕಾಪಡೆಗಳ ತಾಲೀಮು 'ಮಿಲನ್'ನಲ್ಲಿ ಪಾಲ್ಗೊಂಡು ಮರಳುವ ವೇಳೆ ತನ್ನ ಹಡಗಿನ ಮೇಲೆ ಅಮೆರಿಕ ದಾಳಿ ನಡೆಸಿದೆ. ಅಮೆರಿಕದ ಈ ಕ್ರಮ ಅಂತರರಾಷ್ಟ್ರೀಯ ಕಾನೂನಿನ ಉಲ್ಲಂಘನೆ' ಎಂದು ಸಯೀದ್ ಪ್ರತಿಪಾದಿಸಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷಕ್ಕೆ ಸಂಬಂಧಿಸಿ ಭಾರತ ತಳೆದಿರುವ ನಿಲುವು ಕುರಿತ ಪ್ರಶ್ನೆಗೆ, 'ಎರಡೂ ದೇಶಗಳನ್ನು ಇಂಡೊ–ಪರ್ಷಿಯನ್ ಸಂಸ್ಕೃತಿ ಬೆಸೆದಿದೆ. ಭಾರತದೊಂದಿಗಿನ ಸಂಬಂಧಕ್ಕೆ ನಾವು ಮಹತ್ವ ನೀಡುತ್ತೇವೆ' ಎಂದು ಸಯೀದ್ ಪ್ರತಿಕ್ರಿಯಿಸಿದ್ದಾರೆ.

ರಾಜ್ಯ ಬಜೆಟ್ 2026-27

- ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಎಲ್ಲ ರೋಗಿಗಳಿಗೆ ಸಂಪೂರ್ಣ ಗಣಕೀಕೃತ ನೋಂದಣಿ, ಆರೋಗ್ಯ ದಾಖಲೆಗಳ ಡಿಜಿಟಲೀಕರಣ ಮತ್ತು ಯುಪಿಐ ಆಧಾರಿತ ಶುಲ್ಕ ಪಾವತಿ ವ್ಯವಸ್ಥೆ ಜಾರಿ

- ಟೈಪ್-1 ಮಧುಮೇಹದಿಂದ ಬಳಲುತ್ತಿರುವ ಮಕ್ಕಳ ಆರೋಗ್ಯವನ್ನು ಸುಧಾರಿಸಲು ಉಚಿತ ಇನ್ಸುಲಿನ್ ಪೆನ್‌ಗಳನ್ನು ನೀಡಲಾಗುತ್ತದೆ

- ಗೋರ್ ಬಂಜಾರ ಸಮುದಾಯದ ಇತಿಹಾಸ, ಸಂಸ್ಕೃತಿ, ಭಾಷೆ, ಆಚಾರ–ವಿಚಾರ ಇತ್ಯಾದಿ ದಾಖಲಿಸಲು ಬಂಜಾರ ವಿಶ್ವಕೋಶವನ್ನು ಪ್ರಕಟಿಸಲಾಗುತ್ತದೆ

- ಮಕ್ಕಳಿಗಾಗಿ ಪ್ರಾಚೀನ ಕಾಲದ ಕವಿಗಳು ಹಾಗೂ ಕುವೆಂಪು, ಕಾರಂತ, ದೇವನೂರು ಮಹದೇವ ಮೊದಲಾದವರ ಕೃತಿಗಳ ವರ್ಣ ಚಿತ್ರಗಳು ಮತ್ತು ಸಣ್ಣ ವಾಕ್ಯಗಳ ಪುಸ್ತಕಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಪ್ರಕಟಿಸಲಾಗುತ್ತದೆ

₹1,386 ಕೋಟಿ ಕೌಶಲ ಪರಿವರ್ತನೆ ಮೂಲಕ ಉದ್ಯೋಗದ ಗುಣಮಟ್ಟ ಉನ್ನತೀಕರಣ (ಕೆ-ಕ್ವೆಸ್ಟ್) ಯೋಜನೆಗೆ ಅನುದಾನ

₹125 ಕೋಟಿ ಎಸ್‌ಡಿಎಂಸಿಗಳಿಗೆ ನೇರವಾಗಿ ವರ್ಗಾವಣೆ

₹900 ಕೋಟಿ ಆರೋಗ್ಯ ಇಲಾಖೆಯಲ್ಲಿನ ಮೂಲಸೌಕರ್ಯ ಅಭಿವೃದ್ಧಿಗೆ ಹಂಚಿಕೆ

₹5,300 ಕೋಟಿ ಶಕ್ತಿ ಯೋಜನೆಗೆ ಮೀಸಲು

ಜಮೆ (ಪೈಸೆಗಳಲ್ಲಿ)

(ಆವರಣದಲ್ಲಿ ಇರುವುದು ಕಳೆದ ವರ್ಷದ ಬಜೆಟ್ ಲೆಕ್ಕಾಚಾರ)



- ರಾಜ್ಯ ತೆರಿಗೆ
- ಸಾಲ
- ಕೇಂದ್ರ ತೆರಿಗೆ ಪಾಲಿನಿಂದ
- ಕೇಂದ್ರ ಸರ್ಕಾರದ ಸಹಾಯಾನುದಾನ
- ರಾಜ್ಯ ತೆರಿಗೆಯೇತರ ರಾಜಸ್ವದಿಂದ

- ಸಿದ್ದರಾಮಯ್ಯ ಅವರೇ ಮಂಡಿಸಿದ್ದ 2025–26ನೇ ಸಾಲಿನ ಬಜೆಟ್‌ಗೆ ಹೋಲಿಸಿದರೆ, ಈ ಬಜೆಟ್‌ನಲ್ಲಿ ಗಣನೀಯ ಬದಲಾವಣೆ ಇದೆ
- ಈ ಹಿಂದಿನ ಬಜೆಟ್‌ನಲ್ಲಿ, ರೂಪಾಯಿ ಜಮೆಯಲ್ಲಿ 52 ಪೈಸೆಯನ್ನು ರಾಜ್ಯ ತೆರಿಗೆ ಆದಾಯದಿಂದಲೇ ನಿರೀಕ್ಷಿಸಲಾಗಿತ್ತು. ಈಗ ಅದು 49 ಪೈಸೆಗೆ ಕುಸಿದಿದೆ
- ಈ ಹಿಂದೆ ಸಾಲ ಮತ್ತು ಬಂಡವಾಳ ಜಮೆ ರೂಪದಲ್ಲಿ 27 ಪೈಸೆಯನ್ನು ನಿರೀಕ್ಷಿಸಲಾಗಿತ್ತು. ಈ ಬಾರಿ ಅದು 29 ಪೈಸೆಗೆ ಏರಿಕೆಯಾಗಿದೆ

ವೆಚ್ಚ (ಪೈಸೆಗಳಲ್ಲಿ)



- ಕೃಷಿ, ನೀರಾವರಿ ಮತ್ತು ಗ್ರಾಮೀಣ ಅಭಿವೃದ್ಧಿ
- ಸಾಲ ಮರುಪಾವತಿ
- ಇತರ ಆರ್ಥಿಕ ಸೇವೆಗಳು
- ಶಿಕ್ಷಣ
- ಸಮಾಜ ಕಲ್ಯಾಣ
- ಆರೋಗ್ಯ
- ಇತರೆ ಸಾಮಾಜಿಕ ಸೇವೆಗಳು
- ನೀರು ಪೂರೈಕೆ ಮತ್ತು ನೈರ್ಮಲ್ಯ
- ಇತರೆ ಸಾಮಾನ್ಯ ಸೇವೆಗಳು

- ಈ ಬಜೆಟ್‌ನಲ್ಲಿ ರೂಪಾಯಿ ವೆಚ್ಚದಲ್ಲೂ ಗಣನೀಯ ಬದಲಾವಣೆಯಾಗಿದೆ. ಹಿಂದಿನ ಬಜೆಟ್‌ನಲ್ಲಿ ಸಾಲ ಮರುಪಾವತಿಗೆ 18 ಪೈಸೆ ನಿಗದಿಪಡಿಸಲಾಗಿತ್ತು, ಈ ಬಾರಿ 20 ಪೈಸೆಗೆ ಹೆಚ್ಚಿಸಲಾಗಿದೆ
- ಕೃಷಿ, ನೀರಾವರಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಕಳೆದ ಬಜೆಟ್‌ನಲ್ಲಿ 14 ಪೈಸೆಯನ್ನು ಮೀಸಲಾಗಿರಿಸಿದ್ದರೆ, ಈ ಬಜೆಟ್‌ನಲ್ಲಿ ಅದನ್ನು 13 ಪೈಸೆಗೆ ಇಳಿಸಲಾಗಿದೆ

ನೇಮಕಾತಿ ಘೋಷಣೆ

15,000 ಶಾಲಾ–ಕಾಲೇಜುಗಳಲ್ಲಿನ ಹುದ್ದೆಗಳು	**2,000** ಅರಣ್ಯ ಇಲಾಖೆ ಸಿಬ್ಬಂದಿ
2,000 ವಿಶ್ವವಿದ್ಯಾಲಯಗಳ ಬೋಧಕ ಹುದ್ದೆಗಳು	**2,500** ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಿಬ್ಬಂದಿ
8,000 ಗೃಹ ಇಲಾಖೆಯ ಸಿಬ್ಬಂದಿ ಹುದ್ದೆ	**2,500** ಆರೋಗ್ಯ ಇಲಾಖೆ



ಸಾಮಾಜಿಕ ಜಾಲತಾಣ ಬಳಕೆ: ಮಕ್ಕಳಿಗೆ ನಿರ್ಬಂಧ

ವಿದ್ಯಾರ್ಥಿ ಸಂಘ ಚುನಾವಣೆ ಖಚಿತ, ಶಾಲೆಗಳಿಗೆ ಮೂಲಸೌಕರ್ಯಕ್ಕೆ ಅನುದಾನ

• ಚಂದ್ರಹಾಸ ಹಿರೇಮಳಲಿ

ಕೋವಿಡ್ ಕಾಲಘಟ್ಟದ ನಂತರ ಮಕ್ಕಳಲ್ಲಿ ಹವ್ಯಾಸವಾಗಿರುವ ಮೊಬೈಲ್ ಗೀಳು ನಿಯಂತ್ರಿಸಲು ಮುಂದಾಗಿರುವ ರಾಜ್ಯ ಸರ್ಕಾರ, 16 ವರ್ಷದ ಒಳಗಿನವರು ಸಾಮಾಜಿಕ ಜಾಲತಾಣ ಬಳಸುವುದನ್ನು ನಿರ್ಬಂಧಿಸಲು ಮುಂದಾಗಿದೆ.

ಆಧುನಿಕ ತಂತ್ರಜ್ಞಾನ, ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆಯೂ ಮಕ್ಕಳ ಶಿಕ್ಷಣ, ಆರೋಗ್ಯ, ದೈಹಿಕ ಬೆಳವಣಿಗೆಯ ಮೇಲೆ ವ್ಯತಿರಿಕ್ತಪರಿಣಾಮ ಬೀರುತ್ತಿದೆ. ಇಂತಹ ಪರಿಣಾಮಗಳನ್ನು ತಡೆಯಲು ಸಾಮಾಜಿಕ ಜಾಲತಾಣ ಬಳಕೆಯನ್ನು ನಿಷೇಧಿಸಲಾಗುತ್ತಿದೆ.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸೇರಿದಂತೆ ವಿವಿಧ ಸಂಘಸಂಸ್ಥೆಗಳು, ಸಂಘಟನೆಗಳು, ಕೆಲ ಪೋಷಕರು ಈ ಕುರಿತು ಸರ್ಕಾರಕ್ಕೆ ಪತ್ರ ಬರೆದಿದ್ದರು. ಈಚೆಗೆ ನಡೆದ ಸರ್ಕಾರಿ ವಿಶ್ವವಿದ್ಯಾಲಯಗಳ ಕುಲಪತಿಗಳ ಸಮಾವೇಶದಲ್ಲೂ ಈ ಕುರಿತು ಚರ್ಚಿಸಲಾಗಿತ್ತು. 16 ವರ್ಷದ ಒಳಗಿನ ಮಕ್ಕಳ ಮೊಬೈಲ್ ಬಳಕೆಗೆ ನಿರ್ಬಂಧ ವಿಧಿಸುವಂತೆ ಕುಲಪತಿಗಳು ಸಲಹೆ ನೀಡಿದ್ದರು. ಪೋಷಕರು, ವಿವಿಧ ಸಂಘಟನೆಗಳ ಕಳಕಳಿಗೆ ಸ್ಪಂದಿಸಿರುವ ಸರ್ಕಾರ, ಈ ಕುರಿತು ಬಜೆಟ್ ಘೋಷಣೆ ಮೂಲಕ ತ್ವರಿತ ಸ್ಪಂದನೆ ತೋರಿದೆ.

ವಿದ್ಯಾರ್ಥಿಗಳ ಆರೋಗ್ಯ, ಭವಿಷ್ಯ ಮತ್ತು ವ್ಯಕ್ತಿತ್ವ ರೂಪಿಸಲು ಕೆಲ ಕಠಿಣ ಕ್ರಮಗಳನ್ನು ಜಾರಿಗೊಳಿಸಲು ತೀರ್ಮಾನಿಸಿದೆ. ವಿದ್ಯಾರ್ಥಿಗಳಲ್ಲಿ ಒತ್ತಡ ನಿವಾರಿಸಲು ರಾಜ್ಯದ 204 ಕ್ಷೇತ್ರ ಸಂಪನ್ಮೂಲ ಕೇಂದ್ರಗಳಲ್ಲಿ ಮಾನಸಿಕ ಆರೋಗ್ಯ ಸಲಹೆಗಾರರನ್ನು ನೇಮಿಸಲಾಗುತ್ತಿದೆ. ಬೆಂಗಳೂರು ಮತ್ತು ಧಾರವಾಡದಲ್ಲಿ ಮಾದಕ ವ್ಯಸನಿಗಳ ಪುನರ್‌ವಸತಿ ಕೇಂದ್ರ ತೆರೆಯಲಾಗುತ್ತಿದೆ. ಮಾದಕ ವಸ್ತುಗಳ ಬಳಕೆಯನ್ನು ತಡೆಯಲು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಧರಿಸಿದೆ.

ಶಾಲಾ, ಕಾಲೇಜುಗಳ ಮೂಲಸೌಕರ್ಯ, ನಿರ್ವಹಣೆಗಾಗಿ ₹125 ಕೋಟಿ ಮೊತ್ತವನ್ನು ಆಯಾ ಎಸ್‌ಡಿಎಂಸಿಗಳಿಗೆ ನೇರವಾಗಿ ವರ್ಗಾವಣೆ ಮಾಡುತ್ತಿದೆ. ಕೊಠಡಿಗಳ ದುರಸ್ತಿಗೆ ₹565 ಕೋಟಿ, ಶೌಚಾಲಯಗಳಿಗೆ ₹75 ಕೋಟಿ ಹಾಗೂ ಪೀಠೋಪಕರಣಗಳ ಖರೀದಿಗೆ ₹25 ಕೋಟಿ, ಶಿಕ್ಷಕರ ಇಂಗ್ಲಿಷ್ ಭಾಷಾ ತರಬೇತಿಗೆ ₹24 ಕೋಟಿ ಮೀಸಲಿಡಲಾಗಿದೆ.

'ವೇಮುಲ' ಕಾಯ್ದೆಗೆ ಭರವಸೆ: ರಾಜ್ಯದ ಎಲ್ಲಾ ಸರ್ಕಾರಿ, ಖಾಸಗಿ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ಜಾತಿ ಆಧಾರದಲ್ಲಿ ವಿದ್ಯಾರ್ಥಿಗಳ ಮೇಲೆ ನಡೆಯುವ ಶೈಕ್ಷಣಿಕ ಮತ್ತು ಸಾಮಾಜಿಕ ದೌರ್ಜನ್ಯ ತಡೆಯಲು 'ರೋಹಿತ್ ವೇಮುಲ' ಕಾಯ್ದೆ ಜಾರಿಗೆ ತರುವ ಭರವಸೆಯನ್ನು ರಾಜ್ಯ ಸರ್ಕಾರ ಬಜೆಟ್ ಮೂಲಕ ನೀಡಿದೆ.

ವಿದ್ಯಾರ್ಥಿ ಸಂಘದ ಚುನಾವಣೆ ಖಚಿತ: ಶಿಕ್ಷಣ ತಜ್ಞರು, ಕುಲಪತಿಗಳು ಸೇರಿದಂತೆ ಹಲವರು ವಿದ್ಯಾರ್ಥಿ ಸಂಘಗಳಿಗೆ ಚುನಾವಣೆ ನಡೆಸಲು ಆಕ್ಷೇಪ ವ್ಯಕ್ತಪಡಿಸಿದ್ದರು. ಈ ಆಕ್ಷೇಪಕ್ಕೆ ರಾಜ್ಯ ಸರ್ಕಾರ ಸಮ್ಮತಿ ತೋರಿಲ್ಲ. ವಿದ್ಯಾರ್ಥಿಗಳಲ್ಲಿ ನಾಯಕತ್ವ, ಹೊಣೆಗಾರಿಕೆ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳನ್ನು ಬೆಳೆಸಲು ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಸುವುದಾಗಿ ಘೋಷಿಸಿದೆ.

ತಾಯಂದಿರ ಮರಣ ತಡೆಗೆ ಆದ್ಯತೆ: ತಾಯಂದಿರ ಮರಣ ಪ್ರಮಾಣ ಶೇ 24ರಷ್ಟು ಇಳಿಕೆಯಾಗಿದ್ದು, ಇನ್ನಷ್ಟು ಕಡಿಮೆಗೊಳಿಸಲು ಹೆರಿಗೆ ಆಸ್ಪತ್ರೆಗಳಿಗೆ ಮಾರ್ಗದರ್ಶನ, ಹೆಚ್ಚಿನ ಮಾನವ ಸಂಪನ್ಮೂಲ ಮತ್ತು ಆಧುನಿಕ ಉಪಕರಣಗಳನ್ನು ನೀಡಲಾಗುತ್ತಿದೆ. ಕಡಿಮೆ ಜನನ ತೂಕದ ನವಜಾತ ಶಿಶುಗಳಿಗೆ ವಿಶೇಷ ಔಷಧೋಪಚಾರ, ಸಮಗ್ರ ನವಜಾತ ಶಿಶು ಆರೈಕೆ ಸೌಲಭ್ಯಗಳು ಹಾಗೂ ಪ್ರಸವಪೂರ್ವ ಸೇವೆಗಳನ್ನು ಮತ್ತಷ್ಟು ಬಲಪಡಿಸಲು ₹10 ಕೋಟಿ ಒದಗಿಸಲಾಗಿದೆ.

'ಅತಿಥಿ'ಗಳಿಗೂ ಮಾತೃತ್ವ ರಜೆ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾಲಿಟೆಕ್ನಿಕ್ ಹಾಗೂ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಅತಿಥಿ ಉಪನ್ಯಾಸಕರಿಗೆ 90 ದಿನಗಳ ಮಾತೃತ್ವ ರಜೆಯ ಸೌಲಭ್ಯವನ್ನು ಜಾರಿಗೊಳಿಸಲಾಗುತ್ತದೆ.

ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಗೆ ಬಜೆಟ್‌ನಲ್ಲಿ ಹೆಚ್ಚಿನ ಆದ್ಯತೆ ನೀಡಲಾಗಿದ್ದು, 1.57 ಲಕ್ಷ ಕೋಟಿ ಮೊತ್ತವನ್ನು ನಿಗದಿ ಮಾಡಲಾಗಿದೆ. ಅಂಗನವಾಡಿಯ 1.39 ಲಕ್ಷ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಒಂದು ಜತೆ ಹೆಚ್ಚುವರಿ ಸಮವಸ್ತ್ರ ನೀಡಲಾಗುತ್ತದೆ. ಅಂಗನವಾಡಿ ಕೇಂದ್ರಗಳ ಸಮಗ್ರ ಸುಧಾರಣೆಗೆ ಸಮಿತಿ ರಚಿಸಲಾಗುತ್ತಿದೆ. ಮಾತೃಪೂರ್ಣ ಯೋಜನೆ ಅಡಿ ಮನೆಗೆ ಪೌಷ್ಟಿಕ ಆಹಾರ ಪದಾರ್ಥ ವಿತರಿಸುವುದನ್ನು ಕೈಬಿಟ್ಟು, ಹಿಂದೆ ಇದ್ದಂತೆ ಆಯಾ ಕೇಂದ್ರಗಳಲ್ಲಿಯೇ ಮಧ್ಯಾಹ್ನದ ಬಿಸಿಯೂಟ ವಿತರಿಸಲು ನಿರ್ಧರಿಸಲಾಗಿದೆ.

ಮಾಜಿ ದೇವದಾಸಿಯರು, ಲಿಂಗತ್ವ ಅಲ್ಪಸಂಖ್ಯಾತರು, ಚೇತನ ಹಾಗೂ ಧನಶ್ರೀ ಯೋಜನೆಯ ಫಲಾನುಭವಿಗಳಿಗೆ ಆದಾಯೋತ್ಪನ್ನ ಚಟುವಟಿಕೆಗಳಿಗಾಗಿ ನೀಡುತ್ತಿರುವ ₹30,000 ಪ್ರೋತ್ಸಾಹ ಧನವನ್ನು ₹45,000ಕ್ಕೆ ಹೆಚ್ಚಿಸಲಾಗುತ್ತಿದೆ.

ರಾಜ್ಯ ಸರ್ಕಾರದ ಪಾಲುದಾರಿಕೆಯೊಂದಿಗೆ ವೃತ್ತಿ ಜೀವನದ ಆರಂಭಿಕ ಹಂತದಲ್ಲಿರುವ ವಿಜ್ಞಾನ, ತಾಂತ್ರಿಕ, ಗಣಿತ ಮತ್ತು ಇಂಜಿನಿಯರಿಂಗ್ ವಿಭಾಗಗಳಲ್ಲಿನ ಆಯ್ದ 3,000 ಮಹಿಳಾ ಪದವೀಧರರಿಗೆ ವೃತ್ತಿನಿರತ ತರಬೇತಿಗಳನ್ನು ನೀಡಲು ₹13.50 ಕೋಟಿ ನೀಡಲಾಗಿದೆ.

ವರ್ಗಾವಣೆ: ಕೆಪಿಎಸ್‌ಗೆ ಆದ್ಯತೆ

ಕೆಲ ವರ್ಷಗಳಿಂದ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಪ್ರಾಮುಖ್ಯ ನೀಡುತ್ತಾ ಬಂದಿದ್ದ ರಾಜ್ಯ ಸರ್ಕಾರ, ಈ ಬಾರಿ ಮತ್ತೊಂದು ಹೆಜ್ಜೆ ಇಟ್ಟಿದೆ. ಶಿಕ್ಷಕರ ವರ್ಗಾವಣೆಯಲ್ಲಿ ಕೆಪಿಎಸ್‌ನಲ್ಲಿರುವ ಎಲ್ಲ ಖಾಲಿ ಹುದ್ದೆಗಳನ್ನು ಮಹತ್ವದ ಹುದ್ದೆಗಳು ಎಂದು ಪರಿಗಣಿಸಿ, ಮೊದಲ ಹಂತದಲ್ಲೇ ಭರ್ತಿ ಮಾಡುತ್ತಿದೆ. ನಂತರ ಇತರೆ ಶಾಲೆಗಳಲ್ಲಿ ಖಾಲಿ ಉಳಿಯುವ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುತ್ತದೆ. 15,000 ಶಿಕ್ಷಕರ ಹುದ್ದೆಗಳನ್ನು 2026–27ನೇ ಸಾಲಿನಲ್ಲಿ ಭರ್ತಿ ಮಾಡಿಕೊಳ್ಳುವುದಾಗಿ ಘೋಷಿಸಿದೆ. ಮೂರು ವರ್ಷಗಳಲ್ಲಿ 800 ಶಾಲೆಗಳನ್ನು ಕೆಪಿಎಸ್ ಆಗಿ ಉನ್ನತೀಕರಿಸಲು ₹ 3,900 ಕೋಟಿ ವೆಚ್ಚ ಮಾಡುತ್ತಿದೆ.

ಶರೀಫ–ಮಲ್ಲಮ್ಮ ಹೆಸರಿನಲ್ಲಿ ಪ್ರತಿಷ್ಠಾನ

ಬೆಂಗಳೂರು: ರಾಜ್ಯ ಸರ್ಕಾರವು ಈ ಬಾರಿಯ ಬಜೆಟ್‌ನಲ್ಲಿ ತಲಾ ಎರಡು ಪ್ರತಿಷ್ಠಾನ ಹಾಗೂ ಟ್ರಸ್ಟ್‌ಗಳನ್ನು ಘೋಷಿಸಿದ್ದು, ಸಂತ ಶಿಶುನಾಳ ಶರೀಫ ಹಾಗೂ ವೀರರಾಣಿ ಬೆಳವಾಡಿ ಮಲ್ಲಮ್ಮ ಅವರ ಹೆಸರಿನಲ್ಲಿ ಪ್ರತ್ಯೇಕ ಪ್ರತಿಷ್ಠಾನ ಸ್ಥಾಪನೆಯಾಗಲಿದೆ.

ಸಿದ್ದಲಿಂಗಯ್ಯ , ಡಿ.ಆರ್. ನಾಗರಾಜ್ ಟ್ರಸ್ಟ್: ದಲಿತ ಕವಿ ಸಿದ್ದಲಿಂಗಯ್ಯ ಅವರ ಹೆಸರಿನಲ್ಲಿ ಟ್ರಸ್ಟ್ ರಚಿಸುವಂತೆ ಇತ್ತೀಚೆಗೆ ದಲಿತ ಸಮುದಾಯದ ಮುಖಂಡರು ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದರು. ಅದರಂತೆ ಸಿದ್ದಲಿಂಗಯ್ಯ ಅವರ ಹೆಸರಿನಲ್ಲಿ ಹಾಗೂ ವಿಮರ್ಶಕ ಡಿ.ಆರ್. ನಾಗರಾಜ್ ಅವರ ಹೆಸರಿನಲ್ಲಿ ಟ್ರಸ್ಟ್ ರಚಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸಲಾಗಿದೆ.

ರಾಜ್ಯದ ವಿವಿಧ ಕಲಾ ಪ್ರಕಾರಗಳನ್ನು ಒಂದೆಡೆ ಸೇರಿಸುವ 'ಬೆಂಗಳೂರು ಹಬ್ಬ'ಕ್ಕೆ ₹5 ಕೋಟಿ ನೀಡುವುದಾಗಿ, ಜಾನಪದ ಹಾಗೂ ಬುಡಕಟ್ಟು ಕಲಾವಿದರು, ವಿದ್ವಾಂಸರು ಮತ್ತು ವಾದ್ಯಗಾರರನ್ನು ಒಳಗೊಂಡ 'ಜಾನಪದ ಸಂಗಮ' ಸಮಾವೇಶವನ್ನು ₹2 ಕೋಟಿಯಲ್ಲಿ ಆಯೋಜಿಸುವುದಾಗಿ ಹೇಳಲಾಗಿದೆ.

ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಅವರ ಜನ್ಮಶತಮಾನೋತ್ಸವ ಅಂಗವಾಗಿ, ಅವರ ಗೀತೆಗಳ ಗಾಯನ, ವಿಚಾರ ಸಂಕಿರಣ, ಕವಿಗೋಷ್ಠಿ, ಆಯ್ದ ಕೃತಿಗಳ ಇಂಗ್ಲಿಷ್ ಅನುವಾದ, ಸಾಹಿತ್ಯ ವಾಚಿಕೆ ಹಾಗೂ 'ಜಿ.ಎಸ್.ಎಸ್.ಪ್ರಶಸ್ತಿ' ನೀಡಲು ₹2 ಕೋಟಿ ಒದಗಿಸಲಾಗುತ್ತಿದೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಯು.ಆರ್.ಅನಂತಮೂರ್ತಿ ಅವರ ಹೆಸರಿನಲ್ಲಿ ಕುವೆಂಪು ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಪೀಠ ಸ್ಥಾಪಿಸುವುದಾಗಿ ಘೋಷಿಸಲಾಗಿದೆ.

ದಲಿತ ಸಾಹಿತ್ಯ ಚಳವಳಿಗೆ 50 ವರ್ಷ ತುಂಬಿದ ಈ ಸಂದರ್ಭದಲ್ಲಿ 50 ವರ್ಷಗಳಲ್ಲಿ ರಚನೆಯಾದ ದಲಿತ ಸಾಹಿತ್ಯವನ್ನು ಸಂಪಾದಿಸಿ, 'ಅರ್ಧಶತಮಾನದ ದಲಿತ ಸಾಹಿತ್ಯ' ಶೀರ್ಷಿಕೆಯಡಿ ಪುಸ್ತಕ ಪ್ರಕಟಿಸಲಾಗುತ್ತದೆ. ಇದಕ್ಕೆ ₹1 ಕೋಟಿ ಒದಗಿಸುವುದಾಗಿ ಹೇಳಲಾಗಿದೆ.

- ಕಾಗೋಡು ಸತ್ಯಾಗ್ರಹಕ್ಕೆ ಸಂಬಂಧಿಸಿದ ಕಥಾ ವಸ್ತುವನ್ನು ಒಳಗೊಂಡ, ನಾ. ಡಿಸೋಜ ಅವರು ರಚಿಸಿದ 'ಕೊಳಗ' ಕಾದಂಬರಿಯನ್ನು ಆಧರಿಸಿದ ನಾಟಕವನ್ನು ರಾಜ್ಯದಾದ್ಯಂತ ಪ್ರದರ್ಶಿಸಲಾಗುತ್ತದೆ
- ರಾಷ್ಟ್ರಕವಿ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ರಂಗರೂಪಕದಂತೆ 'ಖ್ವಾಜಾ ಬಂದೇ ನವಾಜ್' ಅವರ ಕುರಿತು ಅಹೋರಾತ್ರಿ ನಾಟಕವನ್ನು ಏರ್ಪಡಿಸಲಾಗುತ್ತದೆ
- ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಅಂಡಮಾನ್ ದ್ವೀಪದಲ್ಲಿ ಕರಾಳ ಶಿಕ್ಷೆಗೊಳಗಾದ ಕರ್ನಾಟಕದ 59 ಕನ್ನಡಿಗರ ವೀರಗಾಥೆಯ ಕುರಿತು 'ಅನಾಮಿಕ ಸ್ವಾತಂತ್ರ್ಯ ಹೋರಾಟಗಾರರು' ಎಂಬ ಕೃತಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ ಪ್ರಕಟಿಸಲಾಗುತ್ತದೆ

ಹವ್ಯಕ ಭಾಷಾ ಅಕಾಡೆಮಿ

ಕರ್ನಾಟಕ ರಾಜ್ಯದ ಸಂಸ್ಕೃತಿಯ ಅಂಗವಾಗಿರುವ ಹವ್ಯಕ ಭಾಷೆಯ ಬೆಳವಣಿಗೆಗೆ 'ಹವ್ಯಕ ಭಾಷಾ ಅಕಾಡೆಮಿ' ಸ್ಥಾಪನೆ ಮಾಡುವುದಾಗಿ ಘೋಷಿಸಲಾಗಿದೆ.

ಹವ್ಯಕ ಸಮುದಾಯದ ಪ್ರಾತಿನಿಧಿಕ ಸಂಸ್ಥೆಯಾದ ಅಖಿಲ ಹವ್ಯಕ ಮಹಾಸಭಾವು 2024ರ ಡಿಸೆಂಬರ್‌ನಲ್ಲಿ ಹಮ್ಮಿಕೊಂಡಿದ್ದ ತೃತೀಯ ವಿಶ್ವ ಹವ್ಯಕ ಸಮ್ಮೇಳನದಲ್ಲಿ, ಹವ್ಯಕ ಭಾಷಾ ಅಕಾಡೆಮಿ ಸ್ಥಾಪಿಸುವಂತೆ ರಾಜ್ಯ ಸರ್ಕಾರಕ್ಕೆ ಆಗ್ರಹಿಸಿತ್ತು. ಕಳೆದ ತಿಂಗಳು ಮಹಾಸಭಾವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಬಗ್ಗೆ ಮನವಿ ಸಲ್ಲಿಸಿತ್ತು. ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ, ಕೊಡಗು, ಕಾಸರಗೋಡು ಮೊದಲಾದ ಪ್ರದೇಶದಲ್ಲಿ ಈ ಭಾಷಿಗರು ನೆಲಸಿದ್ದಾರೆ. ಇದು ಕನ್ನಡದ ಉಪ ಭಾಷೆಯಾಗಿದೆ.

ತಜ್ಞರ ಅಭಿಪ್ರಾಯ

ಶಿಕ್ಷಣ ಕ್ಷೇತ್ರಕ್ಕೆ ದೂರದೃಷ್ಟಿಯ ಯೋಜನೆ

ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಕೆಲವು ದೂರದೃಷ್ಟಿಯ ಯೋಜನೆಗಳನ್ನು ಘೋಷಿಸಲಾಗಿದೆ. ಶಿಕ್ಷಣ ವ್ಯವಸ್ಥೆಯ ವಿಸ್ತರಣೆ, ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಿರುವುದು ಸ್ಪಷ್ಟವಾಗಿದೆ.

800 ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳಾಗಿ ರೂಪಾಂತರಿಸುವ ಯೋಜನೆ ಪ್ರಮುಖವಾಗಿದೆ. ಪ್ರಾಥಮಿಕ ಹಂತದಿಂದ ಪದವಿ ಪೂರ್ವ ಮಟ್ಟದವರೆಗೆ ಒಂದೇ ಆವರಣದಲ್ಲಿ ಶಿಕ್ಷಣ ನೀಡುವ ಈ ಮಾದರಿಯು ಸರ್ಕಾರಿ ಶಿಕ್ಷಣ ವ್ಯವಸ್ಥೆ ಬಲಪಡಿಸುವತ್ತ ಮಹತ್ವದ ಹೆಜ್ಜೆಯಾಗಿದೆ.ಸರ್ಕಾರಿ ಪದವಿ ಕಾಲೇಜು, ಪಾಲಿಟೆಕ್ನಿಕ್ ಸಂಸ್ಥೆಗಳನ್ನು ಆಧುನೀಕರಿಸುವುದು. ಉತ್ಕೃಷ್ಟತಾ ಕೇಂದ್ರಗಳನ್ನು ಸ್ಥಾಪಿಸಿ, ಉದ್ಯಮಶೀಲತೆ, ಸ್ಟಾರ್ಟ್ ಅಪ್ ಸಂಸ್ಕೃತಿ ಉತ್ತೇಜಿಸುವ ಪ್ರಯತ್ನ ಪ್ರಗತಿಪರವಾಗಿದೆ.

ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ನಿರ್ಧಾರವೂ ದಿಟ್ಟ ಹೆಜ್ಜೆಯಾಗಿದೆ. ಮಹಿಳಾ ಅತಿಥಿ ಉಪನ್ಯಾಸಕರಿಗೆ ಮಾತೃತ್ವ ರಜೆ ನೀಡಿರುವುದು ಲಿಂಗ ಸಮತೋಲನ ಉತ್ತೇಜಿಸುವ ಕ್ರಮವಾಗಿದೆ. ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆ ಪುನರಾರಂಭಕ್ಕೆ ಸೂಕ್ತ ಮಾರ್ಗಸೂಚಿ ಅಗತ್ಯವಿದೆ. ಶಿಕ್ಷಣದ ಗುಣಮಟ್ಟ, ಪಠ್ಯಕ್ರಮ ನವೀಕರಣ, ಶಿಕ್ಷಕರ ತರಬೇತಿ, ಮೌಲ್ಯಮಾಪನ, ವಿಶ್ವವಿದ್ಯಾಲಯಗಳ ಮಟ್ಟದ ಸಂಶೋಧನೆಗೆ ಪ್ರಾಶಸ್ತ್ಯದ ಅಗತ್ಯವಿತ್ತು.

ಜ್ಯೋತಿ, ಸಹ ಪ್ರಾಧ್ಯಾಪಕಿ, ತುಮಕೂರು ವಿಶ್ವವಿದ್ಯಾಲಯ

ಆಯುಷ್ ವಲಯಕ್ಕೂ ಆದ್ಯತೆ ನೀಡಬೇಕಿತ್ತು

ಹೃದಯರೋಗ ಚಿಕಿತ್ಸೆಯ ಸಲುವಾಗಿ ಮೈಸೂರಿನ ಜಯದೇವ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವ ನಿರ್ಧಾರ ಸ್ವಾಗತಾರ್ಹ. ಆ ಮೂಲಕ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸುವ ಪ್ರಯತ್ನ ಕಂಡರೂ, ಆಯುರ್ವೇದ, ಹೋಮಿಯೋಪಥಿ, ಯುನಾನಿ, ಪ್ರಕೃತಿ ಚಿಕಿತ್ಸೆ ಪದ್ಧತಿಗಳನ್ನು ಆಧರಿಸಿದ ಪ್ರಮುಖ ಕಾಲೇಜು ಹಾಗೂ ಆಸ್ಪತ್ರೆಗಳ ಮೇಲ್ದರ್ಜೆಗೂ ಒತ್ತು ನೀಡುವ ಅಗತ್ಯವಿತ್ತು. ಆಯುಷ್ ಕಾಲೇಜುಗಳಲ್ಲಿ ಖಾಲಿ ಹುದ್ದೆಗಳ ಭರ್ತಿಗೂ ಆದ್ಯತೆ ನೀಡಿದ್ದರೆ ಸಮತೋಲನ ಕಾಯ್ದುಕೊಂಡಂತಾಗುತ್ತಿತ್ತು. ಆರೋಗ್ಯ ಇಲಾಖೆಯ ಮೂಲಸೌಕರ್ಯ ಅಭಿವೃದ್ಧಿಗಾಗಿ ಮೀಸಲಿಟ್ಟಿರುವ ಹಣದಲ್ಲಿ ಆಯುಷ್ ಇಲಾಖೆಗೂ ಸಮಾನ ಆದ್ಯತೆಯನ್ನು ನೀಡಬೇಕು.

ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ದೊರಕುವ ಚಿಕಿತ್ಸೆಯ ಲೆಕ್ಕಪರಿಶೋಧನೆಯೂ ಅಗತ್ಯವಿದೆ. ಆರೋಗ್ಯ ಸೇವೆಯ ಅಸಮಾನತೆಯನ್ನು ನಿವಾರಿಸಲು ಇದು ಬಹಳ ಅಗತ್ಯ. ತಾಯಂದಿರ ಅಪೌಷ್ಟಿಕತೆ ನಿವಾರಣೆ, ಮಕ್ಕಳ ಆರೋಗ್ಯ ರಕ್ಷಣೆಗೆ ಒತ್ತು ನೀಡಿರುವುದು ಸದ್ಯದ ತುರ್ತು ಕೂಡ ಆಗಿತ್ತು. ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯ ಚಿಕಿತ್ಸಾ ಪ್ಯಾಕೇಜ್ ದರಗಳ ಜಾರಿಗೆ ಮೀಸಲಿಟ್ಟಿರುವ ಹೆಚ್ಚುವರಿ ಅನುದಾನದ ಬಳಕೆ ಸಮರ್ಪಕವಾಗಿರಬೇಕು. ಅದರೊಂದಿಗೆ ಸ್ಥಿರವಾದ ಆರೋಗ್ಯ ಪರಿಸರ ನಿರ್ಮಾಣಕ್ಕೆ ಪ್ರಾಮಾಣಿಕ ಪ್ರಯತ್ನವನ್ನೂ ಮಾಡಿದಂತಾಗುತ್ತದೆ. ಬಜೆಟ್ ಆ ನಿಟ್ಟಿನಲ್ಲಿ ಒಂದು ಬೆಳಕಿಂಡಿಯಂತೆ ಕಾಣುತ್ತದೆ.

ಡಾ.ಸಂದೀಪ್.ಎಸ್., ಸಂಶೋಧನೆ ಮತ್ತು ಪ್ರಕೃತಿ ಚಿಕಿತ್ಸೆ ವಿಭಾಗದ ಮುಖ್ಯಸ್ಥರು, ಸರ್ಕಾರಿ ಪ್ರಕೃತಿ ಚಿಕಿತ್ಸೆ ಕಾಲೇಜು ಮತ್ತು ಆಸ್ಪತ್ರೆ, ಮೈಸೂರು

ಹಾಲಿ ಯೋಜನೆಗೆ 'ಶಕ್ತಿ'

ಬಜೆಟ್‌ನಲ್ಲಿ ಮಹಿಳೆಯರಿಗಾಗಿ ಹೊಸ ಯೋಜನೆಗಳು ಹೆಚ್ಚು ಕಾಣಿಸದಿದ್ದರೂ, ಸಾಮಾನ್ಯ ಮಹಿಳೆಯರಿಗೆ ಆರ್ಥಿಕ ಚೈತನ್ಯ ನೀಡಿದ ಗೃಹಲಕ್ಷ್ಮಿ, ಶಕ್ತಿ ಮುಂತಾದವುಗಳನ್ನು ಮುಂದುವರಿಸಿರುವುದು ಒಳ್ಳೆಯ ಕ್ರಮ.

ಮಹಿಳೆಯರ ಆರೋಗ್ಯ, ಪೌಷ್ಟಿಕತೆ, ರಕ್ಷಣೆ, ಶಿಕ್ಷಣಕ್ಕೆ ಒತ್ತು ನೀಡಲಾಗಿದೆ. ಕೃಷಿಕ ಮಹಿಳೆಯರಿಗೆ ತರಬೇತಿ, ಪರಿಶಿಷ್ಟ ಜಾತಿ, ಪಂಗಡದ ಉದ್ಯೋಗಸ್ಥರಿಗೆ ವಸತಿ ನಿಲಯ, ಸರಿಯಾಗಿ ಸಾಲ ಮರುಪಾವತಿಸುವ ಸ್ವ ಸಹಾಯ ಸಂಘಗಳಿಗೆ ಬೆಂಬಲ, ಮಾಜಿ ದೇವದಾಸಿಯರು ಮತ್ತು ಅವರ ಮಕ್ಕಳ ಅಭಿವೃದ್ಧಿ, ಅಲ್ಪಸಂಖ್ಯಾತ ಮಹಿಳೆಯರಿಗೆ ವೃದ್ಧಾಶ್ರಮ, ಸರ್ಕಾರಿ ಕಾಲೇಜಿನ ಅತಿಥಿ ಉಪನ್ಯಾಸಕಿಯರಿಗೆ ಮಾತೃತ್ವ ರಜೆ ಕ್ರಮಗಳು ಪ್ರಯೋಜನಕಾರಿ. ಆದರೆ, ಇದರಲ್ಲಿ ಹೆಚ್ಚಿನ ಸೌಲಭ್ಯಗಳು ಮಹಿಳೆಯರು ಸಹಜವಾಗಿ ಪಡೆಯಬೇಕಾದ್ದ ಹಕ್ಕುಗಳಾಗಿದ್ದು, ಇನ್ನಷ್ಟು ಹೆಚ್ಚಿನ ವ್ಯಾಪ್ತಿ ಹೊಂದಬೇಕು. ಗ್ರಾಮೀಣ ಮಹಿಳೆಯರಿಗೆ ಕೌಶಲ ಒದಗಿಸಿ, ಸ್ಥಳೀಯವಾಗಿ ಉದ್ಯೋಗ ಒದಗಿಸುವ ಯೋಜನೆಗಳು ಅಗತ್ಯ.

ಮಹಿಳೆಯರ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವ ಯೋಜನೆಗಳನ್ನು ರೂಪಿಸಬೇಕಾಗಿದೆ. ಅಂಗನವಾಡಿ ಬಲಪಡಿಸುವಿಕೆ, ಸರ್ಕಾರಿ ಶಾಲೆಗಳ ಉನ್ನತೀಕರಣ, ಮಾದಕ ವಸ್ತು ನಿಯಂತ್ರಣಕ್ಕೆ ಒತ್ತು, 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿಷೇಧ ಶ್ಲಾಘನೀಯ.

ಮಮತಾ ರೈ, ಕದಿಕೆ ಟ್ರಸ್ಟ್, ಉಡುಪಿ

ಯಾವ ಇಲಾಖೆಗೆ ಎಷ್ಟು, ಹಂಚಿಕೆ? (ಕೋಟಿಗಳಲ್ಲಿ)

ಇಲಾಖೆ	ವರ್ಷ	ಮೊತ್ತ
ಶಿಕ್ಷಣ	2025-26	₹45,286
	2026-27	₹47,224
ಆರೋಗ್ಯ ಮತ್ತು ಕುಟುಂಬ ಕಲ್ಯಾಣ	2025-26	₹17,473
	2026-27	₹17,817
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	2025-26	₹34,955
	2026-27	₹34,929

ಉನ್ನತ ಶಿಕ್ಷಣ: ಮೂಲಸೌಕರ್ಯಕ್ಕೆ 'ಪರಿವರ್ತನೆ'

ಬೆಂಗಳೂರು: ಉನ್ನತ ಶಿಕ್ಷಣದ ಬಲವರ್ಧನೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿಗೆ ರಾಜ್ಯ ಸರ್ಕಾರ ಈ ಬಾರಿ ಬಜೆಟ್‌ನಲ್ಲಿ ಆದ್ಯತೆ ನೀಡಿದೆ. ವಿದ್ಯಾರ್ಥಿಗಳಲ್ಲಿ ಉದ್ಯಮಶೀಲತೆ ಹಾಗೂ ಸಂಶೋಧನಾ ಸಾಮರ್ಥ್ಯ ಹೆಚ್ಚಿಸಲು ಕರ್ನಾಟಕ ಉನ್ನತ ಶಿಕ್ಷಣ ಪರಿವರ್ತನೆ ಯೋಜನೆಯನ್ನು ರೂಪಿಸಿದೆ.

ಎಬಿಡಿಯ ನೆರವಿನೊಂದಿಗೆ ₹2,500 ಕೋಟಿ ಅನುದಾನದಲ್ಲಿ ಕರ್ನಾಟಕ ಉನ್ನತ ಶಿಕ್ಷಣ ಪರಿವರ್ತನೆ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. 40 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಮತ್ತು 11 ಪಾಲಿಟೆಕ್ನಿಕ್ ಕಾಲೇಜುಗಳನ್ನು ಉನ್ನತೀಕರಿಸಲಾಗುತ್ತಿದೆ. ವಿದ್ಯಾರ್ಥಿಗಳಲ್ಲಿ 'ಸ್ಟಾರ್ಟ್–ಅಪ್' ಸಂಸ್ಕೃತಿ ಬೆಳೆಸಲು 9 ಉತ್ಕೃಷ್ಟತಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ.

ವಿದ್ಯಾರ್ಥಿನಿಯರು ಹೆಚ್ಚಿರುವ ಕಾಲೇಜುಗಳ ಮೂಲಸೌಲಭ್ಯ ಅಭಿವೃದ್ಧಿಗೆ ₹31 ಕೋಟಿ ನಿಗದಿಪಡಿಸಲಾಗಿದೆ. 1,000ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ 50 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಪೀಠೋಪಕರಣಗಳು ಹಾಗೂ ಕಟ್ಟಡಗಳ ದುರಸ್ತಿ, ನವೀಕರಣ ಕಾಮಗಾರಿಗೆ ₹100 ಕೋಟಿ ಅನುದಾನವನ್ನು ಮುಂದಿನ ಮೂರು ವರ್ಷಗಳಲ್ಲಿ ನೀಡಲಾಗುತ್ತದೆ.

ವಿಜಯಪುರ ಜಿಲ್ಲೆಯ ಚಡಚಣ, ಬೆಳಗಾವಿ ಗ್ರಾಮಾಂತರ ಹಾಗೂ ಮೈಸೂರು ನಗರದ ನರಸಿಂಹರಾಜ ಕ್ಷೇತ್ರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಸ್ಥಾಪನೆ. ರಾಯಚೂರು ಜಿಲ್ಲೆಯ ಮಸ್ಕಿಯಲ್ಲಿ ಕೆಕೆಆರ್‌ಡಿಬಿಯ ಮ್ಯಾಕ್ರೊ ಅನುದಾನದಲ್ಲಿ ಪದವಿ ಕಾಲೇಜು ಸ್ಥಾಪಿಸಲಾಗುತ್ತದೆ.

ಯುವಿಸಿಇಗೆ ₹100 ಕೋಟಿ: ಬೆಂಗಳೂರಿನ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯವನ್ನು ಐಐಟಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ₹500 ಕೋಟಿ ಅನುದಾನ ಘೋಷಿಸಿದ್ದು, ಪ್ರಸಕ್ತ ಸಾಲಿನಲ್ಲಿ ₹100 ಕೋಟಿ ಅನುದಾನವನ್ನು ನೀಡಲಾಗಿದೆ.

ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ 2025-26ನೇ ಸಾಲಿನಿಂದ ಉನ್ನತ ಶಿಕ್ಷಣವನ್ನು ಮುಂದುವರೆಸುತ್ತಿರುವ 37,000 ವಿದ್ಯಾರ್ಥಿನಿಯರಿಗೆ ಅಜೀಂ ಪ್ರೇಮ್‌ಜಿ ಫೌಂಡೇಷನ್ ವತಿಯಿಂದ ವಾರ್ಷಿಕ ₹30,000 ವಿದ್ಯಾರ್ಥಿ ವೇತನ ಹಾಗೂ ಉಳಿದ ವಿದ್ಯಾರ್ಥಿನಿಯರಿಗೆ ರಾಜ್ಯ ಸರ್ಕಾರದ ವತಿಯಿಂದ 'ದೀಪಿಕಾ ವಿದ್ಯಾರ್ಥಿ ವೇತನ' ಯೋಜನೆಯಡಿ ವಿದ್ಯಾರ್ಥಿವೇತನ ನೀಡಲಾಗುತ್ತದೆ.

ನೇಮಕಾತಿಗೆ ಒತ್ತು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, ಎಂಜಿನಿಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್‌ಗಳು, ಯುವಿಸಿಇ ಮತ್ತು ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಸುಮಾರು 3,000 ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಭರವಸೆ ನೀಡಲಾಗಿದೆ.

ನಾಲ್ಕು ಕಡೆ ವಸತಿಯುತ ಪದವಿ ಕಾಲೇಜು

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕಲಬುರಗಿ ಜಿಲ್ಲೆಯ ನಿಂಬರಗಾ, ಯಾದಗಿರಿ ಜಿಲ್ಲೆಯ ಕಕ್ಕೇರಾ, ರಾಯಚೂರು ಜಿಲ್ಲೆಯ ಅಂಬಾಮಠ ಮತ್ತು ಕೊಪ್ಪಳ ಜಿಲ್ಲೆಯ ಬೇವೂರು ಗ್ರಾಮಗಳಲ್ಲಿ ತಲಾ ₹18 ಕೋಟಿ ವೆಚ್ಚದಲ್ಲಿ ವಸತಿಯುತ ಪ್ರಥಮ ದರ್ಜೆ ಕಾಲೇಜುಗಳನ್ನು ಸ್ಥಾಪಿಸಲಾಗುತ್ತದೆ.

ಡಿಜಿಟಲ್ ಗ್ರಂಥಾಲಯ, ಅಧ್ಯಯನ ಕೇಂದ್ರ

ಧಾರವಾಡ ಮತ್ತು ಬೆಂಗಳೂರಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುವ ಅಭ್ಯರ್ಥಿಗಳಿಗಾಗಿ ತಲಾ ₹10 ಕೋಟಿ ವೆಚ್ಚದಲ್ಲಿ ಡಿಜಿಟಲ್ ಗ್ರಂಥಾಲಯ ಹಾಗೂ ಅಧ್ಯಯನ ಕೇಂದ್ರವನ್ನು ಪ್ರಾರಂಭಿಸಲು ಬಜೆಟ್‌ನಲ್ಲಿ ಘೋಷಿಸಲಾಗಿದೆ.

56,000 ಸರ್ಕಾರಿ ಹುದ್ದೆಗಳ ನೇಮಕಾತಿ ಕುರಿತು ಬಜೆಟ್‌ನಲ್ಲಿ ಘೋಷಣೆ ಮಾಡಿರುವುದು ಖುಷಿ ನೀಡಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಓದುತ್ತಿರುವವರು ಇದರಿಂದ ನಿಟ್ಟುಸಿರು ಬಿಡುವಂತಾಗಿದೆ. ಯುವಜನತೆಯ ಕೌಶಲ ಅಭಿವೃದ್ಧಿಗೆ ಆದ್ಯತೆ ನೀಡಿರುವುದು ಆಶಾದಾಯಕವಾಗಿದೆ.

ಸಿಂಧೂ ಎಸ್.ಪಿ., ಪದವೀಧರೆ, ದಾವಣಗೆರೆ

ಈ ಬಾರಿಯ ಬಜೆಟ್‌ನಲ್ಲಿ ಬೋಧಕರ ಹುದ್ದೆಗಳ ಭರ್ತಿಗೆ ನಿರ್ಧರಿಸಿರುವುದು ಸ್ವಾಗತಾರ್ಹ. 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿಷೇಧಿಸುವುದು ಸಂತೋಷದ ವಿಚಾರ. ಇದು ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಪೂರಕವಾಗಿ ತೆಗೆದುಕೊಂಡ ನಿರ್ಧಾರ

ರಘು, ನರೀಪುರ, ಕೊಳ್ಳೇಗಾಲ

ಉನ್ನತ ಶಿಕ್ಷಣಕ್ಕೆ ಇನ್ನಷ್ಟು ಒತ್ತು ಸಿಗಬೇಕಿತ್ತು. ಅನುದಾನ ಹಂಚಿಕೆ ಬಗ್ಗೆ ರಾಜ್ಯಸಭಾ ಸದಸ್ಯ ಮಲ್ಲಿಕಾರ್ಜುನ ಖರ್ಗೆ ಅವರ ಅಸಮಾಧಾನಕ್ಕೂ ತಕ್ಕ ಸ್ಪಂದನೆ ಸಿಕ್ಕಿಲ್ಲ. ಈ ಸಲವೂ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಹಣವೇ ಗತಿಯಾದಂತಿದೆ

ಗೌರೀಶ ಎಸ್. ಖಾಶಂಪೂರ್, ಹೈಕೋರ್ಟ್ ವಕೀಲ, ಕಲಬುರಗಿ

ಮಹಿಳಾ ಯೋಜನೆಗಳಿಗೆ ₹94 ಸಾವಿರ ಕೋಟಿ ಮೀಸಲು, 16 ವರ್ಷದ ಒಳಗಿನ ಮಕ್ಕಳಿಗೆ ಮೊಬೈಲ್ ನಿಷೇಧಿಸಲು ಮುಂದಾಗಿರುವುದು ಸ್ವಾಗತಾರ್ಹ. ಸರ್ಕಾರದ ಗ್ಯಾರಂಟಿ ಯೋಜನೆಗಳಿಗೆ ಹಣ ಮೀಸಲಿಟ್ಟದ್ದು, ಬೊಕ್ಕಸಕ್ಕೆ ಹೊರೆ ಆಗಲಿದೆ

ಮಂಗಳಾ ನರವಣೆ, ಮಾಜಿ ಅಧ್ಯಕ್ಷೆ, ಅಕ್ಕನ ಬಳಗ, ಹುಬ್ಬಳ್ಳಿ

ಆರೋಗ್ಯ, ಶಿಕ್ಷಣ ಕ್ಷೇತ್ರದಲ್ಲಿ ಮೂಲಸೌಕರ್ಯ ವೃದ್ಧಿಗೆ ಒತ್ತು ನೀಡಿರುವುದು ಶ್ಲಾಘನೀಯ. ಗೃಹಲಕ್ಷ್ಮಿ ಯೋಜನೆ ಮುಂದುವರಿಕೆ ಸಂತಸ ತಂದಿದೆ. ಮಕ್ಕಳಿಗೆ ಸಾಮಾಜಿಕ ಜಾಲತಾಣ ಬಳಕೆ ನಿಷೇಧ ಮಾಡಲು ಮುಂದಾಗಿರುವುದು ಉತ್ತಮ

ಸುಜಾತಾ ಜೋಗಿ, ಮಂಗಳೂರು

ರಾಜ್ಯ ಬಜೆಟ್ 2026-27

■ ಆಶಾದೀಪ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಒಟ್ಟು 5,062 ಅಭ್ಯರ್ಥಿಗಳ ಪರವಾಗಿ ಅರ್ಹ ಉದ್ಯೋಗದಾತರಿಗೆ ₹18 ಕೋಟಿ ಮರುಪಾವತಿ

■ ಬೀದಿ ಬದಿ ವ್ಯಾಪಾರಿಗಳಿಗೆ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣ ಒದಗಿಸಲು ಸಮೀಕ್ಷೆ ಮಾಡಲು, ಗುರುತಿನ ಚೀಟಿ, ಮಾರಾಟ ಪ್ರಮಾಣ ಪತ್ರ ನೀಡಲು, ಪಟ್ಟಣ ಮಾರಾಟ ಸಮಿತಿ ರಚಿಸಲು ₹7 ಕೋಟಿ

■ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಉತ್ಪಾದಿಸುವ ರೇಷ್ಮೆಗೂಡುಗಳನ್ನು ಸರ್ಕಾರದ ಯಾವುದೇ ರೇಷ್ಮೆ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಪ್ರತಿ ಕೆ.ಜಿ. ಗೂಡಿಗೆ ಇರುವ ₹10 ಸಾಗಾಣಿಕಾ ವೆಚ್ಚ ₹20ಕ್ಕೆ ಹೆಚ್ಚಳ

ಕರ್ನಾಟಕ ರಾಜ್ಯ ಉಗ್ರಾಣ ನಿಗಮವನ್ನು ಆರ್ಥಿಕವಾಗಿ ಸದೃಢಗೊಳಿಸುವ ನಿಟ್ಟಿನಲ್ಲಿ ನಿಗಮದ ಅನುಪಯುಕ್ತ ಆಸ್ತಿಗಳನ್ನು ನಗದೀಕರಣಗೊಳಿಸಲು ಉದ್ದೇಶಿಸಲಾಗಿದೆ

₹1,793 ಕೋಟಿ ರಾಜ್ಯ ಎಲ್ಲ ಜಿಲ್ಲೆಗಳ ಏತ ನೀರಾವರಿ, ಚೆಕ್‌ಡ್ಯಾಂ, ಕೆರೆ ಪುನಶ್ಚೇತನ ಸಹಿತ 112 ಕಾಮಗಾರಿಗಳಿಗೆ ಅನುದಾನ

₹10,433 ಕೋಟಿ ಜಲ ಜೀವನ್ ಮಿಷನ್ ಯೋಜನೆಗೆ ಕಾಯ್ದಿರಿಸಿರುವ ಅನುದಾನ

₹100 ಕೋಟಿ ಮುಖ್ಯಮಂತ್ರಿ ಕೃಷಿ ವಿಸ್ತಾರ ಯೋಜನೆ



ಕೃಷಿಕರ ನೆರವಿಗೆ ಬರುತ್ತಿದೆ ಮುಖ್ಯಮಂತ್ರಿ ಕೃಷಿ ವಿಸ್ತಾರ

ಸೊರಗಿದ ನೀರಾವರಿ • ಗ್ರಾಮೀಣಭಿವೃದ್ಧಿಗೆ ₹176 ಕೋಟಿ ಕಡಿಮೆ

• ಎಸ್.ರವಿಪ್ರಕಾಶ್

ಕೃಷಿ ವಲಯಕ್ಕೆ ಈ ಬಾರಿ ಅನುದಾನವನ್ನು ಗಣನೀಯವಾಗಿ ಹೆಚ್ಚಿಸಿದ್ದು, ಉತ್ಪಾದನೋತ್ತರ ಕೃಷಿ ಚಟುವಟಿಕೆಗಳಿಗೆ ಆದ್ಯತೆ ನೀಡಿರುವುದು ವಿಶೇಷ. ಆದರೆ, ನೀರಾವರಿಗೆ ಅಲ್ಪಮೊತ್ತ ಹೆಚ್ಚಳ ಮಾಡಿದ್ದರೂ, ಪ್ರಮುಖ ನೀರಾವರಿ ಯೋಜನೆಗಳಿಗೆ ಹಣ ನಿಗದಿ ಮಾಡಿಲ್ಲ. ಗ್ರಾಮೀಣಾಭಿವೃದ್ಧಿಗೆ ಹಿಂದಿನ ಬಾರಿಗಿಂತ ಕಡಿಮೆ ಮೊತ್ತ ನಿಗದಿ ಮಾಡಲಾಗಿದೆ.

ಉತ್ಪಾದನೋತ್ತರ ಕೃಷಿ ಚಟುವಟಿಕೆಗಳಾದ ಸಂಸ್ಕರಣೆ, ಮೌಲ್ಯವರ್ಧನೆ, ಮೌಲ್ಯ ಸರಪಳಿ ಅಭಿವೃದ್ಧಿ, ಕೃಷಿ ತ್ಯಾಜ್ಯಗಳ ಮರುಬಳಕೆ ಮತ್ತು ಮಾರುಕಟ್ಟೆ ಸಂಪರ್ಕಗಳನ್ನು ಬಲಪಡಿಸಲು ಹಾಗೂ ಗ್ರಾಮೀಣ ರೈತರಿಗೆ ಸ್ಥಿರ, ಹೆಚ್ಚುವರಿ ಆದಾಯದ ಮೂಲಗಳನ್ನು ಸೃಷ್ಟಿಸಲು 'ಮುಖ್ಯಮಂತ್ರಿ ಕೃಷಿ ವಿಸ್ತಾರ' ಎಂಬ ಹೊಸ ಯೋಜನೆಯನ್ನು ಪ್ರಕಟಿಸ ಲಾಗಿದೆ. ಮೂರು ವರ್ಷಗಳಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿ ₹100 ಕೋಟಿ ನಿಗದಿ ಮಾಡಲಾಗಿದೆ.

ಸಿರಿಧಾನ್ಯ ಮತ್ತು ಸಾವಯವ ಉತ್ಪನ್ನಗಳನ್ನು ಉತ್ತೇಜನಕ್ಕಾಗಿ 'ಮಿಲೆಟ್ ಹಬ್' ಯೋಜನೆಯಡಿ ರೈತರು, ಗ್ರಾಮೀಣ ಯುವಕರು ಮತ್ತು ನವೋದ್ಯಮಿಗಳಿಗೆ ತಾಂತ್ರಿಕ ಸಹಾಯ, ಸಂಸ್ಕರಣಾ ಸೌಲಭ್ಯ, ಗುಣಮಟ್ಟ ಪ್ರಮಾಣೀಕರಣ ಮತ್ತು ಮಾರುಕಟ್ಟೆ ಸಂಪರ್ಕಗಳನ್ನು ಒಂದೇ ಸೂರಿನಡಿ ಕಲ್ಪಿಸುವ ಏಕ ಗವಾಕ್ಷಿ ವ್ಯವಸ್ಥೆ ರೂಪಿಸಲು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ಪರಿಸರ ಸ್ನೇಹಿ ಮತ್ತು ಸುಸ್ಥಿರ ಕೃಷಿ ಪದ್ಧತಿಗಳನ್ನು ಉತ್ತೇಜಿಸಲು 'ವಸುಧಾಮೃತ' ಎಂಬ ಹೊಸ ಕಾರ್ಯಕ್ರಮ ರೂಪಿಸಿದೆ. ಬೆಳೆಗಳಿಗೆ ಕೀಟ ಮತ್ತು ರೋಗಗಳನ್ನು ಆರಂಭಿಕ ಹಂತದಲ್ಲೇ ಪತ್ತೆ ಹಚ್ಚಿ ನಿಯಂತ್ರಿಸಲು ಪರಿಸರ ಸ್ನೇಹಿ ಜೈವಿಕ ಪೀಡೆನಾಶಕ /ಜೈವಿಕ ಕೀಟನಾಶಕಗಳ ಜೊತೆಗೆ ಇತರೆ ಸುರಕ್ಷತಾ ನಿರ್ವಹಣಾ ಶಿಫಾರಸುಗಳನ್ನು ಮಾಡಲು 'ಸಸ್ಯ ಸಂಜೀವಿನಿ ಯೋಜನೆ ಜಾರಿಗೊಳಿಸುತ್ತಿದೆ. ರೈತರಿಗೆ ಹವಾಮಾನ, ಮಾರುಕಟ್ಟೆ, ಕೃಷಿ ತಾಂತ್ರಿಕತೆ ಮತ್ತು ಇಲಾಖಾ ಮಾಹಿತಿ ತ್ವರಿತವಾಗಿ ಒದಗಿಸಲು ರೈತ ಕರೆ ಕೇಂದ್ರವನ್ನು ಎಐ ತಂತ್ರಜ್ಞಾನದಿಂದ ಉನ್ನತೀಕರಿಸಲು ಮುಂದಾಗಿದೆ.

ಕಳಪೆ, ಅಸುರಕ್ಷಿತ, ದೋಷಪೂರಿತ ಬೀಜಗಳು ಮತ್ತು ಕೀಟನಾಶಕ ಪೂರೈಕೆ, ಕೃಷಿ ಪರಿಕರಗಳನ್ನು ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದನ್ನು ತಡೆಗಟ್ಟುವುದಕ್ಕೆ ಸರ್ಕಾರ ಏನು ಮಾಡಬೇಕೆಂದು ಸೂಕ್ತ ಶಿಫಾರಸುಗಳನ್ನು ನೀಡಲು ರಾಜ್ಯ ಮಟ್ಟದ ಸಲಹಾ ಸಮಿತಿ ರಚಿಸಲು ಪ್ರಸ್ತಾಪಿಸಲಾಗಿದೆ. ಇದೊಂದು ಸಕಾಲಿಕ ಮತ್ತು ಉತ್ತಮ ಪ್ರಯತ್ನವಾಗಿದೆ.

ಸಣ್ಣ ಮತ್ತು ಅತಿ ಸಣ್ಣ ರೈತರಿಗಾಗಿ ಕೃಷಿ ಯಾಂತ್ರೀಕರಣ ಯೋಜನೆಯಡಿ ಎತ್ತು ಚಾಲಿತ ಮತ್ತು ಕೈಚಾಲಿತ ಉಪಕರಣಗಳ ಒದಗಿಸಲು ಸರ್ಕಾರ ಮುಂದಾಗಿದೆ. ಉತ್ತರ ಕರ್ನಾಟಕ ಭಾಗದಲ್ಲಿ ರೇಷ್ಮೆಯನ್ನು ಪ್ರೋತ್ಸಾಹಿಸಲು ಸಾಗಣಿಕೆ ವೆಚ್ಚ ₹10 ಹೆಚ್ಚಿಸಲಾಗಿದೆ. ರಾಮನಗರ, ಶಿಡ್ಲಘಟ್ಟ, ಹಾವೇರಿ, ಪಾಂಡವಪುರ ಹಾಗೂ ಕಲಬುರಗಿಯಲ್ಲಿ ರೇಷ್ಮೆ ಪಾರ್ಕ್‌ಗಳ ಸ್ಥಾಪಿಸಲು ಸರ್ಕಾರ ಮುಂದಾಗಿದೆ.

ಜಾನುವಾರುಗಳ ಸಂತಾನೋತ್ಪತ್ತಿ ಸಮಸ್ಯೆಗಳನ್ನು ನಿವಾರಿಸಲು 'ವರ್ಷಕ್ಕೊಂದು ಕರು' ಎಂಬ ಘೋಷ ವಾಕ್ಯದೊಂದಿಗೆ ರಾಜ್ಯದ 1,000 ಗ್ರಾಮ ಪಂಚಾಯಿತಿಗಳಲ್ಲಿ 'ಫಲಧಾರೆ ಶಿಬಿರ'ಗಳನ್ನು ಆಯೋಜಿಸುವುದಾಗಿ ಪ್ರಕಟಿಸಲಾಗಿದೆ. ಗ್ರಾಮೀಣಾಭಿವೃದ್ಧಿ-ಪಂಚಾಯತ್ ರಾಜ್ ಇಲಾಖೆಗೆ ಅನುದಾನದ ಪ್ರಮಾಣ ಕಳೆದ ಬಾರಿಗಿಂತ ಕಡಿಮೆಯಾಗಿದೆ. ಗಮನಾರ್ಹ ಎನಿಸುವ ಹೊಸ ಯೋಜನೆಗಳನ್ನು ಪ್ರಕಟಿಸಿಲ್ಲ. ಆದರೆ, ಎಲ್ಲ ಗ್ರಾಮ ಪಂಚಾಯಿತಿಗಳನ್ನೂ 'ಮಹಾತ್ಮಗಾಂಧಿ ಗ್ರಾಮ ಪಂಚಾಯಿತಿ' ಎಂದು ನಾಮಕರಣ ಮಾಡಲು ತೀರ್ಮಾನಿಸಲಾಗಿದೆ. ಆದರೆ, ಗ್ರಾಮ ಪಂಚಾಯಿತಿಗಳ ಆಸ್ತಿಗಳ ನಗದೀಕರಣ ಪ್ರಸ್ತಾಪವನ್ನು ಮುಂದಿಟ್ಟಿದೆ. ಈ ಮೂಲಕ ಸ್ಥಳೀಯ ಆರ್ಥಿಕ ಬಲವರ್ಧನೆಗೆ ಒತ್ತು ನೀಡಲಾಗುವುದು. ಆಸ್ತಿ ನಗದೀಕರಣ ಮತ್ತು ಮೌಲ್ಯವರ್ಧನೆ ಕಾರ್ಯಕ್ರಮ ಕುರಿತು ಆಕ್ಷೇಪ ವ್ಯಕ್ತವಾಗುವ ಸಾಧ್ಯತೆ ಇದೆ. ಇಲಾಖೆಗೆ ಅನುದಾನದ ಪ್ರಮಾಣ ಕಳೆದ ಸಾಲಿಗಿಂತ ₹176 ಕೋಟಿ ಕಡಿಮೆ ಮಾಡಲಾಗಿದೆ.

ನರೇಗಾ ರದ್ದು ಮಾಡಿ 'ವಿಬಿ ಜಿ ರಾಮ್ ಜಿ' ಯೋಜನೆಯ ಟೀಕಾ ಪ್ರಹಾರಕ್ಕೆಂದೇ ಎರಡು ಪುಟಗಳನ್ನು ಮೀಸಲಿರಿಸಲಾಗಿದೆ. ಅದೇ ರೀತಿ ಜಲ್‌ಜೀವನ್ ಮಿಷನ್ ಅಡಿ ಕೇಂದ್ರ ಹಣ ಬಿಡುಗಡೆ ಮಾಡಿಲ್ಲ ಎಂಬ ಟೀಕೆಯೇ ಹೆಚ್ಚಾಗಿದೆ. 'ವಿಬಿ ಜಿ ರಾಮ್ ಜಿ' ಯೋಜನೆ ಮುಂದುವರಿಸುತ್ತಾರೋ ಇಲ್ಲವೊ ಎಂಬ ಬಗ್ಗೆ ಯಾವುದೇ ಸುಳಿವೂ ಮುಂಗಡಪತ್ರದಲ್ಲಿ ಇಲ್ಲ. ಗ್ರಾಮೀಣ ರಸ್ತೆ ಸಂಪರ್ಕದ ವಿಚಾರವಾಗಿ ಹಿಂದಿನ ಯೋಜನೆಗಳಿಗೆ ಒಂದಷ್ಟು ಅನುದಾನ ನೀಡಲಾಗಿದೆ.

ನೀರಾವರಿ ಕ್ಷೇತ್ರಕ್ಕೆ ಅನುದಾನದಲ್ಲಿ ಅಲ್ಪ ಮೊತ್ತ ಮಾತ್ರ ಹೆಚ್ಚಿಸಲಾಗಿದೆ. ಆದರೆ ಯಾವುದೇ ಮಹತ್ವದ ನೀರಾವರಿ ಯೋಜನೆ ಗಳಿಗೆ ಹೊಸದಾಗಿ ಅನುದಾನ ನಿಗದಿ ಮಾಡಿಲ್ಲ. ಚಾಮರಾಜನಗರ ಜಿಲ್ಲೆ ಹನೂರು ತಾಲ್ಲೂಕಿನಲ್ಲಿ 12 ಸಾವಿರ ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಒದಗಿಸಲು ಉಡುತೊರೆಹಳ್ಳ ಯೋಜನೆಗೆ ₹490 ಕೋಟಿ ಪ್ರಕಟಿಸಲಾಗಿದೆ. ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ಪರಿಷ್ಕೃತ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಿ ಶೀಘ್ರವೇ ಕೇಂದ್ರಕ್ಕೆ ಸಲ್ಲಿಸುವುದಾಗಿ ಹೇಳಿದೆ. ಎತ್ತಿನಹೊಳೆ, ಭದ್ರಾ ಮೇಲ್ದಂಡೆ ಯೋಜನೆ ವಿಚಾರದಲ್ಲಿ ಹೊಸ ಮಾಹಿತಿ ಇಲ್ಲ. ಯುಕೆಪಿ–3 ರ ಯೋಜನೆಗಾಗಿ ಈ ವರ್ಷ ಜಮೀನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಹೇಳಿದೆ. ತುಂಗಾಭದ್ರಾ ಅಣೆಕಟ್ಟೆ, ಮಹದಾಯಿ ಕಣಿವೆ ಕಳಸಾ– ಬಂಡೂರಿ ನಾಲಾ ಯೋಜನೆಗೆ ಸಂಬಂಧಿಸಿದಂತೆ ಆಶಾದಾಯಕ ಘೋಷಣೆಗಳಿಲ್ಲ. ಅನುಬಂಧದಲ್ಲಿ ಉಲ್ಲೇಖಿಸಿರುವ ಹಲವು ಯೋಜನೆಗಳು ಈಗಾಗಲೇ ಚಾಲ್ತಿಯಲ್ಲಿರುವ ಅಥವಾ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಪಡೆದಿರುವ ಯೋಜನೆಗಳಾಗಿವೆ. ಆದರೆ ಸಣ್ಣ ನೀರಾವರಿ ಅಡಿ ಒಂದಷ್ಟು ಕೆರೆಗಳನ್ನು ತುಂಬಿಸುವ ಯೋಜನೆಗಳನ್ನು ಪ್ರಕಟಿಸಲಾಗಿದೆ.

₹22,436 ಕೋಟಿ ನೀರಾವರಿ ಉದ್ದೇಶಕ್ಕೆ ಮೀಸಲಿಟ್ಟಿರುವ ಅನುದಾನ

₹8,373 ಕೋಟಿ ಕೃಷಿ ಮತ್ತು ತೋಟಗಾರಿಕೆಗೆ ಹಂಚಿಕೆ ಮಾಡಲಾದ ಮೊತ್ತ

₹4,048 ಕೋಟಿ ಪಶು ಸಂಗೋಪನೆ ಮತ್ತು ಮೀನುಗಾರಿಕೆಗೆ ಸಿಕ್ಕಿದ ಅನುದಾನ

₹26,559 ಕೋಟಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಹಂಚಿಕೆ

ಕಾರ್ಮಿಕರಿಗೆ ಸಿಗದ ವೇತನ ಪರಿಷ್ಕರಣೆ ಭಾಗ್ಯ

ವಿಮಾ ಆಸ್ಪತ್ರೆಗಳ ಉನ್ನತೀಕರಣ, ಸ್ತನ ಮತ್ತು ಗರ್ಭಕಂಠದ ಕ್ಯಾನ್ಸರ್ ತಪಾಸಣೆ ಮತ್ತು ಲಸಿಕೆ ಸೇರಿದಂತೆ ಕಾರ್ಮಿಕರ ಆರೋಗ್ಯದ ಕಡೆಗೆ ಈ ಬಾರಿಯ ಬಜೆಟ್‌ನಲ್ಲಿ ಗಮನ ಹರಿಸಲಾಗಿದೆ. ಆದರೆ, ಕಾರ್ಮಿಕರಿಗೆ ಕನಿಷ್ಠ ವೇತನ ಪರಿಷ್ಕರಣೆ, ತುಟ್ಟಿಭತ್ಯೆ ಏರಿಸುವ ಬಗ್ಗೆ ಯಾವುದೇ ಘೋಷಣೆಗಳಿಲ್ಲದೇ ಕಾರ್ಮಿಕರಿಗೆ ನಿರಾಸೆ ಉಂಟು ಮಾಡಿದೆ.

ಮಹಿಳೆಯರಿಗೆ ಋತುಚಕ್ರದ ಸಮಯದಲ್ಲಿ ವೇತನ ಸಹಿತಒಂದು ದಿನ ರಜೆ, ಕಟ್ಟಡ ಕಾರ್ಮಿಕರ ಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸಲು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ತಲಾ ₹60 ಕೋಟಿ ವೆಚ್ಚದಲ್ಲಿ 10 ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರಗಳನ್ನು (ಜಿಟಿಟಿಸಿ) ಸ್ಥಾಪಿಸಲು ಮುಂದಾಗಿರುವುದು, ಒಟ್ಟು 104 ಶ್ರಮಿಕ ವಸತಿ ಶಾಲೆಗಳನ್ನು ತೆರೆಯುವ ಗುರಿ ಇಟ್ಟುಕೊಂಡಿರುವುದು ಸಕಾರಾತ್ಮಕ ಅಂಶಗಳಾಗಿವೆ.

ಹುಬ್ಬಳ್ಳಿ–ಧಾರವಾಡ ಮಹಾನಗರದಲ್ಲಿ ₹200 ಕೋಟಿ ವೆಚ್ಚದಲ್ಲಿ ಕೌಶಲ ತರಬೇತಿ ಅಕಾಡೆಮಿ ಸ್ಥಾಪನೆ, ₹5 ಕೋಟಿ ವೆಚ್ಚದಲ್ಲಿ 'ಕಾಯಕ ಭಾಗ್ಯ' ಆನ್‌ಲೈನ್ ಉದ್ಯೋಗ ವಿನಿಮಯ ಕೇಂದ್ರವನ್ನು ಸ್ಥಾಪನೆ, ಹುಬ್ಬಳ್ಳಿ, ಇಂದಿರಾನಗರ, ಮೈಸೂರು ಮತ್ತು ದೊಡ್ಡಬಳ್ಳಾಪುರದಲ್ಲಿ ಪ್ಯಾರಾ ಮೆಡಿಕಲ್ ಕೋರ್ಸ್, ಇಂದಿರಾನಗರದಲ್ಲಿ ಮೂರು ವರ್ಷದ ಸ್ನಾತಕೋತ್ತರ (ಡಿಎನ್‌ಬಿ) ಕೋರ್ಸ್, ರಾಯಚೂರು, ವಿಜಯಪುರ, ಬಾಗಲಕೋಟೆ, ಬೀದರ್, ಕೊಪ್ಪಳ, ಚಿತ್ರದುರ್ಗ, ಮಂಡ್ಯ, ಭದ್ರಾವತಿ, ಕೆ.ಜಿ.ಎಫ್ ಮತ್ತು ಚಿಕ್ಕಮಗಳೂರಿನಲ್ಲಿರುವ ಕಾರ್ಮಿಕ ರಾಜ್ಯ ವಿಮಾ (ಇಎಸ್‌ಐ) ಆಸ್ಪತ್ರೆಗಳನ್ನು ಉನ್ನತೀಕರಿಸುತ್ತಿರುವುದು ಉತ್ತಮ ಬೆಳವಣಿಗೆ.

9 ವರ್ಷಗಳಿಂದ ಕನಿಷ್ಠ ವೇತನ ಪರಿಷ್ಕರಣೆ ಆಗಿಲ್ಲ. ಈ ಬಾರಿಯಾದರೂ ಈ ಬಗ್ಗೆ ಪ್ರಸ್ತಾವ ಇರಬಹುದು ಎಂಬ ನಿರೀಕ್ಷೆ ಹುಸಿಯಾಗಿದೆ. ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆಗೆ ಮುಂದಾಗಿರುವುದು ಸಮಾಧಾನಕರ ವಿಷಯ.

ಜಾನುವಾರು ರೋಗ ಪತ್ತೆಗೆ ಸಿಟಿಸ್ಕ್ಯಾನ್

ಪಶು ರೋಗ ನಿಖರ ಪತ್ತೆಗೆ ಪ್ರಥಮ ಬಾರಿಗೆ ಬೆಂಗಳೂರು ಹಾಗೂ ಬೀದರ್ ಪಶುವೈದ್ಯ ಮಹಾವಿದ್ಯಾಲಯದ ಪಶು ಆಸ್ಪತ್ರೆಗಳಲ್ಲಿ ಜಾನುವಾರು ಸಿ.ಟಿ.ಸ್ಕ್ಯಾನಿಂಗ್ ಕೇಂದ್ರ ಸ್ಥಾಪಿಸಲಾಗುತ್ತಿದೆ.

ಪಶು ಮಹಾವಿದ್ಯಾಲಯ ವೈದ್ಯರು, ವಿದ್ಯಾರ್ಥಿಗಳಿಗೆ ತಾಂತ್ರಿಕ ತರಬೇತಿ ನೀಡಲು 'ಶ್ವಾನ ಸಂತಾನ ನಿಯಂತ್ರಣ ತರಬೇತಿ ಕೇಂದ್ರ' ಸ್ಥಾಪನೆಯಾಗಲಿವೆ.

'ಮಾನವ–ವನ್ಯಜೀವಿ ಸಂಘರ್ಷ ನಿವಾರಣಾ ಕಾರ್ಯತಂತ್ರ ಯೋಜನೆ'ಗೆ 5 ವರ್ಷ ₹1,500 ಕೋಟಿ ವೆಚ್ಚ ಮಾಡಲಾಗುತ್ತಿದ್ದು ಈ ಸಾಲಿಗೆ ₹269 ಕೋಟಿ ಮೀಸಲಿಡಲಾಗಿದೆ.

ಪಂಚಾಯಿತಿಗೆ ಬಲ: ನರೇಗಾ ಗೊಂದಲ

ಸ್ಥಳೀಯ ಸರ್ಕಾರ ಎನ್ನಿಸಿರುವ ಗ್ರಾಮಪಂಚಾಯಿತಿಗಳನ್ನು ಆರ್ಥಿಕವಾಗಿ ಬಲಪಡಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಹಲವು ಕಾರ್ಯಕ್ರಮ ಪ್ರಕಟಿಸಿದೆ.

ಗ್ರಾಮ ಪಂಚಾಯಿತಿಗಳ ಆಸ್ತಿಗಳ ನಗದೀಕರಣ ಮತ್ತು ಮೌಲ್ಯವರ್ಧನೆಗೆ ಸ್ಥಳೀಯ ಆರ್ಥಿಕ ಬಲವರ್ಧನೆ ಕಾರ್ಯಕ್ರಮ ಪ್ರಕಟಿಸಲಾಗಿದೆ. ಪ್ರಾಯೋಗಿಕವಾಗಿ ಪ್ರತಿ ವಿಭಾಗದ ಐದು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಗ್ರಾಮೀಣ ಭಾಗದಲ್ಲಿ ಅವಶ್ಯವಿರುವ ಸೌಲಭ್ಯಗಳನ್ನು ಒಳಗೊಂಡ ಆದಾಯೋತ್ಪನ್ನ ಘಟಕಗಳನ್ನು ಪ್ರಸಕ್ತ ವರ್ಷ ₹25 ಕೋಟಿ ವೆಚ್ಚದಲ್ಲಿ ಸ್ಥಾಪಿಸಿ ನಿರ್ವಹಿಸುವುದಾಗಿ ತಿಳಿಸಲಾಗಿದೆ.

ಐದನೇ ರಾಜ್ಯ ಹಣಕಾಸು ಆಯೋಗ ಸಲ್ಲಿಸಿರುವ 2026-2030ರ ವರದಿ ಆಧರಿಸಿ. ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮಾಡುತ್ತಿರುವ ರಾಜ್ಯ ಸರ್ಕಾರದ ಸಾಲೇತರ ನಿವ್ವಳ ಸ್ವಂತ ರಾಜಸ್ವ ಆದಾಯ ಪ್ರಮಾಣವನ್ನು ಶೇ 48 ರಿಂದ ಶೇ 50ಕ್ಕೆ ಹೆಚ್ಚಿಸುವ ಘೋಷಣೆ ಮಾಡಲಾಗಿದೆ. ಇದರಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಶೇ 35ರಷ್ಟು ಆದಾಯ ಸಿಗಲಿದೆ.

ಸೌರ ಯೋಜನೆ ಮತ್ತೆ ಘೋಷಣೆ

ಗ್ರಾಮಪಂಚಾಯಿತಿಗಳು ವಿದ್ಯುತ್ ಬಿಲ್ ಪಾವತಿಯಲ್ಲಿ ಸುಸ್ಥಿರಗೊಳಿಸಲು ಹಿಂದಿನ ಬಜೆಟ್‌ನಲ್ಲಿ ಪ್ರಕಟಿಸಿದ್ದ ಸೌರ ಮೈಕ್ರೋ ಗ್ರಿಡ್‌ಗಳನ್ನು ಈ ಬಾರಿಯೂ ಘೋಷಿಸಲಾಗಿದೆ.

ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ವಾರ್ಷಿಕವಾಗಿ ಅಂದಾಜು 400 ಮೆಗಾ ವಾಟ್ ವಿದ್ಯುತ್ ಉತ್ಪಾದಿಸುವ ಗುರಿಯನ್ನು ಹೊಂದಲಾಗಿದ್ದು, ಇದಕ್ಕೆ 'ಅನಂತ' ಯೋಜನೆ ಎಂದು ಹೆಸರಿಡಲಾಗಿದೆ.

ನರೇಗಾ ಬದಲಿಸಿದ್ದಕ್ಕೆ ಆಕ್ರೋಶ: ಎರಡು ದಶಕದಿಂದ ಜಾರಿಯಲ್ಲಿದ್ದು, ಕೆಲ ದಿನಗಳ ಹಿಂದೆಯಷ್ಟೇ ನರೇಗಾದಿಂದ ವಿಬಿ ಜಿ ರಾಮ್ ಜಿ ಆಗಿ ಬದಲು ಮಾಡಿರುವುದಕ್ಕೆ ರಾಜ್ಯ ಸರ್ಕಾರ ಕಾನೂನು ಹೋರಾಟ ನಡೆಸುವುದಾಗಿ ತಿಳಿಸಿದೆ.

ಗ್ರಾಮ ಪಂಚಾಯಿತಿಗಳನ್ನು ಸಬಲಗೊಳಿಸಿ ಗ್ರಾಮೀಣ ಜೀವನೋಪಾಯವನ್ನು ಬಲಪಡಿಸಿದ್ದ ಹಿಂದಿನ ವ್ಯವಸ್ಥೆಯನ್ನು ಪುನರ್ ಸ್ಥಾಪಿಸಬೇಕು. ಗ್ರಾಮೀಣ ಕಾರ್ಮಿಕರ ಹಕ್ಕು ರಕ್ಷಿಸಿ ವಿಕೇಂದ್ರೀಕೃತ ತತ್ವ ಉಳಿಸಿಕೊಳ್ಳಲೇಬೇಕು ಎಂದು ಬಜೆಟ್‌ನಲ್ಲಿ ಉಲ್ಲೇಖಿಸಲಾಗಿದೆ.

ನರೇಗಾ ಯೋಜನೆ ವಿಚಾರದಲ್ಲಿ ಕೇಂದ್ರ ಸರ್ಕಾರದ ನಡೆ ವಿರುದ್ಧ ಆಕ್ರೋಶ ಹೊರ ಹಾಕಿದರೂ ಅದನ್ನು ಯಾವ ಹೆಸರಿನಲ್ಲಿ ಮುಂದುವರೆಸಲಿದೆ ಎನ್ನುವುದನ್ನು ಪ್ರಕಟಿಸದೇ ಗೊಂದಲವನ್ನು ರಾಜ್ಯ ಮುಂದುವರಿಸಿದೆ.

ಪಂಚಾಯಿತಿಗೆ ಗಾಂಧಿ ಹೆಸರು: 'ಗಾಂಧೀಜಿ ಹೆಸರನ್ನು ಚಿರಸ್ಥಾಯಿಗೊಳಿಸುವ ಉದ್ದೇಶದಿಂದ 'ಮಹಾತ್ಮ ಗಾಂಧಿ ಗ್ರಾಮ ಪಂಚಾಯಿತಿ' ಎಂದು ನಾಮಕರಣ ಮಾಡಲಾಗುವುದು ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ.

ಜೆಜೆಎಂ ಯೋಜನೆ ಅನುದಾನ: ಜಲಜೀವನ್ ಮಿಷನ್ ಅನುದಾನ ಹಂಚಿಕೆ ವಿಚಾರದಲ್ಲಿ ಕೇಂದ್ರದ ವಿರುದ್ಧ ಆಕ್ರೋಶ ಹೊರ ಹಾಕುತ್ತಲೇ ರಾಜ್ಯವೇ ಹೆಚ್ಚುವರಿ ಅನುದಾನವನ್ನು ಪ್ರಕಟಿಸಿದೆ. ಜೆಜೆಎಂ ಯೋಜನೆಯಡಿ ₹69,488 ಕೋಟಿ ಕಾಮಗಾರಿ ಅನುಮೋದನೆಯಾಗಿದ್ದು, ಕೇಂದ್ರದ ಪಾಲು ₹30,888 ಕೋಟಿ, ರಾಜ್ಯದ ಪಾಲು ₹38,600 ಕೋಟಿ. ಕೇಂದ್ರ ಸರ್ಕಾರ ₹11,786 ಕೋಟಿ ಮಾತ್ರ ಬಿಡುಗಡೆ ಮಾಡಿದೆ. ರಾಜ್ಯದ ಅನುದಾನದಲ್ಲಿ ₹27,098 ಕೋಟಿ ಬಿಡುಗಡೆಯಾಗಿದ್ದು, ₹11,502 ಕೋಟಿ ಬಾಕಿಯಿದೆ. ಕೇಂದ್ರ 2025-26ನೇ ಸಾಲಿನಲ್ಲಿ ಅನುದಾನ ನೀಡಿಲ್ಲ. ಆದರೆ, ರಾಜ್ಯ ಸರ್ಕಾರ ಹೆಚ್ಚುವರಿ ₹15,500 ಕೋಟಿ ಬಿಡುಗಡೆ ಮಾಡಿದ್ದು, 2026-27ನೇ ಸಾಲಿನ ಅಡಿ ₹10,433 ಕೋಟಿ ಕಾಯ್ದಿರಿಸಿರುವುದಾಗಿ ಘೋಷಿಸಿದೆ.

ಪುಷ್ಪ ಕೃಷಿಯಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಭಾರತದ 'ಫ್ಲವರ್ ಹಬ್' ಎಂದು ಹೆಸರಾಗಿದೆ. ಹಳ್ಳಿಗಳಲ್ಲಿ ನಿರಂತರ ಉದ್ಯೋಗ ಸೃಷ್ಟಿಸುತ್ತಿರುವ ಮತ್ತು ವಿದೇಶಿ ಮಾರುಕಟ್ಟೆಯಲ್ಲಿ ವಾರ್ಷಿಕ ₹10 ಸಾವಿರ ಕೋಟಿ ವಹಿವಾಟು ನಡೆಸುತ್ತಿರುವ ಪುಷ್ಪ ಕೃಷಿಗೆ ಬಜೆಟ್‌ನಲ್ಲಿ ಪ್ರೋತ್ಸಾಹ ನೀಡದಿರುವುದು ವಿಪರ್ಯಾಸ

ಬಿ.ಶ್ರೀಕಾಂತ್, ಭಾರತ ಹೂವು ಬೆಳೆಗಾರರ ಮಂಡಳಿ ಅಧ್ಯಕ್ಷ, ದೊಡ್ಡಬಳ್ಳಾಪುರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶವನ್ನು ಬಜೆಟ್ ಪ್ರತಿಬಿಂಬಿಸುತ್ತದೆ. 'ಕಲ್ಯಾಣ ಪಥ' ಮತ್ತು 'ಪ್ರಗತಿ ಪಥ' ಯೋಜನೆಗಳ ಮೂಲಕ ಗ್ರಾಮೀಣ ರಸ್ತೆ ಸಂಪರ್ಕ ಜಾಲದ ವಿಸ್ತರಣೆಗೆ ಆದ್ಯತೆ ನೀಡಲಾಗಿದೆ

ಪ್ರಕಾಶ ಮಾಚೇನಹಳ್ಳಿ, ಉಪನ್ಯಾಸಕ, ಗದಗ

ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರ ಅಭಿವೃದ್ಧಿ, ಆರ್ಥಿಕ ಸ್ವಾವಲಂಬನೆಗೆ ಗಂಭೀರ ಕ್ರಮಗಳು ಬಜೆಟ್‌ನಲ್ಲಿ ಕಾಣುತ್ತಿಲ್ಲ. ಇದು ಸ್ತ್ರೀಯರನ್ನು ಕಡೆಗಣಿಸಿದ ಮಹಿಳಾ ವಿರೋಧಿ ಬಜೆಟ್

ಪದ್ಮಿನಿ ಕಿರಣಗಿ, ಅಧ್ಯಕ್ಷೆ, ಜನವಾದಿ ಮಹಿಳಾ ಸಂಘಟನೆ, ಕಲಬುರಗಿ

ಬಜೆಟ್‌ನಲ್ಲಿ ಉತ್ತರ ಮತ್ತು ದಕ್ಷಿಣ ಕರ್ನಾಟಕಕ್ಕೆ ಶಾಶ್ವತವಾದ ನೀರಾವರಿ ಯೋಜನೆಗಳನ್ನು ಘೋಷಿಸಿಲ್ಲ. ಕೆಆರ್‌ಎಸ್ ಡ್ಯಾಂನಿಂದ ಬೆಂಗಳೂರಿಗೆ ಕುಡಿಯುವ ನೀರು ಪೂರೈಸುವ ಕಾವೇರಿ 6ನೇ ಹಂತದ ಯೋಜನೆ ಅವೈಜ್ಞಾನಿಕವಾಗಿದ್ದು, ಮಂಡ್ಯ ರೈತರ ಪಾಲಿಗೆ ಮರಣಶಾಸನವಾಗಿದೆ. ಈ ಯೋಜನೆಗೆ ಬಜೆಟ್‌ನಲ್ಲಿ ಅನುದಾನ ಒದಗಿಸುವ ಮೂಲಕ ಅನ್ನದಾತರನ್ನು ಸಂಪೂರ್ಣ ಕಡೆಗಣಿಸಲಾಗಿದೆ

ಸುನಂದಾ ಜಯರಾಂ, ರೈತ ಹೋರಾಟಗಾರ್ತಿ, ಮಂಡ್ಯ

ಬೀದಿಬದಿ ವ್ಯಾಪಾರಸ್ಥರು ಕೋಟ್ಯಂತರ ರೂಪಾಯಿ ತೆರಿಗೆ ಪಾವತಿಸುತ್ತಾರೆ. ಉದ್ಯೋಗ ಭದ್ರತೆ, ಉದ್ಯಮ ವಲಯ ನಿರ್ಮಾಣ ಮಾಡುವಂತೆ ಇಟ್ಟಿರುವ ಬೇಡಿಕೆಗೆ ಸರ್ಕಾರ ಸ್ಪಂದಿಸಿಲ್ಲ.

ಕೆ.ಕೃಷ್ಣಮೂರ್ತಿ, ಉಪಾಧ್ಯಕ್ಷ, ರಾಜ್ಯ ಸಂಯುಕ್ತ ಬೀದಿಬದಿ ವ್ಯಾಪಾರಿಗಳ ಸಂಘ, ದಾವಣಗೆರೆ

ರೈತರ ಅಭ್ಯುದಯಕ್ಕೆ ಮೂರು ವರ್ಷಗಳಲ್ಲಿ ಸಿಕ್ಕಿರುವ ಅನುದಾನ (ಕೋಟಿಗಳಲ್ಲಿ)



ನೀರಾವರಿ ಯೋಜನೆಗಳಿಗೆ ಅನುದಾನ

₹490 ಕೋಟಿ	ಹನೂರಿಗೆ ನೀರು ಒದಗಿಸುವ ಉಡುತೊರೆಹಳ್ಳ ಯೋಜನೆ
₹8,045 ಕೋಟಿ	ಕೃಷ್ಣಾ, ಕಾವೇರಿ, ಗೋದಾವರಿ ನದಿ ಕಣಿವೆಗಳಲ್ಲಿ ಕಾಮಗಾರಿ
₹237 ಕೋಟಿ	ಶಿಡ್ಲಘಟ್ಟ, ಚಿಂತಾಮಣಿ ತಾಲ್ಲೂಕುಗಳ 164 ಕೆರೆಗಳಿಗೆ ನೀರು
₹140 ಕೋಟಿ	ಹೊಸಕೋಟೆಯ 59 ಕೆರೆಗಳಿಗೆ ಸಂಸ್ಕರಿಸಿದ ನೀರು
₹650 ಕೋಟಿ	ನೆಲಮಂಗಲ, ದೊಡ್ಡಬಳ್ಳಾಪುರದ 119 ಕೆರೆಗಳಿಗೆ ನೀರು
₹500 ಕೋಟಿ	ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಒದಗಿಸಿರುವ ಅನುದಾನ

ಕೃಷಿ ಪರಿಕರಗಳ 'ರೈತ ಮಾಲ್'

ಕೃಷಿ ಪರಿಕರಗಳು ಒಂದೇ ಕಡೆ ಲಭ್ಯವಾಗುವಂತೆ ಮಾಡಲು ಸರ್ಕಾರಿ ಸ್ವಾಮ್ಯದ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) 'ರೈತ ಮಾಲ್' ಆರಂಭಿಸುವುದಾಗಿ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ.

ರೈತರಿಗೆ ಉತ್ತಮ ಗುಣಮಟ್ಟದ ಕೃಷಿ ಪರಿಕರಗಳನ್ನು ಕೈಗೆಟುಕುವ ದರದಲ್ಲಿ ಲಭ್ಯವಾಗಿಸುವುದರ ಜತೆಗೆ ಮಾರುಕಟ್ಟೆ ಗೊಂದಲ ನಿವಾರಿಸಲು ಬಿತ್ತನೆ ಬೀಜ, ಕೀಟನಾಶಕ, ರಸಗೊಬ್ಬರ ಹಾಗೂ ಕೃಷಿ ಯಂತ್ರೋಪಕರಣಗಳು ಒಂದೇ ಸೂರಿನಡಿ ಮಾರಾಟ ಮಾಡಲು ಪ್ರಾಯೋಗಿಕವಾಗಿ ಕೋಲಾರ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ಮಾಲ್ ಸ್ಥಾಪಿಸುವ ಯೋಜನೆ ರೂಪಿಸಲಾಗಿದೆ.

ತೋಟಗಾರಿಕೆ ಇಲಾಖೆ ಕ್ಷೇತ್ರ ಮತ್ತು ನರ್ಸರಿಗಳ ಜಮೀನು ಉಪಯೋಗಿಸಿ ಉತ್ಕೃಷ್ಟ ಮೌಲ್ಯದ ತೋಟಗಳ ಅಭಿವೃದ್ಧಿ, ಕೊಯ್ಲೋತ್ತರ ಸೌಲಭ್ಯ ಹಾಗೂ ತೋಟಗಾರಿಕೆ ಆಧಾರಿತ ಕೈಗಾರಿಕೆಗಳನ್ನು ಪಿಪಿಪಿ ಮಾದರಿಯಲ್ಲಿ ಸ್ಥಾಪಿಸುವುದಾಗಿ ತಿಳಿಸಲಾಗಿದೆ. ಅಡಿಕೆ ಬೆಳೆಯ ಎಲೆ ಚುಕ್ಕಿ, ಹಳದಿ ಎಲೆ, ಕೊಳೆ ರೋಗಗಳು ಮತ್ತು ತೆಂಗು ಬೆಳೆಯ ಕಪ್ಪು ತಲೆ ಹುಳು ಹಾಗೂ ಬಿಳಿ ನೊಣಗಳ ನಿಯಂತ್ರಣಕ್ಕೆ ವಿಶ್ವವಿದ್ಯಾಲಯ, ಕೃಷಿ ವಿಜ್ಞಾನ ಕೇಂದ್ರ ಸಹಯೋಗದಲ್ಲಿ ಸಮುದಾಯ ಆಧಾರಿತ ರೋಗ–ಕೀಟ ನಿಯಂತ್ರಣ ಕ್ರಮಗಳನ್ನು ₹10 ಕೋಟಿ ವೆಚ್ಚದಲ್ಲಿ ಕೈಗೊಳ್ಳಲಾಗುವುದು. ಮೇಕೆ ತಳಿಗಳ ಉನ್ನತೀಕರಣಕ್ಕೆ ಮೈಸೂರಿನಲ್ಲಿ ಬೋಯರ್ ಮೇಕೆ ತಳಿ ಸಂವರ್ಧನಾ ಕೇಂದ್ರ ಆರಂಭಿಸಲಾಗುತ್ತದೆ.

ಒಳನಾಡು ಮೀನುಗಾರಿಕೆ ಚಟುವಟಿಕೆ ಪ್ರೋತ್ಸಾಹ ನೀಡಲು, ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ ಮತ್ತು ಚಿಕ್ಕಮಗಳೂರಿನಲ್ಲಿ ಮತ್ಸ್ಯದರ್ಶಿನಿಗಳನ್ನು ಆರಂಭಿಸುವುದಾಗಿ ಘೋಷಿಸಲಾಗಿದೆ. ಸಹಕಾರ ಇಲಾಖೆಯಡಿ ಮೆಕ್ಕೆಜೋಳ ಖರೀದಿಸಲು ₹100 ಕೋಟಿ ನೆರವು, ಎಪಿಎಂಸಿ ಕಾರ್ಯಚಟುವಟಿಕೆ ಡಿಜಿಟಲೀಕರಣ, ಇಆರ್‌ಪಿ ಜಾರಿಗೆ ₹10 ಕೋಟಿ ಮೀಸಲಿಡಲಾಗಿದೆ.

ಏನಿದೆ ವಿಶೇಷ?

- ಪರಿಸರ ಸ್ನೇಹಿ, ಸುಸ್ಥಿರ ಕೃಷಿ ಪದ್ಧತಿ ಉತ್ತೇಜನಕ್ಕೆ **'ವಸುಧಾಮೃತ'**
- ಎಐ ತಂತ್ರಜ್ಞಾನದಿಂದ **'ರೈತ ಕರೆ ಕೇಂದ್ರ'**ಗಳ ಉನ್ನತೀಕರಣ
- ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಬಾಗಲಕೋಟೆ ಜಿಲ್ಲೆಯಲ್ಲಿ ಸುಸಜ್ಜಿತ ಮೀನು ಮಾರುಕಟ್ಟೆ
- ಗ್ರಾಮೀಣ ಭಾಗದಲ್ಲಿ ಆದಾಯೋತ್ಪನ್ನ ಘಟಕ ಸ್ಥಾಪನೆಗೆ **₹25 ಕೋಟಿ**
- ಸಣ್ಣ ನೀರಾವರಿ ಇಲಾಖೆಯಡಿಯ ಕೆರೆ ಬಳಕೆದಾರರ ಸಂಘಗಳ ಬಲವರ್ಧನೆ

ಸಂಪೂರ್ಣ ಸಾವಯವ ತಾಲ್ಲೂಕು

ಮಂಡ್ಯ ಜಿಲ್ಲೆಯ ಪಾಂಡವಪುರವನ್ನು ಸಂಪೂರ್ಣ ಸಾವಯವ ತಾಲ್ಲೂಕನ್ನಾಗಿ ಪರಿವರ್ತಿಸಿ, ಅಧಿಕೃತ ಸಾವಯವ ಪ್ರಮಾಣೀಕರಣ ವ್ಯವಸ್ಥೆಯನ್ನು ಜಾರಿಗೆ ತರುವ ಯೋಜನೆಯನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ.

ತಜ್ಞರ ಅಭಿಪ್ರಾಯ

'ಕೃಷಿಕರಿಗೆ ಸಮಾಧಾನ ತರದ ಬಜೆಟ್'



ಬಜೆಟ್‌ನಲ್ಲಿ ರೈತರಿಗೆ ಸಮಾಧಾನ ಆಗುವಂಥ ಯಾವುದೇ ಯೋಜನೆ ಕೊಟ್ಟಿಲ್ಲ. ಕೃಷಿಗೆ ₹8,348 ಕೋಟಿ ಘೋಷಿಸಿದ್ದಾರೆ. ಇದರಲ್ಲಿ ಕೃಷಿ ಮತ್ತು ತೋಟಗಾರಿಕೆ ಎರಡನ್ನೂ ಸೇರಿಸಿದ್ದು ಸರಿಯಲ್ಲ.

ಗೃಹಲಕ್ಷ್ಮಿ ಮಾದರಿಯಲ್ಲಿ ವಯಸ್ಸಾದ ರೈತರಿಗೆ ತಲಾ ₹5 ಸಾವಿರ ತಿಂಗಳ ನೆರವು ಕೇಳಲಾಗಿತ್ತು. ಪ್ರಕೃತಿ ವಿಕೋಪದಿಂದ ಆಗುವ ಹಾನಿ ಭರಿಸಲು ₹10 ಸಾವಿರ ಕೋಟಿ ಆವರ್ತನಿಧಿ, ಕಬ್ಬಿಗೆ ಪ್ರೋತ್ಸಾಹ ಧನ ನೀಡಲು ₹1 ಸಾವಿರ ಕೋಟಿ ಇಡಗಂಟು ಇಡಲು ಕೋರಲಾಗಿತ್ತು. ಯಾವುದನ್ನೂ ಪರಿಗಣಿಸಿಲ್ಲ.

ಕಳಪೆ ಬೀಜ ಮತ್ತು ಗೊಬ್ಬರದ ಹಾವಳಿ ತಪ್ಪಿಸಲು ತಾಂತ್ರಿಕ ಸಲಹಾ ಸಮಿತಿ ರಚಿಸಲಾಗಿದೆ. ಈ ಸಮಿತಿಯು ಹಾನಿಯಾದ ಬಳಿಕ ವರದಿ ಕೊಡುತ್ತದೆ ಹೊರತು; ಹಾನಿ ತಡೆಯುವುದಿಲ್ಲ. ಬೆಳೆವಿಮೆ ಪರಿಹಾರಕ್ಕೆ ₹6,638 ಕೋಟಿ ನೀಡಿದ್ದಾರೆ. ಖಾಸಗಿ ಕಂಪನಿಗಳಿಗೆ ಹಣ; ರೈತರ ಬಾಯಿಗೆ ಮಣ್ಣು ಎನ್ನುವಂತಾಗಿದೆ. ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಈ ವಿಮೆ ವಿತರಿಸಬೇಕು ಎಂಬ ರೈತರ ದಶಕದ ಬೇಡಿಕೆ ಈಡೇರಿಸಿಲ್ಲ. ಜನರ ರಂಜನೆಗೆ 'ಗ್ಯಾರಂಟಿ' ಯೋಜನೆ ನೀಡುತ್ತಾರೆ. ಆದರೆ, ಬದುಕಲು ಬೇಕಾದ ಹೈನುಗಾರಿಕೆ, ಮೀನುಗಾರಿಕೆ, ಕೃಷಿ, ಕುಕ್ಕುಟೋದ್ಯಮ ಇಂಥವುಗಳನ್ನು ನಿರ್ಲಕ್ಷ್ಯ ಮಾಡಿದ್ದಾರೆ. ಈ ಬಜೆಟ್‌ನಲ್ಲಿ ಕೃಷಿ ಕ್ಷೇತ್ರ ಬಹಳ ಕ್ಷೀಣಿಸಿದೆ. ಬಾಯಾರಿದವರಿಗೆ ನೀರು ಕೊಡಬೇಕು, ತೀರ್ಥ ಕೊಟ್ಟರೆ ಏನು ಪ್ರಯೋಜನ?

ಸಿದಗೌಡ ಮೋದಗಿ, ಅಧ್ಯಕ್ಷ, ಭಾರತೀಯ ಕೃಷಿಕ ಸಮಾಜ–ಕರ್ನಾಟಕ

ಕಾರ್ಮಿಕ ರಂಗಕ್ಕೆ ಅರೆಕಾಸೂ ಇಲ್ಲ

ಕರ್ನಾಟಕದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುವ ಕಾರ್ಮಿಕ ವರ್ಗದ ಕಲ್ಯಾಣಕ್ಕೆ ಈ ಬಾರಿಯ ಬಜೆಟ್‌ನಲ್ಲಿ ಅರೆಕಾಸಿನ ನೆರವೂ ಸಿಕ್ಕಿಲ್ಲ. ಮಾಲೀಕ ವರ್ಗವನ್ನು ಓಲೈಸಿದಂತಿದೆ.

ಕಾರ್ಮಿಕರಿಗೆ ಮಾರಕವಾಗಿರುವ ನಾಲ್ಕು ಸಂಹಿತೆಗಳು ಜಾರಿಯಾದರೆ ಅಸ್ತಿತ್ವದಲ್ಲಿರುವ ಹಕ್ಕು, ಸೌಲಭ್ಯಗಳು ಅಪಾಯಕ್ಕೆ ಸಿಲುಕಲಿವೆ. ಕೆಲಸದ ಸ್ಥಳಗಳಲ್ಲಿ ಹಾಗೂ ಕೈಗಾರಿಕೆಗಳಲ್ಲಿ ಅಗತ್ಯವಿರುವ ಸುರಕ್ಷತಾ ಕ್ರಮ ಹಾಗೂ ಜೀವಗಳ ರಕ್ಷಣೆ ಮಾಡುವ ಬಗ್ಗೆ ಈ ಬಜೆಟ್ ಯಾವ ಭರವಸೆಯನ್ನೂ ನೀಡಿಲ್ಲ. ಕನಿಷ್ಠ ವೇತನ ₹33 ಸಾವಿರ ನಿಗದಿಪಡಿಸಬೇಕು ಎಂದು ಹೋರಾಟ ನಡೆಸಿದರೂ ಮುಖ್ಯಮಂತ್ರಿ ಸ್ಪಂದಿಸಿಲ್ಲ.

ಅಸಂಘಟಿತ 93 ವಲಯಗಳಲ್ಲಿ 2 ಕೋಟಿಗಿಂತ ಅಧಿಕ ಕಾರ್ಮಿಕರಿದ್ದಾರೆ. ಅವರಿಗೆ ಕನಿಷ್ಠ ಪಿಂಚಣಿ, ವೈದ್ಯಕೀಯ, ವಸತಿ ಸಹಿತ ಯಾವುದೇ ಸೌಲಭ್ಯಗಳನ್ನು ನೀಡದೇ ಕೌಶಲಾಭಿವೃದ್ಧಿಗಾಗಿ 'ಕಾಯಕ' ಆನ್‌ಲೈನ್ ಕೇಂದ್ರ ಸ್ಥಾಪಿಸಲು ₹5 ಕೋಟಿ ಒದಗಿಸಿರುವುದು ಹಾಸ್ಯಾಸ್ಪದ. ಜಿಟಿಟಿಸಿ ಸ್ಥಾಪಿಸಲು ಕಟ್ಟಡ ಕಾರ್ಮಿಕರ ನಿಧಿಯಿಂದ ₹600 ಕೋಟಿ ಇಟ್ಟಿರುವುದು, ಕೌಶಲಾಭಿವೃದ್ಧಿ ಅಕಾಡೆಮಿಗಳಿಗೆ ಇದೇ ನಿಧಿಯಿಂದ ಬಳಸಿರುವುದು ದುರುಪಯೋಗಕ್ಕೆ ಸ್ಪಷ್ಟ ನಿದರ್ಶನವಾಗಿದೆ. ಸರ್ಕಾರದ ಖಜಾನೆಯಿಂದ ಮಾಡಬೇಕಾದ ಯೋಜನೆಗಳಿಗೆ ಬಡ ಕಾರ್ಮಿಕರ ನಿಧಿ ಬಳಸುವುದು ಸರಿಯಲ್ಲ.

ಕೆ. ಮಹಾಂತೇಶ್, ಸಿಐಟಿಯು ರಾಜ್ಯ ಕಾರ್ಯದರ್ಶಿ

'ವಿಕೇಂದ್ರೀಕೃತ ಆಡಳಿತದತ್ತ ಬದ್ಧತೆಯಿಲ್ಲ'

ಗ್ರಾಮೀಣ ಕಲ್ಯಾಣ, ಕೃಷಿ ಮತ್ತು ಸಾಮಾಜಿಕ ರಕ್ಷಣೆ ರಾಜ್ಯ ಬಜೆಟ್‌ನಲ್ಲಿ ಒತ್ತು ನೀಡಲಾಗಿದೆ. ಆದರೆ ವಿಕೇಂದ್ರೀಕೃತ ಆಡಳಿತದತ್ತ ಅದರ ಬದ್ಧತೆ ವಿರೋಧಾಭಾಸದಂತಿದೆ.

ಕರ್ನಾಟಕದ 5ನೇ ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನ ಆಧಾರದ ಮೇಲೆ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಶೇ35ರಷ್ಟು ವಿಕೇಂದ್ರೀಕೃತ ನಿಧಿ ಹಂಚಿಕೆ ಮಾಡಿರುವುದು ಸಕಾರಾತ್ಮಕ ಹೆಜ್ಜೆಯಾದರೂ, ಗ್ರಾಮ ಪಂಚಾಯತ್ ಚುನಾವಣೆಗಳನ್ನು ನಡೆಸದೇ ಆಡಳಿತಾಧಿಕಾರಿಗಳನ್ನು ನೇಮಿಸಿರುವುದು ಆ ಪ್ರಯತ್ನದ ಆತ್ಮವನ್ನೇ ದುರ್ಬಲಗೊಳಿಸುತ್ತದೆ. ಬಜೆಟ್‌ನಲ್ಲಿ ಅಂಗನವಾಡಿಗಳು, ಶಾಲೆಗಳು, ಮಕ್ಕಳ ಪೌಷ್ಟಿಕತೆ ಮತ್ತು ಮಹಿಳೆಯರ ಜೀವನೋಪಾಯವನ್ನು ಸ್ವಸಹಾಯ ಗುಂಪುಗಳ ಮೂಲಕ ಬಲಪಡಿಸುವ ಕಾರ್ಯಕ್ರಮಗಳು ಇವೆ. ಆದರೆ ಮಕ್ಕಳ ಮತ್ತು ಮಹಿಳೆಯರ ಸಬಲೀಕರಣವನ್ನು ಸ್ಥಳೀಯ ಆಡಳಿತದ ತೀರ್ಮಾನಗಳಲ್ಲಿ ಅವರ ನಾಯಕತ್ವ ಮತ್ತು ಭಾಗವಹಿಸುವಿಕೆಯ ಮೂಲಕ ಬಲಪಡಿಸುವ ಬಗ್ಗೆ ಸ್ಪಷ್ಟ ಉಲ್ಲೇಖಗಳಿಲ್ಲ. ಕೋವಿಡ್–19ರ ನಂತರ ಗ್ರಾಮೀಣ ಭಾಗದ ಮಕ್ಕಳಲ್ಲಿ ಕಲಿಕೆಯ ಅಂತರ ಕಂಡು ಬಂದಿದೆ. ಅದನ್ನು ಹೇಗೆ ಸರಿಪಡಿಸಬೇಕು ಎಂಬುದರ ಬಗ್ಗೆ ಸ್ಪಷ್ಟ ಕ್ರಮಗಳು ಕಾಣಿಸುತ್ತಿಲ್ಲ. ಪ್ರಜಾಸತ್ತಾತ್ಮಕ ಗ್ರಾಮ ಪಂಚಾಯತ್‌ಗಳನ್ನು ಪುನಃಸ್ಥಾಪಿಸಿ, ಮಕ್ಕಳ ಕೇಂದ್ರಿತ ಶಿಕ್ಷಣ ಮತ್ತು ರಕ್ಷಣೆಗೆ ಆದ್ಯತೆ ನೀಡದೆ ಹೋದರೆ, ಗ್ರಾಮೀಣಾಭಿವೃದ್ಧಿ ಕ್ರಮಗಳ ಪರಿವರ್ತನಾ ಸಾಮರ್ಥ್ಯವು ಅನುಷ್ಠಾನದ ಹಂತದಲ್ಲೇ ಸೀಮಿತವಾಗುವ ಸಾಧ್ಯತೆ ಇದೆ.

ಕೃಪಾ ಎಂ.ಎಂ., ಸಹನಿರ್ದೇಶಕಿ, ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಮತ್ತು ಸದಸ್ಯೆ-ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ

₹19,843 ಕೋಟಿ ಕಂದಾಯ ಇಲಾಖೆಗೆ ಹಂಚಿಕೆ ಮಾಡಲಾದ ಅನುದಾನ

₹29,947 ಕೋಟಿ ಇಂಧನ ಇಲಾಖೆಗೆ ಅನುದಾನ

₹23,100 ಕೋಟಿ ಒಳಾಡಳಿತ ಮತ್ತು ಸಾರಿಗೆ ಕ್ಷೇತ್ರಕ್ಕೆ ಮೀಸಲಿಟ್ಟ ಮೊತ್ತ

ಪ್ರಜಾವಾಣಿ 2026-27 ರಾಜ್ಯ ಬಜೆಟ್



ಸೂರ್ಯ ಕ್ರೀಡಾ ಗ್ರಾಮ

- ‘ಕೆ.ಎಚ್.ಬಿ. ಸೂರ್ಯ ಕ್ರೀಡಾ ಗ್ರಾಮ’ ಎಂಬ ಹೆಸರಿನಲ್ಲಿ ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನಲ್ಲಿ 80 ಸಾವಿರ ಆಸನ ಸಾಮರ್ಥ್ಯದ ಅಂತರರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣ
- ಕೆ.ಎಚ್.ಬಿ ವತಿಯಿಂದ ‘ನಮ್ಮ ಮನೆ ಯೋಜನೆ’ಯಡಿ ಮುಂದಿನ ಎರಡು ವರ್ಷಗಳಲ್ಲಿ 50 ಸಾವಿರ ನಿವೇಶನ ರಿಯಾಯಿತಿ ದರದಲ್ಲಿ ವಿತರಣೆ
- ಮುಖ್ಯಮಂತ್ರಿ ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ ಹಂತ–4ರಡಿಯಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ ₹500 ಕೋಟಿ ಅನುದಾನ ಮಂಜೂರು
- ಹಾಸನ, ರಾಯಚೂರು, ಬೀದರ್ ಮಹಾನಗರ ಪಾಲಿಕೆಗಳಿಗೆ ಮಹಾತ್ಮ ಗಾಂಧಿ ನಗರ ವಿಕಾಸ್ ಯೋಜನೆ 2.0 ಅಡಿ ₹200 ಕೋಟಿ ಅನುದಾನ
- ನಗರ ಪ್ರದೇಶಗಳ ಆಯ್ದ ಜಾಗಗಳಲ್ಲಿ ಸ್ಥಳೀಯ ಸಸ್ಯಗಳನ್ನು ನೆಟ್ಟು ನೈಸರ್ಗಿಕ ಹಸಿರು ಪ್ರದೇಶಗಳನ್ನಾಗಿಸಲು 100 ಮಿಯಾವಾಕಿ ಪಾರ್ಕ್ ನಿರ್ಮಾಣ
- ರಾಜ್ಯದ ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಸಂಪರ್ಕ ರಹಿತ ಜನವಸತಿ ಪ್ರದೇಶಗಳಿಗೆ ಸಾರ್ವಜನಿಕರ ಮತ್ತು ಶಾಲಾ ವಿದ್ಯಾರ್ಥಿಗಳ ಸುರಕ್ಷತೆಗಾಗಿ 300 ಕಾಲು ಸಂಕ ನಿರ್ಮಾಣ
- ಬಂದರುಗಳು ಮತ್ತು ಸರಕು ಸಾಗಾಣಿಕೆ ವಲಯದ ಅಭಿವೃದ್ಧಿಗಾಗಿ ಸಮಗ್ರ ಮಲ್ಟಿಮೋಡಲ್ ಲಾಜಿಸ್ಟಿಕ್ಸ್ ನೀತಿ ರೂಪಿಸಲಾಗುವುದು
- ತದಡಿ ಪ್ರದೇಶದಲ್ಲಿ ಪರಿಸರಸ್ನೇಹಿ ವಸತಿ ವ್ಯವಸ್ಥೆ, ಪ್ರವಾಸಿ ಮಾಹಿತಿ ಕೇಂದ್ರಗಳು, ಪರಿಸರ ಸ್ನೇಹಿ ವಾಕಿಂಗ್ ಕಾರಿಡಾರ್ ಮತ್ತು ಮೂಲಸೌಕರ್ಯಗಳನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ

ಯಾವ ಇಲಾಖೆಗೆ ಎಷ್ಟು, ಹಂಚಿಕೆ? (ಕೋಟಿಗಳಲ್ಲಿ)

ನಗರಾಭಿವೃದ್ಧಿ ಮತ್ತು ವಸತಿ	
2025-26	₹21,405
2026-27	₹22,203

ಲೋಕೋಪಯೋಗಿ ಇಲಾಖೆ	
2025-26	₹11,841
2026-27	₹11,424

500 ಕೋಟಿ ಮಂಡ್ಯ ಜಿಲ್ಲೆಯಲ್ಲಿ ಅತ್ಯಾಧುನಿಕ ನಿರ್ಮಾಣ ಮತ್ತು ಮೂಲಸೌಕರ್ಯ ಸಲಕರಣೆಗಳ ಪರೀಕ್ಷಾ ಘಟಕ ಸ್ಥಾಪನೆಗೆ ಅನುದಾನ

30 ಕೋಟಿ ಕೆಐಎಡಿಬಿ ಏರೊಸ್ಪೇಸ್ ಪಾರ್ಕ್‌ನಲ್ಲಿ ಏರೊಸ್ಪೇಸ್ ಕಾಮನ್ ಫೆಸಿಲಿಟಿ ಸೆಂಟರ್ ಸ್ಥಾಪನೆಗೆ ಅನುದಾನ

2,000 ಕೋಟಿ ಸೇತುವೆ ನಿರ್ಮಾಣ, ದುರಸ್ತಿ, ಕಾಲುಸಂಕಗಳ ನಿರ್ಮಾಣಕ್ಕೆ ಅನುದಾನ

ಸಾವಿರ ಎಕರೆಯಲ್ಲಿ ಕೈಗಾರಿಕಾ ಪಾರ್ಕ್

- ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 100 ಎಕರೆ ಪ್ರದೇಶದಲ್ಲಿ ‘ವಾಹನ ಸ್ಕ್ರ್ಯಾಪಿಂಗ್ ಸೌಲಭ್ಯ ಘಟಕ’ ಸ್ಥಾಪನೆ
- ಬೆಳಗಾವಿ ಜಿಲ್ಲೆಯಲ್ಲಿ ಸುಮಾರು 1,000 ಎಕರೆ ಪ್ರದೇಶದಲ್ಲಿ ‘ಕೈಗಾರಿಕಾ ಪಾರ್ಕ್ ಅಭಿವೃದ್ಧಿ’
- ಬೆಂಗಳೂರಿನ ಮಲ್ಲೇಶ್ವರದ ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್‌ನ ಆವರಣದಲ್ಲಿ ಪಿಪಿಪಿ ಮಾದರಿಯಲ್ಲಿ ಅಂತರರಾಷ್ಟ್ರೀಯ ಮಟ್ಟದ ಸಮಾವೇಶ ಕೇಂದ್ರ ಸಂಕೀರ್ಣ ನಿರ್ಮಾಣ
- ಸಹಕಾರಿ ನೂಲಿನ ಗಿರಣಿಗಳನ್ನು ಪ್ರೋತ್ಸಾಹಿಸಲು ಪ್ರತಿ ಯೂನಿಟ್‌ಗೆ ₹3ರಂತೆ ವಿದ್ಯುತ್ ಸಹಾಯಧನ
- ಕಲಬುರಗಿ ಜಿಲ್ಲೆಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ಪಿ.ಎಂ ಮಿತ್ರ ಮೆಗಾ ಜವಳಿ ಪಾರ್ಕ್‌ನಲ್ಲಿ ಮೂಲಸೌಕರ್ಯ ಒದಗಿಸಲು ₹390 ಕೋಟಿ ಅನುದಾನ ಮೀಸಲು

ನೇಕಾರರಿಗೆ ಸಿಕ್ಕಿದ್ದು...

- ನೇಕಾರರ ಸಮ್ಮಾನ್ ಯೋಜನೆಯ ಅಡಿ ಒಟ್ಟು 1.30 ಲಕ್ಷ ನೇಕಾರರಿಗೆ ವಾರ್ಷಿಕ ₹5 ಸಾವಿರ ಆರ್ಥಿಕ ನೆರವು
- ವಿದ್ಯುತ್ ಸಹಾಯಧನ ಯೋಜನೆಯಡಿ 1ರಿಂದ 10 ಎಚ್.ಪಿ.ವರೆಗೆ ಉಚಿತ, 10ರಿಂದ 20 ಎಚ್.ಪಿ.ವರೆಗಿನ ಘಟಕಗಳಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಒದಗಿಸಲು ನಿರ್ಧಾರ
- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ 20 ಎಚ್.ಪಿ ಯಿಂದ 200 ಎಚ್.ಪಿ ವರೆಗಿನ ವಿದ್ಯುತ್ ಮಗ್ಗ ನೇಕಾರರಿಗೆ ಪ್ರತಿ ಯೂನಿಟ್‌ಗೆ ಶೇ 50ರಷ್ಟು ಸಹಾಯಧನ ನೀಡುವ ಯೋಜನೆ ಜಾರಿ
- ನೇಕಾರರ ಏಳಿಗೆಗೆ ₹225 ಕೋಟಿ ಅನುದಾನ ಮೀಸಲು

ಕೈಗಾರಿಕಾ ಕ್ಷೇತ್ರ ಪ್ರಗತಿಗೆ ರಹದಾರಿ

9 ರೈಲ್ವೆ ಯೋಜನೆಗಳಿಗೆ ₹600 ಕೋಟಿ ಹಂಚಿಕೆ • ಎಡಿಬಿ ನೆರವಿನೊಂದಿಗೆ ₹5,736 ಕೋಟಿ ವೆಚ್ಚದಲ್ಲಿ 875 ಕಿ.ಮೀ. ರಸ್ತೆ ಅಭಿವೃದ್ಧಿ

• ಎ.ಎಂ. ಸುರೇಶ

ರಾಜ್ಯದ ಸರ್ವಾಂಗೀಣ ಪ್ರಗತಿಯನ್ನು ಗಮನದಲ್ಲಿ ಇಟ್ಟುಕೊಂಡು ರಸ್ತೆಗಳ ಅಭಿವೃದ್ಧಿ, ಕೈಗಾರಿಕೆಗಳ ಸ್ಥಾಪನೆ ಹಾಗೂ ನಾಲ್ಕೂ ಕಂದಾಯ ವಲಯಗಳಲ್ಲಿ ಮೂಲಸೌಕರ್ಯಗಳನ್ನು ಕಲ್ಪಿಸುವುದಕ್ಕೆ ಈ ಬಾರಿಯ ಬಜೆಟ್‌ನಲ್ಲಿ ಒತ್ತು ನೀಡಲಾಗಿದೆ.

ರಾಜಧಾನಿ ಬೆಂಗಳೂರು ಅಷ್ಟೇ ಅಲ್ಲದೆ, ರಾಜ್ಯದ ಎಲ್ಲ ಭಾಗಗಳು ಪ್ರಗತಿಯಾಗಬೇಕು ಎಂಬ ಉದ್ದೇಶದಿಂದ ಬೆಂಗಳೂರಿನ ಆಚೆಗೆ ಕೈಗಾರಿಕೆಗಳನ್ನು ಸ್ಥಾಪಿಸಲು ಆದ್ಯತೆ ನೀಡಲಾಗಿದೆ. ಮೈಸೂರು, ಮಂಡ್ಯ, ಧಾರವಾಡ, ಬೆಳಗಾವಿ, ವಿಜಯಪುರ ಹಾಗೂ ಕಲಬುರಗಿ ಭಾಗದಲ್ಲಿ ಬೃಹತ್ ಕೈಗಾರಿಕಾ ಯೋಜನೆಗಳನ್ನು ಘೋಷಿಸಲಾಗಿದೆ.

ಲೋಕೋಪಯೋಗಿ, ಕೈಗಾರಿಕೆ ಮತ್ತು ಮೂಲಸೌಕರ್ಯ ಸಚಿವರು ಉತ್ತರ ಕರ್ನಾಟಕ ಭಾಗದವರೇ ಆಗಿದ್ದು, ಸಹಜವಾಗಿಯೇ ಆ ಭಾಗಕ್ಕೆ ಹೆಚ್ಚಿನ ಒತ್ತು ನೀಡಿರುವುದು ಎದ್ದು ಕಾಣುತ್ತಿದೆ. ಆದರೆ, ಇದು ಕೇವಲ ಘೋಷಣೆಯಾಗಿ ಉಳಿಯದೆ, ಅನುದಾನ ಬಿಡುಗಡೆ ಮಾಡಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಬದ್ಧತೆಯನ್ನು ಪ್ರದರ್ಶಿಸಬೇಕು.

ಉತ್ತರ ಕರ್ನಾಟಕ ಭಾಗದ ಪ್ರಗತಿಗೆ ಒತ್ತು ನೀಡುವ ಉದ್ದೇಶದಿಂದ ಬೆಳಗಾವಿ ಜಿಲ್ಲೆಯ ಸುಮಾರು ಒಂದು ಸಾವಿರ ಎಕರೆ ಪ್ರದೇಶದಲ್ಲಿ ಕೈಗಾರಿಕಾ ಪಾರ್ಕ್ ಅನ್ನು ಅಭಿವೃದ್ಧಿಪಡಿಸಲಾಗುತ್ತದೆ. ಬೆಂಗಳೂರು–ಮುಂಬೈ ಕೈಗಾರಿಕಾ ಕಾರಿಡಾರ್ ಯೋಜನೆಯಡಿ ₹30 ಸಾವಿರ ಕೋಟಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವುದರೊಂದಿಗೆ 75 ಸಾವಿರ ಉದ್ಯೋಗಾವಕಾಶ ಕಲ್ಪಿಸಲು ‘ಧಾರವಾಡ ಕೈಗಾರಿಕಾ ನೋಡ್’ ಆರಂಭಿಸಲಾಗುತ್ತದೆ. ಸಾವಿರ ಎಕರೆ ಸ್ವಾಧೀನಕ್ಕೆ ಒಟ್ಟು ₹600 ಕೋಟಿ ಅಗತ್ಯವಿದ್ದು, ಈ ವರ್ಷ ₹200 ಕೋಟಿ ನೀಡಲಾಗಿದೆ.

ಮೈಸೂರಿನಲ್ಲಿ ಏರೊಸ್ಪೇಸ್ ಕೈಗಾರಿಕೆಗಳಿಗೆ ಉತ್ತೇಜನ ನೀಡಲು ಮೈಸೂರು ವಿಮಾನ ನಿಲ್ದಾಣದ ಹತ್ತಿರ ಕೆಐಎಡಿಬಿ ವತಿಯಿಂದ ಏರೊಸ್ಪೇಸ್ ಪಾರ್ಕ್ ಸ್ಥಾಪಿಸಲಾಗುತ್ತದೆ. ಇದಲ್ಲದೆ,

ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಬಜೆಟ್ ಮಂಡನೆ ಮಾಡಿದರು

ಮಂಡ್ಯದಲ್ಲಿ ₹500 ಕೋಟಿ ವೆಚ್ಚದಲ್ಲಿ 100 ಎಕರೆ ಪ್ರದೇಶದಲ್ಲಿ ಅತ್ಯಾಧುನಿಕವಾದ ನಿರ್ಮಾಣ ಮತ್ತು ಮೂಲಸೌಕರ್ಯ ಸಲಕರಣೆಗಳ ಪರೀಕ್ಷಾ ಘಟಕ ಸ್ಥಾಪಿಸಲು ನಿರ್ಧರಿಸಲಾಗಿದೆ. ಹಳೆ ಮೈಸೂರು ಮತ್ತು ಉತ್ತರ ಕರ್ನಾಟಕ ಭಾಗದ ಬೆಳವಣಿಗೆ ದೃಷ್ಟಿಯಿಂದ ಈ ಹೊಸ ಯೋಜನೆಗಳ ಘೋಷಣೆ ಮಹತ್ವದ ಹೆಜ್ಜೆಯಾಗಿದೆ.

ಮೂಲಸೌಕರ್ಯ: ಕೇಂದ್ರ ಮತ್ತು ರಾಜ್ಯ ಸರ್ಕಾರ 50:50 ಅನುಪಾತದಡಿ 9 ರೈಲ್ವೆ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು, ಆ ಯೋಜನೆಗಳಿಗೆ ರಾಜ್ಯ ಸರ್ಕಾರ ಒಟ್ಟಾರೆ ₹9,847 ಕೋಟಿ ಭರಿಸಬೇಕಾಗಿದೆ. ಆದರೆ, ಈ ಸಲ ಕೇವಲ ₹600 ಕೋಟಿ ನೀಡಲಾಗಿದೆ. ಕಳೆದ ಬಾರಿಯೂ ಇಷ್ಟೇ ಹಣ ನೀಡಲಾಗಿತ್ತು.

ರಾಜ್ಯದಲ್ಲಿ ಹಲವು ವರ್ಷಗಳಿಂದ ರೈಲ್ವೆ ಯೋಜನೆಗಳ ಕಾಮಗಾರಿ ಮಂದಗತಿಯಲ್ಲಿ ಸಾಗಿದ್ದು, ಇನ್ನಷ್ಟು ಅನುದಾನ ನೀಡುವ ಮೂಲಕ ಈ ಯೋಜನೆಗಳ ಕಾಮಗಾರಿಗಳನ್ನು ಬೇಗ ಪೂರ್ಣಗೊಳಿಸುವ ಅಗತ್ಯವಿದೆ.

ಗಿಣಿಗೇರಾ–ರಾಯಚೂರು ಹಾಗೂ ತುಮಕೂರು–ರಾಯದುರ್ಗ ರೈಲು ಮಾರ್ಗದ ಕಾಮಗಾರಿಗಳು ಹಾಗೂ ಭೂಸ್ವಾಧೀನ ವೆಚ್ಚವನ್ನು ಕೇಂದ್ರ, ರಾಜ್ಯ ಸರ್ಕಾರ 50:50 ಅನುಪಾತದಡಿ ಭರಿಸಲಿವೆ. ಆದರೆ, ಉಳಿದ ಏಳು ಯೋಜನೆಗಳ ಭೂ ಸ್ವಾಧೀನ ವೆಚ್ಚವನ್ನು ಪೂರ್ಣವಾಗಿ ರಾಜ್ಯ ಸರ್ಕಾರವೇ ಭರಿಸಬೇಕಾಗಿದೆ. ಹೀಗಾಗಿ ಈ ಯೋಜನೆಗಳಿಗೆ ದೊಡ್ಡಮಟ್ಟದಲ್ಲಿ ಅನುದಾನದ ಅಗತ್ಯವಿದೆ.

ಚಿಕ್ಕಮಗಳೂರು–ಬೇಲೂರು, ಕುಡಚಿ–ಬಾಗಲಕೋಟೆ, ಗದಗ–ವಾಡಿ, ತುಮಕೂರು–ದಾವಣಗೆರೆ, ಬೇಲೂರು–ಹಾಸನ, ಶಿವಮೊಗ್ಗ– ಶಿಕಾರಿಪುರ– ರಾಣೆಬೆನ್ನೂರು, ಧಾರವಾಡ– ಕಿತ್ತೂರು– ಬೆಳಗಾವಿ ಮಾರ್ಗದ ರೈಲ್ವೆ ಯೋಜನೆಗಳ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ರಾಜ್ಯದ ಹಲವು ಪ್ರದೇಶಗಳಿಗೆ ಸುಗಮ ಸಾರಿಗೆ ಸಂಪರ್ಕ ಕಲ್ಪಿಸುವ ದೃಷ್ಟಿಯಿಂದ ಈ ಯೋಜನೆಗಳು ಮಹತ್ವದ್ದಾಗಿದ್ದು, ಹೆಚ್ಚಿನ ಅನುದಾನ ನೀಡುವ ಮೂಲಕ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಆದ್ಯತೆ ನೀಡಬೇಕಾಗಿದೆ.

2,200 ಕಿ.ಮೀ. ರಾಜ್ಯ ಹೆದ್ದಾರಿ ಅಭಿವೃದ್ಧಿ

ಲೋಕೋಪಯೋಗಿ ಇಲಾಖೆಯಲ್ಲಿ 2,200 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳನ್ನು ಹಾಗೂ 3,500 ಕಿ.ಮೀ. ಉದ್ದದ ಜಿಲ್ಲಾ ರಸ್ತೆಗಳನ್ನು ₹5,776 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ. ಇದಲ್ಲದೆ ಎಡಿಬಿ ನೆರವಿನೊಂದಿಗೆ ಒಟ್ಟು ₹5,736 ಕೋಟಿ ವೆಚ್ಚದಲ್ಲಿ ರಾಜ್ಯದಾದ್ಯಂತ 875 ಕಿ.ಮೀ. ಉದ್ದದ ರಸ್ತೆಗಳನ್ನು ಅಭಿವೃದ್ಧಿಪಡಿಸಲು ತೀರ್ಮಾನಿಸಲಾಗಿದೆ.

ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಘಟ್ಟ–2 ಅಡಿ 1,846 ಕಿ.ಮೀ. ಉದ್ದದ ರಸ್ತೆಗಳನ್ನು ₹5,000 ಕೋಟಿ ವೆಚ್ಚದಲ್ಲಿ ಹಾಗೂ 135 ಕಿ.ಮೀ. ಉದ್ದದ ವಾಗ್ದಾರಿ–ರಿಬ್ಬನ್‌ಪಲ್ಲಿ ರಸ್ತೆ ವಿಸ್ತರಣೆ, ಅಭಿವೃದ್ಧಿ ಕಾಮಗಾರಿಯನ್ನು ಅಂದಾಜು ₹400 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಆದರೆ, ಕಳೆದ ಬಾರಿಗೆ ಹೋಲಿಸಿದೆ ಈ ಸಲ ಲೋಕೋಪಯೋಗಿ ಇಲಾಖೆಗೆ ₹417 ಕೋಟಿ ಅನುದಾನ ಕಡಿಮೆಯಾಗಿದೆ. ಹೀಗಾಗಿ ಕಾಮಗಾರಿವಾರು, ಕ್ಷೇತ್ರವಾರು ಅನುದಾನ ಹಂಚಿಕೆ ಮಾಡುವಾಗ ಸ್ವಲ್ಪ ಕಡಿಮೆಯಾಗಲಿದೆ. ಅಲ್ಲದೆ ಹೊಸ ಯೋಜನೆಗಳನ್ನು ಆರಂಭಿಸಲು ಅನುದಾನದ ಕೊರತೆಯಾಗಬಹುದು.

ವಿವಿಧ ಇಲಾಖೆಗಳ ಅಡಿ ನಿರ್ಮಿಸುವ ಕಟ್ಟಡಗಳ ವಿನ್ಯಾಸ ಮತ್ತು ವೆಚ್ಚದಲ್ಲಿ ಏಕರೂಪತೆ ತರುವ ಉದ್ದೇಶದಿಂದ ತಜ್ಞರ ಸಮಿತಿ ರಚಿಸಿ, ಆ ಸಮಿತಿಯ ಶಿಫಾರಸಿನಂತೆ ಕಟ್ಟಡಗಳ ವಿನ್ಯಾಸ, ಅಂದಾಜುಗಳನ್ನು ಅಂತಿಮಗೊಳಿಸಲು ತೀರ್ಮಾನಿಸಲಾಗಿದೆ. ಇದು ಒಳ್ಳೆಯ ಬೆಳವಣಿಗೆ.

ಪ್ರತಿಕ್ರಿಯೆಗಳು

ಅಭಿವೃದ್ಧಿ ವಿರೋಧಿ ಬಜೆಟ್‌ನಲ್ಲಿ, ಯುವ ಜನರತ್ತ ನಿರ್ಲಕ್ಷ್ಯ ತೋರಲಾಗಿದೆ. ‘ಯುವ ನಿಧಿ’ಗೆ ಈ ಬಾರಿ ಅನುದಾನ ಮೀಸಲಿಟ್ಟಿಲ್ಲ. ಇದು ಗ್ಯಾರಂಟಿ ಯೋಜನೆ ಕೈ ಬಿಡುವ ಮುನ್ಸೂಚನೆ. ರಾಜ್ಯವನ್ನು ಆರ್ಥಿಕ ಪ್ರಗತಿಯತ್ತ ಒಯ್ಯುವ ಬದಲು ಸಂಕಷ್ಟಕ್ಕೆ ದೂಡಲಾಗಿದೆ

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ರಾಜ್ಯದ ಒಟ್ಟು ಸಾಲದ ಹೊರೆ ಈಗಾಗಲೇ ₹8.24 ಲಕ್ಷ ಕೋಟಿ ದಾಟಿದ್ದು, ಪ್ರತಿ ಕನ್ನಡಿಗನ ಮೇಲೂ ಸರಾಸರಿ ₹1.25 ಲಕ್ಷ ಸಾಲದ ಭಾರವನ್ನು ರಾಜ್ಯ ಸರ್ಕಾರ ಹೊರಿಸಿದೆ. ಇದು ಖಾಲಿ ಮಾತುಗಳ ಬಜೆಟ್

ಎನ್.ರವಿಕುಮಾರ್, ವಿಧಾನಪರಿಷತ್ ವಿರೋಧ ಪಕ್ಷದ ಮುಖ್ಯಸಚೇತಕ



ಬಜೆಟ್‌ನಲ್ಲಿ ‘ಗ್ಯಾರಂಟಿ’ಗೆ ನೀಡಿರುವ ಅನುದಾನ ಬಿಟ್ಟರೆ ರಾಜ್ಯದ ಅಭಿವೃದ್ಧಿಗೆ ಪೂರಕವಾದ ಹೊಸ ಯೋಜನೆಗಳು ಇಲ್ಲ. ಹಿಂದಿಗಿಂತ ಹೆಚ್ಚು ಸಾಲ ಮಾಡಿರುವುದೇ ಸರ್ಕಾರದ ಸಾಧನೆ

ಸಿ.ಬಿ.ಸುರೇಶ್ ಬಾಬು, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಹುಬ್ಬಳ್ಳಿಯಲ್ಲಿ ಹಜ್ ಭವನ, ಸಂತ ಶಿಶುನಾಳ ಶರೀಫ ವಸತಿಶಾಲೆ ನಿರ್ಮಾಣ ಸೇರಿ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದೆ. ರಾಜ್ಯವನ್ನು ಸರ್ವಜನಾಂಗದ ಶಾಂತಿಯ ತೋಟವಾಗಿಸುವ ಆಶಯ ಹೊಂದಿದೆ

ಸಲೀಂ ಅಹ್ಮದ್, ವಿಧಾನಪರಿಷತ್ ಆಡಳಿತ ಪಕ್ಷದ ಮುಖ್ಯ ಸಚೇತಕ,

ಲೋಕಭವನ ಆವರಣದಲ್ಲಿ ಒಳಾಂಗಣ ಕ್ರೀಡಾಂಗಣ

- ರಾಜ್ಯಪಾಲರ ಕಚೇರಿ ಆವರಣದಲ್ಲಿ ₹27 ಕೋಟಿ ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣ, ಅಧಿಕಾರಿಗಳ ವಸತಿ ಗೃಹ, ಆಡಳಿತಾತ್ಮಕ ಬ್ಲಾಕ್ ನಿರ್ಮಾಣ
- ರಾಜ್ಯದಲ್ಲಿ ಏಳು ವಿಮಾನ ನಿಲ್ದಾಣಗಳ ಅಭಿವೃದ್ಧಿಗಾಗಿ ₹200 ಕೋಟಿ ಅನುದಾನ
- ವಿಜಯಪುರ, ಶಿವಮೊಗ್ಗ ವಿಮಾನ ನಿಲ್ದಾಣಗಳ ಆವರಣದಲ್ಲಿ ಕ್ರಮವಾಗಿ ವಿಮಾನ ತರಬೇತಿ ಶಾಲೆ ಹಾಗೂ ಅಸೆಂಬ್ಲಿ ಆಫ್ ಏರ್‌ಕ್ರಾಫ್ಟ್ ಚಟುವಟಿಕೆಗಳು ಪಿಪಿಪಿ ಮಾದರಿಯಲ್ಲಿ ಆರಂಭ
- ಮಳವಳ್ಳಿ–ಬಾವಲಿ (ಕೇರಳ ಗಡಿ) (ಬನ್ನೂರು, ಎಚ್.ಡಿ.ಕೋಟೆ)–141 ಕಿ.ಮೀ. ರಸ್ತೆ ಅಭಿವೃದ್ಧಿ
- ಮಡಿಕೇರಿ–ದೋಣಿಗಲ್ (ಎನ್‌ಎಚ್ 75) (ಮಾದಪುರ, ಸೋಮವಾರಪೇಟೆ, ಶನಿವಾರಸಂತೆ, ಕೊಡ್ಲಿಪೇಟೆ ಮಾರ್ಗ)–95 ಕಿ.ಮೀ. ರಸ್ತೆ ಅಭಿವೃದ್ಧಿ
- ಶ್ರೀರಂಗಪಟ್ಟಣ (ಪಾಂಡವಪುರ ರೈಲು ನಿಲ್ದಾಣ)–ಬಿ.ಎಂ.ರೋಡ್ ಜಂಕ್ಷನ್ ಚನ್ನರಾಯಪಟ್ಟಣ (ಕೆ.ಆರ್.ಪೇಟೆ ಮಾರ್ಗ)–63 ಕಿ.ಮೀ. ರಸ್ತೆ ಅಭಿವೃದ್ಧಿ
- ಸಂಕೇಶ್ವರ–ಲೋಕಾಪುರ (ಕಮತ್‌ನೂರು ಕ್ರಾಸ್–ಹುಕ್ಕೇರಿ–ಘಟಪ್ರಭ–ಅರಭಾವಿಮಠ–ವಡರಟ್ಟಿ–ಮಸಗುಪ್ಪಿ–ತಿಗಡಿ–ಯಾದವಾಡ ಮಾರ್ಗ)–100 ಕಿ.ಮೀ.

ಸಿ.ಎಂ ಸೌರ ಕೃಷಿ ಯೋಜನೆ

‘ಮುಖ್ಯಮಂತ್ರಿ ಸೌರ ಕೃಷಿ’ ಯೋಜನೆಯಡಿ ₹10,500 ಕೋಟಿ ವೆಚ್ಚದಲ್ಲಿ ಮೂರು ಸಾವಿರ ಮೆಗಾವಾಟ್ ಸಾಮರ್ಥ್ಯದ ಸೌರ ವಿದ್ಯುತ್ ಸ್ಥಾವರಗಳನ್ನು ಆರಂಭಿಸುವುದಾಗಿ ಮುಖ್ಯಮಂತ್ರಿ ಬಜೆಟ್‌ನಲ್ಲಿ ಘೋಷಿಸಿದ್ದಾರೆ.

ಕುಸುಮ್– ಸಿ ಮಾದರಿಯಲ್ಲೇ ಮುಖ್ಯಮಂತ್ರಿ ಸೌರ ಕೃಷಿ ಯೋಜನೆಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಉಪ ಕೇಂದ್ರಗಳಲ್ಲಿ ಜಾರಿಗೊಳಿಸಲು ತೀರ್ಮಾನಿಸಲಾಗಿದೆ.

ಕುಸುಮ್–ಸಿ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ 2,777 ಮೆಗಾವಾಟ್ ಸಾಮರ್ಥ್ಯದ ಯೋಜನೆಗಳನ್ನು ಜಾರಿಗೊಳಿಸಲಾಗುತ್ತದೆ. ಗೃಹಜ್ಯೋತಿ ಯೋಜನೆಯಡಿ 1.74 ಕೋಟಿ ಗ್ರಾಹಕರು ನೋಂದಾಯಿಸಿಕೊಂಡಿದ್ದು, ಅವರಿಗೆ ಉಚಿತವಾಗಿ ವಿದ್ಯುತ್ ನೀಡಲು ₹10,578 ಕೋಟಿ ಅನುದಾನ ನೀಡಲಾಗಿದೆ.

ವಿದ್ಯುತ್ ಪ್ರಸರಣ ಜಾಲವನ್ನು ಬಲಪಡಿಸುವ ನಿಟ್ಟಿನಲ್ಲಿ 100 ಹೊಸ ಉಪ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ. ಇದಲ್ಲದೆ ಬ್ಯಾಟರಿ ಶಕ್ತಿ ಸಂಗ್ರಹ ವ್ಯವಸ್ಥೆಯಡಿ ₹3,400 ಕೋಟಿ ವೆಚ್ಚದಲ್ಲಿ ಹುಲಿಯೂರು, ಪಾವಗಡ, ಕುಷ್ಟಗಿಯಲ್ಲಿ ಉಪ ಕೇಂದ್ರಗಳನ್ನು ನಿರ್ಮಿಸಲಾಗುತ್ತದೆ.

ಎಲೆಕ್ಟ್ರಿಕ್ ವಾಹನಗಳ ಬಳಕೆ ಉತ್ತೇಜಿಸುವ ನಿಟ್ಟಿನಲ್ಲಿ ಎಸ್ಕಾಂಗಳ ಸಹಯೋಗ ದಲ್ಲಿ ₹777 ಕೋಟಿ ವೆಚ್ಚದಲ್ಲಿ 1,250 ಚಾರ್ಜಿಂಗ್ ಕೇಂದ್ರಗಳನ್ನು ಪಿಎಂ ಇ–ಡ್ರೈವ್ ಯೋಜನೆಯಡಿ ಸ್ಥಾಪಿಸ ಲಾಗುತ್ತದೆ. ನವೀಕರಿಸಬಹುದಾದ ಇಂಧನ ಕ್ಷೇತ್ರದ ನವೋದ್ಯಮಗಳನ್ನು ಉತ್ತೇಜಿಸಲು ಬೆಂಗಳೂರಿನ ಐಐಎಂ, ಐಐಎಸ್‌ಸಿ, ಆಸ್ಟ್ರೇಲಿಯಾದ ‘ಯೂನಿವರ್ಸಿಟಿ ಆಫ್ ನ್ಯೂ ಸೌತ್ ವೇಲ್ಸ್’ ಸಹಯೋಗದಲ್ಲಿ ‘ಇನ್‌ಕ್ಯು ಬೇಷನ್ ಸೆಂಟರ್’ ಆರಂಭಿಸ ಲಾಗುತ್ತದೆ. 36 ಲಕ್ಷ ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತವಾಗಿ ವಿದ್ಯುತ್ ನೀಡಲು ಈ ವರ್ಷ ₹19,290 ಕೋಟಿ ನೀಡಲಾಗುತ್ತದೆ.

ಏಕೀಕೃತ ಆಸ್ತಿ ತೆರಿಗೆ ತಂತ್ರಾಂಶದೊಂದಿಗೆ ಇ–ಆಸ್ತಿ ತಂತ್ರಾಂಶ ಸಂಯೋಜನೆ

ಮೂರು ಲಕ್ಷ ಮನೆ ನಿರ್ಮಾಣ ಗುರಿ

ಪ್ರಸಕ್ತ ಸಾಲಿನಲ್ಲಿ ಮೂರು ಲಕ್ಷ ಮನೆಗಳನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ಹಿಂದಿನ ಸರ್ಕಾರ ಅನುದಾನ ನೀಡದೇ ಮಂಜೂರಾತಿ ನೀಡಿರುವ 4.90 ಲಕ್ಷ ಮನೆಗಳನ್ನು ಪೂರ್ಣ ಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಜೆಟ್‌ನಲ್ಲಿ ತಿಳಿಸಿದ್ದಾರೆ.

ಸರ್ವರಿಗೂ ಸೂರು ಕಲ್ಪಿಸುವ ಉದ್ದೇಶದಿಂದ ರಾಜ್ಯದ ವಿವಿಧ ವಸತಿ ಯೋಜನೆಗಳಡಿ ಬಿಎಲ್‌ಸಿ ಆಧಾರಿತ ಒಂದು ಲಕ್ಷ ಮನೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ. ಇದರಲ್ಲಿ ಆಯ್ಕೆಯಾಗುವ ಫಲಾನುಭವಿಗಳಿಗೆ ನೀಡುವ ಸಹಾಯಧನವನ್ನು ₹1.20 ಲಕ್ಷದಿಂದ ₹2 ಲಕ್ಷಕ್ಕೆ ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ₹2 ಲಕ್ಷದಿಂದ ₹3 ಲಕ್ಷಕ್ಕೆ ಹೆಚ್ಚಿಸಲಾಗುವುದು. ವಸತಿ ಯೋಜನೆಗಳಡಿ ಅರ್ಹ ಫಲಾನುಭವಿಗಳನ್ನು ಇನ್ನು ಮುಂದೆ ಆನ್‌ಲೈನ್ ಲಾಟರಿ ಮೂಲಕ ಗ್ರಾಮಸಭೆಗಳಲ್ಲಿ ಆಯ್ಕೆಗೊಳಿಸಲಾಗುತ್ತದೆ.

ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ (ಎ.ಎಚ್.ಪಿ) 1.20 ಲಕ್ಷ ಮನೆಗಳ ನಿರ್ಮಾಣ ಕಾರ್ಯವನ್ನು ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯು ಅನುಷ್ಠಾನಗೊಳಿಸುತ್ತಿದೆ.

ರಾಜ್ಯದ ನಗರಗಳ ಸ್ವಚ್ಛತೆಯನ್ನು ಕಾಪಾಡುವ ದೃಷ್ಟಿಯಿಂದ ಒಳಚರಂಡಿ ಕಾಮಗಾರಿಗಳನ್ನು ಅಣ್ಣಿಗೇರಿ, ಗುಂಡ್ಲುಪೇಟೆ, ನೆಲಮಂಗಲ, ದೊಡ್ಡಬಳ್ಳಾಪುರ, ಭದ್ರಾವತಿ, ದೇವನಹಳ್ಳಿ ಮತ್ತು ಮೈಸೂರಿನ ಕೆಲವು ಭಾಗಗಳಲ್ಲಿ ಕೈಗೊಳ್ಳಲಾಗುವುದು. ಜತೆಗೆ, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯು ಮೈಕ್ರೊ ಅನುದಾನದ ನೆರವಿನೊಂದಿಗೆ ಆಳಂದ, ಅಫ್ಜಲ್‌ಪುರ, ಚಿತ್ತಾಪುರ, ಯಾದಗಿರಿ, ಹರಪನಹಳ್ಳಿ, ಜೇವರ್ಗಿ ಹಾಗೂ ಸುರಪುರ ಪಟ್ಟಣಗಳಲ್ಲಿ ಒಳಚರಂಡಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಏಕೀಕೃತ ಆಸ್ತಿ ತೆರಿಗೆ ತಂತ್ರಾಂಶದೊಂದಿಗೆ ಇ–ಆಸ್ತಿ ತಂತ್ರಾಂಶವನ್ನು ಸಂಯೋಜನೆಗೊಳಿಸಲಾಗುವುದು. ತೆರಿಗೆ ಬೇಡಿಕೆ ಮತ್ತು ಬಾಕಿ ವಿವರಗಳನ್ನು ಸ್ವಯಂ ಚಾಲಿತವಾಗಿ ಸೃಜಿಸುವ ಸಮಗ್ರ ಆಸ್ತಿ ತೆರಿಗೆ ವ್ಯವಸ್ಥೆ ಜಾರಿಗೊಳಿಸಲಾಗುವುದು. ಅಲ್ಲದೇ ಉನ್ನತ ವ್ಯಾಸಂಗ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗಾಗಿ ಬರುವ ವಿದ್ಯಾರ್ಥಿಗಳಿಗೆ ಧಾರವಾಡದಲ್ಲಿ ನಾಲ್ಕು ಹಾಗೂ ಬೆಂಗಳೂರಿನಲ್ಲಿ ಎರಡು ‘ವಿದ್ಯಾರ್ಥಿ ಇಂದಿರಾ ಕ್ಯಾಂಟೀನ್’ ಪ್ರಾರಂಭಿಸಲಾಗುವುದು.

ತಜ್ಞರ ಅಭಿಪ್ರಾಯ

ನಗರಾಭಿವೃದ್ಧಿ ಬೆಂಗಳೂರಿಗಷ್ಟೇ ಆದ್ಯತೆ

ಹನ್ನೊಂದು ಆರ್ಥಿಕ ಆದ್ಯತೆಗಳ ಮೇಲೆ ನಡೆದಿರುವ ರಾಜ್ಯ ಸರ್ಕಾರವು ನಗರಾಭಿವೃದ್ಧಿಗೆ ಸಂಬಂಧಿಸಿ, ನಗರ ಕೇಂದ್ರಿತ ಸುಸ್ಥಿರ ಅಭಿವೃದ್ಧಿಯನ್ನೇ ಆದ್ಯತೆಯಾಗಿರಿಸಿ ಕೊಂಡಿರುವುದು ಕಾಣುತ್ತದೆ. ಬೆಂಗಳೂರು ಅಭಿವೃದ್ಧಿಗೆ ಅನೇಕ ಕೊಡುಗೆಗಳನ್ನೂ ಬಜೆಟ್ ನೀಡಿದೆ. ಇತರೆ ನಗರಗಳ ಅಭಿವೃದ್ಧಿಗೂ ಹೆಚ್ಚಿನ ಆದ್ಯತೆ ನೀಡಬಹುದಾಗಿತ್ತು.

ವಸತಿ ವಲಯದಲ್ಲಿ ಹಿಂದಿನ ಸರ್ಕಾರವು ಅನುದಾನ ನೀಡದೆ ಮಂಜೂರಾತಿ ನೀಡಿದ್ದ 4.90 ಲಕ್ಷ ಮನೆಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಂಡಿರುವುದು ಈಗಿನ ಸರ್ಕಾರದ ಉತ್ತಮ ಹೆಜ್ಜೆ.

ಕೆಎಚ್‌ಬಿ ವತಿಯಿಂದ ವರ್ಷದಲ್ಲಿ 50 ಸಾವಿರ ನಿವೇಶನಗಳನ್ನು ರಿಯಾಯಿತಿ ದರದಲ್ಲಿ ವಿತರಿಸುವ ಕ್ರಮ ಬಡವರಿಗೆ ನೆರವಾಗಲಿದೆ. ಪ್ರಸಕ್ತ ಸಾಲಿನಲ್ಲಿ 3 ಲಕ್ಷ ಮನೆಗಳನ್ನು ಪೂರ್ಣಗೊಳಿಸುವ ಗುರಿಯನ್ನು ಪ್ರಕಟಿಸಿರುವುದು ಸ್ವಾಗತಾರ್ಹ.

ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ 1 ಲಕ್ಷ ಫಲಾನುಭವಿಗಳಿಗೆ ನೆರವು ನೀಡುವ ಹೊಸ ಗುರಿಯನ್ನೂ ಸೇರಿಸಿರುವುದು ವಿಶೇಷ. ಇದರಡಿ ಆಯ್ಕೆಯಾಗುವ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ನೀಡುವ ಸಹಾಯಧನವನ್ನು ₹1.20 ಲಕ್ಷದಿಂದ ₹2 ಲಕ್ಷಕ್ಕೆ, ಪರಿಶಿಷ್ಟರಿಗೆ ನೀಡುವ ಸಹಾಯಧನವನ್ನು ₹2 ಲಕ್ಷದಿಂದ ₹3 ಲಕ್ಷಕ್ಕೆ ಹೆಚ್ಚಿಸಿರುವುದು, ಸ್ವಂತ ಮನೆ ಹೊಂದಬೇಕೆಂಬುವವರಲ್ಲಿ ಹೊಸ ಭರವಸೆ ಮೂಡಿಸುತ್ತದೆ. ವಸತಿ ಯೋಜನೆಯ ಸಾಮರ್ಥ್ಯವೂ ಹೆಚ್ಚಾಗಿದೆ.

ಪ್ರೊ.ನವಿತಾ ತಿಮ್ಮಯ್ಯ,
ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥರು, ಮೈಸೂರು ವಿಶ್ವವಿದ್ಯಾಲಯ

ಮಾನವ ಅಭಿವೃದ್ಧಿಗೂ ಪ್ರಾಶಸ್ತ್ಯ

ನಗರ ಪ್ರದೇಶ ಅಲ್ಲದೇ ಗ್ರಾಮೀಣ ಪ್ರದೇಶದ ಅಭಿವೃದ್ಧಿಗೂ ಬಜೆಟ್‌ನಲ್ಲಿ ಒತ್ತು ನೀಡಲಾಗಿದೆ. ಸೇತುವೆ, ಸೇತುವೆ ದುರಸ್ತಿ, ಕಾಲುಸಂಕಗಳ ನಿರ್ಮಾಣ ಕಾಮಗಾರಿಗೆ ₹200 ಕೋಟಿ ಅನುದಾನ ಘೋಷಣೆಯು ಕಟ್ಟಕಡೆಯ ವ್ಯಕ್ತಿಗೂ ಸೌಲಭ್ಯ ಕಲ್ಪಿಸುತ್ತದೆ. ಇದರಿಂದ ಮಲೆನಾಡು, ಕರಾವಳಿ ಪ್ರದೇಶದ ಜನರಿಗೆ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ.

ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ರಸ್ತೆಗಳ ನಿರ್ಮಾಣಕ್ಕೆ ₹5,776 ಕೋಟಿ ವೆಚ್ಚ ಮಾಡುವುದಾಗಿ ತಿಳಿಸಲಾಗಿದೆ. ಇದು ಜಿಲ್ಲೆ ಮತ್ತು ತಾಲ್ಲೂಕುಗಳ ನಡುವೆ ಸಂಪರ್ಕ ಕಲ್ಪಿಸಲು ಸುಲಭವಾಗಿ, ಆರ್ಥಿಕ ಅಭಿವೃದ್ಧಿಗೆ ಹೊಸ ಭಾಷ್ಯ ಬರೆಯಬಹುದು. ಬೆಂಗಳೂರಿನ ಅಭಿವೃದ್ಧಿಗೆ ಹೆಚ್ಚಿನ ಮಹತ್ವ ನೀಡುವ ಬದಲು, 2 ಮತ್ತು 3ನೇ ಹಂತದ ನಗರಗಳ ಅಭಿವೃದ್ಧಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕಿತ್ತು. ಬೆಂಗಳೂರಿನಲ್ಲೇ ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲು ಮುಂದಾಗಿದ್ದು ಅನಗತ್ಯ. ಬೆಂಗಳೂರು ಜನದಟ್ಟಣೆಯಿಂದ ನರಳುತ್ತಿದೆ. ಸಾಕಷ್ಟು ಮೂಲಸೌಕರ್ಯಗಳ ಯೋಜನೆಗಳು ಅಲ್ಲಿವೆ. ಅದೇ ವಿಮಾನ ನಿಲ್ದಾಣ ಬೇರೆ ಭಾಗದಲ್ಲಿ ನಿರ್ಮಾಣವಾದರೆ ಪ್ರಾದೇಶಿಕ ಅಸಮತೋಲನ ದೂರವಾಗುತ್ತಿತ್ತು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಸರ್ಕಾರ–ಸಾರ್ವಜನಿಕ ಸಹಭಾಗಿತ್ವದಲ್ಲಿ ಪ್ರವಾಸೋದ್ಯಮಕ್ಕೆ ಪೂರಕವಾಗಿ ಅಭಿವೃದ್ಧಿ ಕೈಗೊಳ್ಳುವ ಬಗ್ಗೆ ತಿಳಿಸಲಾಗಿದೆ. ಆದರೆ, ವನ್ಯ, ಸಸ್ಯ, ಜಲಸಂಪತ್ತಿಗೆ ಧಕ್ಕೆಯಾಗಬಾರದು. ಇದೇ ಜಿಲ್ಲೆಯಲ್ಲಿ ಬಹುತೇಕ ಕಡೆ ಸುಸಜ್ಜಿತ ರಸ್ತೆ ಮತ್ತು ಮೂಲಸೌಕರ್ಯಗಳೂ ಇಲ್ಲ.

ವಿಕಾಸ ಸೊಪ್ಪಿನ,
ಮಾರುಕಟ್ಟೆ ಸಲಹೆಗಾರ, ಹುಬ್ಬಳ್ಳಿ

ಹೂಡಿಕೆ ಪ್ರೋತ್ಸಾಹಕ್ಕೆ ಪೂರಕ

ಬಜೆಟ್‌ನಲ್ಲಿ ಘೋಷಿಸಲಾದ ಹಲವು ಕ್ರಮಗಳು ಕೈಗಾರಿಕೋದ್ಯಮಿಗಳ ವಿಶ್ವಾಸ ಹೆಚ್ಚಿಸಿವೆ. ಎಂಎಸ್‌ಎಂಇ ವಲಯಕ್ಕೆ ಬೆಂಬಲ ನೀಡಿರುವುದು ಉದಯೋನ್ಮುಖ ತಂತ್ರಜ್ಞಾನಕ್ಕೆ ಉತ್ತೇಜನಕಾರಿ ಆಗಿದೆ ಮತ್ತು ರಾಜ್ಯದಾದ್ಯಂತ ಹೂಡಿಕೆಯನ್ನು ಪ್ರೋತ್ಸಾಹಿಸಲು ಪೂರಕವಾಗಿದೆ.

ಬೆಂಗಳೂರಿನ ಆಚೆಗೆ, 2ನೇ ಮತ್ತು 3ನೇ ಹಂತದ ನಗರಗಳಲ್ಲಿ ಕೈಗಾರಿಕೆಗಳ ಸ್ಥಾಪನೆ ಮತ್ತು ತಾಂತ್ರಿಕ ಅಭಿವೃದ್ಧಿಯನ್ನು ಉತ್ತೇಜಿಸುವ ಸರ್ಕಾರದ ಕ್ರಮ ಶ್ಲಾಘನೀಯ. ಮಂಡ್ಯದಲ್ಲಿ ಸುಮಾರು ₹500 ಕೋಟಿ ಹೂಡಿಕೆಯೊಂದಿಗೆ ‘ಆಟೊಮೋಟಿವ್ ರಿಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ’ ಸ್ಥಾಪಿಸುವ ಪ್ರಸ್ತಾವನೆಯು ಕರ್ನಾಟಕದ ವಾಹನ ಉದ್ಯಮವನ್ನು ಬಲಪಡಿಸಲಿದೆ.

ವಾಹನ ಗುಜರಿ ಕೇಂದ್ರದ ಸ್ಥಾಪನೆಯಿಂದ ಮಾಲಿನ್ಯ ನಿಯಂತ್ರಣ, ಮರುಬಳಕೆ ಹಾಗೂ ಆಟೊಮೊಬೈಲ್ ಕ್ಷೇತ್ರಕ್ಕೂ ಉತ್ತೇಜನ ಸಿಗಲಿದೆ.

ಬೆಳಗಾವಿಯಲ್ಲಿ ಸಾವಿರ ಎಕರೆಯಲ್ಲಿ ಕೈಗಾರಿಕಾ ಪಾರ್ಕ್ ಅಭಿವೃದ್ಧಿಪಡಿಸುವ ಪ್ರಸ್ತಾವನೆಯು ಉತ್ತರ ಕರ್ನಾಟಕದಲ್ಲಿ ಹೂಡಿಕೆಗೆ ಉತ್ತೇಜನ ನೀಡುತ್ತದೆ ಮತ್ತು ಉದ್ಯೋಗ ಅವಕಾಶ ಹೆಚ್ಚಿಸುತ್ತದೆ.

ವೈಮಾಂತರಿಕ್ಷ ಮತ್ತು ರಕ್ಷಣಾ ವಲಯ ಕೇಂದ್ರೀಕರಿಸಿ ಮೈಸೂರಿನಲ್ಲಿ ಪ್ರತ್ಯೇಕ ಪಾರ್ಕ್ ಅಭಿವೃದ್ಧಿಪಡಿಸಲಾಗುತ್ತಿದೆ. ಇದರಿಂದ ಕರ್ನಾಟಕವನ್ನು ಈ ವಲಯದ ಪ್ರಮುಖ ಕೇಂದ್ರವನ್ನಾಗಿಸಲು ಸಾಧ್ಯವಾಗಲಿದೆ. ಮೈಸೂರನ್ನು ಎರಡನೇ ಐ.ಟಿ ನಗರವಾಗಿ ಅಭಿವೃದ್ಧಿಪಡಿಸುವುದು, ಚಿಕ್ಕಬಳ್ಳಾಪುರದಲ್ಲಿ ಡ್ರೋನ್ ಪರೀಕ್ಷಾ ಸೌಲಭ್ಯ ಮತ್ತು ಕ್ವಾಂಟಮ್ ತಂತ್ರಜ್ಞಾನದಲ್ಲಿ ಮುಂದುವರಿಯಲು ನೀಲನಕ್ಷೆಯು ನಾವೀನ್ಯ ಆಧಾರಿತ ಕೈಗಾರಿಕಾ ವಲಯದಲ್ಲಿ ರಾಜ್ಯವನ್ನು ಮುಂಚೂಣಿಗೆ ತೆಗೆದುಕೊಂಡು ಹೋಗಲು ನೆರವಾಗಲಿದೆ. ಪ್ರತ್ಯೇಕ ಎಂಎಸ್‌ಇ ನೀತಿ ಘೋಷಿಸಬೇಕು. ಉದ್ಯಮಗಳಿಗೆ ತ್ವರಿತ ಅನುಮೋದನೆ ನೀಡಲು ಏಕಗವಾಕ್ಷಿ ವ್ಯವಸ್ಥೆ ರೂಪಿಸಬೇಕು.

ಉಮಾ ರೆಡ್ಡಿ,
ಎಫ್‌ಕೆಸಿಸಿಐ ಅಧ್ಯಕ್ಷೆ

₹44,632 ಕೋಟಿ
2026–27ನೇ ಸಾಲಿಗೆ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ

₹100 ಕೋಟಿ
ಜೈನ, ಬೌದ್ಧ, ಸಿಖ್ ಸಮುದಾಯಗಳ ಅಭಿವೃದ್ಧಿಗೆ ಹಣ

₹1,500 ಕೋಟಿ
ಸಮಾಜ ಕಲ್ಯಾಣ, ಎಸ್‌ಟಿ, ಒಬಿಸಿ, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಗಳಿಗೆ ಒದಗಿಸಿದ ಅನುದಾನ

ಮುಖ್ಯಮಂತ್ರಿ ತವರು ಜಿಲ್ಲೆಗೆ ಸಿಂಹಪಾಲು

ತವರು ಜಿಲ್ಲೆ ಮೈಸೂರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಂಪರ್ ಕೊಡುಗೆ ನೀಡಿದ್ದಾರೆ. ಆದರೆ, ಪಕ್ಕದ ಚಾಮರಾಜನಗರ, ಹಾಸನ, ಮಂಡ್ಯ ಜಿಲ್ಲೆಗಳಿಗೆ ನಿರೀಕ್ಷಿಸಿದಷ್ಟು ಅನುದಾನ ಸಿಕ್ಕಿಲ್ಲ. ಕರಾವಳಿ, ಕಲ್ಯಾಣ ಕರ್ನಾಟಕ, ಕಿತ್ತೂರು ಭಾಗಕ್ಕೂ ನ್ಯಾಯ ಒದಗಿಸುವ ಪ್ರಯತ್ನ ಮಾಡಲಾಗಿದೆ.

ನಂಜನಗೂಡು ತಾಲ್ಲೂಕು ತಾಂಡವಪುರದಲ್ಲಿ 'ಸಿಲ್ಕ್ ಪಾರ್ಕ್', ಮೈಸೂರು ವಿಮಾನ ನಿಲ್ದಾಣದ ಸಮೀಪ ಕೆಐಎಡಿಬಿಯಿಂದ 'ಏರೊಸ್ಪೇಸ್ ಪಾರ್ಕ್' ಸ್ಥಾಪನೆ ಹಾಗೂ ಬೆಂಗಳೂರಿನ ದಟ್ಟಣೆ ಕಡಿಮೆ ಮಾಡಲು ಹಾಗೂ ವಿಕೇಂದ್ರೀಕೃತ ಆರ್ಥಿಕತೆಯನ್ನು ಪ್ರೋತ್ಸಾಹಿಸಲು ಮೈಸೂರು ನಗರವನ್ನು ರಾಜ್ಯದ 2ನೇ ಐಟಿ ಸಿಟಿಯನ್ನಾಗಿ ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ.

ಚಲನಚಿತ್ರ ನಟ ದಿವಂಗತ ಪುಟ್ಟಣ್ಣ ಕಣಗಾಲ್ ಅವರ ನಿವಾಸವನ್ನು ವಸ್ತುಸಂಗ್ರಹಾಲಯವನ್ನಾಗಿ ಅಭಿವೃದ್ಧಿ ಪಡಿಸುವುದು ಹಾಗೂ ಮೈಸೂರು ನಗರದಲ್ಲಿ ಪ್ರಾಯೋಗಿಕವಾಗಿ 'ಇ-ಕೋರ್ಟ್' ಸ್ಥಾಪನೆಗೆ ನಿರ್ಧರಿಸಲಾಗಿದೆ.

ಪುತ್ತೂರಿನಲ್ಲಿ ವೈದ್ಯಕೀಯ ಕಾಲೇಜು ಸ್ಥಾಪಿಸಲು 300 ಹಾಸಿಗೆಯ ಆಸ್ಪತ್ರೆ ನಿರ್ಮಾಣಕ್ಕೆ ಅನುಮೋದನೆ ನೀಡಿರುವುದು ಕರಾವಳಿ ಭಾಗಕ್ಕೆ ಸ್ವಲ್ಪ ಮಟ್ಟಿಗೆ ಸಮಾಧಾನ ತಂದಿದೆ. ಉತ್ತರ ಕನ್ನಡ ಜಿಲ್ಲೆಯ ಹಲವು ವರ್ಷಗಳ ಕೂಗಿಗೆ ಸ್ಪಂದನೆ ದೊರೆತಿದ್ದು, ಕಾರವಾರದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ₹100 ಕೋಟಿ ಘೋಷಣೆ ಮಾಡಲಾಗಿದೆ.

ಕಿತ್ತೂರು ಕರ್ನಾಟಕ ಭಾಗದ ರೈತರ ಬಹು ನಿರೀಕ್ಷೆಯ ಮಹದಾಯಿ ಯೋಜನೆಯ ಕಾಮಗಾರಿ ಗುತ್ತಿಗೆ ನೀಡುವ ಹಂತದವರೆಗೂ ಮುಂದಾಗಿದೆ. ಮಹದಾಯಿ ಕಣಿವೆಯ ಕಳಸಾ–ಬಂಡೂರಿ ನಾಲಾ ಯೋಜನೆಗಳಡಿ ಅರಣ್ಯ ತೀರುವಳಿ ಪಡೆಯಲು ರಾಜ್ಯ ಸರ್ಕಾರವು ಕೇಂದ್ರ ಪರಿಸರ ಸಚಿವಾಲಯ ಮತ್ತು ರಾಷ್ಟ್ರೀಯ ವನ್ಯಜೀವಿ ಮಂಡಳಿಯಲ್ಲಿ ಎರಡು ವರ್ಷಗಳಿಂದ ನಿರಂತರ ಪ್ರಯತ್ನಿಸಿದ್ದರೂ, ಈವರೆಗೆ ತೀರುವಳಿ ಲಭಿಸಿರುವುದಿಲ್ಲ. ಈ ಯೋಜನೆಗಳಿಗೆ ಈಗಾಗಲೇ ಗುತ್ತಿಗೆ ವಹಿಸಲಾಗಿದ್ದು, ಕೇಂದ್ರ ಸರ್ಕಾರದಿಂದ ಅರಣ್ಯ ತೀರುವಳಿ ದೊರೆತ ಕೂಡಲೇ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ವಿಜಯಪುರ ವಿಮಾನ ನಿಲ್ದಾಣದ ಆವರಣದಲ್ಲಿ ಪಿಪಿಪಿ ಮಾದರಿಯಲ್ಲಿ ವಿಮಾನ ತರಬೇತಿ ಶಾಲೆ ಆರಂಭಿಸಲಾಗುತ್ತದೆ ಮತ್ತು ತೊರವಿಯಲ್ಲಿ ಕೋಲ್ಡ್ ಸ್ಟೋರೇಜ್ ನಿರ್ಮಾಣ ಮಾಡಲಾಗುತ್ತದೆ.

ಧಾರವಾಡ ಜಿಲ್ಲೆಯಲ್ಲಿ ನೋಂದಾಯಿತ ಕಾರ್ಮಿಕರು, ಅವರ ಮಕ್ಕಳಿಗೆ ಕೌಶಲ ತರಬೇತಿ ನೀಡಲು ಹುಬ್ಬಳ್ಳಿ-ಧಾರವಾಡದಲ್ಲಿ ಕೌಶಲ ತರಬೇತಿ ಅಕಾಡೆಮಿಯನ್ನು ₹200 ಕೋಟಿ ವೆಚ್ಚದಲ್ಲಿ ಸ್ಥಾಪಿಸಲಾಗುವುದು.

ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಪ್ರಸಕ್ತ ಸಾಲಿಗೂ ₹5 ಸಾವಿರ ಕೋಟಿ ಕ್ರಿಯಾ ಯೋಜನೆ ರೂಪಿಸಿ ಅನುಷ್ಠಾನಗೊಳಿಸಲಾಗುವುದು.



8 ಸಾವಿರ ಹುದ್ದೆ ಭರ್ತಿ

ಪ್ರಸಕ್ತ ಸಾಲಿನಲ್ಲಿ ಗೃಹ ಇಲಾಖೆಯಲ್ಲಿ ಖಾಲಿ ಇರುವ ಒಟ್ಟಾರೆ 8 ಸಾವಿರ ವಿವಿಧ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲಾಗುವುದು. ಹುದ್ದೆಗಳ ನೇಮಕಾತಿಯನ್ನು ಕ್ರಮಬದ್ಧ, ಪಾರದರ್ಶಕ ಮತ್ತು ನಿಯಮಿತವಾಗಿ ನಡೆಸಲು ಶಾಶ್ವತ ಪೊಲೀಸ್ ಮತ್ತು ಪೊಲೀಸ್ ಸಹಾಯಕ ಸೇವೆಗಳ ನೇಮಕಾತಿ ಮಂಡಳಿ ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಘೋಷಿಸಿದ್ದಾರೆ.

ಪ್ರಸಕ್ತ ಸಾಲಿನಲ್ಲಿ ₹ 250 ಕೋಟಿ ವೆಚ್ಚದಲ್ಲಿ ವಸತಿ ಗೃಹಗಳ ನಿರ್ಮಾಣ ಕಾಮಗಾರಿ ಕೈಗೆತ್ತಿಗೊಳ್ಳಲಾಗುವುದು. ಬೆಳಗಾವಿಯ ಸುವರ್ಣ ಸೌಧದಲ್ಲಿ ನಡೆಯುವ ವಿಧಾನಮಂಡಲದ ಅಧಿವೇಶನದ ಸಮಯದಲ್ಲಿ ಬಂದೋಬಸ್ತ್ ಕಾರ್ಯಕ್ಕೆ ನಿಯೋಜಿಸಲಾಗುವ ಸಿಬ್ಬಂದಿಗೆ ವಸತಿ ಸೌಲಭ್ಯ ಒದಗಿಸಲು ₹20 ಕೋಟಿ ವೆಚ್ಚದಲ್ಲಿ ಶಾಶ್ವತ ಬ್ಯಾರಕ್ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ಸಿದ್ದರಾಮಯ್ಯ ಬಜೆಟ್‌ನಲ್ಲಿ ಪ್ರಕಟಿಸಿದ್ದಾರೆ.

ಈ ಬಾರಿಯೂ 'ಅಹಿಂದ' ಪಥ...

ಆದಿವಾಸಿ ಅಭಿವೃದ್ಧಿ ನಿಗಮ, ಬೌದ್ಧ ಅಭಿವೃದ್ಧಿ ನಿಗಮ, ಎಸ್‌ಟಿ ಆಯೋಗ, ಅಲ್ಪಸಂಖ್ಯಾತ ಮಹಿಳಾ ಸಹಕಾರ ಸಂಘ ಘೋಷಣೆ

● ರಾಜೇಶ್ ರೈ ಚಟ್ಲ

ಬೆನ್ನಿಗೆ ನಿಂತ ಸಮುದಾಯ 'ಅಹಿಂದ'ವನ್ನು (ಅಲ್ಪಸಂಖ್ಯಾತ, ಹಿಂದುಳಿದ, ದಲಿತ) ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಬಾರಿಯೂ 'ಕೈ'ಬಿಟ್ಟಿಲ್ಲ. ಸಾಕಷ್ಟು ಯೋಜನೆ, ಭರಪೂರ ಕೊಡುಗೆಗಳ ಮೂಲಕ ದಲಿತ, ಶೋಷಿತ ಪರ ಬದ್ಧತೆ ಮುಂದುವರಿಸಿದ್ದಾರೆ. ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮತ ಬ್ಯಾಂಕ್ ಭದ್ರಪಡಿಸಿಕೊಳ್ಳುವ ತಂತ್ರಗಾರಿಕೆಯೂ ಈ 'ಹಂಚಿಕೆ' ಸೂತ್ರದಲ್ಲಿ ಇದ್ದಂತಿದೆ.

ಎರಡನೇ ಬಾರಿಗೆ ಆಡಳಿತ ಚುಕ್ಕಾಣಿ ಹಿಡಿದು ಸಾಗಿದ ಮೂರು ವರ್ಷಗಳಲ್ಲಿ ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರ ಕಲ್ಯಾಣದ ಗುರಿ ನೆಟ್ಟು ಶಿಕ್ಷಣ, ಮಾನವ ಸಂಪನ್ಮೂಲ, ಕೌಶಲ, ಜೀವನೋಪಾಯ, ಮೂಲಸೌಕರ್ಯ ಹೀಗೆ ನಾನಾ ವಲಯಗಳಲ್ಲಿ ಹಲವು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದರು. ಆ ಪಥದಲ್ಲಿಯೇ ಸಾಗಿದ್ದಾರೆ.

ಪರಿಶಿಷ್ಟ ಜಾತಿ ಉಪಯೋಜನೆ (ಎಸ್‌ಸಿಎಸ್‌ಪಿ) ಮತ್ತು ಬುಡಕಟ್ಟು ಉಪಯೋಜನೆ (ಟಿಎಸ್‌ಪಿ) ಅಡಿ 2025–26ನೇ ಸಾಲಿನಲ್ಲಿ ₹ 42,018 ಕೋಟಿ ಮೀಸಲಿಟ್ಟಿದ್ದ ಮುಖ್ಯಮಂತ್ರಿ, ಈ ಬಾರಿ ಮೊತ್ತವನ್ನು ₹ 44,632 ಕೋಟಿಗೆ ಹಿಗ್ಗಿಸಿದ್ದಾರೆ.

ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ 2013–14ರಿಂದ 2018–19ರ ಅವಧಿಯಲ್ಲಿ ನೀಡಲಾದ ಸಾಲಗಳ ಮೇಲಿನ ಬಡ್ಡಿ ಮನ್ನಾಗೆ ಒಟಿಎಸ್ ಯೋಜನೆಗೆ ಸಚಿವ ಸಂಪುಟ ಇತ್ತೀಚೆಗೆ ಅನುಮೋದನೆ ನೀಡಿತ್ತು. ಅಲ್ಪಸಂಖ್ಯಾತರ ಬಡ್ಡಿ ಮನ್ನಾ ಮಾಡಿ ಸರ್ಕಾರ ತುಷ್ಟೀಕರಣದ ರಾಜಕಾರಣ ನಡೆಸುತ್ತಿದೆ ಎಂದು ವಿರೋಧ ಪಕ್ಷಗಳು ಕಿಡಿಕಾರಿದ್ದವು. ಈ ಆರೋಪಕ್ಕೆ ಉತ್ತರ ನೀಡಿರುವ ಸಿದ್ದರಾಮಯ್ಯ, ಸಮಾಜ ಕಲ್ಯಾಣ, ಪರಿಶಿಷ್ಟ ಪಂಗಡಗಳ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳಡಿ ಇರುವ ನಿಗಮಗಳಿಂದ 2021ರ ಮಾರ್ಚ್ 31ರವರೆಗೆ ಪಡೆದ ಸಾಲದ ಅಸಲು ಪಾವತಿ ಮಾಡುವವರಿಗೆ ಬಡ್ಡಿ ಮನ್ನಾ ಮಾಡಿ ಒಟಿಎಸ್ ಜಾರಿಗೆ ತರುವುದಾಗಿ ಪ್ರಕಟಿಸಿದ್ದಾರೆ. ಈ ನಿಗಮಗಳಲ್ಲಿ ಮೈಕ್ರೊ ಕ್ರೆಡಿಟ್ ಪ್ರೇರಣಾ ಯೋಜನೆಯಡಿ ಸಾಲ ಮತ್ತು ಸಹಾಯಧನ ಪಡೆದ ಮಹಿಳಾ ಸ್ವ-ಸಹಾಯ ಸಂಘಗಳು ಸಾಲವನ್ನು ಸಕಾಲದಲ್ಲಿ ಮರುಪಾವತಿಸಿದ ಸಂಘಗಳಿಗೆ ಎರಡನೇ ಬಾರಿಗೆ ಸಾಲ ಮತ್ತು ಸಹಾಯಧನ ಮಂಜೂರು ಮಾಡುವುದಾಗಿ ಹೇಳಿದ್ದಾರೆ.

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಹಂಚಿಕೆಯಲ್ಲಿ ಅಲೆಮಾರಿಗಳು, ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಜಾತಿಗಳಿಗೆ ಅನ್ಯಾಯವಾಗಿದೆ ಎಂಬ ಕೂಗಿಗೆ ಸ್ಪಂದಿಸಿರುವ ಸಿದ್ದರಾಮಯ್ಯ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಲೆಮಾರಿ, ಅರೆ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ₹ 100 ಕೋಟಿ ನೀಡುವುದಾಗಿ ಹೇಳಿದ್ದಾರೆ. ಈ ಸಮುದಾಯದ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಪ್ರತಿ ಕಂದಾಯ ವಿಭಾಗಕ್ಕೆ ಒಂದರಂತೆ ನಾಲ್ಕು ವಿಶೇಷ ವಸತಿ ಶಾಲೆ ಆರಂಭಿಸಲಾಗುವುದು ಎಂದಿದ್ದಾರೆ.

'ಅಹಿಂದ' ವರ್ಗದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಆಯಾ ಇಲಾಖೆಗಳಡಿ ಹಲವು ಕಾರ್ಯಕ್ರಮಗಳನ್ನು ಘೋಷಿಸಲಾಗಿದೆ. ವಸತಿ ಶಾಲೆಗಳಿಲ್ಲದ ಹೋಬಳಿಗಳಲ್ಲಿ ಹೊಸ ವಸತಿ ಶಾಲೆ, ಕ್ರೈಸ್ ವಸತಿ ಶಾಲೆಗಳಿಗೆ ಮೂಲಸೌಕರ್ಯ, ಸ್ವಂತ ಕಟ್ಟಡ, ವಿದ್ಯಾರ್ಥಿನಿಲಯಗಳ ನಿರ್ವಹಣಾ ವೆಚ್ಚದ ದರ ಪರಿಷ್ಕರಣೆಗೆ ಹೆಚ್ಚುವರಿಯಾಗಿ ಹಣ, ಆರ್‌ಟಿಇ ಅಡಿ ಪ್ರವೇಶ ಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಪ್ರವೇಶ ಪಡೆದ ಶಾಲೆಗಳಲ್ಲಿಯೇ 9 ಮತ್ತು 10ನೇ ತರಗತಿಗಳಲ್ಲಿ ವ್ಯಾಸಂಗ ಮುಂದುವರೆಸಲು ಅವಕಾಶ ಕಲ್ಪಿಸಲು ಅನುದಾನ ಒದಗಿಸುವುದಾಗಿ ತಿಳಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ಪಂಗಡಗಳ ಇಲಾಖೆಗಳ ಅಡಿಯಲ್ಲಿ ಬರುವ ನಿಗಮಗಳು ಗಂಗಾ ಕಲ್ಯಾಣ ಯೋಜನೆಯಡಿ ಪ್ರತಿ ಕೊಳವೆ ಬಾವಿಗಳ ವಿದ್ಯುದೀಕರಣಕ್ಕಾಗಿ ಪಾವತಿಸುವ ಮೊತ್ತವನ್ನು ₹75 ಸಾವಿರದಿಂದ 1.50 ಲಕ್ಷಕ್ಕೆ ಹೆಚ್ಚಿಸುವುದು, ಕೆ–ಸೆಟ್, ಜೆಇಇ, ನೀಟ್ ಪರೀಕ್ಷೆಗಳಿಗೆ ಗುಣಮಟ್ಟದ ತರಬೇತಿ ನೀಡಲು ನಾಲ್ಕು ಕ್ರೈಸ್ ವಸತಿ ಶಾಲೆಗಳನ್ನು ಸೆಂಟರ್ ಫಾರ್ ಎಕ್ಸಲೆನ್ಸ್‌ಗಳಾಗಿ ಉನ್ನತೀಕರಿಸುವುದು, ವಸತಿ ನಿಲಯ ಮತ್ತು ವಸತಿ ಶಾಲೆಗಳಲ್ಲಿ ಗುಣಮಟ್ಟದ ಆಹಾರ ಪೂರೈಕೆಗೆ ಮೆಸ್ ಸಮಿತಿ ರಚನೆ, ಜೊತೆಗೆ, ನಿರ್ವಹಣೆಯಲ್ಲಿ ಸುಧಾರಣೆ ತರಲು ಉನ್ನತ ಮಟ್ಟದ ಸಮಿತಿ ರಚಿಸಲಾಗುವುದು ಎಂದೂ ಪ್ರಕಟಿಸಿದ್ದಾರೆ.

ಅರಣ್ಯದಂಚಿನಲ್ಲಿರುವ ಇರುಳ, ಸೋಲಿಗ, ಜೇನುಕುರುಬ, ಕಾಡುಕುರುಬ, ಕುಡಿಯ, ಸಿದ್ದಿ ಮತ್ತು ಇತರೆ ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಪರಿಶಿಷ್ಟ ಪಂಗಡದವರಿಗಾಗಿ (ಪಿವಿಟಿಜಿ) ಕರ್ನಾಟಕ ಆದಿವಾಸಿ ಅಭಿವೃದ್ಧಿ ನಿಗಮ, ಬೌದ್ಧ ಸಮುದಾಯಕ್ಕೆ 'ಬೌದ್ಧ ಅಭಿವೃದ್ಧಿ ನಿಗಮ', ಪರಿಶಿಷ್ಟ ಪಂಗಡದವರ ಹಕ್ಕುಗಳನ್ನು ಸಂರಕ್ಷಿಸಲು 'ಪರಿಶಿಷ್ಟ ಪಂಗಡಗಳ ಆಯೋಗ', ಅಲ್ಪಸಂಖ್ಯಾತ ಸಮುದಾಯದ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಪ್ರೋತ್ಸಾಹಿಸಲು ಅಲ್ಪಸಂಖ್ಯಾತರ ಮಹಿಳಾ ಕೋ-ಆಪರೇಟಿವ್ ಸೊಸೈಟಿ ಘೋಷಿಸಲಾಗಿದೆ. ಹಿಂದುಳಿದ ವರ್ಗಗಳ ಕಾರ್ಯಕ್ರಮಗಳ ಅನುಷ್ಠಾನ, ಉದ್ಯೋಗ ಮತ್ತು ಶಿಕ್ಷಣ ಮೀಸಲಾತಿ, ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ಕುರಿತಂತೆ ಕ್ರಮ ಕೈಗೊಳ್ಳಲು ಮುಖ್ಯಮಂತ್ರಿಯ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲಾಗುವುದು ಎಂದೂ ಮುಖ್ಯಮಂತ್ರಿ ಪ್ರಕಟಿಸಿದ್ದಾರೆ.

ಅಲ್ಪಸಂಖ್ಯಾತ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳಿಗೆ ಹೆಚ್ಚಿನ ಬೇಡಿಕೆ ಇರುವ ಕಾರಣ ಬೆಂಗಳೂರಿನಲ್ಲಿ 100 ಸಂಖ್ಯಾಬಲದ ನಾಲ್ಕು ವಸತಿ ನಿಲಯಗಳು, ಈ ಸಮುದಾಯದ ನಿರ್ಗತಿಕ ಜನರಿಗೆ 100 ಸಂಖ್ಯಾಬಲದ ಎರಡು ಮಹಿಳಾ ವೃದ್ಧಾಶ್ರಮ, ಹಜ್ ಯಾತ್ರಿಕರು ಹಾಗೂ ಅವರ ಸಂಬಂಧಿಕರಿಗೆ ಅಗತ್ಯ ಸೌಲಭ್ಯ ಮತ್ತು ಸೌಕರ್ಯಗಳನ್ನು ಒದಗಿಸಲು ಹುಬ್ಬಳ್ಳಿ ಮತ್ತು ಕಲಬುರಗಿಯಲ್ಲಿ ಹಜ್ ಭವನ ನಿರ್ಮಾಣ, ಬೆಂಗಳೂರಿನ ಕೆಂಗೇರಿಯಲ್ಲಿ ಆಸಿರ್ವನಂ ಬೆನಿಡಿಕ್ಟಿನ್ ಮೊನಾಸ್ಟರಿಯ ಎರಡು ಎಕರೆ ಜಾಗದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ತರಬೇತಿ ಕೇಂದ್ರ ಸ್ಥಾಪನೆ, ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಅಂಬೇಡ್ಕರ್ ಹಾಗೂ ಇತರ ಸಮಾಜ ಸುಧಾರಕರ ಪುಸ್ತಕಗಳನ್ನು ಉರ್ದು ಭಾಷೆಗೆ ಅನುವಾದ, ವಕ್ಫ್ ಸಂಸ್ಥೆಗಳಲ್ಲಿನ 31 ಮಹಿಳಾ ಪಿಯು ಕಾಲೇಜುಗಳನ್ನು ಪದವಿ ಕಾಲೇಜುಗಳಾಗಿ ಉನ್ನತೀಕರಣ ಮಾಡಲಾಗುವುದು. ವಾಣಿಜ್ಯ ಉದ್ದೇಶಕ್ಕೆ ಅತಿ ಹೆಚ್ಚು ಬೇಡಿಕೆಯಿರುವ ಪ್ರದೇಶಗಳಲ್ಲಿ ವಕ್ಫ್ ಆಸ್ತಿಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದು ಎಂದೂ ಘೋಷಿಸಿದ್ದಾರೆ.

- ಸಂತ ಶಿಶುನಾಳ ಶರೀಫರ ಹೆಸರಿನಲ್ಲಿ **35** ಹೊಸ ವಸತಿ ಶಾಲೆ (**10** ಸಿಬಿಎಸ್‌ಇ ಪಠ್ಯಕ್ರಮ, **25** ರಾಜ್ಯ ಪಠ್ಯಕ್ರಮ)
- **100** ಮೌಲಾನಾ ಆಜಾದ್ ಮಾದರಿ ಶಾಲೆಗಳು ಹಾಗೂ ಉರ್ದು ಶಾಲೆಗಳನ್ನು ಕೆಪಿಎಸ್ ಮಾದರಿಯಲ್ಲಿ ₹**400** ಕೋಟಿ ವೆಚ್ಚದಲ್ಲಿ ಉನ್ನತೀಕರಣ
- ಬೌದ್ಧ ಧರ್ಮದ ಧಮ್ಮಾಚಾರಿಗಳಿಗೆ ₹**6** ಸಾವಿರ ಮಾಸಿಕ ಗೌರವಧನ
- ಅಲ್ಪಸಂಖ್ಯಾತರ ವಿದ್ಯಾರ್ಥಿಗಳಲ್ಲಿ ಡಿಜಿಟಲ್ ಶಿಕ್ಷಣ ಪ್ರೋತ್ಸಾಹಿಸಲು **5** ಸಾವಿರ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಗೆ ತಲಾ ₹**50** ಸಾವಿರ
- ಕ್ರೈಸ್ ವಸತಿ ಶಾಲೆಗಳಿಗೆ ಮೂಲಸೌಕರ್ಯ ಒದಗಿಸಲು ₹ **50** ಕೋಟಿ
- **30** ಕ್ರೈಸ್ ವಸತಿ ಶಾಲೆಗಳಿಗೆ ₹ **660** ಕೋಟಿ ವೆಚ್ಚದಲ್ಲಿ ಸ್ವಂತ ಕಟ್ಟಡಗಳ ನಿರ್ಮಾಣ
- ಸಲೂನ್‌ಗಳನ್ನು ತೆರೆಯಲು ಸವಿತಾ ಸಮಾಜದವರಿಗೆ ಶೇ **4** ರಷ್ಟು ಬಡ್ಡಿದರದಲ್ಲಿ ₹**10** ಲಕ್ಷವರೆಗೆ ಸಾಲ ಮತ್ತು ಸಹಾಯಧನ

ಪ್ರತಿಕ್ರಿಯೆಗಳು



ಅತ್ಯಂತ ನೀರಸ, ಕಳಪೆ ಬಜೆಟ್. ಈ ಬಜೆಟ್ ಮಂಡನೆ ವೇಳೆ ಆಡಳಿತ ಪಕ್ಷದ ಶಾಸಕರು ಮತ್ತು ಸಚಿವರಿಗೇ ಆಸಕ್ತಿ ಇದ್ದಂತೆ ಕಾಣಲಿಲ್ಲ. ಸಿದ್ದರಾಮಯ್ಯ ಕುಡುಕರ ರಾಜ್ಯ ಮಾಡಲು ಹೊರಟಿದ್ದಾರೆ

ಬಿ.ವೈ.ವಿಜಯೇಂದ್ರ
ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ವಿತ್ತೀಯ ಶಿಸ್ತಿನ ನಿಯಮ ಪಾಲಿಸುತ್ತಿದ್ದೇವೆ ಎಂದು ಹೇಳುವ ಸಿದ್ದರಾಮಯ್ಯ ಅಂಕಿ–ಸಂಖ್ಯೆ ಬದಲಿಸುವ ಜಾದೂಗಾರನಂತೆ ಬಜೆಟ್ ಮಂಡಿಸಿದ್ದಾರೆ. ಈ ಬಜೆಟ್ ಆರ್ಥಿಕ ಶಿಸ್ತಿನ ಪಾವಿತ್ರ್ಯ ಹೊಂದಿಲ್ಲ

ಛಲವಾದಿ ನಾರಾಯಣಸ್ವಾಮಿ
ವಿರೋಧಪಕ್ಷದ ನಾಯಕ, ವಿಧಾನಪರಿಷತ್



ಈ ಬಜೆಟ್‌ನಲ್ಲಿ ₹1,32,000 ಕೋಟಿ ಸಾಲದ ಹೊರೆ ಹೊರಿಸಲಾಗಿದೆ. ರಾಜ್ಯದ ಒಟ್ಟು ಹೊಣೆಗಾರಿಕೆ ₹8.24 ಲಕ್ಷ ಕೋಟಿ ದಾಟಿದೆ. ಪ್ರತಿ ಕನ್ನಡಿಗನ ತಲೆಯ ಮೇಲೆ ₹1.17 ಲಕ್ಷ ಸಾಲದ ಪರ್ವತವಿದೆ

ಬಸವರಾಜ ಬೊಮ್ಮಾಯಿ
ಸಂಸದ

ಮಸೀದಿಗಳ ಮುಲ್ಲಾಗಳಿಗೆ ₹4 ಸಾವಿರ ಮಾಸಾಶನ ಕೊಟ್ಟಿದ್ದೀರಿ, ನಮ್ಮ ದೇವಾಲಯಗಳ ಅರ್ಚಕರಿಗೆ ಏನು ಮಾಡಿದ್ದೀರಿ? ಹಿಂದೂಗಳಿಗೆ, ದೇವಸ್ಥಾನಗಳಿಗೆ ನಿಮ್ಮ ಕೊಡುಗೆ ಏನು? ಇದು ಸರ್ವಜನರಿಗೂ ಸಲ್ಲುವ ಬಜೆಟ್ ಅಲ್ಲ

ವಿ.ಸೋಮಣ್ಣ
ಕೇಂದ್ರ ಸಚಿವ

ತಜ್ಞರ ಅಭಿಪ್ರಾಯ

ಪ್ರಾದೇಶಿಕ ಯೋಜನೆಗೆ ಬೇಕಿತ್ತು ಗಮನ

ಹಿಂದುಳಿದ ಹಣೆಪಟ್ಟಿ ಹೊತ್ತ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ (ಕೆಕೆಆರ್‌ಡಿಬಿ) ಹೆಚ್ಚುವರಿಯಾಗಿ ₹5,000 ಕೋಟಿ ಒದಗಿಸಲಾಗಿದೆ. ಜೊತೆಗೆ ರಾಜ್ಯದ ಕಾರ್ಯಕ್ರಮಗಳಿಗೆ ಮಾಡುವ ವೆಚ್ಚಗಳಲ್ಲಿ ಕಲ್ಯಾಣದ ವ್ಯಾಪ್ತಿಯ ಪ್ರದೇಶಕ್ಕೂ ಪಾಲು ದೊರೆಯಲಿದೆ.

ಯಾದಗಿರಿಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರಿನಲ್ಲಿ ಟ್ರಾಮಾ ಕೇರ್ ಕೇಂದ್ರ, ಗಣಿಬಾಧಿತ ಗ್ರಾಮಗಳಿಗೆ ಆರೋಗ್ಯ ಸೇವೆಗಳ ವಿಸ್ತರಣೆ, ಮುನಿರಾಬಾದ್–ಟಿ.ಬಿ.ಡ್ಯಾಂನಲ್ಲಿ ಕ್ಯಾನ್ಸರ್ ಆಸ್ಪತ್ರೆಗಳ ನಿರ್ಮಾಣ, ಕಲಬುರಗಿಯಲ್ಲಿ ಕ್ರೈಸ್ ವಸತಿ ಶಾಲೆ, ಈ ಪ್ರದೇಶದಲ್ಲಿ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜುಗಳು, ಅಂಗನವಾಡಿ ಕಟ್ಟಡಗಳ ನಿರ್ಮಾಣ, ಕೊಪ್ಪಳದಲ್ಲಿ ತಂತ್ರಜ್ಞಾನ ಕೇಂದ್ರ ಘೋಷಿಸಲಾಗಿದೆ. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ರಚನೆಯಾಗಿದ್ದ ಪ್ರೊ.ಎಂ.ಗೋವಿಂದರಾವ್ ಸಮಿತಿ ಶಿಫಾರಸಿಗೆ ತಾತ್ವಿಕ ಒಪ್ಪಿಗೆ ನೀಡಲಾಗಿದೆ. ಇದಕ್ಕಾಗಿ ₹4,191 ಕೋಟಿ ನೀಡಲಾಗಿದ್ದು, ಇದು ಈ ಪ್ರದೇಶದ ಅಭಿವೃದ್ಧಿಯ ವೇಗ ಹೆಚ್ಚಿಸಲು ಸಹಕಾರಿಯಾಗುವ ನಿರೀಕ್ಷೆಯಿದೆ.

ಸಂಪೂರ್ಣ ರಾಜ್ಯಕ್ಕೆ ಏಕೀಕೃತ ಕಾರ್ಯಕ್ರಮಗಳಿಗಿಂತಲೂ ಪ್ರದೇಶವಾರು ಸಮಸ್ಯೆಗಳನ್ನು ಗುರುತಿಸಿ ನಿವಾರಣೆಗೆ ಕ್ರಮ ಕೈಗೊಳ್ಳುವುದು ಉತ್ತಮ. ಈ ರೀತಿಯ ಕ್ರಮಕ್ಕೆ ಇನ್ನಷ್ಟು ಒತ್ತು ಕೊಡಬೇಕಿತ್ತು. ಅಸಮಾನತೆಯಿಂದ ಕೂಡಿರುವ ಪ್ರದೇಶಗಳ ನಡುವೆ ಅನುದಾನದ ಸಮಾನ ಹಂಚಿಕೆ ಕೂಡ ಅಸಮಾನತೆಯನ್ನು ಉಲ್ಬಣಗೊಳಿಸುವ ಸಾಧ್ಯತೆಯಿರುತ್ತದೆ. ಬಜೆಟ್‌ನಲ್ಲಿ ಪ್ರಾದೇಶಿಕವಾರು ಜನಕೇಂದ್ರಿತ ಕಾರ್ಯಕ್ರಮ ಆದ್ಯತೆ ಪಡೆದುಕೊಳ್ಳಬೇಕಿತ್ತು.

ಜೆ.ಕೃಷ್ಣ
ಲೇಖಕ: ಗಂಗಾವತಿಯ ಎಸ್‌ಕೆಎನ್‌ಜಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅರ್ಥಶಾಸ್ತ್ರದ ಸಹಪ್ರಾಧ್ಯಾಪಕ

ಕಿತ್ತೂರು ಕರ್ನಾಟಕ ಅಭಿವೃದ್ಧಿಗೆ ಒತ್ತು

2026–27ನೇ ಸಾಲಿನ ರಾಜ್ಯ ಬಜೆಟ್ ಪ್ರಾದೇಶಿಕ ಸಮತೋಲನ ಮತ್ತು ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಿದೆ. ಕಿತ್ತೂರು ಕರ್ನಾಟಕ ಭಾಗದ ಅಭಿವೃದ್ಧಿಗೆ ಮಹತ್ವದ ಯೋಜನೆಗಳನ್ನು ಘೋಷಿಸಲಾಗಿದೆ.

ವಿಜಯಪುರ ಜಿಲ್ಲೆಯ ತೊರವಿಯಲ್ಲಿ ಶೀತಲಗೃಹ ನಿರ್ಮಾಣ, ಹಾವೇರಿಯಲ್ಲಿ ಸಿಲ್ಕ್ ಪಾರ್ಕ್ ಸ್ಥಾಪನೆ ಮತ್ತು ಬೆಳಗಾವಿಯಲ್ಲಿ ಕುರಿ-ಮೇಕೆ ಸಾಕಣೆ ಮತ್ತು ಹೈನುಗಾರಿಕೆಗೆ ಸಹಾಯಧನ ನೀಡುವ ಯೋಜನೆಗಳು ಉಪಯುಕ್ತ ಆಗಿವೆ.

ಆಲಮಟ್ಟಿ ಅಣೆಕಟ್ಟು ಎತ್ತರಿಸುವುದು ಮತ್ತು ತುಬಚಿ–ಬಬಲೇಶ್ವರ ಏತ ನೀರಾವರಿ ಯೋಜನೆಗಳು ಈ ಭಾಗದ ಕೃಷಿ ಸಾಮರ್ಥ್ಯವನ್ನು ವಿಸ್ತರಿಸಲಿವೆ. ಬೆಳಗಾವಿಯಲ್ಲಿ ಕೈಗಾರಿಕಾ ಪಾರ್ಕ್ ಸ್ಥಾಪನೆ ಮತ್ತು ಧಾರವಾಡ ಕೈಗಾರಿಕಾ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳು ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ನಿರೀಕ್ಷೆ ಮೂಡಿಸಿವೆ.

ಧಾರವಾಡದಲ್ಲಿ ಡಿಜಿಟಲ್ ಗ್ರಂಥಾಲಯ ಮತ್ತು ಅಧ್ಯಯನ ಕೇಂದ್ರಗಳ ಸ್ಥಾಪನೆ ಹಾಗೂ ಐಐಟಿ ಧಾರವಾಡ ಸಹಯೋಗದ ಎಐ ಆಧಾರಿತ ಕಲಿಕಾ ಸೌಲಭ್ಯಗಳು ವಿದ್ಯಾರ್ಥಿಗಳಿಗೆ ಆಧುನಿಕ ಶಿಕ್ಷಣಾವಕಾಶ ಒದಗಿಸಲಿವೆ. ಆರೋಗ್ಯ ಕ್ಷೇತ್ರದಲ್ಲಿ ಕಾರವಾರದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಹುಬ್ಬಳ್ಳಿಯ ಜಯದೇವ ಹೃದ್ರೋಗ ಕೇಂದ್ರ ಜನರಿಗೆ ಉತ್ತಮ ವೈದ್ಯಕೀಯ ಸೇವೆ ಒದಗಿಸಲಿವೆ. ಪ್ರಮುಖ ಪ್ರವಾಸಿ ತಾಣವಾದ ಗದಗ-ಕಪ್ಪತ್ತಗುಡ್ಡ–ಲಕ್ಕುಂಡಿ ಪ್ರವಾಸೋದ್ಯಮ ಸರ್ಕಿಟ್ ಅಭಿವೃದ್ಧಿಪಡಿಸುವುದು ಉತ್ತಮ ಯೋಜನೆಯಾಗಿದೆ.

ಈ ಎಲ್ಲಾ ಯೋಜನೆಗಳು ಪರಿಣಾಮಕಾರಿಯಾಗಿ ಜಾರಿಯಾದಲ್ಲಿ, ಕಿತ್ತೂರು ಕರ್ನಾಟಕದ ಅಭಿವೃದ್ಧಿಗೆ ಹೊಸ ಚೈತನ್ಯ ಸಿಗಲಿದೆ.

ಪ್ರೊ.ಸುರೇಶ ವಿ. ನಾಡಗೌಡರ
ಲೇಖಕ: ಗದಗದ ಮಹಾತ್ಮಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿವಿಯ ಪ್ರಭಾರ ಕುಲಪತಿ

ಸಾಲದ ಕೂಪಕ್ಕೆ ರಾಜ್ಯ ಅಶೋಕ

'ಬಿಜೆಪಿ ಸರ್ಕಾರದ ಅವಧಿಯಲ್ಲಿ ರಾಜ್ಯದ ಹಣಕಾಸಿನ ಶಿಸ್ತನ್ನು ಕಟ್ಟುನಿಟ್ಟಾಗಿ ಕಾಪಾಡಲಾಗಿತ್ತು. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಆರ್ಥಿಕ ಶಿಸ್ತು ಸಂಪೂರ್ಣವಾಗಿ ಹಳಿ ತಪ್ಪಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಬಜೆಟ್ ಮಂಡನೆಯ ನಂತರ ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಸಿದ್ದರಾಮಯ್ಯ ಅವರು ಪ್ರತಿ ವರ್ಷವೂ ಸರಾಸರಿ ಒಂದು ಲಕ್ಷ ಕೋಟಿ ರೂಪಾಯಿಯಷ್ಟು ಸಾಲ ಮಾಡುತ್ತಲೇ ಇದ್ದಾರೆ. 2023–24ರಲ್ಲಿ ₹82,000 ಕೋಟಿ, 2024–25ರಲ್ಲಿ ₹1.05 ಲಕ್ಷ ಕೋಟಿ, 2025–26ರಲ್ಲಿ ₹1.16 ಲಕ್ಷ ಕೋಟಿ ಮತ್ತು 2026–27ರ ಬಜೆಟ್ ಅಂದಾಜಿನಲ್ಲಿ ₹1.32 ಲಕ್ಷ ಕೋಟಿ ಸಾಲ ಮಾಡುವುದಾಗಿ ಘೋಷಿಸಿದ್ದಾರೆ. ರಾಜ್ಯವನ್ನು ಸಾಲದ ಕೂಪಕ್ಕೆ ನೂಕುತ್ತಿದ್ದಾರೆ' ಎಂದು ಆರೋಪಿಸಿದರು.

'2026–27ರಲ್ಲಿ ರಾಜ್ಯದ ಒಟ್ಟು ರಾಜಸ್ವ ಆದಾಯ ಸುಮಾರು ₹3.15 ಲಕ್ಷ ಕೋಟಿ. ಆದರೆ ವೇತನ, ಪಿಂಚಣಿ ಮತ್ತು ಬಡ್ಡಿ ಪಾವತಿಗೆ ಹೋಗುತ್ತಿರುವ ಮೊತ್ತವೇ ಸುಮಾರು ₹2.77 ಲಕ್ಷ ಕೋಟಿ. ರಾಜ್ಯದ ಆದಾಯದ ಶೇ 88ರಷ್ಟು ಪಾಲು ಬದ್ಧ ವೆಚ್ಚಗಳಿಗೇ ಹೋಗುತ್ತಿದೆ. ಹಣಕಾಸು ಸ್ಥಿತಿ ಸರಿಯಾಗಿ ನಿಭಾಯಿಸದ ಕಾರಣ, ವೇತನ ನೀಡಲು ಕೂಡಾ ಸಾಲ ಮಾಡಬೇಕಾದ ಸ್ಥಿತಿಗೆ ರಾಜ್ಯ ತಲುಪಿದೆ' ಎಂದು ದೂರಿದರು.

'ಅಭಿವೃದ್ಧಿಯ ಬದಲು ಸಾಲ, ಆರ್ಥಿಕ ಶಿಸ್ತಿನ ಬದಲು ಅರಾಜಕತೆ, ದೂರದೃಷ್ಟಿಯ ಬದಲು ಕೇಂದ್ರ ಸರ್ಕಾರದತ್ತ ಬೊಟ್ಟು ಮಾಡುವ ಕಾಂಗ್ರೆಸ್‌ನ ದುರಾಡಳಿತಕ್ಕೆ ನಿದರ್ಶನವಾಗಿ ಈ ಬಜೆಟ್ ಇದೆ' ಎಂದು ಅವರು ಟೀಕಿಸಿದ್ದಾರೆ.

ಮೂರೂವರೆ ತಾಸು ಬಜೆಟ್ ಮಂಡನೆ

ಧನಶೀಲ ಮನಶೀಲ ತನುಶೀಲ/ಸರ್ವಮಯ ದೃಕ್ಕಿಂಗೆ ಕಾಭುದೆಲ್ಲವು ಶೀಲ/ ಇಂತೀ ವ್ರತಸಂಪದವೆಲ್ಲವೂ/ ಅದಾರ ಕುರಿತು ಮಾಡುವ ನೇಮ/ಎಂಬುದ ತಾನರಿಯಬೇಕು ಎಂದು ವಚನಕಾರ್ತಿ ಅಕ್ಕಮ್ಮನ ವಚನವನ್ನು ಉಲ್ಲೇಖಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ 17ನೇ ಬಜೆಟ್‌ನ ಹೂರಣವನ್ನು ಸದನದ ಮುಂದಿರಿಸಿದರು.

ಬೆಳಿಗ್ಗೆ 10.20ರ ಹೊತ್ತಿಗೆ ಬಜೆಟ್ ಭಾಷಣ ಆರಂಭಿಸಿದ ಅವರು ಮೊದಲ ತಾಸಿನಲ್ಲಿ ರಾಜ್ಯದ ಆರ್ಥಿಕ ಸ್ಥಿತಿ, ತಮ್ಮ ಸರ್ಕಾರದ ಯೋಜನೆಗಳು, ಪ್ರಸ್ತುತ ವರ್ಷದಲ್ಲಿ ಕೈಗೊಂಡ ಕಾರ್ಯಕ್ರಮಗಳ ಫಲಗಳನ್ನು ವಿವರಿಸಿದರು. ಕೇಂದ್ರ ಸರ್ಕಾರದ ಜಿಎಸ್‌ಟಿ ನೀತಿ, ತೆರಿಗೆ ಪಾಲು ಹಂಚಿಕೆ ನೀತಿಗಳಿಂದ ರಾಜ್ಯಕ್ಕೆ ನಷ್ಟವಾಗಿದೆ ಎಂದು ಹೇಳುತ್ತಲೇ, ರಾಜ್ಯವನ್ನು ಅಭಿವೃದ್ಧಿಯ ಹಾದಿಯಲ್ಲಿ ಕೊಂಡೊಯ್ಯಲು ಈ ಬಜೆಟ್ ರೂಪಿಸಲಾಗಿದೆ ಎಂದರು.

'ನ್ಯಾಯವು ನಮ್ಮ ಪರವಾಗಿರುವಾಗ, ಈ ಹೋರಾಟದಲ್ಲಿ ನಾವು ಸೋಲಲು ಸಾಧ್ಯವೇ ಇಲ್ಲ' ಎಂದು ಬಿ.ಆರ್. ಅಂಬೇಡ್ಕರ್ ಅವರ ಪ್ರತಿಪಾದನೆಯನ್ನು ಉಲ್ಲೇಖಿಸಿ ಭಾಷಣ ಮುಂದುವರೆಸಿದರು.

11.30ರ ಹೊತ್ತಿಗೆ ಒಮ್ಮೆ ನೀರು ಕುಡಿದ ಅವರನ್ನು ಉದ್ದೇಶಿಸಿ ಸಭಾಧ್ಯಕ್ಷ ಯು.ಟಿ.ಖಾದರ್, 'ನೀವು ಕುಳಿತುಕೊಂಡೇ ಓದಿ' ಎಂದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹ ಕೂರುವಂತೆ ಹೇಳಿದರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, 'ಸರ್, ಕೂತುಬಿಡಿ' ಎಂದು ಕಾಲೆಳೆದರು. ಆಗ ಸಿದ್ದರಾಮಯ್ಯ ಅವರು, 'ಕಷ್ಟವಾದರೆ ಕೂರುತ್ತೇನೆ. ಈಗ ನಿಂತುಕೊಂಡೇ ಓದುತ್ತೇನೆ' ಎಂದು ಬಜೆಟ್ ಭಾಷಣ ಮುಂದುವರೆಸಿದರು. ನೀರಾವರಿ ಯೋಜನೆಗಳ ಪ್ರಸ್ತಾಪಿಸಿವಾಗ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ, 'ನದಿಗಳು ನಮ್ಮೆಲ್ಲ ಮಾನವ ಸಮಾಜ ಮತ್ತು ಸಂಸ್ಕೃತಿಗಳ ಜೀವವಾಹಿನಿ' ಎಂಬ ಉಕ್ತಿಯನ್ನು ಓದಿದರು.

ಸಾಮಾಜಿಕ ನ್ಯಾಯದ ನೀತಿ–ಕಾರ್ಯಕ್ರಮಗಳನ್ನು ಪ್ರಸ್ತಾಪಿಸುವುದಕ್ಕೂ ಮುನ್ನ ದಲಿತ ಕವಿ ಸಿದ್ದಲಿಂಗಯ್ಯ ಅವರ, **'ಕುರಿಗಳ ಕಾಯುವ ಕುರುಬನ ಕೂಗು/ ಜನರ ಮಾತು ಕವನ/ ಸೋತ ರಟ್ಟೆಗಳ ಹೂತ ಕಾಲುಗಳ/ ಬೆವರ ಹನಿ ಕವನ'** ಎಂಬ ಕವನವನ್ನು ಗಟ್ಟಿಯಾಗಿ ಪ್ರಸ್ತಾಪಿಸಿದರು.

ಹೊತ್ತುಕಳೆದಂತೆ ಅವರ ಓದಿನ ವೇಗ ನಿಧಾನವಾದಾಗ, ಕೂತು ಓದುವಂತೆ ಸಭಾಧ್ಯಕ್ಷ ಖಾದರ್ ಅವರು ಸೂಚಿಸಿದರೂ ನಿಂತೇ ಭಾಷಣ ಮುಂದುವರೆಸಿದರು. ಮಧ್ಯಾಹ್ನ 1.50ರವರೆಗೆ ಮೂರವರೆ ಗಂಟೆ ನಿಂತುಕೊಂಡೇ 182 ಪುಟಗಳ ಬಜೆಟ್ ಮಂಡಿಸಿದ ಸಿದ್ದರಾಮಯ್ಯ ಅವರನ್ನು ಹಲವು ಶಾಸಕರು ಅಭಿನಂದಿಸಿದರು.

ಸಂವಿಧಾನ ಪ್ರಸ್ತಾವನೆ ಓದು

ಕಲಾಪ ಆರಂಭವಾಗುತ್ತಿದ್ದಂತೆಯೇ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಎಲ್ಲ ಸದಸ್ಯರಿಗೆ ಸಂವಿಧಾನದ ಪ್ರಸ್ತಾವನೆ ಬೋಧಿಸಿದರು.

ಕುಕ್ಕೆ, ಕೊಲ್ಲೂರು ಕ್ಷೇತ್ರ ಅಭಿವೃದ್ಧಿಗೆ 'ಪ್ರಾಧಿಕಾರ'

ಕುಕ್ಕೆ ಸುಬ್ರಹ್ಮಣ್ಯ ದೇವಾಲಯ, ಕೊಲ್ಲೂರು ಮೂಕಾಂಬಿಕಾ ದೇವಾಲಯಗಳಲ್ಲಿ ಮೂಲಸೌಲಭ್ಯ ಹಾಗೂ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ 'ಅಭಿವೃದ್ಧಿ ಪ್ರಾಧಿಕಾರ' ರಚಿಸುವುದಾಗಿ ರಾಜ್ಯ ಬಜೆಟ್‌ನಲ್ಲಿ ಘೋಷಿಸಲಾಗಿದೆ.

ಮಾತಾ ವೈಷ್ಣೋದೇವಿ ದೇವಾಲಯಕ್ಕೆ ಯಾತ್ರೆ ಕೈಗೊಳ್ಳುವ ಯಾತ್ರಾರ್ಥಿಗಳಿಗೆ ಸರ್ಕಾರದಿಂದ ತಲಾ ₹5 ಸಾವಿರ ಸಹಾಯಧನ ವಿತರಿಸಲು ಉದ್ದೇಶಿಸಲಾಗಿದೆ.

ಮೂರು ವರ್ಷಗಳಲ್ಲಿ 259 ಕಲ್ಯಾಣಿ ಪುನರುಜ್ಜೀವನಗೊಳಿಸಲು 'ಜಲನಿಧಿ ಕಲ್ಯಾಣಿಗಳ ಪುನಃಶ್ಚೇತನ ಯೋಜನೆ' ಜಾರಿ ಮಾಡಲು ಉದ್ದೇಶಿಸಲಾಗಿದ್ದು, ₹5 ಕೋಟಿ ಒದಗಿಸಲು ತೀರ್ಮಾನ.

ರಾಜ್ಯದ ಛತ್ರಗಳ ನಿರ್ಮಾಣ, ಅಭಿವೃದ್ಧಿಗೆ ಕ್ರಮ
- ವಾರಣಾಸಿಯಲ್ಲಿ ಹೊಸ ಛತ್ರ ನಿರ್ಮಾಣಕ್ಕೆ ಕ್ರಮ
- ಮಂತ್ರಾಲಯದಲ್ಲಿ ಛತ್ರದ ನವೀಕರಣ
- ಶ್ರೀಶೈಲ ಕ್ಷೇತ್ರದಲ್ಲಿ ಯಾತ್ರಿ ನಿವಾಸ ನಿರ್ಮಾಣ
- ತುಳಜಾಪುರದಲ್ಲಿ ಹೊಸ ಛತ್ರ ನಿರ್ಮಾಣ
- ಬೆಂಗಳೂರಿನ ಬಂಡಿಶೇಷಮ್ಮ ಛತ್ರದ ಜಾಗದಲ್ಲಿ ವಿದ್ಯಾರ್ಥಿನಿಲಯ ಹಾಗೂ ವಾಣಿಜ್ಯ ಸಂಕೀರ್ಣವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿ ನಿರ್ಮಾಣ

ಜಿಎಸ್‌ಟಿ ಹೊಸ ನೀತಿಯಿಂದ ₹15ಸಾವಿರ ಕೋಟಿ ನಷ್ಟ: ಸಿದ್ದರಾಮಯ್ಯ

'ಕೇಂದ್ರದ ಅಸಹಕಾರವೇ ದೊಡ್ಡ ತೊಡಕು'

'**ಕೇಂದ್ರದ** ಅಸಹಕಾರ, ಮಲತಾಯಿ ಧೋರಣೆ ನಡುವೆಯೂ ಬಜೆಟ್‌ನಲ್ಲಿ ವಿತ್ತೀಯ ಶಿಸ್ತು ಪಾಲಿಸಿ, ಜನರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸಲಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಜಿಎಸ್‌ಟಿ ಜಾರಿಗೆ ಬಂದು 8 ವರ್ಷದ ನಂತರ ಪರಿಷ್ಕರಿಸಿದರು. ಶೇ 10 ರಷ್ಟಿದ್ದ ರಾಜ್ಯದ ತೆರಿಗೆ ಸಂಗ್ರಹಣೆ ಶೇ 4ಕ್ಕೆ ಇಳಿದಿದೆ. ಕೇಂದ್ರದ ಹೊಸ ನೀತಿಯಿಂದ ಕರ್ನಾಟಕಕ್ಕೆ ಸುಮಾರು ₹10 ಸಾವಿರ ಕೋಟಿ ನಷ್ಟವಾಗಿದೆ. ಮುಂದಿನ ವರ್ಷ ₹15 ಸಾವಿರ ಕೋಟಿ ನಷ್ಟವಾಗಲಿದೆ ಎಂದರು.

'ಕೇಂದ್ರ ಮತ್ತು ರಾಜ್ಯದ ಪಾಲಿನ ಯೋಜನೆಗಳಿಗೆ ರಾಜ್ಯ ಸರ್ಕಾರ ತನ್ನ ಸಂಪೂರ್ಣ ಪಾಲು ನೀಡಿದರೂ

ಕೇಂದ್ರದ ಪಾಲು ಸರಿಯಾಗಿ ಸಿಗುತ್ತಿಲ್ಲ. ಉದಾಹರಣೆಗೆ ಜಲಜೀವನ್ ಮಿಷನ್‌ನ ಯೋಜನಾ ವೆಚ್ಚ ₹69,488 ಕೋಟಿ. ಕೇಂದ್ರದ ಪಾಲು ₹30,880 ಕೋಟಿ. ಈವರೆಗೆ ದೊರೆತಿರುವುದು ₹11,786 ಕೋಟಿ ಮಾತ್ರ. ರಾಜ್ಯ ಸರ್ಕಾರ ₹38,600 ಕೋಟಿ ವೆಚ್ಚ ಮಾಡಿದೆ. ₹15,500 ಕೋಟಿ ಹೆಚ್ಚುವರಿಯಾಗಿ ವೆಚ್ಚ ಮಾಡಿದ್ದೇವೆ. ಪ್ರತಿ ಯೋಜನೆಯಲ್ಲೂ ಕೇಂದ್ರ ಸರ್ಕಾರ ಇದೇ ರೀತಿ ನಡೆದುಕೊಳ್ಳುತ್ತಿದೆ. ಇದರಿಂದ ರಾಜ್ಯ ಬಜೆಟ್ ಮೇಲೆ ಪರಿಣಾಮ ಬೀರಿದೆ' ಎಂದು ದೂರಿದರು.

'ಕೇಂದ್ರಕ್ಕಿಂತ ರಾಜ್ಯದ ಆರ್ಥಿಕ ಬೆಳವಣಿಗೆ ಉತ್ತಮವಾಗಿದೆ. ಗ್ಯಾರಂಟಿ ಯೋಜನೆಗಳಿಗೆ ₹52 ಸಾವಿರ ಕೋಟಿ ಕೊಟ್ಟಿದ್ದೇವೆ. ಇಲ್ಲಿಯವರೆಗೆ ₹1.21 ಲಕ್ಷ ಕೋಟಿ ವೆಚ್ಚ ಮಾಡಲಾಗಿದೆ. ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸಲಾಗಿದೆ. 2023-24ರಿಂದ ಮೂರು ವರ್ಷವೂ ಆರ್ಥಿಕ ಶಿಸ್ತು ಕಾಯ್ದೆಯ ಮಾನದಂಡಗಳ ಪಾಲನೆ ಮಾಡಲಾಗಿದೆ' ಎಂದರು.

'ಪ್ರಧಾನಿ ನರೇಂದ್ರ ಮೋದಿ ಅವರ ಅವಧಿಯಲ್ಲಿ ದೇಶದ ಸಾಲ ₹165 ಲಕ್ಷ ಕೋಟಿಯಾಗಿದೆ. ಒಟ್ಟು ಸಾಲ ₹218 ಲಕ್ಷ ಕೋಟಿ ಇದೆ. ಕೇಂದ್ರವನ್ನು ಪ್ರಶ್ನಿಸದ ಬಿಜೆಪಿ ನಾಯಕರಿಗೆ ರಾಜ್ಯದ ಬಗ್ಗೆ ಟೀಕೆ ಮಾಡಲು ಯಾವ ನೈತಿಕತೆ ಇದೆ. ಸಾಲ ಮಾಡದೆ ಯಾವ ದೇಶ, ರಾಜ್ಯದ ಅಭಿವೃದ್ಧಿ ಸಾಧ್ಯವಿಲ್ಲ. ಆದರೆ, ಸಾಲ ಮಾನದಂಡಗಳ ಮಿತಿಯಲ್ಲಿರಬೇಕು. ಅದನ್ನು ಪ್ರತಿ ಬಜೆಟ್‌ನಲ್ಲೂ ಪಾಲಿಸಲಾಗಿದೆ' ಎಂದು ಸಮರ್ಥಿಸಿಕೊಂಡರು.

'ವಿಬಿ ಜಿ ರಾಮ್ ಜಿ ಕಾಯ್ದೆ ರದ್ದು ಮಾಡಿ ನರೇಗಾ ಜಾರಿ ಮಾಡಿದರೆ ರಾಜ್ಯಕ್ಕೆ ₹3 ಸಾವಿರ ಕೋಟಿ ಹೊರೆ ಬೀಳಲಿದೆ. ಪೂರಕ ಬಜೆಟ್‌ನಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಯ ಭೂಸ್ವಾಧೀನಕ್ಕೆ ಹೆಚ್ಚುವರಿ ಹಣವನ್ನು ಒದಗಿಸಲಾಗುವುದು' ಎಂದರು.

ಅಕ್ಷರ್ ಆಲ್‌ರೌಂಡ್ ಆಟ ಸೂಪರ್

ತವರಿನಂಗಳದಲ್ಲಿ ವಿಶ್ವಕಪ್ ಜಯಿಸುವ ಕನಸು ಕಾಣುತ್ತಿರುವ ಪಟೇಲ್ • ನಾಳೆ ಫೈನಲ್ ಹಣಾಹಣಿ

• ಸಿದ್ಧಿ ಕಿರಣ್

ಮುಂಬೈ: ವಾಂಖೆಡೆ ಕ್ರೀಡಾಂಗಣದಲ್ಲಿ ಗುರುವಾರ ರಾತ್ರಿ ಭಾರತ ಮತ್ತು ಇಂಗ್ಲೆಂಡ್ ನಡುವಣ ನಡೆದ ಟಿ20 ವಿಶ್ವಕಪ್ ಸೆಮಿಫೈನಲ್ ಪಂದ್ಯದಲ್ಲಿ ಒಟ್ಟು 499 ರನ್ ದಾಖಲಾದವು.

ಈ ಹಣಾಹಣಿಯಲ್ಲಿ ಸಂಜು ಸ್ಯಾಮ್ಸನ್ ಅವರ ಬ್ಯಾಟಿಂಗ್ (42 ಎಸೆತಗಳಲ್ಲಿ 89 ರನ್) ಭಾರತದ ಅಭಿಮಾನಿಗಳ ಮನ ಗೆದ್ದಿತು. ಇನ್ನೊಂದೆಡೆ ಇಂಗ್ಲೆಂಡ್‌ನ ಜೇಕಬ್ ಬೆಥೆಲ್ 48 ಎಸೆತಗಳಲ್ಲಿ 105 ರನ್ ಗಳಿಸಿದ್ದು ಅಮೋಘವಾಗಿತ್ತು. 22 ವರ್ಷದ ಜೇಕಬ್ ಭಾರತ ತಂಡಕ್ಕೆ ಆತಂಕ ಮೂಡಿಸಿದ್ದು ಸುಳ್ಳಲ್ಲ.

34 ಸಿಕ್ಸರ್‌ಗಳು ದಾಖಲಾದ ಈ ಪಂದ್ಯದಲ್ಲಿ ಪ್ರೇಕ್ಷಕರು ಉಸಿರು ಬಿಗಿಹಿಡಿದು ನಿಂತು ನೋಡುವಂತಹ ಕ್ಷಣಗಳಿದ್ದವು. ಬ್ಯಾಟರ್‌ಗಳು ವಿಜೃಂಭಿಸಿದ ಸಂದರ್ಭದಲ್ಲಿ ಭಾರತದ ಅಕ್ಷರ್ ಪಟೇಲ್ ಅವರು ಎರಡು ಬಾರಿ ಮೋಡಿ ಮಾಡಿದರು.

ಭಾರತದ 7 ರನ್‌ಗಳ ಜಯದಲ್ಲಿ ಅವರ ಕಾಣಿಕೆಯು ಅಮೋಘವಾದುದು. ಮೊದಲನೆಯದಾಗಿ; ಅವರು ಐದನೇ ಓವರ್‌ನಲ್ಲಿ ಹ್ಯಾರಿ ಬ್ರೂಕ್ ಅವರ ಕ್ಯಾಚ್ ಪಡೆದ ರೀತಿ ಅಮೋಘವಾಗಿತ್ತು. ಕವರ್ಸ್‌ನಲ್ಲಿದ್ದ ಅವರು ಸುಮಾರು 24 ಮೀಟರ್ ಗಳವರೆಗೆ ಡೀಪ್‌ನತ್ತ ಓಡಿ ಹೊಳಗೆ ಡೈವ್ ಮಾಡಿ ಚೆಂಡನ್ನು ತಮ್ಮ ಬೊಗಸೆಯಲ್ಲಿ ತುಂಬಿಕೊಂಡರು. ಇಂಗ್ಲೆಂಡ್ ತಂಡದ ನಾಯಕ ಮತ್ತು ಅಮೋಘ ಲಯದಲ್ಲಿದ್ದ ಬ್ರೂಕ್ ಔಟಾಗಿದ್ದು ಭಾರತದ ಆತ್ಮವಿಶ್ವಾಸ ಹೆಚ್ಚಿಸಿತು.

ಆದರೆ ಅಕ್ಷರ್ ಅವರು 14ನೇ ಓವರ್‌ನಲ್ಲಿ ಮಾಡಿದ ಸಾಹಸವು 'ಗೇಮ್ ಚೇಂಜರ್' ಆಗಿತ್ತು. ಅರ್ಷದೀಪ್ ಎಸೆತವನ್ನು ವಿಲ್ ಜಾಕ್ಸ್ ಸಿಕ್ಸರ್‌ಗೆತ್ತುವ ಪ್ರಯತ್ನ ಮಾಡಿದರು. ಡೀಪ್ ಕವರ್‌ನಿಂದ ತಮ್ಮ ಎಡಬದಿಗೆ ವೇಗವಾಗಿ ಓಡಿದ ಅವರು ಬೌಂಡರಿ ಲೈನ್ ಬಳಿ ಜಿಗಿದು ಚೆಂಡನ್ನು ಹಿಡಿತಕ್ಕೆ ಪಡೆದರು. ಆದರೆ ತಮ್ಮ ಓಟದ ವೇಗವನ್ನು ನಿಯಂತ್ರಿಸಲು ಸಾಧ್ಯವಾಗದೇ ಬೌಂಡರಿಗೆರೆಯತ್ತ ನುಗ್ಗಿದರು. ಆದರೆ ಗೆರೆ ದಾಟುವ ಮುನ್ನ ಸಮಯಪ್ರಜ್ಞೆ ತೋರಿ ದುಬೆ ಅವರ ಕೈಗೆ ಚೆಂಡು ಎಸೆದರು. ದುಬೆ ಕ್ಯಾಚ್ ಪಡೆದರು. ಜೇಕಬ್ ಮತ್ತು ಜ್ಯಾಕ್ಸ್ ನಡುವಣ 77 ರನ್‌ಗಳ ಜೊತೆಯಾಟ ಮುರಿದುಬಿತ್ತು.

ಅದಕ್ಕೂ ಮೊದಲು, ಆರಂಭಿಕ ಆಟಗಾರ ಫಿಲ್ ಸಾಲ್ಟ್ ಅವರ ಕ್ಯಾಚ್ ಅನ್ನೂ ಅಕ್ಷರ್ ಪಡೆದಿದ್ದರು. ಅಲ್ಲದೇ, ಎಡಗೈ ಸ್ಪಿನ್ ಮೋಡಿಯ ಮೂಲಕ ಇನ್‌ಫಾರ್ಮ್ ಬ್ಯಾಟರ್ ಟಾಮ್ ಬ್ಯಾಂಟನ್ ವಿಕೆಟ್ ಕೂಡ ಗಳಿಸಿದರು. 3 ಓವರ್‌ಗಳಲ್ಲಿ 35 ರನ್ ನೀಡಿದರು. ಸೆಮಿಫೈನಲ್ ಗೆಲುವಿನಲ್ಲಿ ಅಕ್ಷರ್ ನೀಡಿದ ಕಾಣಿಕೆ ಸಂಜು ಸ್ಯಾಮ್ಸನ್ ಅವರ ಆಟಕ್ಕೆ ಸಮಾನವಾಗಿತ್ತು ಎಂಬುದರಲ್ಲಿ ಅನುಮಾನವೇ ಇಲ್ಲ. ಯಾವುದೇ ತಂಡದಲ್ಲಿ ಅಥವಾ ಕಾರ್ಯಕ್ಷೇತ್ರದಲ್ಲಿ ಒಬ್ಬ ವ್ಯಕ್ತಿಯ ಮಹತ್ವ ತಿಳಿಯುವುದು ಆತನ ಗೈರುಹಾಜರಿಯಲ್ಲಿಯೇ ಅಲ್ಲವೇ?

ಅಕ್ಷರ್ ವಿಷಯದಲ್ಲಿಯೂ ಇದೇ ಆಗಿದೆ. 2024ರ ವಿಶ್ವಕಪ್ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ಎದುರು ಭಾರತ ಜಯಗಳಿಸಲು ಅಕ್ಷರ್ ಅವರ ಕಾಣಿಕೆ (47; 31ಎ) ಉಪಯುಕ್ತವಾಗಿತ್ತು. ಈ ಸಲದ ಟೂರ್ನಿಯಲ್ಲಿ ತಂಡದ ಉಪನಾಯಕರಾಗಿರುವ ಅಕ್ಷರ್ ಅವರನ್ನು ನೆದರ್ಲೆಂಡ್ಸ್ ವಿರುದ್ಧದ ಪಂದ್ಯಕ್ಕೆ ಕೈಬಿಡಲಾಗಿತ್ತು. ಅದಾದ ಬಳಿಕ ಸೂಪರ್ 8ಕ್ಕೆ ತಂಡವು ಪ್ರವೇಶಿಸಿದ್ದಾಗಲೂ ಅಕ್ಷರ್‌ಗೆ ವಿಶ್ರಾಂತಿ ನೀಡಿದ್ದು ಸಮಂಜಸವಾಗಿತ್ತು. ಆದರೆ ಸೂಪರ್ 8ರ ಘಟ್ಟದಲ್ಲಿ ದಕ್ಷಿಣ ಆಫ್ರಿಕಾ ಎದುರಿನ ಪಂದ್ಯವು ಅಹಮದಾಬಾದಿನಲ್ಲಿ ನಡೆದಿತ್ತು. ಆ ಪಂದ್ಯದಲ್ಲಿಯೂ ಅಕ್ಷರ್ ಅವರಿಗೆ ಅವಕಾಶ ನೀಡಲಿಲ್ಲ. ತವರಿನಂಗಳದಲ್ಲಿಯೇ ಅವರು ಬೆಂಚ್‌ನಲ್ಲಿದ್ದರು. ಭಾರತ ತಂಡ ಸೋತಿತು.

ಜಿಂಬಾಬ್ವೆ ಎದುರಿನ ಪಂದ್ಯಕ್ಕೆ ಅವರು ತಂಡಕ್ಕೆ ಮರಳಿದರು. ಅಲ್ಲಿಂದ ಅವರು ರವೀಂದ್ರ ಜಡೇಜ ರೀತಿಯಲ್ಲಿ ತಂಡಕ್ಕೆ ಆಸರೆಯಾಗಿದ್ದಾರೆ. ವಿಕೆಟ್ ಟು ವಿಕೆಟ್ ಎಸೆತಗಳನ್ನು ಹಾಕುವ ಅವರು ಬ್ಯಾಟರ್‌ಗಳನ್ನು ಕಂಗೆಡಿಸುತ್ತಾರೆ. ಈ ಟೂರ್ನಿಯಲ್ಲಿ ಒಟ್ಟು 8 ವಿಕೆಟ್ ಗಳಿಸಿದ್ದಾರೆ. ಫೀಲ್ಡಿಂಗ್‌ನಲ್ಲಿಯೂ ಚುರುಕು. ನಿಖರವಾದ ಮತ್ತು ನೇರವಾದ ಥ್ರೋ ಮಾಡುವುದರಲ್ಲಿ ಪರಿಣತರು. ಅವರು ಪರಿಪೂರ್ಣ ಆಲ್‌ರೌಂಡರ್ ಆಗಿದ್ದಾರೆ. ಆದರೆ ವಿರಾಟ್ ಕೊಹ್ಲಿ ಅಥವಾ ಜಸ್‌ಪ್ರೀತ್ ಬೂಮ್ರಾ ಅವರಿಗಿರುವ ತಾರಾವರ್ಚಸ್ಸು ಇನ್ನೂ ಒಲಿದಿಲ್ಲ.

'ಜಿಯೊ ಹಾಟ್‌ಸ್ಟಾರ್'ನಲ್ಲಿ 6.52 ಕೋಟಿ ವೀಕ್ಷಣೆ

ಅಹಮದಾಬಾದ್ (ಪಿಟಿಐ): ಭಾರತ ಹಾಗೂ ಇಂಗ್ಲೆಂಡ್ ನಡುವಣ ಟಿ20 ವಿಶ್ವಕಪ್ ಸೆಮಿಫೈನಲ್ ಪಂದ್ಯವು ಜಿಯೊಹಾಟ್‌ಸ್ಟಾರ್‌ನಲ್ಲಿ 6.52 ಕೋಟಿ (ಲೈವ್) ವೀಕ್ಷಣೆ ಪಡೆದಿದೆ. ಡಿಜಿಟಲ್ ವೇದಿಕೆಯ 'ಕ್ರೀಡಾ ಪ್ರಸಾರ'ದಲ್ಲಿ ಮೈಲಿಗಲ್ಲು ಸ್ಥಾಪಿಸಿದೆ ಎಂದು ಐಸಿಸಿ ಶುಕ್ರವಾರ ತಿಳಿಸಿದೆ.

'ಭಾರತ–ಇಂಗ್ಲೆಂಡ್ ನಡುವೆ ನಡೆದ ಜಿದ್ದಾಜಿದ್ದಿನ ಪಂದ್ಯವು ಡಿಜಿಟಲ್ ವೀಕ್ಷಣೆಯಲ್ಲಿ ವಿಶ್ವದಾಖಲೆ ನಿರ್ಮಿಸಿದೆ. ಜಾಗತಿಕವಾಗಿ ಯಾವುದೇ ಕ್ರೀಡೆಯ ನೇರಪ್ರಸಾರವು ಈ ಮೊದಲು ಇಷ್ಟೊಂದು ವೀಕ್ಷಣೆ ಪಡೆದಿರಲಿಲ್ಲ' ಎಂದು ಐಸಿಸಿ ಮುಖ್ಯಸ್ಥ ಜಯ್ ಶಾ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಮುಂಬೈನಲ್ಲಿ ಗುರುವಾರ ನಡೆದ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ತಂಡದ ಫಿಲ್ ಸಾಲ್ಟ್ ಅವರ ಕ್ಯಾಚ್ ಪಡೆದ ಅಕ್ಷರ್ ಪಟೇಲ್ ಅವರಿಗೆ ಹಾರ್ದಿಕ್ ಪಾಂಡ್ಯ ಮುತ್ತಿಕ್ಕಿ ಅಭಿನಂದಿಸಿದರು ಎಎಫ್‌ಪಿ ಚಿತ್ರ

ಜ್ಯಾಕ್ಸ್ ನಿರ್ಗಮನ ಹೊಡೆತ ಕೊಟ್ಟಿತು: ಬೆಥೆಲ್

ಮುಂಬೈ (ಪಿಟಿಐ): ಹೈಸ್ಕೋರಿಂಗ್ ಪಂದ್ಯದ 14ನೇ ಓವರಿನ ಕೊನೆಯ ಎಸೆತದಲ್ಲಿ ವಿಲ್ ಜಾಕ್ಸ್ ಔಟಾಗಿದ್ದು ನಮ್ಮ ತಂಡಕ್ಕೆ ದೊಡ್ಡ ಹೊಡೆತ ಎನಿಸಿತು ಎಂದು ಇಂಗ್ಲೆಂಡ್ ತಂಡದ ಯುವತಾರೆ ಜೇಕಬ್ ಬೆಥೆಲ್ ಅಭಿಪ್ರಾಯಪಟ್ಟರು.

ಜೇಕಬ್ ಬೆಥೆಲ್

ವಾಂಖೆಡೆ ಕ್ರೀಡಾಂಗಣದಲ್ಲಿ ಗುರುವಾರ ರಾತ್ರಿ ಗೆಲುವಿಗೆ 254 ರನ್‌ಗಳ ಬೆನ್ನಟ್ಟಿದ ಇಂಗ್ಲೆಂಡ್ ತಂಡ ಕೊನೆಯವರೆಗೂ ಹೋರಾಟ ನಡೆಸಿ ಕೇವಲ ಏಳು ರನ್‌ಗಳಿಂದ ಸೋತಿತ್ತು. ಹೋರಾಟದ ಮುಂಚೂಣಿಯಲ್ಲಿದ್ದ ಬೆಥೆಲ್ 48 ಎಸೆತಗಳಲ್ಲಿ 105 ರನ್ ಬಾರಿಸಿದ್ದರು.

ಪವರ್‌ಪ್ಲೇ ಹಂತದಲ್ಲಿ ಮೂರು ವಿಕೆಟ್‌ಗಳನ್ನು ಕಳೆದುಕೊಂಡು ಒತ್ತಡದಲ್ಲಿದ್ದ ಇಂಗ್ಲೆಂಡ್ ತಂಡಕ್ಕೆ ಜ್ಯಾಕ್ಸ್ ಮತ್ತು ಬೆಥೆಲ್ ಜೋಡಿ 39 ಎಸೆತಗಳಲ್ಲಿ 77 ರನ್ ಸೇರಿಸಿ ಪ್ರತಿಹೋರಾಟಕ್ಕೆ ದಾರಿಮಾಡಿಕೊಟ್ಟಿತ್ತು.

ಪವರ್‌ಪ್ಲೇ ವೇಳೆ, ಹ್ಯಾರಿ ಬ್ರೂಕ್ ಅವರ ಕ್ಯಾಚನ್ನು ಹಿಮ್ಮುಖವಾಗಿ ಓಡಿ ಅದ್ಭುತವಾಗಿ ಹಿಡಿದ ಭಾರತ ತಂಡದ ಉಪನಾಯಕ ಅಕ್ಷರ್ ಪಟೇಲ್ ಮತ್ತೊಂದು 'ರಿಲೇ ಕ್ಯಾಚ್'ಗೆ ಕಾರಣರಾದರು. ಅರ್ಷದೀಪ್ ಬೌಲಿಂಗ್‌ನಲ್ಲಿ ಜ್ಯಾಕ್ಸ್ ಹೊಡೆದ ಚೆಂಡನ್ನು ಡೀಪ್ ಪಾಯಿಂಟ್ ಬೌಂಡರಿ ಲೈನ್ ಬಳಿ ಸಾವರಿಸಿ ಚೆಂಡನ್ನು ಕ್ಯಾಚ್ ಪಡೆದ ಅಕ್ಷರ್, ಆಯ ತಪ್ಪಿ ಬೌಂಡರಿ ಲೈನ್ ದಾಟುವ ಮೊದಲೇ ಶಿವಂ ದುಬೆ ಅವರ ಕೈಗೆ ಚೆಂಡನ್ನು ದಾಟಿಸಿ ಸಮಯಪ್ರಜ್ಞೆ ಮೆರೆದಿದ್ದರು.

'ಜ್ಯಾಕ್ಸ್ ನಿರ್ಗಮನ ನಮ್ಮ ಕೆಲಸವನ್ನು ಕಠಿಣಗೊಳಿಸಿತು. ಬ್ರೂಕಿ ಕ್ಯಾಚ್ ಕಠಿಣವಾಗಿತ್ತು, ನಿಜ. ಅದೂ ಅತ್ಯುತ್ತಮ ಕ್ಯಾಚ್. ಆದರೆ ಆಗಿನ್ನೂ ಪಂದ್ಯ ನಮ್ಮ ಕೈಜಾರಿರಲಿಲ್ಲ. ಜ್ಯಾಕ್ಸಿ ನಿರ್ಗಮನ ನಮಗೆ ದೊಡ್ಡ ಹಿನ್ನಡೆಯಾಯಿತು' ಎಂದು 22 ವರ್ಷ ವಯಸ್ಸಿನ ಎಡಗೈ ಬ್ಯಾಟರ್ ವಿಶ್ಲೇಷಿಸಿದರು.

'ಬೂಮ್ರಾ ಅವರ ಎಸೆತಗಳನ್ನು ಹೊಡೆಯುವುದು ಕಷ್ಟ. ಅವರ ಮೇಲೆ ಒತ್ತಡ ಹೇರಲು ಯತ್ನಿಸಿದೆವು. ಆದರೆ ಅವರು ಯಾರ್ಕರ್ ಕೌಶಲಗಳನ್ನು ಪ್ರದರ್ಶಿಸಿದರು' ಎಂದರು.

'ಟೂರ್ನಿಯ ಆಟಗಾರ' ಗೌರವಕ್ಕೆ 8 ಮಂದಿ ಪೈಪೋಟಿ

ರೇಸ್‌ನಲ್ಲಿ ಸಂಜು ಸ್ಯಾಮ್ಸನ್

ದುಬೈ (ಪಿಟಿಐ): ಅಮೋಘ ಲಯದಲ್ಲಿರುವ ಭಾರತದ ವಿಕೆಟ್ ಕೀಪರ್– ಬ್ಯಾಟರ್ ಸಂಜು ಸ್ಯಾಮ್ಸನ್ ಅವರು ಟಿ20 ವಿಶ್ವಕಪ್ 'ಟೂರ್ನಿಯ ಆಟಗಾರ' ನಾಮನಿರ್ದೇಶನಕ್ಕೆ ಐಸಿಸಿ ಶುಕ್ರವಾರ ಅಂತಿಮಗೊಳಿಸಿರುವ ಎಂಟು ಆಟಗಾರರಲ್ಲಿ ಒಳಗೊಂಡಿದ್ದಾರೆ.

ಇಂಗ್ಲೆಂಡ್‌ನ ಆಲ್‌ರೌಂಡರ್ ವಿಲ್ ಜ್ಯಾಕ್ಸ್, ಪಾಕಿಸ್ತಾನದ ಆರಂಭ ಆಟಗಾರ ಸಾಹಿಬ್‌ಜಾದ ಫರ್ಹಾನ್, ದಕ್ಷಿಣ ಆಫ್ರಿಕಾದ ವೇಗದ ಬೌಲರ್ ಲುಂಗಿ ಎನ್‌ಗಿಡಿ, ನಾಯಕ ಏಡನ್ ಮರ್ಕರಂ, ನ್ಯೂಜಿಲೆಂಡ್‌ನ ಆಲ್‌ರೌಂಡರ್ ರಚಿನ್ ರವೀಂದ್ರ, ಆರಂಭ ಆಟಗಾರ ಟಿಮ್ ಸೀಫರ್ಟ್ ಮತ್ತು ಅಮೆರಿಕದ ವೇಗದ ಬೌಲರ್ ಶಾಡ್ಲಿ ವಾನ್ ಶಾಲ್ವಿಕ್ ಅವರು ನಾಮನಿರ್ದೇಶನಗೊಂಡಿರುವ ಇತರ ಏಳು ಆಟಗಾರರು.

ಸಂಜು ಸ್ಯಾಮ್ಸನ್

ಈ ಟೂರ್ನಿಯಲ್ಲಿ ಸ್ಯಾಮ್ಸನ್ ಬರೇ ಮೂರು ಪಂದ್ಯಗಳನ್ನಾಡಿದ್ದು ಕೊನೆಯ ಎರಡು ಪಂದ್ಯಗಳಲ್ಲಿ ಪಂದ್ಯಶ್ರೇಷ್ಠ ಗೌರವಕ್ಕೆ ಪಾತ್ರರಾಗಿದ್ದಾರೆ. 201.73 ಸ್ಟ್ರೈಕ್‌ರೇಟ್‌ನಲ್ಲಿ 77.33 ಸರಾಸರಿಯಲ್ಲಿ 232 ರನ್ ಪೇರಿಸಿದ್ದಾರೆ.

ಕ್ವಾರ್ಟರ್‌ಫೈನಲ್ ಮತ್ತು ಸೆಮಿಫೈನಲ್‌ನಲ್ಲಿ ಅವರು ಬಿರುಸಿನ ಅರ್ಧ ಶತಕಗಳನ್ನು ಗಳಿಸಿದ್ದರು. ಗುರುವಾರ ನಡೆದ ಸೆಮಿಫೈನಲ್‌ನಲ್ಲಿ 42 ಎಸೆತಗಳಲ್ಲಿ 89 ರನ್ ಹೊಡೆದು ತಂಡದ ದೊಡ್ಡ ಮೊತ್ತಕ್ಕೆ ಅಡಿಪಾಯ ಹಾಕಿದ್ದರು. ಎಂಟರ ಘಟ್ಟದ ಪಂದ್ಯದಲ್ಲಿ ಅಜೇಯ 97 ರನ್ ಗಳಿಸಿ ತಂಡವನ್ನು ಬಹುತೇಕ ಏಕಾಂಗಿಯಾಗಿ ಗೆಲ್ಲಿಸಿದ್ದರು.

ಇಂಗ್ಲೆಂಡ್ ತಂಡದ ಆರು ಗೆಲುವುಗಳಲ್ಲಿ ಜ್ಯಾಕ್ಸ್ ಕೊಡುಗೆ ದೊಡ್ಡದು. ಅವರು ನಾಲ್ಕು ಪಂದ್ಯಗಳಲ್ಲಿ ಪಂದ್ಯದ ಆಟಗಾರ ಗೌರವಕ್ಕೆ ಪಾತ್ರರಾಗಿದ್ದಾರೆ. ಫರ್ಹಾನ್ 6 ಇನಿಂಗ್ಸ್‌ಗಳಲ್ಲಿ 383 ರನ್ ಗಳಿಸಿದ್ದರು. ಇದು ಟಿ20 ವಿಶ್ವಕಪ್‌ನ ಒಂದೇ ಆವೃತ್ತಿಯಲ್ಲಿ ಆಟಗಾರನೊಬ್ಬ ಗಳಿಸಿದ ಅತ್ಯಧಿಕ ಮೊತ್ತ. ಅವರು ಒಂದೇ ಆವೃತ್ತಿಯಲ್ಲಿ ಎರಡು ಶತಕ ಗಳಿಸಿದ ಮೊದಲ ಆಟಗಾರ ಸಹ.

ವೇಗದ ಬೌಲರ್ ಲುಂಗಿ ಎನ್‌ಗಿಡಿ ಅವರು ದಕ್ಷಿಣ ಆಫ್ರಿಕಾ ಪರ 7.19ರ ಇಕಾನಮಿಯಲ್ಲಿ 7 ಪಂದ್ಯಗಳಿಂದ 12 ವಿಕೆಟ್ ಕಿತ್ತು ತಂಡದ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಮರ್ಕರಂ ಮೂರು ಅರ್ಧ ಶತಕಗಳು ಸೇರಿದಂತೆ 286 ರನ್ ಗಳಿಸಿದ್ದರು. ಒಂದು ವಿಕೆಟ್ ಸಹ ಪಡೆದಿದ್ದಾರೆ. ನ್ಯೂಜಿಲೆಂಡ್‌ನ ಆಲ್‌ರೌಂಡರ್ ರಚಿನ್ ರವೀಂದ್ರ ಎಂಟು ಪಂದ್ಯಗಳಲ್ಲಿ 128 ರನ್‌ಗಳ ಜೊತೆ 11 ವಿಕೆಟ್‌ಗಳನ್ನು ಪಡೆದು ತಂಡದ ಯಶಸ್ಸಿನಲ್ಲಿ ಕಾಣಿಕೆ ನೀಡಿದ್ದಾರೆ.

ಅಮೆರಿಕ ಟೂರ್ನಿಯಲ್ಲಿ ಬಲುಬೇಗ ಹೊರಬಿದ್ದರೂ, ಛಾಪು ಮೂಡಿಸುವಲ್ಲಿ ಶಾಲ್ವಿಕ್ ಯಶಸ್ವಿ ಆಗಿದ್ದರು. ಅವರು 4 ಪಂದ್ಯಗಳಿಂದ 6.80ರ ಇಕಾನಮಿಯಲ್ಲಿ 13 ವಿಕೆಟ್ ಬಾಚಿಕೊಂಡು ಗಮನ ಸೆಳೆದಿದ್ದಾರೆ. ವಿಕೆಟ್ ಕೀಪರ್– ಬ್ಯಾಟರ್ ಟಿಮ್ ಸೀಫರ್ಟ್ ಅವರು ನ್ಯೂಜಿಲೆಂಡ್‌ನ ಯಶಸ್ಸಿನಲ್ಲಿ ಗಣನೀಯ ಪಾತ್ರ ವಹಿಸಿದ್ದಾರೆ. ಅವರು ಎಂಟು ಪಂದ್ಯಗಳಿಂದ 274 ರನ್ ಗಳಿಸಿದ್ದು ತಂಡಕ್ಕೆ ಮಿಂಚಿನ ಆರಂಭ ಒದಗಿಸಿದ್ದಾರೆ.

ಹೋಟೆಲ್ ಬದಲಿಸಿದ ಭಾರತ ತಂಡ

ಅಹಮದಾಬಾದ್ (ಪಿಟಿಐ): ಮುಂಬೈನಲ್ಲಿ ಟಿ20 ವಿಶ್ವಕಪ್ ಸೆಮಿಫೈನಲ್‌ಗೆ ಎರಡು ದಿನಗಳ ಮುನ್ನ ಚಂದ್ರಗ್ರಹಣ ಇದ್ದ ಕಾರಣ ಭಾರತ ಕ್ರಿಕೆಟ್ ತಂಡವು ನಿಗದಿಯ ವೇಳೆಗಿಂತ ಸುಮಾರು 45 ನಿಮಿಷ ತಡವಾಗಿ ಅಭ್ಯಾಸಕ್ಕೆ ತೆರಳಿತ್ತು.

ಇದೀಗ ಫೈನಲ್ ಪಂದ್ಯವಾಡಲು ಅಹಮದಾಬಾದಿಗೆ ಬಂದಿರುವ ತಂಡವು ಪ್ರತಿ ಬಾರಿ ತಂಗುವ ಹೋಟೆಲ್ ಬದಲಿಸಿದೆ. ಏಕೆಂದರೆ ಈ ಹಿಂದೆ ಎರಡು ಬಾರಿ (2023ರ ಏಕದಿನ ವಿಶ್ವಕಪ್ ಫೈನಲ್ ಮತ್ತು ಪ್ರಸಕ್ತ ಟಿ20 ವಿಶ್ವಕಪ್ ಟೂರ್ನಿಯ ಸೂಪರ್ 8ರ ಹಂತದ ದಕ್ಷಿಣ ಆಫ್ರಿಕಾ ಎದುರಿನ ಪಂದ್ಯ) ಆ ಹೋಟೆಲ್‌ನಲ್ಲಿ ತಂಗಿದ್ದಾಗ ಆಡಿದ್ದ ಮಹತ್ವದ ಪಂದ್ಯಗಳಲ್ಲಿ ಸೋತಿತ್ತು. ಆದ್ದರಿಂದ ಈ ಬಾರಿ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಆಡುವ ಮುನ್ನ ಅದೃಷ್ಟದೇವತೆಯನ್ನು ಒಲಿಸಿಕೊಳ್ಳುವ ಪ್ರಯತ್ನವನ್ನು ತಂಡವು ಮಾಡಿದೆ. ತಂಡದಲ್ಲಿರುವ ಪ್ರಮುಖ ನೆರವು ಸಿಬ್ಬಂದಿಯೊಬ್ಬರು ಅಪಾರ ದೈವಭಕ್ತರಾಗಿದ್ದಾರೆ. ತಂಡಕ್ಕೆ ಇಂತಹ ಸಲಹೆಗಳನ್ನು ನೀಡುತ್ತಾರೆಂದು ಹೇಳಲಾಗಿದೆ. ತಂಡಕ್ಕೆ ಬೇಕಾದ ಅನುಕೂಲ ಮಾಡಿಕೊಡುವಲ್ಲಿ ಬಿಸಿಸಿಐ ಕೂಡ ಪೂರ್ಣ ಸಹಕಾರ ನೀಡಿದೆ.

ಕೆಂಪುಮಣ್ಣಿನ ಪಿಚ್?: ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಈಚೆಗೆ ದಕ್ಷಿಣ ಆಫ್ರಿಕಾ ಎದುರು ನಡೆದಿದ್ದ ಪಂದ್ಯದಲ್ಲಿ ಕಪ್ಪುಮಣ್ಣಿನಿಂದ ನಿರ್ಮಿಸಲಾದ ಪಿಚ್ ನೀಡಲಾಗಿತ್ತು. ಆದರೆ ಭಾನುವಾರ ನಡೆಯುವ ಫೈನಲ್‌ನಲ್ಲಿ ಇಲ್ಲಿರುವ ಕೆಂಪುಮಣ್ಣಿನ ಪಿಚ್ ಆಯ್ಕೆ ಮಾಡಿಕೊಳ್ಳಲು ಭಾರತ ತಂಡ ಚಿತ್ತ ಹರಿಸಬಹುದು ಎನ್ನಲಾಗಿದೆ.

ಕೆಂಪುಮಣ್ಣಿನ ಪಿಚ್ ಇರುವ ವಾಂಖೆಡೆ ಕ್ರೀಡಾಂಗಣದಲ್ಲಿ ಈಚೆಗೆ ನಡೆದ ಸೆಮಿಫೈನಲ್‌ನಲ್ಲಿ ಭಾರತದ ಬ್ಯಾಟರ್‌ಗಳು ಅಬ್ಬರಿಸಿದ್ದರು. ಆದ್ದರಿಂದ ಅಹಮದಾಬಾದಿನಲ್ಲಿಯೂ ಕೆಂಪು ಮಣ್ಣಿನ ಅಂಗಳದತ್ತ ವಾಲಬಹುದು ಎನ್ನಲಾಗಿದೆ.

ರಿಕಿ ಮಾರ್ಟಿನ್ ಷೋ: ಗ್ರ್ಯಾಮಿ ಪ್ರಶಸ್ತಿ ವಿಜೇತ ಗಾಯಕ, ಪ್ಯೂರ್ಟೊ ರಿಕಾನ್‌ನ ರಿಕಿ ಮಾರ್ಟಿನ್ ಅವರು ಫೈನಲ್ ಪಂದ್ಯದ ಆರಂಭಕ್ಕೂ ಮುನ್ನ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ವಿಶೇಷ ರೈಲು: ಫೈನಲ್ ಪಂದ್ಯದ ಸಂದರ್ಭದಲ್ಲಿ ಜನರ ಪ್ರಯಾಣಕ್ಕಾಗಿ ಪಶ್ಚಿಮ ರೈಲ್ವೆ ವಿಭಾಗವು ಮುಂಬೈನಿಂದ ಅಹಮದಾಬಾದ್ ನಗರಕ್ಕೆ ವಿಶೇಷ ರೈಲು ವ್ಯವಸ್ಥೆ ಮಾಡಿದೆ.

ಕಲಬುರಗಿ ಓಪನ್: ಡಬಲ್ಸ್‌ನಲ್ಲೂ ಪ್ರಶಸ್ತಿ ಸುತ್ತು ಪ್ರವೇಶಿಸಿದ ಭಾರತದ ಜೋಡಿ

ಸೆಮಿಫೈನಲ್‌ಗೆ ಅಂಕಿತಾ, ವೈಷ್ಣವಿ ಲಗ್ಗೆ

• ಬಸವರಾಜ ದಳವಾಯಿ

ಕಲಬುರಗಿ: ಪ್ರೇಕ್ಷಕರಿಗೆ ಸೊಗಸಾದ ಆಟದ ರಸದೌತಣ ನೀಡಿದ ಭಾರತದ ಅಂಕಿತಾ ರೈನಾ ಹಾಗೂ ವೈಷ್ಣವಿ ಅಡ್ಕರ್ ಅವರು ಕಲಬುರಗಿ ಓಪನ್ ಐಟಿಎಫ್ ಮಹಿಳೆಯರ ಟೆನಿಸ್ ಟೂರ್ನಿಯ ಸಿಂಗಲ್ಸ್ ಸೆಮಿಫೈನಲ್‌ಗೆ ದಾಪುಗಾಲಿಟ್ಟರು. ಡಬಲ್ಸ್‌ನಲ್ಲಿ ಜತೆಯಾಗಿ ಆಡಿ ಫೈನಲ್‌ಗೂ ತಲುಪಿದರು.

ಇಲ್ಲಿಯ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಸಿಂಗಲ್ಸ್ ವಿಭಾಗದ ಎಂಟರಘಟ್ಟದ ಹಣಾಹಣಿಯಲ್ಲಿ ಅನುಭವಿ ಅಂಕಿತಾ 6–0, 6–2 ರಿಂದ ರಷ್ಯಾದ ಎವ್ಜೆನಿಯಾ ಬರ್ಡಿನಾ ಅವರನ್ನು ಹಿಮ್ಮೆಟ್ಟಿಸಿದರು.

ಮೊದಲ ಸೆಟ್‌ನ ಮೊದಲ ಗೇಮ್‌ನಲ್ಲೇ ಎದುರಾಳಿಯ ಸರ್ವ್ ಬ್ರೇಕ್ ಮಾಡಿದ ಅಹಮದಾಬಾದ್ ಆಟಗಾರ್ತಿ ಅಂಕಿತಾ ಒತ್ತಡ ಹೇರುವಲ್ಲಿ ಯಶಸ್ವಿಯಾದರು. ಚಾಣಾಕ್ಷ ಡ್ರಾಪ್‌ಶಾಟ್ಸ್, ಬೇಸ್‌ಲೈನ್ ಹೊಡೆತಗಳನ್ನು ಪ್ರಯೋಗಿಸಿದ ಅವರು ಸೆಟ್ ಕೊನೆಯವರೆಗೂ ಒಳ್ಳೆಯ ಲಯವನ್ನು ಮುಂದುವರಿಸಿದರು. ಯಾವ ಹಂತದಲ್ಲೂ ಬರ್ಡಿನಾ, ಭಾರತದ ಆಟಗಾರ್ತಿಗೆ ಸವಾಲಾಗಲಿಲ್ಲ.

ಎರಡನೇ ಸೆಟ್‌ನಲ್ಲಿ ರಷ್ಯಾ ಆಟಗಾರ್ತಿಯಿಂದ ಕೊಂಚ ಪ್ರತಿರೋಧ ಕಂಡುಬಂತು. ಸೆಟ್‌ನ ಎರಡು ಮತ್ತು ಮೂರನೇ ಗೇಮ್ ಜಯಿಸಿದ ಅವರು, ಸುಮಾರು 10 ನಿಮಿಷಗಳ ಕಾಲ ನಡೆದ ತೀವ್ರ ಪೈಪೋಟಿಯಲ್ಲಿ ನಾಲ್ಕನೇ ಗೇಮ್ ಕೈಚೆಲ್ಲಿದರು.

ಭಾರತದ ಅಂಕಿತಾ ರೈನಾ ಆಟದ ಝಲಕ್ ಚಿತ್ರ: ತಾಜುದ್ದೀನ್ ಆಜಾದ್

ಮತ್ತೊಂದು ಪಂದ್ಯದಲ್ಲಿ ಉದಯೋನ್ಮುಖ ಆಟಗಾರ್ತಿ ವೈಷ್ಣವಿ 1 ತಾಸು 20 ನಿಮಿಷಗಳ ಆಟದಲ್ಲಿ 6–1, 6–3 ರಿಂದ ರಷ್ಯಾದ ಮತ್ತೊಂದು ಪ್ರತಿಭೆ ಎಲಿನಾ ನೇಪಿಲಿ ಅವರನ್ನು ಹಿಮ್ಮೆಟ್ಟಿಸಿದರು.

ವೇಗದ ಸರ್ವ್ ಮತ್ತು ಚುರುಕಿನ ರಿಟರ್ನ್‌ಗಳ ಮೂಲಕ ಮೊದಲ ಸೆಟ್‌ನಲ್ಲಿ ಸತತ ಐದು ಗೇಮ್ ಗೆದ್ದ ಪುಣೆಯ 21 ವರ್ಷ ವಯಸ್ಸಿನ ಆಟಗಾರ್ತಿ, ಆರನೇ ಗೇಮ್ ಮಾತ್ರ ಎದುರಾಳಿಗೆ ಬಿಟ್ಟುಕೊಟ್ಟರು. ಎರಡನೇ ಸೆಟ್‌ನಲ್ಲಿ ಎಲಿನಾ ಸ್ವಲ್ಪ ಪೈಪೋಟಿ ನೀಡಿದರು. ಈ ಹಂತದಲ್ಲಿ ವೈಷ್ಣವಿ ಐದು ಡಬಲ್ ಫಾಲ್ಟ್‌ಗಳನ್ನೂ ಎಸಗಿದರು. ಕೊನೆಯ ಹಂತದಲ್ಲಿ ಸಮರ್ಥವಾಗಿ ಒತ್ತಡವನ್ನು ನಿಭಾಯಿಸಿ ಗೆಲುವಿನ ತೋರಣ ಕಟ್ಟುವಲ್ಲಿ ಯಶಸ್ವಿಯಾದರು.

ಸಿಂಗಲ್ಸ್ ವಿಭಾಗದ ಇನ್ನುಳಿದ ಪಂದ್ಯಗಳಲ್ಲಿ ಅಗ್ರಶ್ರೇಯಾಂಕದ ಯಾಸ್ಮಿನ್ ಜಿಂಬ್ರೆ (ನೆದರ್ಲೆಂಡ್ಸ್) 6–2, 6–2ರಿಂದ ಇಸ್ರೇಲ್‌ನ ಮಾಯನ್ ಲಾರೆನ್ ಎದುರು, ಥಾಯ್ಲೆಂಡ್‌ನ ಥಾಸಪಾರ್ನ್ ನಕ್ಲೊ 6–4, 6–1ರಿಂದ ಸ್ವದೇಶದ ಆಟಗಾರ್ತಿ ಎರಡನೇ ಶ್ರೇಯಾಂಕದ ಅಂಚಿಸಾ ಚಂತಾ ಅವರನ್ನು ಮಣಿಸಿ ನಾಲ್ಕರ ಘಟ್ಟ ತಲುಪಿದರು.

ಡಬಲ್ಸ್ ಸೆಮಿಫೈನಲ್‌ನಲ್ಲಿ ಅಂಕಿತಾ–ವೈಷ್ಣವಿ ಜೋಡಿ 7–6, 6–2 ರಿಂದ ಸೋನಲ್ ಪಾಟೀಲ– ಬೇಲಾ ತಮಾಂಕರ್ ಅವರನ್ನು ಸೋಲಿಸಿತು.

ಇನ್ನೊಂದು ಸೆಮಿಯಲ್ಲಿ ಕರ್ನಾಟಕದ ಸೋಹಾ ಸಾದಿಕ್ ಮತ್ತು ಆಕಾಂಕ್ಷಾ ನಿಟ್ಟೂರೆ ಜೊತೆಯಾಗಿ 6–7, 6–0, 10–5ರಿಂದ ಭಾರತದ ಶ್ರಾವ್ಯಾ ಶಿವಾನಿ ಚಿಲಕಲಪುಡಿ–ಜಪಾನ್‌ನ ಮಿಷಿಕಾ ಒಜೆಕಿ ಅವರನ್ನು ಸೋಲಿಸಿ ಫೈನಲ್‌ಗೆ ಲಗ್ಗೆಯಿಟ್ಟರು. ಡಬಲ್ಸ್ ಫೈನಲ್ ಶನಿವಾರ ನಡೆಯಲಿದೆ.

ಜೆಮಿಮಾ ಅರ್ಧಶತಕದ ಆಸರೆ

ಪರ್ತ್ (ಪಿಟಿಐ): ಜೆಮಿಮಾ ರಾಡ್ರಿಗಸ್ ಹೋರಾಟದ ಅರ್ಧ ಶತಕ ಗಳಿಸಿದರೂ, ಆಸ್ಟ್ರೇಲಿಯಾದ ವೇಗದ ಬೌಲರ್‌ಗಳಾದ ಅನ್ನಾಬೆಲ್ ಸದರ್‌ಲ್ಯಾಂಡ್ ಮತ್ತು ಲ್ಯೂಸಿ ಹ್ಯಾಮಿಲ್ಟನ್ ಅವರು ಮಹಿಳೆಯರ ಏಕೈಕ ಕ್ರಿಕೆಟ್ ಟೆಸ್ಟ್ ಪಂದ್ಯದ ಮೊದಲ ದಿನವಾದ ಶುಕ್ರವಾರ ಭಾರತ ತಂಡವನ್ನು 198 ರನ್‌ಗಳ ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿದರು.

ಈ ಹಗಲು-ರಾತ್ರಿ ಟೆಸ್ಟ್ ಪಂದ್ಯದ ಮೊದಲ ದಿನದಾಟ ಮುಗಿದಾಗ ಆತಿಥೇಯ ತಂಡ 3 ವಿಕೆಟ್‌ಗೆ 96 ರನ್ ಗಳಿಸಿತು. ಅನುಭವಿಗಳಾದ ಎಲಿಸ್ ಪೆರಿ (ಅಜೇಯ 43) ಮತ್ತು ಅನ್ನಾಬೆಲ್ ಸದರ್‌ಲ್ಯಾಂಡ್ (ಅಜೇಯ 20) ಅವರು ಮುರಿಯದ ನಾಲ್ಕನೇ ವಿಕೆಟ್‌ಗೆ 38 ರನ್ ಸೇರಿಸಿದ್ದಾರೆ.

ಭಾರತದ ಅನುಭವಿ ಆಟಗಾರ್ತಿ ಜೆಮಿಮಾ 52 ರನ್ (84 ಎ; 4x7) ಬಾರಿಸಿದರು. ಆದರೆ ಅವರಿಗೆ ಇತರ ಆಟಗಾರ್ತಿಯರಿಂದ ಹೇಳಿಕೊಳ್ಳುವಂಥ ಬೆಂಬಲ ದೊರೆಯಲಿಲ್ಲ. ಇನಿಂಗ್ಸ್‌ನಲ್ಲಿ ಒಂದೂ ಅರ್ಧಶತಕದ ಜತೆಯಾಟ ದಾಖಲಾಗಲಿಲ್ಲ.

ಜೆಮಿಮಾ ರಾಡ್ರಿಗಸ್

ಸದರ್‌ಲ್ಯಾಂಡ್ (46ಕ್ಕೆ4) ಮತ್ತು ಪದಾರ್ಪಣೆ ಪಂದ್ಯ ಆಡಿದ ಲ್ಯೂಸಿ (31ಕ್ಕೆ3) ಪರಿಣಾಮ-ಕಾರಿಯಾಗಿ ದಾಳಿ ನಡೆಸಿದರು. ಆರಂಭ ಆಟಗಾರ್ತಿ ಸ್ಮೃತಿ ಮಂದಾನ (4) ಮೊದಲು ನಿರ್ಗಮಿಸಿದರು. ಶಫಾಲಿ ವರ್ಮಾ (35) ಉತ್ತಮವಾಗಿ ಇನಿಂಗ್ಸ್ ಶುರು ಮಾಡಿದರೂ, ಸದರ್‌ಲ್ಯಾಂಡ್ ಬೌಲಿಂಗ್‌ನಲ್ಲಿ ಚೆಂಡನ್ನು ಕೆಣಕಿ ವಿಕೆಟ್‌ಕೀಪರ್‌ಗೆ ಕ್ಯಾಚ್ ನೀಡಿದರು. ಪದಾರ್ಪಣೆ ಮಾಡಿದ ಪ್ರತೀಕಾ ರಾವಲ್ (18) ಮತ್ತು ನಾಯಕಿ ಹರ್ಮನ್‌ಪ್ರೀತ್ ಕೌರ್ (19) ಕೂಡ ವಿಫಲರಾದರು. ಆಗ ಮೊತ್ತ 5 ವಿಕೆಟ್‌ಗೆ 107.

ಒಂಬತ್ತನೇ ವಿಕೆಟ್‌ಗೆ ಕಶ್ವಿ ಗೌತಮ್ (ಔಟಾಗದೇ 34) ಮತ್ತು ಸಯಾಲಿ ಸಾತ್ಘರೆ (7, 35ಎ) ಅವರು 38 ರನ್ ಸೇರಿಸಿದ್ದರಿಂದ ತಂಡದ ಮೊತ್ತ 200ರ ಸಮೀಪ ತಲುಪಿತು. ಇಬ್ಬರಿಗೂ ಇದು ಮೊದಲ ಟೆಸ್ಟ್ ಆಗಿತ್ತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಮಹಿಳಾ ತಂಡ: 62.4 ಓವರುಗಳಲ್ಲಿ 198 (ಶಫಾಲಿ ವರ್ಮಾ 35, ಜೆಮಿಮಾ ರಾಡ್ರಿಗಸ್ 52, ಕಶ್ವಿ ಗೌತಮ್ ಔಟಾಗದೇ 34; ಲ್ಯೂಸಿ ಹ್ಯಾಮಿಲ್ಟನ್ 31ಕ್ಕೆ3, ಅನ್ನಾಬೆಲ್ ಸದರ್‌ಲ್ಯಾಂಡ್ 46ಕ್ಕೆ4); ಆಸ್ಟ್ರೇಲಿಯಾ ಮಹಿಳಾ ತಂಡ: 27 ಓವರುಗಳಲ್ಲಿ 3 ವಿಕೆಟ್‌ಗೆ 96 (ಎಲಿಸ್ ಪೆರಿ ಬ್ಯಾಟಿಂಗ್ 43, ಅನ್ನಾಬೆಲ್ ಸದರ್‌ಲ್ಯಾಂಡ್ ಬ್ಯಾಟಿಂಗ್ 20; ಸಯಾಲಿ ಸಾತ್ಘರೆ 24ಕ್ಕೆ2).

ಭಾರತ ತಂಡಕ್ಕೆ ಇಂದು ಜಪಾನ್ ಸವಾಲು

ಪರ್ತ್ (ಪಿಟಿಐ): ಭಾರತ ಸೀನಿಯರ್ ಫುಟ್‌ಬಾಲ್ ತಂಡವು ಶನಿವಾರ ಮಹಿಳಾ ಎಎಫ್‌ಸಿ ಏಷ್ಯನ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಬಲಿಷ್ಠ ಜಪಾನ್ ತಂಡವನ್ನು ಎದುರಿಸಲಿದೆ.

ಸಿ ಗುಂಪಿನ ತನ್ನ ಮೊದಲ ಪಂದ್ಯದಲ್ಲಿ 1–2ರಿಂದ ವಿಯೆಟ್ನಾಂ ವಿರುದ್ಧ ಸೋತಿರುವ ಭಾರತದ ವನಿತೆಯರು ಗೆಲುವಿನ ಹಳಿಗೆ ಮರಳುವ ಛಲದಲ್ಲಿದ್ದಾರೆ. ತೈವಾನ್ ತಂಡವನ್ನು 2–0ಯಿಂದ ಮಣಿಸಿ ಅಭಿಯಾನ ಆರಂಭಿಸಿರುವ ಜಪಾನ್, ಅಜೇಯ ಓಟ ಮುಂದುವರಿಸುವ ಉತ್ಸಾಹದಲ್ಲಿದೆ.

ಫಿಫಾ ವಿಶ್ವ ಕ್ರಮಾಂಕದಲ್ಲಿ ಎಂಟನೇ ಸ್ಥಾನದಲ್ಲಿರುವ ಜಪಾನ್, 67ನೇ ಸ್ಥಾನದಲ್ಲಿರುವ ಭಾರತದ ವಿರುದ್ಧದ ಹಿಂದಿನ ಮೂರು ಮುಖಾಮುಖಿಗಳಲ್ಲಿ ಗೆದ್ದು ಪ್ರಾಬಲ್ಯ ಮೆರೆದಿದೆ. ಈ ಮೂರು ಪಂದ್ಯಗಳಲ್ಲಿ ಜಪಾನ್ ಆಟಗಾರ್ತಿಯರು ಒಟ್ಟು 19 ಗೋಲು ದಾಖಲಿಸಿದ್ದಾರೆ. 2023ರಲ್ಲಿ ಒಲಿಂಪಿಕ್ಸ್ ಅರ್ಹತಾ ಸುತ್ತಿನಲ್ಲಿ ಕೊನೆಯ ಬಾರಿ ಮುಖಾಮುಖಿಯಾಗಿದ್ದು, ಆ ಪಂದ್ಯದಲ್ಲಿ ಭಾರತ 0–7ರಿಂದ ಸೋತಿತ್ತು.

2014 ಮತ್ತು 2018ರ ಏಷ್ಯನ್ ಕಪ್ ಮತ್ತು 2011ರ ವಿಶ್ವಕಪ್ ಚಾಂಪಿಯನ್ ಜಪಾನ್ ತಂಡವನ್ನು ಕಟ್ಟಿಹಾಕುವುದು 'ಬ್ಲೂ ಟೈಗರ್ಸ್' ತಂಡಕ್ಕೆ ಸವಾಲಾಗಲಿದೆ. ನಾಕೌಟ್ ಪ್ರವೇಶದ ದೃಷ್ಟಿಯಿಂದ ಭಾರತಕ್ಕೆ ಈ ಪಂದ್ಯದ ಗೆಲುವು ಮಹತ್ವದ್ದಾಗಿದೆ.

ಮೂರು ಗುಂಪುಗಳಿಂದ ಅಗ್ರ ಎರಡು ತಂಡಗಳು, ಜೊತೆಗೆ ಮೂರನೇ ಸ್ಥಾನದಲ್ಲಿರುವ ಎರಡು ಅತ್ಯುತ್ತಮ ತಂಡಗಳು ಕ್ವಾರ್ಟರ್ ಫೈನಲ್‌ಗೆ ಟಿಕೆಟ್ ಪಡೆಯಲಿದೆ. ಕ್ವಾರ್ಟರ್ ಫೈನಲ್ ಪಂದ್ಯಗಳ ವಿಜೇತರು 2027ರ ಫಿಫಾ ಮಹಿಳಾ ವಿಶ್ವಕಪ್‌ಗೆ ಅರ್ಹತೆ ಪಡೆಯುತ್ತಾರೆ.

ಭಾರತದ ಲಕ್ಷ್ಯ ಸೇನ್ 'ಎಕ್ಸ್' ಚಿತ್ರ

ಆಲ್ ಇಂಗ್ಲೆಂಡ್ ಓಪನ್: ನಾಲ್ಕರ ಘಟ್ಟಕ್ಕೆ ಲಕ್ಷ್ಯ ಸೇನ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಲಕ್ಷ್ಯ ಸೇನ್ ಅವರು ಚೀನಾದ ಲೀ ಶಿಫೆಂಗ್ ಅವರನ್ನು ನೇರ ಆಟಗಳಲ್ಲಿ ಮಣಿಸಿ, ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ಸ್‌ನಲ್ಲಿ ಶುಕ್ರವಾರ ಸೆಮಿಫೈನಲ್ ಪ್ರವೇಶಿಸಿದರು.

ಹಾಲಿ ಚಾಂಪಿಯನ್ ಶಿ ಯುಕಿ ಅವರಿಗೆ ಮೊದಲ ಸುತ್ತಿನಲ್ಲಿ ಆಘಾತ ನೀಡಿದ್ದ ಲಕ್ಷ್ಯ, ಎಂಟರ ಘಟ್ಟದ ಪಂದ್ಯದಲ್ಲಿ 21–13, 21–16ರಿಂದ ಶಿಫೆಂಗ್ ಅವರಿಗೂ ಸೋಲಿನ ರುಚಿ ತೋರಿಸಿದರು. ವಿಶ್ವಕ್ರಮಾಂಕದಲ್ಲಿ 6ನೇ ಸ್ಥಾನದಲ್ಲಿರುವ ಶಿಫೆಂಗ್ ಅವರು ಯಾವ ಹಂತದಲ್ಲೂ ಭಾರತದ ಆಟಗಾರನಿಗೆ ಸರಿಸಮನಾದ ಪೈಪೋಟಿ ನೀಡಲಿಲ್ಲ.

ಈ ಹಿಂದಿನ ಹಣಾಹಣಿಗಳಲ್ಲಿ ಇಬ್ಬರೂ ಆಟಗಾರರು ತಲಾ 7 ಬಾರಿ ಗೆದ್ದಿದ್ದರು. ಹಾಗಾಗಿ, ಈ ಪಂದ್ಯದಲ್ಲಿ ರೋಚಕ ಆಟ ನಿರೀಕ್ಷಿಸಲಾಗಿತ್ತು. ಆದರೆ, ಲಕ್ಷ್ಯ ಅವರ ಮಿಂಚಿನ ಆಟದ ಎದುರು ಶಿಫೆಂಗ್ ಅವರ ತಂತ್ರಗಾರಿಕೆ ಫಲಿಸಲಿಲ್ಲ.

ಉತ್ತರಾಖಂಡದ ಆಟಗಾರ 2022ರಲ್ಲಿ ರನ್ನರ್ಸ್‌ಅಪ್ ಆಗಿದ್ದರು.

ಮೈಸೂರಿನಲ್ಲಿ ಸೈಕ್ಲಿಂಗ್ ವೆಲೋಡ್ರೋಮ್, ಬೆಳಗಾವಿಯಲ್ಲಿ ಕುಸ್ತಿ ಅಖಾಡ ಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರಿನಲ್ಲಿ ಸೈಕ್ಲಿಂಗ್ ವೆಲೋಡ್ರೋಮ್, ಕಲಬುರಗಿಯಲ್ಲಿ ಕ್ರೀಡಾ ವಿಜ್ಞಾನ ಕೇಂದ್ರ, ವಿರಾಜಪೇಟೆಯಲ್ಲಿ ಕ್ರೀಡಾ ತರಬೇತಿ ವಸತಿನಿಲಯ, ಬೆಳಗಾವಿಯಲ್ಲಿ ಕುಸ್ತಿ ಅಖಾಡ ಸೇರಿದಂತೆ ಯುವ ಸಬಲೀಕರಣ ಮತ್ತು ಕ್ರೀಡೆಗೆ ಹಲವು ಯೋಜನೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್‌ನಲ್ಲಿ ಘೋಷಿಸಿದ್ದಾರೆ.

ಕಯಾಕಿಂಗ್ ಮತ್ತು ಕನೊಯಿಂಗ್ ಶ್ರೇಷ್ಠತಾ ಕೇಂದ್ರ ಸ್ಥಾಪನೆ, ರಾಜ್ಯದ ನಾಲ್ಕು ಕಡೆಗಳಲ್ಲಿ ರಾಷ್ಟ್ರ ಮಟ್ಟದ ಮ್ಯಾರಥಾನ್ ಆಯೋಜನೆ, ಕ್ರೀಡಾಂಗಣಗಳ ಅಭಿವೃದ್ಧಿಗಳ ಘೋಷಣೆಯೂ ಬಜೆಟ್‌ನಲ್ಲಿವೆ. ಪ್ರಮುಖ ಅಂಶಗಳು ಇಲ್ಲಿವೆ.

ರಾಜ್ಯ ಬಜೆಟ್ 2026–27

- ಬೆಂಗಳೂರಿನ ಹೆಸರಘಟ್ಟ ಕೆರೆಯಲ್ಲಿ ಪಿಪಿಪಿ ಮಾದರಿಯಲ್ಲಿ ಕಯಾಕಿಂಗ್ ಮತ್ತು ಕನೊಯಿಂಗ್ ಶ್ರೇಷ್ಠತಾ ಕೇಂದ್ರ ಸ್ಥಾಪನೆ
- 'ಸಶಕ್ತ ಕರ್ನಾಟಕ' ಕಾರ್ಯಕ್ರಮದಡಿ ತಲಾ ₹10 ಲಕ್ಷ ವೆಚ್ಚದಲ್ಲಿ ಬೆಳಗಾವಿ, ಗೋಕರ್ಣ, ಚಿತ್ರದುರ್ಗ, ಹಂಪಿಯಲ್ಲಿ ರಾಷ್ಟ್ರ ಮಟ್ಟದ ಮ್ಯಾರಥಾನ್‌ಗಳ ಆಯೋಜನೆ
- 10 ಜಿಲ್ಲಾ ಕೇಂದ್ರಗಳಲ್ಲಿ ತಲಾ ₹4 ಲಕ್ಷ ವೆಚ್ಚದಲ್ಲಿ ಪ್ರಸಿದ್ಧ ಕ್ರೀಡಾಪಟುಗಳ ಹೆಸರಿನಲ್ಲಿ ಜಿಲ್ಲಾ ಮಟ್ಟದ ಮ್ಯಾರಥಾನ್‌ಗಳ ಆಯೋಜನೆ
- ಸೈಕ್ಲಿಂಗ್ ಕ್ರೀಡೆಗೆ ಉತ್ತೇಜನ ನೀಡಲು ಮೈಸೂರಿನಲ್ಲಿರುವ ದಟ್ಟಗಳ್ಳಿಯಲ್ಲಿ ಗುರುತಿಸಲಾದ ಜಾಗದಲ್ಲಿ ಆಧುನಿಕ ಸೈಕ್ಲಿಂಗ್ ವೆಲೋಡ್ರೋಮ್ ನಿರ್ಮಾಣ
- ಬಂಗಾರಪೇಟೆ, ಮುದ್ದೇಬಿಹಾಳ, ಗುಳೇದಗುಡ್ಡ, ಕನಕಪುರ, ಕುಕನೂರು ಮತ್ತು ಮಸ್ಕಿಯಲ್ಲಿ ತಲಾ ₹2 ಕೋಟಿ ವೆಚ್ಚದಲ್ಲಿ ತಾಲ್ಲೂಕು ಕ್ರೀಡಾಂಗಣಗಳ ನಿರ್ಮಾಣ
- ಕಲ್ಯಾಣ ಕರ್ನಾಟಕ ಭಾಗದ ಕ್ರೀಡಾಪಟುಗಳಿಗೆ ಉತ್ತಮ ಕ್ರೀಡಾ ವಿಜ್ಞಾನ ಸೇವೆಗಳನ್ನು ಒದಗಿಸಲು ಕಲಬುರಗಿಯಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಆಧುನಿಕ ಕ್ರೀಡಾ ವಿಜ್ಞಾನ ಕೇಂದ್ರ ಆರಂಭ
- ತುಮಕೂರಿನಲ್ಲಿ ₹3 ಕೋಟಿ ವೆಚ್ಚದಲ್ಲಿ ಕ್ರೀಡಾ ಮೂಲಸೌಕರ್ಯ ಉನ್ನತೀಕರಣ
- ವಿಜಯನಗರ ಜಿಲ್ಲೆಯಲ್ಲಿರುವ ಕ್ರೀಡಾಂಗಣವನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಕೆಎಂಇಆರ್‌ಸಿ ಅನುದಾನದಲ್ಲಿ ಮೇಲ್ದರ್ಜೆಗೇರಿಸುವುದು
- ಕ್ರೀಡಾ ಪ್ರತಿಭೆಯನ್ನು ಪ್ರೋತ್ಸಾಹಿಸಲು ವಿರಾಜಪೇಟೆಯಲ್ಲಿ ಸುಸಜ್ಜಿತ ಕ್ರೀಡಾ ತರಬೇತಿ ವಸತಿ ನಿಲಯ ನಿರ್ಮಾಣ
- ಕುಸ್ತಿಪಟುಗಳನ್ನು ಪ್ರೋತ್ಸಾಹಿಸಲು ಬೆಳಗಾವಿಯ ಬೆಳಗುಂದಿಯಲ್ಲಿ ನೂತನ ಕುಸ್ತಿ ಅಖಾಡ ನಿರ್ಮಾಣ.

ಐಎಸ್‌ಎಲ್: ಗೆಲುವಿನತ್ತ ಬಿಎಫ್‌ಸಿ ಚಿತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತವರಿನಲ್ಲಿ ಮಿಶ್ರ ಫಲಿತಾಂಶ ಪಡೆದಿರುವ ಬೆಂಗಳೂರು ಎಫ್‌ಸಿ ತಂಡವು ಶುಕ್ರವಾರ ಇಂಡಿಯನ್ ಸೂಪರ್ ಲೀಗ್‌ನಲ್ಲಿ ಆತಿಥೇಯ ಮೊಹಮ್ಮಡನ್ ಎಸ್.ಸಿ ತಂಡವನ್ನು ಎದುರಿಸಲಿದೆ.

ಕಂಠೀರವ ಕ್ರೀಡಾಂಗಣದಲ್ಲಿ ಮೂರು ಪಂದ್ಯಗಳನ್ನು ಆಡಿದ ಸುನಿಲ್ ಚೆಟ್ರಿ ಬಳಗವು ಈ ಋತುವಿನ ತವರಿನಾಚೆಯ ಮೊದಲ ಪಂದ್ಯಕ್ಕಾಗಿ ಕೋಲ್ಕತ್ತಕ್ಕೆ ಪ್ರಯಾಣಿಸಿದೆ. ವಿವೇಕಾನಂದ ಯುವ ಭಾರತಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ.

ಕಳೆದ ವಾರದ ಪಂದ್ಯಗಳಲ್ಲಿ ಬಿಎಫ್‌ಸಿ ತಂಡವು ಪಂಜಾಬ್ ಎಫ್‌ಸಿ ವಿರುದ್ಧ; ಮೊಹಮ್ಮಡನ್ ತಂಡವು ಮೋಹನ್ ಬಾಗನ್ ಸೂಪರ್ ಜೈಂಟ್ ವಿರುದ್ಧ ಸೋಲನುಭವಿಸಿವೆ. ಉಭಯ ತಂಡಗಳು ಈಗ ಗೆಲುವಿನ ಹಾದಿಗೆ ಮರಳಲು ಉತ್ಸುಕವಾಗಿವೆ.

ರೆನೆಡಿ ಸಿಂಗ್ ಮಾರ್ಗದರ್ಶನದ ತಂಡವು 0–2ರಿಂದ ಪಂಜಾಬ್ ಎಫ್‌ಸಿ ವಿರುದ್ಧ ಮುಗ್ಗರಿಸಿತ್ತು. ಇದರೊಂದಿಗೆ ಹಾಲಿ ಋತುವಿನಲ್ಲಿ ಮೊದಲ ಸೋಲು ಅನುಭವಿಸಿತ್ತು. ಅದಕ್ಕೂ ಮುನ್ನ ಬಿಎಫ್‌ಸಿ ತಂಡವು 2–0ಯಿಂದ ಸ್ಪೋರ್ಟಿಂಗ್ ಡೆಲ್ಲಿ ವಿರುದ್ಧ ಗೆದ್ದರೆ, ನಂತರದಲ್ಲಿ 1–1ರಿಂದ ನಾರ್ತ್‌ಈಸ್ಟ್ ಯುನೈಟೆಡ್ ವಿರುದ್ಧ ಡ್ರಾ ಸಾಧಿಸಿತ್ತು.

ಹಾಲಿ ಐಎಸ್‌ಎಲ್‌ನಲ್ಲಿ ಗೆಲುವಿನ ಖಾತೆ ತೆರೆಯದ 'ಬ್ಲ್ಯಾಕ್ ಪ್ಯಾಂಥರ್ಸ್' ಖ್ಯಾತಿಯ ಮೊಹಮ್ಮಡನ್ ತಂಡವು ಹಿಂದಿನ ಪಂದ್ಯದಲ್ಲಿ ಮೋಹನ್ ಬಾಗನ್ ವಿರುದ್ಧ 5-1 ಅಂತರದಿಂದ ಸೋತಿತ್ತು. ಅದಕ್ಕೂ ಹಿಂದಿನ ಎರಡೂ ಪಂದ್ಯಗಳಲ್ಲೂ ಮುಗ್ಗರಿಸಿತ್ತು.

ಅನುಭವಿ ರಾಹುಲ್ ಭೆಕೆ ಮರಳಿರುವುದು ಬೆಂಗಳೂರು ತಂಡದ ರಕ್ಷಣಾ ವಿಭಾಗಕ್ಕೆ ಹೆಚ್ಚಿನ ಬಲ ತುಂಬಲಿದೆ.

ಬೆಂಗಳೂರು ಎಫ್‌ಸಿ ಆಟಗಾರ ವಿನೀತ್ ವೆಂಕಟೇಶ್ ಮತ್ತು ಕೋಚ್ ರೆನೆಡಿ ಸಿಂಗ್

ಇಂದಿನ ಪಂದ್ಯ

ಬಿಎಫ್‌ಸಿ	V/s	ಮೊಹಮ್ಮಡನ್
ಆರಂಭ: ಸಂಜೆ 5		
ಕೇರಳ ಬ್ಲಾಸ್ಟರ್ಸ್	V/s	ಚೆನ್ನೈಯಿನ್
ಆರಂಭ: ರಾತ್ರಿ 7.30		
ಲೈವ್	ಸೋನಿ ಸ್ಪೋರ್ಟ್ಸ್ ಟೆನ್ 2, ಫ್ಯಾನ್ ಕೋಡ್ ಆ್ಯಪ್	

ಪ್ರಾಗ್ ಚೆಸ್: ಅರವಿಂದ್‌ಗೆ ಮಣಿದ ವಾನ್ ಫೋರೀಸ್ಟ್

ಪ್ರಾಗ್ (ಝೆಕ್ ರಿಪಬ್ಲಿಕ್), (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಅರವಿಂದ ಚಿದಂಬರಮ್ ಅವರು ಪ್ರಾಗ್ ಅಂತರರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನ ಎಂಟನೇ ಸುತ್ತಿನಲ್ಲಿ ನೆದರ್ಲೆಂಡ್ಸ್‌ನ ಜೋರ್ಡನ್ ವಾನ್ ಫೋರೀಸ್ಟ್ ಅವರನ್ನು ಸೋಲಿಸಿದರು. ಆದರೆ ವಿಶ್ವ ಚಾಂಪಿಯನ್ ಗುಕೇಶ್ ಟೂರ್ನಿಯಲ್ಲಿ ಐದನೇ ಸಲ ಡ್ರಾ ಮಾಡಿಕೊಂಡರು.

ಎಂಟನೇ ಸುತ್ತಿನಲ್ಲಿ ಗುಕೇಶ್ (2.5 ಅಂಕ), ಜರ್ಮನಿಯ ವಿನ್ಸೆಂಟ್ ಕೀಮರ್ (4) ಅವರ ಜೊತೆ ಅಂಕ ಹಂಚಿಕೊಂಡರು. ಭಾರತದ ಆಟಗಾರನಿಗೆ ಒಂದೂ ಗೆಲುವು ಒಲಿದಿಲ್ಲ. ಶನಿವಾರ ಕೊನೆಯ ಸುತ್ತಿನ ಪಂದ್ಯಗಳು ನಡೆಯಲಿವೆ.

ಏಳನೇ ಸುತ್ತಿನವರೆಗೆ ಮುನ್ನಡೆ ಯಲ್ಲಿದ್ದ ವಾನ್ ಫೋರೀಸ್ಟ್ (5) ಅವರು ಅರವಿಂದ್ (4) ಅವರಿಗೆ ಸೋತ ಪರಿಣಾಮ ಮೊದಲ ಸಲ ಅಗ್ರಸ್ಥಾನ ಕಳೆದುಕೊಂಡರು. ಉಜ್ಬೇಕಿಸ್ತಾನದ ನಾದಿರ್ಬೆಕ್ ಅಬ್ದುಸತ್ತಾರೋವ್ (5.5) ಏಕಾಂಗಿಯಾಗಿ ಅಗ್ರಸ್ಥಾನಕ್ಕೇರಿದರು. ಅವರು, ಆತಿಥೇಯ ಝೆಕ್ ರಿಪಬ್ಲಿಕ್‌ನ ಡೇವಿಡ್ ನವಾರ (4.5) ಅವರನ್ನು ಸೋಲಿಸಿದರು.

ಫೆಬ್ರುವರಿಯಲ್ಲಿ ಟಾಟಾ ಸ್ಟೀಲ್ ಮಾಸ್ಟರ್ಸ್ ಗೆದ್ದ ನಂತರ ಅಬ್ದುಸತ್ತಾರೋವ್ ಈಗ ಎರಡನೇ 'ಸೂಪರ್ ಇವೆಂಟ್'ನಲ್ಲಿ ಪ್ರಶಸ್ತಿಗೆ ಸನಿಹದಲ್ಲಿದ್ದಾರೆ. ವಾನ್ ಫೋರೀಸ್ಟ್ (5) ಮತ್ತು ನವಾರ (4.5) ಅವರು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿದ್ದಾರೆ.

ಚಾಲೆಂಜರ್ಸ್ ವಿಭಾಗದಲ್ಲಿ ಝೆಕ್ ರಿಪಬ್ಲಿಕ್‌ನ ಫೆನೆಕ್ ವಾಂಕ್ಲಾವ್ (5.5) ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ದಿವ್ಯಾ ದೇಶಮುಖ್ (4) ಅವರು ಆತಿಥೇಯ ದೇಶದ ನೆಮೆಕ್ ಜಾಕಿಮ್ (4.5) ಜೊತೆ ಡ್ರಾ ಮಾಡಿಕೊಂಡರು.

ಇಂಡಿಯಾ ಅಲ್ಟಿಮೇಟ್ ಬೀಚ್ ನ್ಯಾಷನಲ್ಸ್‌ನಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಕುಡ್ಲ ಕೈ ತಂಡದಿಂದ ಡಿಸ್ಕ್ ಕಸಿದುಕೊಳ್ಳಲು ಮೈಸೂರಿನ ಗಿರ್ಗಿಟ್ಲೆ ತಂಡದ ಆಟಗಾರ ಪ್ರಯತ್ನಿಸಿದರು ಚಿತ್ರ: ಫಕ್ರುದ್ದೀನ್ ಎಚ್

ಏರ್ ಬೆಂಡರ್ಸ್, ಸ್ಟಾಲ್7 ಅಮೋಘ ಓಟ

ಮಂಗಳೂರು: ಮೂರು ಸುತ್ತುಗಳಲ್ಲಿ ಪ್ರಾಬಲ್ಯ ಮೆರೆದ ಬೆಂಗಳೂರಿನ ಏರ್ ಬೆಂಡರ್ಸ್ ಒನ್ ಮತ್ತು ಚೆನ್ನೈನ ಸ್ಟಾಲ್ ಸೆವೆನ್ ತಂಡಗಳು ಶುಕ್ರವಾರ ಆರಂಭವಾದ ಇಂಡಿಯಾ ಅಲ್ಟಿಮೇಟ್ ಬೀಚ್ ನ್ಯಾಷನಲ್ಸ್‌ನ ಮೊದಲ ದಿನ ಕ್ರಮವಾಗಿ ಸ್ವಿಸ್ 'ಎ'ಯಲ್ಲಿ ('ಎ' ಗುಂಪು) ಮತ್ತು ಸ್ವಿಸ್ 'ಬಿ'ಯಲ್ಲಿ ಪಾರಮ್ಯ ಮೆರೆದವು. ಫ್ರಿಸ್‌ಬೀ ಡಿಸ್ಕ್ ಬಳಸಿ ಆಡುವ ಈ ಆಟವನ್ನು ಪಶ್ಚಿಮ ಕರಾವಳಿಯಲ್ಲಿ ಮೊದಲ ಬಾರಿ ಆಯೋಜಿಸಲಾಗಿದೆ.

ಇಂಡಿಯಾ ಅಲ್ಟಿಮೇಟ್ ಸಹಯೋಗದಲ್ಲಿ ಕರ್ನಾಟಕ ಅಲ್ಟಿಮೇಟ್ ಪ್ಲೇಯರ್ಸ್ ಅಸೋಸಿಯೇಷನ್ (ಕೆಯುಪಿಎ) ಆಯೋಜಿಸಿರುವ ಈ ಟೂರ್ನಿಯಲ್ಲಿ ಏರ್ ಬೆಂಡರ್ಸ್ ಮತ್ತು ಸ್ಟಾಲ್ ಸೆವೆನ್ ತಲಾ 6 ಪಾಯಿಂಟ್ ಗಳಿಸಿವೆ. ತಮಿಳುನಾಡಿನ ಪುಯಲ್ 4 ಪಾಯಿಂಟ್‌ಗಳೊಂದಿಗೆ ಪಟ್ಟಿಯಲ್ಲಿ 2ನೇ ಸ್ಥಾನ ಗಳಿಸಿದೆ. ಸ್ವಿಸ್ 'ಬಿ'ಯಲ್ಲಿ ಚೆನ್ನೈನ ಕಲ್ಲಹನ್ಸ್ ಓಪನ್ ಮತ್ತು ಬೆಂಗಳೂರಿನ ಫ್ಲೈಟ್ ಕ್ಲಬ್ ತಂಡಗಳು ತಲಾ 4 ಪಾಯಿಂಟ್ ಗಳಿಸಿವೆ.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

TO LET

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

The California Holiday Village

RK ENTERPRISES

Residential

DTCP APPROVED Sites

DTCP APPROVED

E-KHATA SITES

ದೇವನಹಳ್ಳಿ

ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ 45 ನಿಮಿಷಗಳ ಪ್ರಯಾಣ

ಈಶಾ ಫೌಂಡೇಶನ್‌ನಿಂದ ಕೇವಲ 25 ನಿಮಿಷಗಳ ಪ್ರಯಾಣ

OFFER PRICE Rs.649 per sq ft Onwards

INVEST Double your Investment in 3 Years

- ಸೈಟುಗಳು ನೋಂದಣಿ ಮತ್ತು ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ.
- 100% ಕಾನೂನಾತ್ಮಕ ದಾಖಲೆ ಪತ್ರಗಳು
- ಅಭಿವೃದ್ಧಿಪಡಿಸಿದ ಲೇಔಟ್
- ನಿವೇಶನ ಖರೀದಿಸಲು ಬ್ಯಾಂಕ್ ಸಾಲ ಸೌಲಭ್ಯವಿದೆ

ಸೌಲಭ್ಯಗಳು : •ನೀರು •ಬೀದಿ ದೀಪ •ರಸ್ತೆಗಳು •ಪಾರ್ಕ್ •ವಿದ್ಯುತ್ •ಅಂಡರ್ ಗ್ರೌಂಡ್ ವಾಟರ್ ಲೈನ್ಸ್

Site dimension: 30x40 onwards

www.rkcalifornia.com

ಸೈಟ್ ಭೇಟಿಗಾಗಿ ಕರೆ ಮಾಡಿ : 8880665577

---

www.propmoreventures.in

PMV PROPMORE VENTURES Land · Legacy · Life

ಕನಕಪುರ, ಸಾತನೂರ್

Appreciation will rise upto 30 %

"12 ತಿಂಗಳಲ್ಲಿ, ನೀವು ಇದನ್ನು ಖರೀದಿಸದಿದ್ದಕ್ಕೆ ವಿಷಾದಿಸುತ್ತೀರಿ"

ದಕ್ಷಿಣ ಬೆಂಗಳೂರಿನ ಏಕೈಕ BMRDA ಅನುಮೋದಿತ ಲೇಕ್-ಫ್ರಂಟ್ ಪ್ಲಾಟ್ ಮತ್ತು 2.5 ಎಕರೆ ರೆಸಾರ್ಟ್ ನೊಂದಿಗೆ

18 + ಅಮೇನಿಟೀಸ್ & ಲೇಕ್ ವ್ಯೂ

30*40 Onwards

ಪ್ರಾರಂಭದ ಬೆಲೆ 29.99* ಲಕ್ಷ ದಿಂದ

ಪಡೆಯಿರಿ 5 ಗ್ರಾಮ್ ಗೋಲ್ಡ್ ಕಾಯಿನ್ ಪ್ರತಿ ಸ್ಪಾಟ್ ಬುಕಿಂಗ್ ನ ಮೇಲೆ

ಸ್ಕ್ಯಾನ್ ಫಾರ್ ವಾಟ್ಸಪ್

ಫಾರ್ ಸೈಟ್ ವಿಸಿಟ್ ಅಂಡ್ ಬೂಕಿಂಗ್ಸ್ ಗಾಗಿ

9187 111 933

Sapthagiri Promoters & Developers ನೂತನ ಪ್ರಾಜೆಕ್ಟ್

Sapthagiri Silver Leaf PREMIUM PLOTS

ದೊಡ್ಡ ಆಲದಮರ ಹತ್ತಿರ

5 mins. from Kempegowda Layout

BMRDA 'A' Khata sites

Just 10 Lacks (down payment)

EMI - 24,000*/- per month

Own a house in Sapthagiri Promoters and Developers

Sapthagiri PROMOTERS & DEVELOPERS

Down payment 10 LACKS

'A' Khata house

79 Lacks

Site mesurement 1200 sqft

1 BHK - Ground Floor

2 BHK - Second Floor

Car Parking

EMI 42,000*/- per month

A KHATA

BMRDA APPROVED

*Terms & Conditions Apply

Loans from HDFC HOME LOANS, LIC HFL, IDBI BANK, pnb Housing Finance Limited

9686 49 49 49

For Booking and more details call:

7026 11 88 99, 7026 00 44 99

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

COMMERCIAL BUILDING FOR IMMEDIATE SALE AT KORAMANGALA CLEAR TITLES, E- KHATA
Site Area 2900 sq ft, Built up 6350 sq ft, Near Sony World Junction, Behind Oasis Mall, having two side roads front and back, reasonable price
CONTACT: 9844005652

REAL ESTATE SELLING

Sites

Anjanapura

SITE FOR SALE- 30x40 West facing Anjanapura 8th block near to Vajramuni Circle, prime location. E Khata. Loknath Naidu Layout. Genuine buyers: 9980493844.

Banashankari

BANASHANKARI 6TH STAGE- BDA-AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

COMMERCIAL PLOT For Sale at Banashankari 6th Stage,On 100ft Road 50x80, North Facing Contact: 9980775693

BTM Layout

SITE FOR Sale 30×40 40×60 East North Facing BTM 2nd Stage 25000 to 30000, 9945377119 /9844099557

OFF COMMERCIAL SITE for Sale near 60ft Road, BTM Layout, 20X60, 1200Sqft, West Facing, -9886241744

Kanakapura Road

JUDITIAL LAYOUT, 50X80,East Facing 16000/- Banashankari 6th Stage, 2nd Block_50X80,Commercial _Site,11crore Negotioble :9916375577

Basaweshwaranagar

SALE BASAWESHWARNGR 40x60 Site, North Facing, clear titles, Adjacent to Bharath gas. Contact Owner. 9480060249

Devanahalli

SITE FOR SALE- Devanahally, BIAPPA Approved 50'x50', East facing, Mandibele Layout, 10 km to Airport. E Khata. Genuine buyers: 9980493844.

J P Nagar

JP.NAGAR 1ST Phase, 2,040 SqFt BDA Approved, SE Corner Site Navodaya Layout, beside Banashankari Metro and behind Sobha Dewflower Apartments 16,500/SqFt. 9900955337

JPNAGAR 7TH PHASE AVAILABLE MEASURING 45x40, 2 SITES SOUTH EAST CORNER AND SOUTH WEST CORNER, BBMP E KHATA (11B)- 7022435107

Whitefield

"FOR SALE Total_2800 Sqft North_facing_Site Immadihalli Near_White Field, Good location. 9342493875"

Nagarbhavi

"NAGARABHAVI BDA Complex near 30x50 Site 40 feet Road Annapooreswari Layout Good location. 9448733456/ 7259675150"

"30X40 EAST FACING BBMP A-Katha Site for sale near Nagarbhavi Ring Road Ready for Construction. 9880031654"

Rajajinagar

RAJAJINAGAR 2ND Stage, 5th Main, 'E' Block, No 1491/2, 30x36 BDA Site Sale, West. 9845729728.

RAJAJINAGAR 3RD Block Bashyam Circle BDA SITE Sale 28x32, No 1, East Facing. Contact. 9972599170.

Sanjaynagar

SANJAYNAGAR KEB LAYOUT BDA 1050sft North West corner 40 feet Road E- Khatha. 9341260828 7829203369

SALE 50X81 Site S/F Semi Commercial, 60' Road Sanjaynagar Near Vibhav Theatre. Price 30000/-sft. 9845751918

1400SQFT RESIDENTIAL Old House G+1,For Sale in Sanjayanagara Near_Police Station_Rs_30000/- 9845600007 /9844445666

Vishweshwariah Layout

BDA SITE SALE VISHWESHWARAIAH LAYOUT 2nd Block 40X60 NORTH FACE NEAR 100FT ROAD GOOD LOCATION CONTACT: 8892901567

"VISVESHWARAIAH LAYOUT 6th Block 40x60 South facing Site for sale Good Location Genuine Buyers Contact: 9845500019/ 7019314962"

BDA SITE For Sale @ Vishweshwaraiah Layout 30x40, 40x60, 50x80 Contact: 6363496142 9845555666

RAILWAY LAYOUT 2nd Stage, West South Corner, 1170 Sqft, Near Vidyanikethan School Ullal Road, BDA Katha: 9164089633

Hosa Road

NEAR HOSA ROAD METRO STATION, Hosur Road: BBMP A Katha 60x75 West Facing site Sale 9,000/-Psft. 8618175917/ 7899023497

Kempegowda Layout

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

Commercial Land

Mysore

PRIME COMMERCIAL converted land 2.01 Acre for sale or JV on Mysore Express Way before toll near Mysore Contact owner 9741019028

Commerical

Basaveshwaranagar

BASAVESHWAR NAGAR 100 Feet Road Commercial 40X60 BDA Property For Sale Call: 9341260828

Industrial & Factory

Intl Airport Road

SALE RED CATEGORY Industrial Land & Building in AP Hindupur APIIC allotted Suitable for Chemical, Pharma, Organic, Fertilisers Manufacturers. 20000sft, 41500sft, 135000sft clear titles. Call Verna Developers, Barton Centre, MG Road. 9916310226.

House

Uttarahalli

UTTARAHALLI BHARAT HOUSING SOCIETY, OPPOSITE PARK, 20X40 WEST FACING 3 BHK DUPLEX HOUSE SALE. 9945724472.

Flat

Sarjapur Road

2BHK APARTMENT Nambiar District 25 Sarjpura Road ready by 2030 to be paid in installments, five installments paid. Value 1.5Crores, 9886010995

Uttarahalli

PREMIUM 2 & 3 BHK homes at Jains Swadesh, Uttarahalli , Bangalore - Starting at Rs. 7,495/ sq.ft. * with spacious sizes from 1,261 sq.ft. Call : 9092884111

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Wanted

Godown

WANTED/ AVAILABLE GODOWN, WAREHOUSE, INDUSTRIAL GODOWN Around Bangalore for Rent/ Lease, P.G building For Sale. Call: 9900399006

Accommodation Available

Industrial And Factory

AVAILABLE INDUSTRIAL Warehouse 160000 sqft Vijipura, Hoskote. Contact: 9341234288/ 9663224353/ 9845417487.

Flats

NEW FLATS FOR RENT
2/3 BHK New Semi Furnished Flats with Modern Kitchen Ready to move at
AARNA RAJPATH, GUNJUR.
East Bangalore just in front of Lakeview, Prestige MSB & IT Complex, with rent
Rs.35,000/- for 2BHK & Rs.45,000/- for 3BHK
Negotiable
Excluding Monthly Maintenance
Those interested May Contact:
97413 33222
99621 82221
Email:vrsn@live.com
SAA

3BHK APARTMENT RENT with All Amenities with 500 Sft backyard at Rajaprakruti Apartment Jayanagar 1st Block Close to Ashoka Pillar: 9916909430

REAL ESTATE BUYING

Commerical

Multiple Locations

REQUIRED 1 2 & 3 BHK P.G Buildings or Service Apartments, Lands, 4000 to 1 Acre in Whitefield, Bellandur, Marathahalli, Mahadevapura, Kundanahalli. For long Lease : Call: 9900399006

Sites

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

Multiple Locations

WANTED/ AVAILABLE Residential Sites in Basavanagudi, V.V.Puram, Jayanagar, J.P.Nagar, Kanakapura Road, Hanumanthnagar, Banashankari. Call: 9900399006

WANTED BDA Sites Arkavathi, Nadaprabhu Kempegowda & BDA other Layouts. Contact: SAPTHAGIRI (Opposite BDA Head Office):: 9036360366

Anjanapura

WANTED SITE ANJANAPURA BCCHS Layout Narayan`Nagar Jayanagar Housing Society, Banashankari 6th`Stage 30x40,40x60. Direct Registration. Broker Excuse. Call:9663454878

JOB OPPORTUNITIES

General

WANTED for Billing Cashier`& Godown Incharge Qualification PU`or`Bcom Pass With Basic Computer knowledge Location wilson garden siddaiah Road`Near Shanti Nagar`Bus`stand Call:9845351200 9535218502

FOR SALE
BDA SITE No. 90, BTM 1st Stage, North facing 40×60, 60 ft. Road, Adjacent to JALA BHAVAN, Between Bannerghatta Road to Jayanagar East End Road, Approx 100 mtr. to Bannerghatta Main Road.
Genuine Buyers Call:
Muralidhar: 98453 01599

Marketing & Sales

VANTAGE TECHNOLOGIESJ.P. Nagar 3rd Phase, BangaloreRequire Marketing Engineer,Aerospace IndustryEXP: 0 to 2 yrs, Salary 15k to 25kPh: 9019637966 / 080 42198501Email: cvs@vantage.org.in

PUBLIC NOTICE

ಸಾರ್ವಜನಿಕ ಪ್ರಕಟಣೆ
ಎಸ್‌ಪಿ ಇನ್ನೊವೇಶನ್ಸ್ ಟೆಕ್ನಾಲಜೀಸ್ ಎಲ್‌ಎಲ್‌ಪಿ, ನಂ. 1408, 40ನೇ ಮುಖ್ಯರಸ್ತೆ, ಜೆಪಿ ನಗರ 1ನೇ ಹಂತ, ಬೆಂಗಳೂರು – 5600078 (www.sppinnovations.net) ಎಂಬ ಈ ಸಂಸ್ಥೆಯು ಒಂದು ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಹಾಗೂ ಕನ್ಸಲ್ಟಿಂಗ್ ಕಂಪನಿಯಾಗಿದ್ದು, ಬ್ಯಾಂಕಿಂಗ್ ಡೊಮೇನ್ ನಲ್ಲಿ ಕೂಡ ಕಾರ್ಯನಿರ್ವಹಿಸುತ್ತಿದೆ ಮತ್ತು ವ್ಯಾಪಾರಸ್ಥರಿಗೆ ಪೇಮೆಂಟ್ ಸೊಲ್ಯೂಷನ್ ಒದಗಿಸುವುದರಲ್ಲಿ ವಿಶೇಷ ಪರಿಣಿತಿ ಹೊಂದಿದೆ. ಇದೀಗ, ಈ ಕಂಪನಿಯು, ಶೀಘ್ರದಲ್ಲಿಯೇ ಎಲ್‌ಎಲ್‌ಪಿ ಇಂದ ಪ್ರೈವೇಟ್ ಲಿಮಿಟೆಡ್ ಆಗಿ ಪರಿವರ್ತನೆಗೊಳ್ಳಲಿದೆ ಎಂದು ಈ ಮೂಲಕ ತಿಳಿಸಲಾಗುತ್ತಿದೆ.
ಎಸ್‌ಪಿ ಇನ್ನೊವೇಶನ್ಸ್ ಟೆಕ್ನಾಲಜೀಸ್ ಎಲ್‌ಎಲ್‌ಪಿ ಪರವಾಗಿ
ಪಾಲುದಾರರು: ಪದ್ಮನಾಭ ಪಿ.ಎನ್.
ನಂ. 6362574038

PERSONAL

Change of Name

CHANGE OF NAME
I, **SOWMYA CHANDRASHEKAR,** R/at No.15, Vishnu Nilaya, 2nd Cross, Magadi Main Road, Rajarajeshwari Residency, Seegehalli, Bengaluru -560 091, have changed my name to **SOWMYA M IYENGAR** vide affidavit dated 05-03-2026 before notary H H Nagaraj, Bengaluru. Henceforth I shall be called as **SOWMYA M IYENGAR** only

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

AUTOMOTIVE

Four Wheelers Buying

Honda

WANTED CIVIC Honda civic manual (2009 to 2013) required. Prefer genuine owners . Contact 8660514812

BUSINESS

Business to Business

Events And Exhibitions

GR.EVENTS ATOZ Events Management, BANGALORE. Birthday`Party Weddings Naming_Ceremony House`Warming Baby`Shower Flower_Decoration Engagements Mehandi/Sangeet Ceremony Corporate_Events. CALL:7411112565

Business Offers

General

A HOME stay with four studio units, cottage, coffee shop with kitchen in quiet surroundings near E city phase one, well equipped available for rent or to manage, well furnished with a/c, nett connection and back up power. good for retired persons. mail kupandasurendra@gmail.com

DH DECCAN HERALD Classifieds
More value, more impact
ಪ್ರಜಾವಾಣಿ

REAL ESTATE

BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY

@ 2481/-*
FOR 15 WORDS

www.dhclassifieds.com
BOOK NOW
*Conditions apply
Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164

DH DECCAN HERALD | ಪ್ರಜಾವಾಣಿ

https://dhclassifieds.com
Book your Ad in 4 Easy Steps --Select Category-- Book ad
1 Select Category 2 Publication & Date 3 Compose Your Ad 4 Payment

ಖರೀದಿಸಿ ಅಥವಾ ಮಾರಾಟ ಮಾಡಿ
ಯಾವುದೇ ಸಮಯದಲ್ಲಿ, ಯಾವುದೇ ಸ್ಥಳದಿಂದ ಕೇವಲ ನಾಲ್ಕೇ ಕ್ಲಿಕ್ ಗಳಲ್ಲಿ

ಸುಲಭವಾಗಿ ಖರೀದಿಸಿ, ಮಾರಾಟ ಮಾಡಿ ಅಥವಾ ಉದ್ಯೋಗ ನೇಮಕಾತಿ ಮಾಡಿಕೊಳ್ಳಿ! ಯಾವುದೇ ಸೇವೆ ಪಡೆಯಬೇಕೆ, ವಸ್ತು ಖರೀದಿಸಬೇಕೆ, ಆಸ್ತಿ ಮಾರಾಟ ಮಾಡಬೇಕೆ ಅಥವಾ ಸೂಕ್ತ ಅಭ್ಯರ್ಥಿಗಳೊಂದಿಗೆ ಸಂಪರ್ಕ ಸಾಧಿಸಬೇಕೆ?

ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ದಿನಪತ್ರಿಕೆಗಳಾದ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿಯಲ್ಲಿ ವರ್ಗೀಕೃತ ಜಾಹೀರಾತು ನೀಡುವ ಮೂಲಕ ಖರೀದಿದಾರರು, ಸೇವೆಗಳು ಅಥವಾ ಪ್ರತಿಭಾವಂತರೊಂದಿಗೆ ಸುಲಲಿತವಾಗಿ ಸಂಪರ್ಕ ಹೊಂದಿರಿ. ರಾಜ್ಯದಾದ್ಯಂತ ಸೂಕ್ತರಾದವರೊಂದಿಗೆ ಸಂಪರ್ಕ ಸಾಧಿಸಲು ಸಮರ್ಥ ವೇದಿಕೆ ಡೆಕ್ಕನ್ ಹೆರಾಲ್ಡ್ & ಪ್ರಜಾವಾಣಿ ವರ್ಗೀಕೃತ ಜಾಹೀರಾತು!

- ತಕ್ಷಣವೇ ಜಾಹೀರಾತು ಪ್ರಕಟಣೆ ಹಾಗೂ ಸರಾಗ ಬ್ರೌಸಿಂಗ್
- ಯಾವುದೇ ಸ್ಥಳದಿಂದ ಯಾವುದೇ ಸಮಯದಲ್ಲಿ ಖರೀದಿ ಹಾಗೂ ಮಾರಾಟ
- ಸರಳ, ಸುರಕ್ಷಿತ ಹಾಗೂ ಸುಗಮ ಪ್ರಕ್ರಿಯೆ
- ಕರ್ನಾಟಕದಾದ್ಯಂತ ಸೂಕ್ತರಾದವರನ್ನು ತಲುಪಿ

ಈಗ ಬುಕ್ ಮಾಡಿ.
ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ ಹಾಗೂ ಅತ್ಯುತ್ತಮ ವ್ಯವಹಾರವನ್ನು ಇಂದೇ ನಿಮ್ಮದಾಗಿಸಿಕೊಳ್ಳಿ!
COLLATERAL

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

2, 3 & 4-BHK APARTMENTS FOR SALE IN VARIOUS LOCATIONS

PRM/KA/RERA/1251/308/PR/291225/008366 G+22 HOSUR ROAD 10 MINS. ELECTRONIC CITY ₹ 62.71 L - 1.01 Cr* 8880 003 003	PRM/KA/RERA/1250/304/PR/251024/007179 G+14 WHITEFIELD 10 MINS. HOPE FARM METRO STN. ₹ 77.91 L - 1.32 Cr* 8880 461 461	PRM/KA/RERA/1251/472/PR/250225/007524 G+14 AIRPORT ROAD NEAR PRESTIGE TECH IT PARK ₹ 87.89 L - 1.21 Cr* 8880 465 465	PRM/KA/RERA/1251/310/PR/210324/006724 G+14 SILK BOARD NEAR SINGASANDRA METRO STN. ₹ 93.70 L - 1.47 Cr* 8880 013 310	PRM/KA/RERA/1251/308/PR/281125/008287 G+14 JIGANI 5 MINS. APC CIRCLE ₹ 60.78 - 95.35 Lakhs* 8880 003 003	PRM/KA/RERA/1251/310/PR/151223/006489 G+3 BANASHANKARI OPP. NPS SCHOOL (3 & 4-BHK) ₹ 1.45 - 2.17 Cr* 8880 461 461
PRM/KA/RERA/1250/301/PR/251024/007178 G+14 YELAHANKA 5 MINS. RAJANUKUNTE ₹ 54.85 - 97.21 Lakhs* 8880 465 465	PRM/KA/RERA/1251/308/PR/160824/006973 G+14 BANNERGHATTA RD. NEAR KOPPA GATE ₹ 62.42 - 85.23 Lakhs* 8880 013 310	PRM/KA/RERA/1251/308/PR/230126/008427 G+4 SARJAPURA SARJAPUR - ATTIBELE ROAD ₹ 63.60 - 83.25 Lakhs* 8880 003 003	PRM/KA/RERA/1251/308/PR/160824/006972 G+4 HOSA ROAD METRO NEAR ELECTRONIC CITY ₹ 73.58 L - 1.44 Cr* 8880 013 310	PRM/KA/RERA/1250/304/PR/150224/006622 G+14 WHITEFIELD SOUKYA ROAD ₹ 70.65 L - 1.06 Cr* 8880 461 461	Visit our website or talk to our advisors for the complete portfolio

ಡಿಎಸ್ ಮ್ಯಾಕ್ಸ್

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

*T & C Apply

CREDAI BENGALURU

FACILITY MANAGEMENT SERVICES

We Manage and Maintain Your Apartment

9164 022 000

INTERIORS

We design and style your home.

9164 056 000

REFER A DS MAX HOME

Refer a buyer to earn big

9164 043 000

REFER A LAND TO DS MAX

Offer a Land, Get a Home.

8880 463 463

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PRM/KA/RERA/1270/305/PR/140126/008404

VIKAAS WHITE LAND MEADOWS

Project by:
VIKAAS
Vikaas Infra Builder

ಐಷಾರಾಮಿ ವಿಲ್ಲಾ ಪ್ಲಾಟ್‌ಗಳು
where tranquility is a way of life.

BMRDA APPROVED
RERA REGISTERED

Price Starts from
₹25 LAKHS

- 18 acres gated community
- Wide roads
- 9 parks
- Lifestyle amenities
- 299 plots of varying dimensions
- Well planned layout
- Proposed Airport

WELCOME
TO A
RELAXED
LIFESTYLE

Close to
- Dayanand Sagar University
- Harohalli Industrial Area

Sales & marketing:
laksh
PROPERTIES
expect the best

+91 7026 119 119
www.lakshproperties.in